ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 8
ಸಂಚಿಕೆ 4
ಅಕ್ಟೋಬರ್-ಡಿಸೆಂಬರ್ - 1979

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore
Vol. 8. No. 4, October-December 1979

Chief Editor : Dr. G. S. Sivarudrappa

ಪ್ರಧಾನ ಸಂಪಾದಕರು :
ಡಾ॥ ಜಿ. ಎಸ್. ಶಿವರುದ್ರಪ್ಪ

ಸಂಪಾದಕರು :
ಡಾ॥ ಎಸ್. ವಿದ್ಯಾಶಂಕರ
ಶ್ರೀ ಕೆ. ವಿ. ನಾರಾಯಣ
ಡಾ॥ ಸೂರ್ಯನಾಥ ಕಾಮತ್

ವಾರ್ಷಿಕ ಚಂದಾ : ರೂ. 8-00
ರೂ. 5-00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100-00

ಪ್ರಕಾಶಕರು : ಹೆಚ್. ಆರ್. ದಾಸೇಗೌಡ
ನಿರ್ದೇಶಕರು, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಪರಿವಿಡಿ

ಸಸ್ಯಲೋಕ

ಸುಮತೀಂದ್ರನಾಡಿಗ

ನನ್ನ ಬಾಲ್ಯದ ದಿನದ ಸ್ನೇಹಿತರು ವಿಶ್ವ ಸೀತಾರಾಮು ಪರ್ಬುಗಳ ಹಾಗೆಯೇ ನೆನಪಲ್ಲಿ ನನ್ನ ಹುಟ್ಟೂರಲ್ಲಿ ಮಲೆನಾಡಲ್ಲಿ ನಾನಾರೀತಿ ಗಿಡಬಳ್ಳಿ ವೃಕ್ಷಗಳು ಒಂದೆ ಥರ ಮಣ್ಣಿಂದ ವಿವಿಧ ರಸರೂಪ ಗಂಧ ಆಕಾರಗಳ ಹೊರತೆಗೆವ ಪವಾಡಗಳು ಜೀವ ಎದುರಾದಂತೆ ಥಟ್ಟನೆ ನಮ್ಮ ಕಣ್ಸೆಳೆವ ರೂಪಗಳು.

ಹಸುರೆಲೆಯ ಮುಸುಕಲ್ಲಿ ಪೂನಬದನೇಕಾಯಿ
ಹೊಟ್ಟೆ ತುಂಬಾ ನೀರು ಪಿಚಕಾರಿ ಕಾಯಿ
ರೇಕುಗಳೆ ತುಂಬಿರುವ ಪನ್ನೀರೆಲೆಯ ಹೂವು
ಕನ್ನೆ ಮನಸಿನ ಹೂವು ಮದನಮಸ್ತಿ

ಕಬ್ಬಿನ ಝಲ್ಲೆ ತುದಿಗೆ ಕುಚ್ಚಿನ ಹಾಗೆ ನಸುನೀಲಿ ಸೂಲಂಗಿ
ಹಳದಿ ಹಣ್ಣಿನ ಮೇಲೆ ತಲೆಕೆಳಗು ಗೋಡಂಬಿ
ನಾಲಗೆಗೆ ನೀಲಿ ಬಣ್ಣವ ಬಿಡುವ ನೇರಳೆಯ ಹಣ್ಣು
ಕೇಸರದ ಲಿಂಗಕ್ಕೆ ಬಿಳಿಯ ಹೆಡೆ ನೆರಳಾದ ನಾಗಸಂಪಿಗೆ ಹೂವು
ಸೃಷ್ಟಿ ವೈಚಿತ್ರ್ಯಗಳ ಚಿತ್ರಶಾಲೆ.

ಕಾಯಿ ಒಣಗಿದ್ದೆ ತಡ ಸಿಡಿವ ರಬ್ಬರು ಬೀಜ
ಮುಳ್ಳು ಮುಳ್ಳಾಗಿರುವ ಮಜಭೂತು ಹಣ್ಣೊಳಗೆ, ತೊಳೆಯೊಳಗೆ
ನುಣುಪು ಕವಚವ ಒಳಗೆ ಬಕ್ಕೆ ಹಲಸಿನ ಬೀಜ,
ಮುಚ್ಚಿಟ್ಟ ಪುಸ್ತಕದಲ್ಲಿ ಬೇರು ಚಾಚುತ್ತಿರುವ ಚಟಪಟ್ಟೆ ಎಲೆ
ಒಳಗೆ ಕೆಂಪಾಗಿರುವ ಚಂದ್ರ ಸೀಬೆ
ಸೃಷ್ಟಿ ವೈಚಿತ್ರ್ಯಗಳ ಚಿತ್ರಶಾಲೆ.

ಆಕಾಶದಲ್ಲೇನೆ ಕಾಯಿ ಬಿಟ್ಟೇನೆಸುವ ಎತ್ತರದ ಅಡಿಕೆ ಮರ
ಅಡಿಕೆ ಮರ ಸುತ್ತಿರುವ ವೀಳ್ಯದೆಲೆ ಬಳ್ಳಿ
ವೀಳ್ಯೆವೆಂದೇ ಮೊದಲು ಭ್ರಮೆಯನ್ನು ಹುಟ್ಟಿಸುವ ಕಾಳುಮೆಣಸಿನ ಬಳ್ಳಿ
ಅಲ್ಲೆ ಹತ್ತಿರದಲ್ಲೆ ನೆಲದುದ್ದ ಗೊಂಚಲು ಬಿಡುವ ಯಾಲಕ್ಕಿ
ಸೃಷ್ಟಿ ವೈಚಿತ್ರಗಳ ಚಿತ್ರ ಶಾಲೆ

ನನ್ನದೆನ್ನುವ ಹಾಗೆ ಈ ಎಲ್ಲ ಮರಗಿಡ ಬಳ್ಳಿ
ನನಗು ಮಲೆನಾಡಿಗು ಬೆಳೆಸಿದವು ಕರುಳ ಸಂಬಂಧ
ಜೊತೆಯಲ್ಲೆ ಕಲಿಸಿದವು ಮಳೆ ಮಂಜು ಬಿಸಿಲಲ್ಲಿ
ಸಹಜ ಸ್ವಚ್ಛಂದತೆಯ ಸಾವಯುವ ಬಂಧ.

ಮನುಷ್ಯರ ಹಾಗೆ
ಆಲವಾಗುವುದಕ್ಕೆ ಬೇಲ ತಿಣಕುವುದಿಲ್ಲ
ಅಡಿಕೆಗೂ ತೆಂಗಿಗೂ ಜಾತಿ ಮತ್ಸರವಿಲ್ಲ
ಬೇವು ಮಾವಿನ ವೇಷ ತೊಡುವುದಿಲ್ಲ
ಒಂದೆಲಗ ಧೂಮಕ್ಕೆ ಜೀತದಾಳಲ್ಲ

ತಮ್ಮಮಟ್ಟಿಗೆ ತಾವು ಬೆಳೆವ ಮರಗಿಡ ಬಳ್ಳಿ
ಬೀಜದಲ್ಲಡಗಿರುವ ವಿಶಿಷ್ಟ ಜಾತಕವನ್ನು
ಪೂರ್ವನಿಶ್ಚಿತದಂತೆ ಆಡುತ್ತವೆ
ಆಟಕ್ಕೆ ಹೃದಯುವ ಗೆದ್ದು ನಮ್ಮ ಸಂಬಂಧಗಳ ಬೆಳೆಸುತ್ತವೆ.

ಎಲ್ಲಿ ಹೋಗಿದ್ದವೊ ಇಷ್ಟುದಿನ ಈ ಎಲ್ಲ ಮರಗಿಡ ಬಳ್ಳಿ
ತಿರುಗಿ ಬಂದಿವೆ ಈಗ ನೆನಪಿನಲ್ಲಿ
ಹೊದ್ದಿಕೆಯ ಒದ್ದು ಹೊರಬಿದ್ದ ಮೊಳಕೆಗಳು
ನೆಲದ ಕಡೆಗೆ ವಾಲಿ ಊರುವುವು ಬೇರುಗಳ ಮಣ್ಣಿನಲ್ಲಿ;
ತಲೆಯೆತ್ತಿರುವ ಸಸಿಯ ತಲೆಸೀಳಿ ಬೆಳೆಯುತ್ತಾವೆ ಚಿಗುರು
ತಾರೆಗಳ ಮುಟ್ಟೇನೆನುವ ವಿಕಸನದ ಪೊಗರು
ಚಿಗುರು ಎಲೆಯಾಗುತ್ತ ಕಾಂಡ ಕವಲೊಡೆಯುತ್ತ
ತಲೆಗಳನ್ನೆತ್ತುವುವು ಆಕಾಶದತ್ತ;
ಮೊಗ್ಗು ಪಟ್ಟೆಂದಾಗ, ಗಾಳಿ ಗಮ್ಮೆಂದಾಗ
ಬಣ್ಣಬಣ್ಣದ ಬೆಳಕು ಹೂವುಗಳ ಸುತ್ತ

ಇವು ಬರೀ ಸಸ್ಯಗಳಲ್ಲ
ನೆಲದ ಸತ್ವಗಳನ್ನು ಪರಿಷ್ಕರಿಸಿ ಹೊರತೆಗೆವ ಕುಶಲಿಗಳು
ಜೀವ ಎದುರಾದಂತೆ ಥಟ್ಟನೆ ನಮ್ಮ ಕಣ್ಸೆಳೆವ ಪವಾಡಗಳು
ವಿಶಿಷ್ಟತೆಗೆ ಮಾದರಿಗಳು.

"ಕಲಾಕೃತಿಯ ಅರ್ಥ ಕೃತಿಗಾರನ ಉದ್ದೇಶಿತ ಅರ್ಥವನ್ನು ಮೀರಿಹೋಗುತ್ತದೆ"—ಎಂದರೇನು?

ಪ್ರಶಾಂತ್ ಮಾಡ್ತ

ತಾನು ಒಡ್ಡುವ ಬಹಿರಂಗ ಶಾಬ್ದಿಕವಲಯವನ್ನು ಮೀರಿದ ಅರ್ಥವಲಯಕ್ಕೆ ಕರೆದೊಯ್ಯುವುದು ಭಾಷಾಮಾಧ್ಯಮದ ಮೂಲಭೂತಗುಣ. ಭಾಷೆಯ ಬಳಕೆಯಲ್ಲಿ, ಶಬ್ದಜಾಲಗಳು ಮೂಡಿಸುವ ಒಟ್ಟು ಅರ್ಥ, ಹಾಗೂ ಅವುಗಳ ಉದ್ದೇಶಿತ ಅರ್ಥ ಒಂದೇ ಆಗಿರಬೇಕಿಲ್ಲ. ಸಾಹಿತ್ಯದಲ್ಲಂತೂ ಶಬ್ದ–ಅರ್ಥಗಳ ಪರಸ್ಪರ ನಿಕರ ಹೊಂದಾಣಿಕೆಯನ್ನು ಅಪೇಕ್ಷಿಸುವಂತಿಲ್ಲ. ತನ್ನ ಅರ್ಥಪೂರ್ಣತೆಯಿಂದಾಗಿ ಕಲಾಕೃತಿಯೊಂದು ಸಹೃದಯರೊಡನೆ ನೇರವಾದ ಸಂಬಂಧವನ್ನು ಏರ್ಪಡಿಸುತ್ತದೆ, ಹಾಗೂ ನೇರವಾಗಿ ಹೃದಯದತ್ತ ಧಾವಿಸುತ್ತದೆ. ಈ ಆತ್ಮೀಯತೆಗೆ ಇಡೀ ವ್ಯಕ್ತಿತ್ವವನ್ನೇ ಪರವಶಗೊಳಿಸುವ ಮೋಹಕಶಕ್ತಿಯಿದೆ ಎನ್ನಬಹುದು. ಕಲಾಕೃತಿಯೊಡನೆ ಏರ್ಪಡುವ ಈ ಸಂಬಂಧ, ನಾವು ನಮ್ಮನ್ನೇ ಸಂಧಿಸುವ ಸಮಾಗಮ. ಕಲಾಕೃತಿಯ ಅಸ್ತಿತ್ವಹಾಗೂ ಆದರ ಅಭಿವ್ಯಕ್ತಿಶಕ್ತಿ, ಆ ಕಲಾಕೃತಿಯ ಮೂಲಚಾರಿತ್ರಿಕ ಸಂದರ್ಭಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ, ಬದಲಾಗಿ ಕಲಾಕೃತಿ–ಸಹೃದಯರ ನಡುವೆ ಸಮಕಾಲೀನ ಸಂಬಂಧವೊಂದು ಏರ್ಪಡುತ್ತದೆ. ಕಲಾಕೃತಿಗೆ ತನ್ನದೇ ಆದ ಒಂದು ವಿಶಿಷ್ಟ ಪ್ರಕೃತಗುಣ, ಸಮಕ್ಷಮತೆ ಇದೆ. ಈ ಪ್ರಕೃತಗುಣವೇ ಕಲಾಕೃತಿಯ ಚಾರಿತ್ರಿಕ ಆಯಾಮವನ್ನು ಮೀರಿಹೋಗಿ, ಅದನ್ನು ಅರ್ಥಪೂರ್ಣಗೊಳಿಸಿ, ಕಲಾಕೃತಿಯು ಪ್ರತಿಯುಗದಲ್ಲೂ ತನ್ನನ್ನೇ ಪುನಃ ಪುನಃ ಸೃಜಿಸುವಂತೆ ಮಾಡುತ್ತದೆ.

ಯಾವುದೇ ಸಾಹಿತ್ಯಕೃತಿಯನ್ನು ವ್ಯಾಖ್ಯಾನಿಸುವಲ್ಲಿ, ಕೃತಿಗಾರ ಯೋಜಿಸಿದ, ಉದ್ದೇಶಿಸಿದ ಅರ್ಥವಲಯವನ್ನು ಮೀರಿ ಅರ್ಥೈಯಿಸಲು ಸಾಧ್ಯವಿದೆ ಎನ್ನುತ್ತೇವೆ. ಕೃತಿಯಲ್ಲಿ, ಕೃತಿಗಾರ ಉದ್ದೇಶಿಸಿದ ಅರ್ಥಕ್ಕಿಂತಲೂ (ಯಥಾರ್ಥ) ಅತಿಶಯವಾದ ಅರ್ಥವನ್ನು (ಯೋಗ್ಯಾರ್ಥ) ಕಂಡುಹಿಡಿಯುವುದೆಂದರೆ ಏನು? ಮೇಲ್ತೋರಿಕೆಗೆ ಇದೊಂದು ಧಾಷ್ಟ್ಯಹೇಳಿಕೆ, ಹುರುಳಿಲ್ಲದ ಅನುಮಿತಿ ಎಂದು ತೋರಬಹುದು. ತಾನಲ್ಲದ ಇನ್ನೊಬ್ಬನನ್ನು, ಅವನ ಕಲಾಕೃತಿಯನ್ನು ಅರ್ಥೈಯಿಸುವುದೆಂದರೆ, ಅವನ ಅನುಭವವನ್ನು ಇಮ್ಮಡಿಗೊಳಿಸುವುದೆಂದು ಅರ್ಥವೇ? ಮೇಲಿನ ಸೂತ್ರವನ್ನು ಈ ಅರ್ಥದಲ್ಲಿ ಸ್ವೀಕರಿಸಿದರೆ ಇದೊಂದು ಧಾಷ್ಟ್ಯ ಹೇಳಿಕೆ. ಅನುಭವವೆಂಬುದು ಅತ್ಯಂತ ವ್ಯಕ್ತಿನಿಷ್ಠವಾಗಿರುವುದರಿಂದ, ಅದನ್ನು ಇಮ್ಮಡಿಗೊಳಿಸುವುದು ಅನುಭವಿಗೆ

ಮಾತ್ರ ಸಾಧ್ಯ. ಈ ಸಂದರ್ಭದಲ್ಲಿ ವ್ಯಾಖ್ಯಾನವೆಂಬುದು, ಭಾಷೆಯ ಮೂಲಕ ಮೂಲಾನುಭವದ ನಿರ್ದಿಷ್ಟ ಇಮ್ಮಡಿಯಾಗುತ್ತದೆ, ಪುನಸ್ಸೃಷ್ಟಿಯಾಗುತ್ತದೆ. ಇದೊಂದು ಅಸಾಧ್ಯವಾದ ಕಾರ್ಯ. ಯಾಕೆಂದರೆ ಅನುಭವವನ್ನು ಪ್ರಕಟಗೊಳಿಸುವಲ್ಲಿ ಭಾಷೆ ಅತ್ಯಂತ ಪರಿಮಿತ ಮಾಧ್ಯಮ. ವಾಸ್ತವ ಅನುಭವದ ಕ್ಷೀಣಚಿತ್ರವನ್ನು ಮಾತ್ರ ಅದು ಒದಗಿಸಬಲ್ಲುದು. ಭಾಷಾಮಾಧ್ಯಮವನ್ನು ಅದೆಷ್ಟು ಬಗ್ಗಿಸಿ, ಹಿಗ್ಗಿಸಿ ಬಳಸಿದರೂ, ಅನುಭವದ ಪೂರ್ಣಪ್ರಕಟನಾಕಾರ್ಯದಲ್ಲಿ ಅದು ಅಸಮರ್ಥ. ಅದರಲ್ಲೂ, ಬರಹವಂತೂ ಅತ್ಯಂತ ಮಿತವ್ಯಾಪ್ತಿಯುಳ್ಳ ಮಾಧ್ಯಮ. ಮಾತಿನಲ್ಲಾದರೂ, ಮುಖಚರ್ಯೆ, ಹಾವಭಾವಗಳ ಮೂಲಕವಾಗಿ ಭಾಷೆಯ ಇತಿಮಿತಿಗಳನ್ನು ಸ್ವಲ್ಪಮಟ್ಟಿಗಾದರೂ ಬಗೆಹರಿಸಬಹುದು. ಇದಲ್ಲದೆ, ಕೃತಿಗಾರ ತನ್ನ ಕೃತಿಯ ಅರ್ಥವನ್ನು ತಾನೇ ಗ್ರಹಿಸಿಕೊಂಡು ಇನ್ನೊಬ್ಬನಿಗೆ ವಿವರಿಸಿ ಹೇಳಲಾರದ ಸಂಭವವೂ ಇದೆ. ಹೀಗೆ, ಈ ಅರ್ಥದಲ್ಲಿ, ಕೃತಿಗಾರ ಉದ್ದೇಶಿಸಿದ ಅರ್ಥವನ್ನು ಹಿಗ್ಗಲಿಸಲು ಸಾಧ್ಯವೆಂಬ ಮಾತು ಧಾರ್ಷ್ಟ್ಯ ಹೇಳಿಕೆಯೆಂಬಂತೆ ತೋರುತ್ತದೆ.

ಆದರೂ ಮೇಲಿನ ಸೂತ್ರವನ್ನು, ಗ್ರಂಥವ್ಯಾಖ್ಯಾನದಲ್ಲಿ, ವಿಮರ್ಶೆಯಲ್ಲಿ ಬಳಸುತ್ತಾರೆ. ಈ ಸೂತ್ರದ ನಿಜವಾದ ಅರ್ಥವೇನು? ಈ ಸಮಸ್ಯೆಯನ್ನು ಬಗೆಹರಿಸುವಲ್ಲಿ, ಮಾನವಚೇತನದಿಂದ ಹೊರಮೂಡಿದ ಕೃತಿಯನ್ನು, ಅದರ ಕರ್ತನಿಗಿಂತಲೂ ಅತಿಶಯವಾಗಿ ಅರ್ಥೈಸುವುದಕ್ಕಾಗಿ ವಿಶಾಲ ಸಂದರ್ಭವೊಂದರಲ್ಲಿ ಇರಿಸಿ ಅವಲೋಕಿಸಬೇಕು. ಆಗ ಮೇಲ್ನೋರಿಕೆಗೆ ವಿರೋಧೋಕ್ತಿಯೆಂದೂ, ಆಭಾಸವೆಂದು ಕಂಡುಬರುವ ಈ ಹೇಳಿಕೆಯೂ ಅರ್ಥಪೂರ್ಣವಾಗುತ್ತದೆ.

ಕೃತಿರಚನೆಯ ಕಾರ್ಯದಲ್ಲಿ ತೊಡಗಿರುವ ಬರಹಗಾರ, ತನ್ನ ಶೈಲಿಯ ಬಗ್ಗೆ, ವಾಕ್ಯರಚನೆಯ ನಿಯಮಗಳ ಬಗ್ಗೆ, ಪ್ರಜ್ಞಾಪೂರ್ವಕವಾಗಿ ವ್ಯವಹರಿಸುವುದಿಲ್ಲ. ಆದರೆ ವಿಮರ್ಶಕ ಇವುಗಳ ಬಗ್ಗೆ ಪ್ರಜ್ಞಾಪೂರ್ವಕವಾಗಿ ವಿವೇಚಿಸುತ್ತಾನೆ. ಬರಹಗಾರ ಸೃಷ್ಟಿಸಿದರೆ, ವ್ಯಾಖ್ಯಾನಗಾರ ವಿವೇಚಿಸುತ್ತಾನೆ. ಆದುದರಿಂದ ವಿಮರ್ಶಕನಿಗೆ, ಕೃತಿಗಾರನ ಚೇತನದಿಂದ ಹುಟ್ಟಿದ ಕೃತಿಯಿಂದ ಚಿಮ್ಮಿ ಹೊರನಿಲ್ಲುವ ಸದೂರದೃಷ್ಟಿಯೊಂದು ಅತ್ಯಗತ್ಯವಾಗುತ್ತದೆ. ಕೃತಿರಚನಾ ಪ್ರಕ್ರಿಯೆಯಲ್ಲಿ ಮಗ್ನನಾದ ಕಾರಣ, ಕೃತಿಗಾರನಿಗೆ ಮರೆಯಾಗಿ ನಿಲ್ಲುವ ವಿಷಯಗಳು, ಸದೂರ ದೃಷ್ಟಿಯನ್ನು ಹೊಂದಿದ ವಿಮರ್ಶಕನಿಗೆ ವಿಶದವಾಗುತ್ತವೆ. ಆದುದರಿಂದ ಕೃತಿಗಾರ ತನ್ನ ಕೃತಿಯನ್ನು ಅರ್ಥಮಾಡಿಕೊಳ್ಳುವುದಕ್ಕಿಂತಲೂ ಮಿಗಿಲಾಗಿ, ವಿಮರ್ಶಕ ಅದನ್ನು ಅರ್ಥೈಯಿಸಲು ಹೆಚ್ಚು ಸಮರ್ಥ. ಕಲಾಕೃತಿಯ ಅರ್ಥ ಕೃತಿಗಾರನ ಉದ್ದೇಶಿತ ಅರ್ಥವನ್ನು ಮೀರಿಹೋಗುತ್ತದೆ ಎಂಬ ಸೂತ್ರಕ್ಕೆ ಇದೊಂದು ವಿವರಣೆ. ಈ ವಿವರಣೆಯಂತೆ, ಕೃತಿಗಾರನಿಗೆ ಮರೆಯಾಗಿ ನಿಲ್ಲುವ ಸ್ವಂತ ಶೈಲಿ ಹಾಗೂ ವ್ಯಾಕರಣ ವೈಶಿಷ್ಟ್ಯಗಳನ್ನು ವಿಮರ್ಶಕ ಹೊರಮೂಡಿಸಬೇಕು.

ಡಿಲ್ತಿ ಎಂಬುವನ ಅಭಿಪ್ರಾಯದಂತೆ–ಕೃತಿಗಾರನಿಗೆ ತನ್ನ ಕೃತಿಯ ಅಂತರ್ಗತ ರೂಪದ ಪ್ರಜ್ಞೆ ಇರುವುದಿಲ್ಲ. ಈ ರೂಪವನ್ನು ಪ್ರದರ್ಶಿಸುವ ಕಾರ್ಯ ವಿಮರ್ಶಕನಿಗೆ ಸೇರಿದ್ದು. ಅರ್ಥೈಯಿಸುವ ಕಾರ್ಯ ಕೃತಿಯ ಅಂತರ್ಗತ ರೂಪಕ್ಕೆ ಮಾತ್ರ ಸೀಮಿತವಾಗದೆ, ಕೃತಿಯ ತಿರುಳಿಗೆ ಅನ್ವಯಿಸುತ್ತದೆ. ಕೃತಿ ಸುಪ್ತಪ್ರಜ್ಞೆಯಲ್ಲಿ ರೂಪುಗೊಳ್ಳುವುದರಿಂದಲೂ, ವ್ಯಾಖ್ಯಾನದ ಮೂಲಕ ಮಾತ್ರ ಅದು ಅರ್ಥವಾಗುವುದರಿಂದಲೂ, ವಿಮರ್ಶಕ ನೀಡುವ ಅರ್ಥವಲಯ, ಕೃತಿಗಾರನ ಅರ್ಥವಲಯದ ಪರಿಧಿಯನ್ನು ಅತಿಶಯಗೊಳಿಸುತ್ತದೆ.

> 'The rule: understand better than the author understood himself, also solved the problem of the idea of a literary work. It is present not as an expressed thought but as an unconscious context which is operative in the organization of a work and from whose inner form understanding arises ; a writer does not need it indeed, will never be fully conscious of it; the interpreter draws it out and that is perhaps the supreme triumph of hermeneuties.[1]

ಕಲಾಕೃತಿಯ ಅರ್ಥ = ಯಥಾರ್ಥ :

ಕೃತಿಗಾರನ ಉದ್ದೇಶಿತ ಅರ್ಥವೇ ಕೃತಿಯ ಒಟ್ಟು ಅರ್ಥ, ಅದರ ಅಸ್ತಿತ್ವ. ಈ ಅರ್ಥದ ನಿಕರವಾದ ಖಚಿತ ತಿಳುವಳಿಕೆಯೇ ವಿಮರ್ಶನ ಕಾರ್ಯ. ಕೃತಿಗಾರನು ಆಶಿಸಿದ ಅರ್ಥವೇ ಯಥಾರ್ಥ, ಇದನ್ನು ಮೀರಿದ ಅರ್ಥವನ್ನು ಕೃತಿಯಿಂದ ಶೋಧಿಸುವುದು ಸರಿಯಲ್ಲ ಎಂಬ ಅಭಿಪ್ರಾಯ ಇಲ್ಲಿದೆ. ಕೃತಿಯೊಂದಕ್ಕೆ ಖಚಿತಾರ್ಥವಿದೆ. ಈ ಖಚಿತಾರ್ಥವನ್ನು ಕೃತಿಯಿಂದ ಪೂರ್ಣವಾಗಿ ಶೋಧಿಸಿ, ವಿಶ್ಲೇಷಗೊಳಿಸಬೇಕು. ಈ ಕಾರ್ಯ ಎಷ್ಟರಮಟ್ಟಿಗೆ ಸಾಧ್ಯ? ಕೃತಿಯಲ್ಲಿ ಖಚಿತಾರ್ಥವಿದೆಯೇ? ಉದಾಹರಣೆಗಾಗಿ, ಗಣಿತದ ಪ್ರಮೇಯಗಳನ್ನು ವಿವೇಚಿಸೋಣ. ಗಣಿತದ ಪ್ರಮೇಯಗಳನ್ನು ಅರ್ಥಮಾಡಿಕೊಳ್ಳಬೇಕಾದರೆ, ಅವುಗಳ ವಿವಿಧಾಂಶಗಳ ಅಂತರ್ಗತ ಸುಸಂಬದ್ಧತೆಯನ್ನು ಪೂರ್ಣವಾಗಿ ಗ್ರಹಿಸುವುದು ಅತ್ಯಗತ್ಯ. ಇಂತಹ ಪ್ರಮೇಯಗಳ ಗೊತ್ತಾದ, ನಿಕರವಾದ ಅರ್ಥಕ್ಕಿಂತಲೂ ಹೆಚ್ಚು ಅಥವಾ ಕಡಿಮೆ ಅರ್ಥಮಾಡಿಕೊಳ್ಳುವಂತಿಲ್ಲ. ವಿವಿಧಾಂಶಗಳ ಅಂತರ್ಗತ ಸುಸಂಬದ್ಧತೆಯನ್ನು ಅರ್ಥಮಾಡಿಕೊಳ್ಳದೆ, ಪ್ರಮೇಯವನ್ನು ತಿಳಿದುಕೊಳ್ಳುವುದು ದುಸ್ಸಾಧ್ಯ. ಗಣಿತದ ಪ್ರಮೇಯಗಳಿಗೆ ವಿಶಾಲವಾದ ಧ್ವನ್ಯರ್ಥವು ಇಲ್ಲ ಹಾಗೂ, ಅವುಗಳಲ್ಲಿ ಅರ್ಥಶ್ರೇಣಿಯನ್ನು

---

1) *Wilhelm Dilthey*, "Gesammelte Schriften", Vol. V P. 335.

ಅಪೇಕ್ಷಿಸುವಂತಿಲ್ಲ. ಗಣಿತಸೂತ್ರಗಳ ಅರ್ಥ ತಿಳುವಳಿಕೆಗೆ ಪೂರ್ಣವಾಗಿ' ನಿಲುಕಬೇಕು. ಇಲ್ಲದಿದ್ದಲ್ಲಿ ಅದು ಅಸ್ಪಷ್ಟವಾಗಿಯೇ ಉಳಿಯುತ್ತದೆ. ಆದುದರಿಂದ ಗಣಿತಸೂತ್ರದ ಯಥಾರ್ಥ ಅದರ ನಿಶ್ಚಿತಾರ್ಥವಾಗಿ, ಪೂರ್ಣ ತಿಳುವಳಿಕೆಯ ಪರಿಧಿಗೆ ಸರಿಸಮ.

ಚರಿತ್ರೆಯನ್ನು ಹೇಗೆ ಅರ್ಥೈಯಿಸುತ್ತೇವೆ? ಚರಿತ್ರೆಯು ಹಲವು ಘಟನೆಗಳ ಸರಣಿಯಲ್ಲಿರುವ ತರ್ಕವನ್ನು ಕಂಡುಹಿಡಿದು ಘಟನೆಗಳನ್ನು ಆ ತರ್ಕದ ಚೌಕಟ್ಟಿನಲ್ಲಿ ಅರ್ಥೈಯಿಸುತ್ತೇವೆ. ಈ ತಕ್ಕಬದ್ಧತೆ ಅರ್ಥೈಯಿಸುವ ಕಾರ್ಯಕ್ಕೆ ಖಾಚಿತ್ಯವನ್ನೀಯುತ್ತದೆ. ಇಂತಹ ಚೌಕಟ್ಟಿನಲ್ಲಿ, ಅರ್ಥವನ್ನು ವೃದ್ಧಿಗೊಳಿಸುವುದು ಅಥವಾ ಸಂಕುಚಿತವಾಗಿರಿಸುವುದು ಕಷ್ಟಸಾಧ್ಯ. ಆದುದರಿಂದ ಖಚಿತಾರ್ಥವೆಂದರೆ, ಕೃತಿಯ ಆಂತರಿಕ ಸ್ವಯಂಪರಿಪೂರ್ಣತೆ ಎನ್ನಬಹುದು. ಖಚಿತಾರ್ಥದ ಸಂದರ್ಭದಲ್ಲಿ ಕೃತಿಯ ಯಾವುದೇ ಅಂಶವೂ ಅನಿಶ್ಚಿತವಾಗಿ ಉಳಿಯದೆ, ಅದರ ಉದ್ದೇಶಿತ ಯಥಾರ್ಥವೆಲ್ಲಾ ವ್ಯಾಖ್ಯಾನದ ಚೌಕಟ್ಟಿನೊಳಗೆ ಇದ್ದು, ಅತಿಶಯವಾದ ಅರ್ಥಕ್ಕೆ ಆಸ್ಪದವಿಲ್ಲದೆ ಅರ್ಥನಿರ್ದೇಶವಾಗುತ್ತದೆ. ಅರ್ಥಸಾಧ್ಯತೆಗಳೆಲ್ಲಾ ಈ ಖಚಿತಾರ್ಥದ ಪರಿಧಿಯೊಳಗೆ ಮಾತ್ರ ಸುಳಿಯಲು ಸಾಧ್ಯ. ಇಂತಹ ಕೃತಿಗಳಲ್ಲಿ ಆಂತರಿಕ ಗುರಿಯ ತರ್ಕವು ಅಸ್ಪಷ್ಟವಾಗಿದ್ದರೆ ಅರ್ಥಗ್ರಹಣವೂ ಅಸ್ಪಷ್ಟವಾಗಿಯೇ ಉಳಿದು ಕೃತಿಯ ಯಥಾರ್ಥವನ್ನು ಕಂಡುಹಿಡಿಯುವುದು ಕಷ್ಟ. ಕೃತಿಯನ್ನು ಯಥಾರ್ಥದಲ್ಲಿ ತಿಳಿದುಕೊಳ್ಳಬೇಕಾದರೆ, ಕೃತಿಗಾರ ತನ್ನ ಅನ್ನಿಸಿಕೆಗಳನ್ನು ಸ್ಪಷ್ಟವಾಗಿ ಪ್ರಕಟಗೊಳಿಸಬೇಕು. ಈ ಕಾರ್ಯದಲ್ಲಿ ಅವನು ವಿಫಲವಾದರೆ;ಕೃತಿಯ ಅರ್ಥವೂ ಗೋಜಲು ಗೋಜಲಾಗಿ ಉಳಿಯಲು ಸಾಧ್ಯ. ಅಂದರೆ ಕೃತಿಯ ಪೂರ್ಣಸ್ಪಷ್ಟತೆ ಖಚಿತಾರ್ಥವನ್ನು ಸಾಧ್ಯಗೊಳಿಸುತ್ತದೆ. ಕೃತಿಗಾರ ಎಲ್ಲವನ್ನೂ ನಿಕರವಾಗಿ ನಿರೂಪಿಸುವುದರಿಂದ ಇಂತಹ ಕೃತಿಗಳಲ್ಲಿ ದ್ರವ್ಯಾರ್ಥವನ್ನು ಶೋಧಿಸುವಂತಿಲ್ಲ; ಯೋಗ್ಯಾರ್ಥಶೋಧನೆಗೆ ಇಲ್ಲಿ ಆಸ್ಪದವಿಲ್ಲ. ಖಚಿತಾರ್ಥದ ವಲಯದಲ್ಲಿ, ಕೃತಿಗಾರನ ಉದ್ದೇಶಿತ ಅರ್ಥವಲಯ, ಸಹೃದಯನ ಅರ್ಥವಲಯಕ್ಕೆ ಪೂರ್ಣ ಹೊಂದಿಕೆಯಾಗಿ ಕೃತಿಯ ಅರ್ಥ ಯಥಾರ್ಥಕ್ಕೆ ಸೀಮಿತ ಎನ್ನಬಹುದು.

ಯೋಗ್ಯಾರ್ಥ - ಅಪೂರ್ಣವಾದುದನ್ನು ಪೂರ್ಣಗೊಳಿಸುವ ಕಾರ್ಯವಾಗಿ

ಖಚಿತಾರ್ಥದಿಂದ ಕೂಡಿದ ಕೃತಿಯನ್ನು ಮಾತ್ರ ನಿಶ್ಚಿತಾರ್ಥದಲ್ಲಿ ಅರ್ಥೈಯಿಸಲು ಸಾಧ್ಯ. ಖಚಿತಾರ್ಥದ ಇತಿಮಿತಿಗಳು, ಕೃತಿಯನ್ನು ಅರ್ಥೈಯಿಸುವ ಕಾರ್ಯದ ಇತಿಮಿತಿಗಳೂ ಹೌದು. ಸೃಜನಾತ್ಮಕ ಕ್ರಿಯೆಯಲ್ಲಿ ನಿಖರತೆ ಇಲ್ಲದಿದ್ದರೆ, ಅದರ ತಿಳುವಳಿಕೆಯೂ ಅನಿಶ್ಚಿತವಾಗಿ ಉಳಿದು ಹಲವು ಅರ್ಥಮಂಡನೆಗಳಿಗೆ ಆಸ್ಪದವನ್ನೀಯುತ್ತದೆ. ಅರ್ಥೈಯಿಸುವ ಕಾರ್ಯದ ಹಾಗೂ ಖಚಿತಾರ್ಥದ ಈ ಸಂಬಂಧವನ್ನು ಗುರುತಿಸಿ. ಒಂದೆರಡು ಸೂತ್ರಗಳನ್ನು ರೂಪಿಸಲು ಸಾಧ್ಯ. ಒಂದನೆಯ

ದಾಗಿ, ಸ್ಪಷ್ಟವಾದ ಅರ್ಥಕ್ಕಾಗಿ, ಖಚಿತಾರ್ಥದ ಕೃತಿಗಳನ್ನು ಮಾತ್ರ ವಿವೇಚನೆ
ಗಾಗಿ ಆರಿಸಬಹುದು. ಆದರೆ ಅರ್ಥದ ಪೂರ್ಣಖಾಚಿತ್ಯ, ಗಣಿತಶಾಸ್ತ್ರದ ಪ್ರಮೇಯ
ಗಳನ್ನು ಹೊರತು ಬೇರೆಲ್ಲೂ ಸಾಧ್ಯವಿಲ್ಲ. ಸಾಹಿತ್ಯದಲ್ಲಿ ಇದು ಕೆಲಮಟ್ಟಿಗೆ ಸಾಧ್ಯ,
ಯಾಕೆಂದರೆ ಇಲ್ಲಿ ಕೃತಿಗಾರ ಪೂರ್ಣಗೊಂಡ ಕೃತಿಯನ್ನು ಈ ಮೊದಲೇ ಕಲ್ಪಿಸಿ ತನ್ನ
ವಸ್ತುವನ್ನು ಆರಿಸುತ್ತಾನೆ. ಆದರೆ ಕೃತಿಯ ನಿಶ್ಚಿತ ಆಯಾಮಗಳಿಗೆ ಮಾತ್ರ
ಪ್ರಾಮುಖ್ಯ ಕೊಟ್ಟರೆ, ಆ ಕೃತಿಯ ಚಾರಿತ್ರಿಕ ಸಂದರ್ಭವನ್ನು ನಿರ್ಲಕ್ಷಿಸಿದಂತೆ.
ಚಾರಿತ್ರಿಕ ಸಂದರ್ಭವನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ, ಕೃತಿಯ ವಿಸ್ತಾರವಾದ
ಗ್ರಾಹ್ಯವಲಯವನ್ನು ಗೌಣಗೊಳಿಸಿದಂತಾಗುತ್ತವೆ. ಆದ್ದರಿಂದ, ಎರಡನೆಯ
ದಾಗಿ, ಚಾರಿತ್ರಿಕ ಸಂದರ್ಭದ ಈ ದೃಷ್ಟಿಕೋನ ನಮಗೆ ಇನ್ನೊಂದು ಸಾಧ್ಯತೆ
ಯನ್ನು ಒದಗಿಸುತ್ತದೆ – ಕೃತಿಯ ಯಥಾರ್ಥ ಮಾತ್ರವಲ್ಲ, ಈ ಯಥಾರ್ಥವನ್ನು
ಮೀರಿನಿಲ್ಲುವ ಅರ್ಥಗ್ರಹಣ, ಅಂದರೆ ಕೃತಿಗಾರನ ಉದ್ದೇಶಿತ ಅರ್ಥವನ್ನು ಹೊರ
ಮೂಡಿಸುವ ಸಾಧ್ಯತೆ. ಕೃತಿಗಾರ ತನ್ನ ವಿಶಿಷ್ಟ ಪದ ಜೋಡಣೆಗಳ ಮೂಲಕ
ಏನನ್ನು ಹೇಳಿರುವನು ಎಂಬ ಸೀಮಿತವಲಯವನ್ನು ದಾಟಿ, ಕೃತಿಗಾರ ಏನನ್ನು
ಹೇಳಲು ಬಯಸಿರಬಹುದು, ಕೃತಿಯ ನಿಜವಾದ ಮೂಲ ಆಶಯಗಳೇನು ಎಂದು
ತಿಳಿದುಕೊಳ್ಳುವ ಕಾರ್ಯ. ಕೃತಿಯ ಆಳ-ಅಗಲಗಳ ಮಂಡನೆ, ವಿವೇಚನೆ,
ಕಾರಣಾನುಮಾನಗಳನ್ನು ಯೋಚಿಸುವುದು ಇಲ್ಲಿಯ ಕಾರ್ಯವಾಗುತ್ತದೆ. ಪದ
ಸರಣಿಯ ಅರ್ಥವಲಯವನ್ನು ದಾಟಿ, ಅಪೂರ್ಣವಾದ ಅರ್ಥವನ್ನು ಪೂರ್ಣಗೊಳಿ
ಸುವ ಕಾರ್ಯವು ಸಹೃದಯನಿಗೆ ಒದಗಿಬರುತ್ತದೆ ಎನ್ನಬಹುದು. ಆದರೆ ಇಂತಹ
ವಿಶಾಲಾರ್ಥವನ್ನು ಗ್ರಹಿಸಲು ಯಾವ ಸಂದರ್ಭದಲ್ಲಿ ಸಾಧ್ಯ ? ಸಹೃದಯನಿಗೆ ಕೃತಿ
ಗಾರನ ಅಂತರಾಳವನ್ನು, ಉದ್ದೇಶಗಳನ್ನು, ಆಶಯಗಳನ್ನು ಆಕ್ರಮಿಸಲು
ಸಾಧ್ಯವೇ ?

ಕೃತಿಯಲ್ಲಿ ಅರ್ಥ ಅನಿಶ್ಚಿತವಾಗಿದ್ದರೆ, ಖಚಿತಾರ್ಥ ಅಪ್ರಕಟಿತವಾಗಿದ್ದರೆ,
ಕೃತಿಯ ವಿಶಾಲಾರ್ಥವನ್ನು ಗ್ರಹಿಸಲು ಆಸ್ಪದವಿದೆ. ಈ ಅನಿಶ್ಚಿತತೆ ಕೃತಿಯ
ಬಿಡಿಭಾಗಗಳಲ್ಲಿ ಕಾಣಬರಬಹುದು. ವಿರೋಧೋಕ್ತಿಗಳು ಇದಕ್ಕೆ ಉದಾಹರಣೆಗಳು.
ವಿರೋಧೋಕ್ತಿಗಳು ಇಡೀ ಕೃತಿಯ ಸಂದರ್ಭದಲ್ಲಿ ಸುಸಂಗತವಾಗಿರುತ್ತವೆ.
ಆದುದರಿಂದ ವಿರೋಧೋಕ್ತಿಗಳನ್ನು ಅಸಂಗತವೆನ್ನುವಂತಿಲ್ಲ. ಆದರೆ ಇಡೀ ಕೃತಿ
ಯಲ್ಲಿ ಅಂತರ್ಗತವಾಗಿರುವ ಕೆಲವು ವಿರೋಧಾಭಾಸಗಳಿರುತ್ತವೆ. ಕೃತಿಯೊಳಗೆ
ತಲ್ಲೀನನಾಗಿ ಈ ವಿರೋಧಾಭಾಸಗಳನ್ನು ಅರ್ಥೈಯಿಸುವಂತಿಲ್ಲ ; ಯಾಕೆಂದರೆ ಇವು
ಕೃತಿಯ ಅವಿಚ್ಛಿನ್ನ ಅಂಶಗಳಾಗಿರುತ್ತವೆ. ಕೃತಿಗಾರನ ಚಿಂತನಾಪ್ರಕ್ರಿಯೆ ಅದರ
ಗುರಿಯನ್ನು ಮುಟ್ಟದಿರುವುದು, ಪೂರ್ಣಹಂತಕ್ಕೆ ತಲುಪದಿರುವುದೇ ಇದಕ್ಕೆ ಕಾರಣ
ವಾಗಿರಬಹುದು. ಇಂತಹ ಸಂದರ್ಭದಲ್ಲಿ ಪದಜೋಡಣೆಯ ಅರ್ಥವಲಯವನ್ನು

ದಾಟಿ, ಕೃತಿಯಲ್ಲಿ ಕಾರ್ಯಗತವಾಗಿರುವ ಚಿಂತನಾಪ್ರಕ್ರಿಯೆಯನ್ನು ಗುರುತಿಸ ಬೇಕಾಗುತ್ತದೆ. ಈ ಮೂಲಕ ಕೃತಿಗಾರನ ಉದ್ದೇಶಿತ ಅರ್ಥವನ್ನು ಹೊರಮೂಡಿಸಲು ಸಾಧ್ಯ.

ಈ ಸಂದರ್ಭದಲ್ಲಿ ಒಂದು ಸಮಸ್ಯೆ ತಲೆದೋರುತ್ತದೆ. ಕೃತಿಯು ಖಚಿತಾರ್ಥದ ನಿರ್ಬಂಧ ನಮಗಿಲ್ಲದಿರುವಾಗ, ಅತಿಯಾದ ವ್ಯಕ್ತಿನಿಷ್ಠ ಅಭಿಪ್ರಾಯ, ನಿಷ್ಪ್ರಮಾಣಭೂತವಾದ ಸ್ವೇಚ್ಛಾ ವಿಮರ್ಶೆ ಮೇಲಾಗುವ ಸಾಧ್ಯತೆಯಿಲ್ಲವೇ ? ವಾಸ್ತವವಾಗಿ ಇದೊಂದು ಸಮಸ್ಯೆಯಾಗದು. ಇಂತಹ ಕೃತಿಗಳು ನಿಶ್ಚಿತಾರ್ಥವನ್ನು ಒದಗಿಸಿ ಕೊಡದಿದ್ದರೂ, ಅವು ಅರ್ಥೈಯಿಸುವ ಕಾರ್ಯಕ್ಕೆ ಕೆಲವ ನಿರ್ಬಂಧಗಳನ್ನು ಒಡ್ಡುತ್ತವೆ. ಕೃತಿಯು ವಸ್ತುವೇ ಅಂತರ್ಗತ ನಿರ್ಬಂಧವಾಗುತ್ತದೆ. ಕೃತಿಯನ್ನು ವಿಮರ್ಶಿಸುವ ಸಂದರ್ಭದಲ್ಲಿ ಆ ಕೃತಿಯು ವಸ್ತುವನ್ನು ಆಳವಾಗಿ ಶೋಧಿಸುವುದು ಅತ್ಯಗತ್ಯವಾಗಿ, ಆ ಕೃತಿಯೇ ಕೆಲವು ಪರಿಧಿಗಳನ್ನು ಮಿತಿಗಳನ್ನು ರೂಪಿಸುತ್ತದೆ. ಈ ಚೌಕಟ್ಟಿನೊಳಗೆ ಕೃತಿಯನ್ನು ಇರಿಸಿ ಕೃತಿಯು ಯೋಗ್ಯಾರ್ಥವನ್ನು ಪರಿಶೀಲಿಸಬಹುದು. ಕೃತಿ ಪರಿಶೀಲನೆಯು ಈ ಹಂತದಲ್ಲಿ, ಕೃತಿಯು ಅರ್ಥಪದರುಗಳನ್ನು ವಿಚಾರಿಸಿದರೆ ಕೃತಿಗಾರನು ಆರಂಭಿಸಿದ ಚಿಂತನಾಪ್ರಕ್ರಿಯೆಯನ್ನು ನಿಕರವಾಗಿ ಪತ್ತೆ ಹೊಂದೊಯ್ಯಲು ಸಾಧ್ಯ. ಈ ನಿರ್ಬಂಧವನ್ನು ಗುರುತಿಸಿದ ನಂತರ, ಕೃತಿಗಾರನು ಎಲ್ಲಿಯವರೆಗೆ ಸಾಗಿದ್ದಾನೆ ಎಂದು ನಿರ್ಧರಿಸಬಹುದು. ಈ ಕಾರ್ಯಕ್ಕೆ ವಿಮರ್ಶಕನಲ್ಲಿ ಅಂತರ್ ದೃಷ್ಟಿಯೊಂದು ಇರಬೇಕು. ಈ ಹಂತದಲ್ಲಿ ಅರ್ಥೈಯಿಸುವ ಕಾರ್ಯ ತೃಪ್ತಿಕರವಾಗಬೇಕಾದರೆ, ಕೃತಿಯು ಗುರಿ ಸ್ಪಷ್ಟವಾಗಿರಬೇಕು. ಕೃತಿಯು ಅಂತರ್ಗತ ಗುರಿ ಸ್ಪಷ್ಟವಾಗಿಲ್ಲವಾದರೆ ಏನು ಮಾಡಬೇಕು ?

ಯೋಗ್ಯಾರ್ಥ-ಕೃತಿಯು ಸಂದರ್ಭವನ್ನು ಸ್ಪಷ್ಟಗೊಳಿಸುವ ಕಾರ್ಯವಾಗಿ

ವೆಲೆಕ್ ಹಾಗೂ ವಾರೆನ್, ಇವರ ಅಭಿಪ್ರಾಯದಂತೆ, ಕೃತಿಯು ಅರ್ಥ ಬದಲಾಗುತ್ತಾ ಇರುತ್ತದೆ. ಕಲಾಕೃತಿ, ವ್ಯಕ್ತಿಯೊಬ್ಬನ ಅನುಭವಗಳ ಒಟ್ಟು ಮೊತ್ತವಾಗಿ ಮಾತ್ರ ಉಳಿಯದೆ, ಅದು ಅನುಭವಗಳ ಸಾಧ್ಯತಾಸ್ಥಿತಿಯೊಂದನ್ನು ಒದಗಿಸಿ ಕೊಡುತ್ತದೆ. ಕೆಲವರ ಅಭಿಪ್ರಾಯದಂತೆ ಪ್ರತಿ ಓದಿನಲ್ಲೂ ಕೃತಿಯು ಅರ್ಥ ಬದಲಾಗುತ್ತಾ ಇರುತ್ತದೆ. ಟಿ. ಎಸ್. ಎಲಿಯಟ್ ಅಭಿಪ್ರಾಯದಂತೆ, ಕೃತಿಗಾರನಿಗೆ ತನ್ನ ಕೃತಿಯ ಬಗ್ಗೆ ಅರ್ಥ ಸರ್ವಸ್ವಾಮ್ಯ (semantic autonomy) ಯೇನೂ ಇರುವುದಿಲ್ಲ. ಯಾಕೆಂದರೆ ತಾನು ಬಳಸುವ ಪದಗಳು ಅವನ ನಿಯಂತ್ರಣಕ್ಕೆ ಒಳಪಟ್ಟಿರುವುದಿಲ್ಲ ಹಾಗೂ ಸ್ವಂತ ಕೃತಿಯ ವ್ಯಾಖ್ಯಾನಗಾರನಾಗಿ ವಿಶಿಷ್ಟ ಸೌಲಭ್ಯಗಳೇನೂ ಅವನಿಗಿರುವುದಿಲ್ಲ.

ಈ ವರೆಗೆ ಕೃತಿಯ ಯೋಗ್ಯಾರ್ಥವನ್ನು ಕಂಡುಹಿಡಿಯಲು, ಕೃತಿಗಾರನನ್ನೇ ವಿವೇಚನೆಯ ಕೇಂದ್ರ ಬಿಂದುವನ್ನಾಗಿ ಇಟ್ಟುಕೊಂಡೆವು. ಅರ್ಥೈಯಿಸುವ ಕಾರ್ಯವನ್ನು ಕೈಗೊಂಡ ವಿಮರ್ಶಕ ತನ್ನನ್ನೇ ಕೃತಿಗಾರನ ಸ್ಥಾನದಲ್ಲಿ ಇರಿಸಿ, ಅವನು ಪ್ರಾರಂಭಿಸಿದ, ಆದರೆ ಅಪೂರ್ಣವಾದ ಅರ್ಥವಲಯವನ್ನು ಪೂರ್ಣಗೊಳಿಸಲು ಹವಣಿಸುತ್ತಾನೆ. ಆದರೆ ಈ ಕಾರ್ಯದಲ್ಲಿ ಹಲವು ಇತಿಮಿತಿಗಳಿವೆ. ಒಂದನೆಯದಾಗಿ, ಕೃತಿಯ ಆಂತರಿಕ ಗುರಿಯು ಸ್ಪಷ್ಟವಾಗಿದ್ದರೆ ಮಾತ್ರ ಈ ಕಾರ್ಯ ಸಾಧ್ಯ. ಈ ಸಮಸ್ಯೆಯನ್ನು ಬಗೆಹರಿಸಲು ವಿಮರ್ಶಕನಿಗೆ, ಕೃತಿಯ ಚಿಂತನಾ ಪ್ರಕ್ರಿಯೆಯಿಂದ ಬಿಡಿದು ನಿಲ್ಲುವ ಸುದೂರ ದೃಷ್ಟಿಕೋನವೊಂದು ಬೇಕಾಗುತ್ತದೆ. ಸುದೂರ ದೃಷ್ಟಿಯು ವಿಮರ್ಶೆಗೆ ಹಲವು ಹೊಸ ಸಾಧ್ಯತೆಗಳನ್ನು ಒದಗಿಸಿಕೊಡುತ್ತದೆ. ಈ ವಲಯದಲ್ಲಿ, ಕೃತಿಗಾರ ಕೃತಿಯೊಳಗೆ ಮಗ್ನನಾಗಿ ಕಂಡುಕೊಂಡದ್ದನ್ನು, ವಿಮರ್ಶಕ ಸುದೂರಸ್ಥಾನದಲ್ಲಿ ನಿಂತು ಅವಲೋಕಿಸುತ್ತಾನೆ. ಎರಡನೆಯದಾಗಿ, ಕೃತಿಗಾರನ ಮೂಲಚಿಂತನೆಗಳು ಯಾವಾಗಲೂ ಸ್ಪಷ್ಟವಾಗಿ ಮೂಡಿಬರಲಾರವು. ಇಂತಹ ಸಂದರ್ಭದಲ್ಲಿ ವಿಮರ್ಶಕ, ಈ ಮೂಲಚಿಂತನೆಗಳನ್ನು ಗುರುತಿಸಿ, ಕೃತಿಯಲ್ಲಿ ಅವುಗಳನ್ನು ಬಳಸಿದ ರೀತಿಗೆ ಹೊಂದಿಕೊಳ್ಳುವಂತೆ ವ್ಯಾಖ್ಯಾನಿಸಬೇಕಾಗುವುದು. ಈ ಅಂತರ್ ಚಿಂತನೆಗಳನ್ನು ಕೃತಿಯಿಂದ ನೇರವಾಗಿ ಶೋಧಿಸಿ ಗುರುತಿಸುವುದು ಕಷ್ಟಸಾಧ್ಯವಾದುದರಿಂದ, ಕೃತಿಯನ್ನು ವಿಶಾಲಸಂದರ್ಭವೊಂದರಲ್ಲಿ ಇರಿಸಿ ನೋಡಬೇಕು. ಕೃತಿಗಾರನ ಅಚಾತುರ್ಯವೇ ಇಂತಹ ಮಿತಿಗಳಿಗೆ ಕಾರಣವಲ್ಲ. ಅವನ ಸೃಜನಾತ್ಮಕ ಶಕ್ತಿಯ ತಿರುಳಿನಲ್ಲಿ ಈ ಮೂಲಚಿಂತನೆಗಳು ಹುದುಗಿಕೊಂಡಿರುತ್ತವೆ. ಈ ಚಿಂತನೆಗಳನ್ನು ಸ್ಪಷ್ಟಗೊಳಿಸುವ ಗೌಣಕಾರ್ಯದಲ್ಲಿ ಕೃತಿಗಾರ ತನ್ನನ್ನೇ ತೊಡಗಿಸಲಾರ, ಅಲ್ಲದೆ ಅವುಗಳ ಬಗ್ಗೆ ಅವನು ಪ್ರಜ್ಞಾಪೂರ್ಣನಾಗಿರಲಾರ.

ಪ್ರತಿಯೊಂದು ಕೃತಿಯಲ್ಲೂ ಕೃತಿಕಾರನ ವೈಯಕ್ತಿಕ ಲೋಕದೃಷ್ಟಿಯೊಂದು ಕಾರ್ಯತತ್ಪರವಾಗಿರುತ್ತದೆ. ಈ ವ್ಯಕ್ತಿನಿಷ್ಠ, ಅನನ್ಯಲೋಕದೃಷ್ಟಿ ಅವನಲ್ಲಿ ಸುಪ್ತವಾಗಿರುತ್ತದೆ. ಈ ಲೋಕದೃಷ್ಟಿಯನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಕೃತಿಗಾರನಿಗೆ ಒಂದು ಮಿತಿಯಲ್ಲಿ ಸಾಧ್ಯವಾಗಬಹುದು. ವ್ಯಕ್ತಿಯೊಬ್ಬನ ಲೋಕದೃಷ್ಟಿ ಅವನ ಪ್ರತಿಯೊಂದು ಕಾರ್ಯವನ್ನು ನಿಯಮಿತಗೊಳಿಸುತ್ತದೆ. ಆದರೆ ಲೋಕದೃಷ್ಟಿಯನ್ನು ಪೂರ್ಣವಸ್ತುನಿಷ್ಠವಾಗಿ ವಿವರಿಸುವಂತಿಲ್ಲ. ಕೃತಿಗಾರನ ಸೃಜನಾತ್ಮಕ ಕ್ರಿಯೆ, ತನ್ನ ವೈಯುಕ್ತಿಕ ಲೋಕದೃಷ್ಟಿಯನ್ನು ಆಧರಿಸಿ ನಿಂತಿದ್ದರೂ, ಸೃಜನಾತ್ಮಕ ಗುಣ ತನ್ನಿಂದಲೇ ದೂರಸರಿದು, ಕೃತಿಯ ವಸ್ತುವಿನತ್ತ ಹೊರಳಿ ವಸ್ತುವನ್ನು ಗಣನೆಗೆ ತೆಗೆದುಕೊಳ್ಳುತ್ತದೆಯೋ ಹೊರತು, ಸೃಜನಾತ್ಮಕತೆ ಹಾಗೂ ವಸ್ತುವಿನ ಸಂಬಂಧವೈಖರಿಯನ್ನು ಕುರಿತು ವಿವೇಚಿಸಲಾರನು. ವಿಮರ್ಶಕನಿಗೂ ಕೃತಿಗಾರನ ಲೋಕದೃಷ್ಟಿಯ ಹಿನ್ನೆಲೆ ಸರ್ವಸ್ಪಷ್ಟವಾಗಿರಲಾರದು. ಆದುದರಿಂದಾಗಿ

ತಾನು ಕೈಗೊಂಡಿರುವ ವಿಮರ್ಶೆಯ ಕಾರ್ಯದಲ್ಲಿ, ಕೃತಿಗಾರನ ಲೋಕದೃಷ್ಟಿಯನ್ನು ವಿಮರ್ಶಕ ಉಪಕ್ರಮಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕೃತಿಯನ್ನು ಅರ್ಥೈಯಿಸಬೇಕಾಗುತ್ತದೆ. ಆದುದರಿಂದ ಕೃತಿಯ ಅರ್ಥ, ಕೃತಿಗಾರನ ಉದ್ದೇಶಿತ ಅರ್ಥಗಳು, ವಿಮರ್ಶಕನು ಕಂಡುಕೊಂಡ ಅರ್ಥಕ್ಕೆ ಸರಿಸಮವಾಗಿ ತಾಳೆಹೊಂದಲಾರವು. ಕೃತಿಗಾರ-ವಿಮರ್ಶಕ, ಇವರಿಬ್ಬರೂ, ಒಂದೇ ವಸ್ತುವನ್ನು ಅವಲೋಕಿಸದೆ, ಆ ವಸ್ತುವಿನ ವಿವಿಧ ಆಯಾಮಗಳನ್ನು ಅವಲೋಕಿಸುತ್ತಾರೆ. ಈ ಕಾರಣದಿಂದಾಗಿ ಒಬ್ಬನಿಗೆ ಬಹು ಮುಖ್ಯವಾಗಿರುವುದು, ಇನ್ನೊಬ್ಬನಿಗೆ ಗೌಣವಾಗಿ ಕಂಡುಬರಬಹುದು. ಕೃತಿಗಾರ ತನ್ನ ಕೃತಿಯ ಚೌಕಟ್ಟಿನೊಳಗೆ ಸಿಕ್ಕಿಬಿದ್ದಿದ್ದರೆ, ವಿಮರ್ಶಕ ಕೃತಿಯಿಂದ ಮೇಲೇರಿ, ದೂರಸ್ಥಾನದಲ್ಲಿದ್ದು, ವಿಶಾಲದೃಷ್ಟಿಕೋನವೊಂದನ್ನು ಪಡೆಯುತ್ತಾನೆ. ಆದುದರಿಂದ ವಿಮರ್ಶಕನಿಗೆ ಕೃತಿಗಾರನಿಗಿಂತ ವಿಶಾಲವಾದ ಅರ್ಥವಲಯ ಹೊಳೆಯುವುದು ಸಾಧ್ಯವಷ್ಟೇ ಅಲ್ಲ, ಅವಶ್ಯಕವೂ ಹೌದು. ಒಂದು ದೃಷ್ಟಿಯಲ್ಲಿ ಈ ವಿಶಾಲ ಅರ್ಥಕ್ಕೂ ನಿಕರತೆ ಇರುವುದರಿಂದಾಗಿ, ಕೃತಿಯ ಅರ್ಥವಲಯಗಳನ್ನೆಲ್ಲಾ ಶೋಧಿಸಿ ಹೊರಮೂಡಿಸುವುದು ಅಸಾಧ್ಯವೆನ್ನಬಹುದು.

ಒಟ್ಟಿನಲ್ಲಿ, ಕೃತಿಯ ಉಚಿತಾರ್ಥದ ತಾರ್ಕಿಕವಲಯವನ್ನು ಮೀರಿ, ಕೃತಿಯನ್ನು ಬದುಕಿನ ಅಭಿವ್ಯಕ್ತಿಯಾಗಿ ಸ್ವೀಕರಿಸಿದಾಗ, ವಿಮರ್ಶಾಕಾರ್ಯ ಕೃತಿಯ ಪುನರಾವೃತ್ತಿಯಾದರೆ, ಅದು ತೃಪ್ತಿಕರ ವಿಮರ್ಶೆಯಾಗದು. ವಿಮರ್ಶಕ, ಕೃತಿಗಾರನಲ್ಲದ ಅನ್ಯವ್ಯಕ್ತಿಯಾಗಿರುವುದರಿಂದಲೂ, ಕೃತಿಗಾರನಿಗೆ ಸುಸ್ಪಷ್ಟವಾಗಿರುವುದು ಅವನಿಗೆ ಅಸ್ಪಷ್ಟವಾಗುವ ಸಾಧ್ಯತೆ ಇರುವುದರಿಂದ, ಕೃತಿಮೂಡಿಬಂದ ಸಾಂದರ್ಭಿಕ ಹಿನ್ನೆಲೆಯನ್ನು ಶೋಧಿಸುವುದು ವಿಮರ್ಶಕನಿಗೆ ಅತ್ಯಗತ್ಯಕಾರ್ಯವಾಗುತ್ತದೆ. ಕೃತಿಗಾರ ತನ್ನನ್ನೇ ಅರ್ಥಮಾಡಿಕೊಂಡ ಪ್ರಮಾಣದಲ್ಲಿ, ವಿಮರ್ಶಕ ಅವನನ್ನು ಅರ್ಥಮಾಡಿಕೊಳ್ಳುವಂತಿಲ್ಲ ಅಥವಾ ಕೃತಿಗಾರನನ್ನು ಅರ್ಥೈಯಿಸಬೇಕಾದರೆ, ವಿಮರ್ಶಕ, ಕೃತಿಗಾರ ತನ್ನ ಕುರಿತಾಗಿಯೇ ಹೇಳುವ ವಿಷಯಗಳನ್ನು ಮೀರಿಹೋಗಬೇಕಾಗುತ್ತದೆ, ಅಂದರೆ ಕೃತಿಗಾರನು ತನ್ನನ್ನೇ ಅರ್ಥಮಾಡಿಕೊಂಡ ಪ್ರಮಾಣವನ್ನು ಮೀರಿ, ವಿಮರ್ಶಕ ಕೃತಿಗಾರನನ್ನು ಅರ್ಥೈಯಿಸಬೇಕಾಗುವುದು. ಆದುದರಿಂದ ಯೋಗ್ಯಾರ್ಥ ಶೋಧನೆಯೆಂದರೆ, ಕೃತಿಯಲ್ಲಿ ಸ್ಪಷ್ಟವಾಗಿರುವ ಅರ್ಥವನ್ನು ಇನ್ನೂ ಆಳವಾಗಿ ಶೋಧಿಸುವುದಲ್ಲ, ಬದಲಾಗಿ ಅರ್ಥವನ್ನು ಇನ್ನೊಂದು ವಲಯದಲ್ಲಿ ಶೋಧಿಸುವುದಾಗಿದೆ. ಕೃತಿಯ ಹಾಗೂ ಆ ಯುಗಮನೋಧರ್ಮದ ಸಂವಾದಿತ್ವ ಮತ್ತು ಕೃತಿ ಒಳಗೊಂಡ ವಸ್ತುವಿನ ಸ್ವರೂಪ ಹಾಗೂ ತಾತ್ವಿಕಮೌಲ್ಯ ವಿವೇಚನೆ ವಿಮರ್ಶಕನ ಕಾರ್ಯಪರಿಧಿಗೆ ಸೇರುತ್ತದೆ. ಒಟ್ಟಿನಲ್ಲಿ ಅರ್ಥೈಯಿಸುವ ಕಾರ್ಯಗಳೆಲ್ಲಾ ಯೋಗ್ಯಾರ್ಥ ಶೋಧನೆಯ ಪ್ರಯತ್ನಗಳು.

ಅಭಿವ್ಯಕ್ತಿಯು ಸೃಜನಾತ್ಮಕ ವಿಮರ್ಶೆ– ಸುಪ್ತಪ್ರಜ್ಞಾಮೂಲ ತತ್ವ

ಕೃತಿಯ ಯೋಗ್ಯಾರ್ಥವನ್ನು ಸಂಗ್ರಹಿಸಲು ಸದೂರದೃಷ್ಟಿಯೊಂದು ವಿಮರ್ಶಕನಿಗೆ ಅಗತ್ಯ. ತನ್ನ ಲೋಕದೃಷ್ಟಿಯು ಹತ್ತು ಹಲವು ಹೆಣಿಕೆಗಳಲ್ಲಿ ಸಿಕ್ಕಿಬಿದ್ದ ಕೃತಿಗಾರನಿಗೆ ಈ ಸದೂರದೃಷ್ಟಿ ಇರುವುದು ಅಸಾಧ್ಯ. ಆದುದರಿಂದ ಯೋಗ್ಯಾರ್ಥವೆಂದರೆ ಲೋಕವನ್ನು ಮಗ್ನವಾಗಿ (ಭವನಿಮಜ್ಜನ) ಅಥವಾ ಸದೂರನಾಗಿ (ಲಘಿಮಾಕೌಶಲ)ನಿಂತು ನೋಡಿದಾಗ ಉಂಟಾಗುವ ದೃಷ್ಟಿಕೋನದ ಭಿನ್ನತೆ ಹಾಗೂ ಗ್ರಾಹ್ಯತೆಯ ಹಲವು ಸಾಧ್ಯತೆಗಳು. ಕೃತಿಗಾರನಿಗೆ ಈ ಸದೂರದೃಷ್ಟಿ, ಲಘಿಮಾಕೌಶಲ ಕೃತಿರಚನಾ ಸಂದರ್ಭದಲ್ಲಿ ಯಾಕೆ ಸಾಧ್ಯವಿಲ್ಲ? ಈ ಪ್ರಶ್ನೆಗೆ ಉತ್ತರವನ್ನು ಕಂಡುಹಿಡಿಯಲು ಸುಪ್ತಪ್ರಜ್ಞಾಮೂಲ ಸೃಷ್ಟಿಯ ತತ್ವವನ್ನು ಪರಿಶೀಲಿಸಬೇಕು.

ಅಭಿವ್ಯಕ್ತಿ ಎಂದರೇನು ? ಮಾನವನ ಇತರ ಕಾರ್ಯಗಳಿಗೂ, ಸೃಜನಾತ್ಮಕ ಅಭಿವ್ಯಕ್ತಿಗೂ ವ್ಯತ್ಯಾಸವಿದೆ. ಕೆಲವು ಕಾರ್ಯಗಳನ್ನು ನಾವು ಹಂತಹಂತಗಳಲ್ಲಿ ಮಾಡಿ ಪೂರೈಸುತ್ತೇವೆ. ಯಾಕೆಂದರೆ ಈ ಕಾರ್ಯದ ಪೂರ್ಣಚಿತ್ರವು ಈಗಾಗಲೇ ನಮಗೆ ನಿಚ್ಚಳವಾಗಿರುತ್ತದೆ. ಕಾಲ್ಪನಿಕವಾಗಿ ನಿಚ್ಚಳರೂಪದಲ್ಲಿದ್ದ ನೀಲಿನಕಾಶೆಯು ಹಂತಹಂತಗಳಲ್ಲಿ ವಾಸ್ತವರೂಪವಾಗುತ್ತದೆ. ಆದರೆ ಅಭಿವ್ಯಕ್ತಿಯು ಮಾನವ ಚೇತನದ ಕಾರ್ಯವಾಗಿ, ಸುಪ್ತಪ್ರಜ್ಞೆಯ ಅಂತರಾಳದಿಂದ ಮೂಡಿಬರುವುದರಿಂದ, ಕೃತಿಯ ಪೂರ್ಣರೂಪ, ಕೃತಿಕಾರನಿಗೆ ಈ ಮೊದಲೇ ಖಚಿತವಾಗಿರುವುದಿಲ್ಲ. ಗುರಿ ನಿಚ್ಚಳವಾಗಿರುವ ಕಾರ್ಯಗಳಲ್ಲಿ ನಿಖರತೆ ನಿಶ್ಚಿತಗುಣ ಇರಲು ಸಾಧ್ಯ. ಅಭಿವ್ಯಕ್ತಿಗೆ ಒಂದು ವಿಶಿಷ್ಟಗುಣವಿದೆ ; ಬದುಕಿನ ಅಂತರಾಳದಿಂದ ಹುಟ್ಟಿ, ಕರ್ತನಿಗೆ ಸುಪ್ತವಾಗಿಯೇ ಉಳಿದು ನವನವೀನವಾದ ಕೃತಿಯೊಂದನ್ನು ಸೃಷ್ಟಿಸುವ ಗುಣ. ಆದುದರಿಂದಲೇ ಅಭಿವ್ಯಕ್ತಿಯು ಸೃಜನಾತ್ಮಕ ಕಾರ್ಯವಾಗುತ್ತದೆ. ಈ ದೃಷ್ಟಿಯಲ್ಲಿ ಯೋಗ್ಯಾರ್ಥವೆಂದರೇನು ? ಸೃಜನಾತ್ಮಕ ಅಭಿವ್ಯಕ್ತಿಯಲ್ಲಿ ಅರ್ಥವು ನಿಚ್ಚಳವಾಗಿರುವುದಿಲ್ಲವಾದುದರಿಂದ ಅರ್ಥೈಯಿಸುವ ಕಾರ್ಯ ಸುಲಭವಾಗಿರುವುದಿಲ್ಲ. ಸೃಜನಾತ್ಮಕ ಅಭಿವ್ಯಕ್ತಿವಲಯದಲ್ಲಿ ವಸ್ತುನಿಷ್ಠ ಅರ್ಥಗ್ರಹಣ ಕಷ್ಟವಾದುದರಿಂದ ಯೋಗ್ಯಾರ್ಥವನ್ನು ಹೊರಮೂಡಿಸಲು ವಿಮರ್ಶೆ ಅತ್ಯಗತ್ಯವಾಗುತ್ತದೆ. ಅಭಿವ್ಯಕ್ತಿ – ವಿಮರ್ಶೆ, ಸೃಷ್ಟಿ–ಅರ್ಥಸೃಷ್ಟಿಗಳು ಪರಸ್ಪರ ಪೂರಕಗಳಾಗುತ್ತವೆ ಅಭಿವ್ಯಕ್ತಿ ಸೃಜನಾತ್ಮಕವಾದರೂ ಅದು ಕುರುಡು, ಅನಿಶ್ಚಿತ. ವಿಮರ್ಶೆ ತಾನಾಗಿಯೇ ಏನನ್ನೂ ಸೃಷ್ಟಿಸುವುದಿಲ್ಲವಾದರೂ ಅದು ಸೃಜನಾತ್ಮಕ ಕೃತಿಯೊಂದನ್ನು ಅವಲಂಬಿಸಿರಬೇಕಾಗುತ್ತದೆ. ಈ ಸಂದರ್ಭದಲ್ಲಿ ವಿಮರ್ಶೆಯೊಂದಿಗೆ, ಕೃತಿಯಲ್ಲಿ ಈಗಾಗಲೇ ಮುದುಗಿಕೊಂಡಿರುವ ಅರ್ಥವನ್ನು ಸ್ಫುಟಗೊಳಿಸುವುದು ಮಾತ್ರವಲ್ಲ – ಅಸ್ಪಷ್ಟವಾದುದನ್ನು ಸ್ಪಷ್ಟಗೊಳಿಸುವುದರಿಂದಲೂ, ಅರ್ಥವನ್ನು ನವಸೃಷ್ಟಿಸುವುದ

ರಿಂದಲೂ, ವಿಮರ್ಶೆಯೇ ಸೃಜನಾತ್ಮಕ ಕಾರ್ಯವಾಗುತ್ತದೆ. ಈ ಅರ್ಥದಲ್ಲಿ ಮಾತ್ರ ಕಲಾತ್ಮಕ ಕೃತಿಯೊಂದರ ಸೃಜನಾತ್ಮಕ ಅಗಾಧತೆಯನ್ನು ಕುರಿತು ವಿವೇಚಿಸಲೂ, ವಿಮರ್ಶೆಯ ಮೂಲಕ ಕೃತಿಯ ಅರ್ಥವನ್ನು ಸೃಜನಾತ್ಮಕವಾಗಿ ವಿಶಾಲಗೊಳಿಸಲೂ ಸಾಧ್ಯ.

ಯೋಗ್ಯಾರ್ಥ ಶೋಧನೆಯ ಪರಿಮಿತಿಗಳು

ಈವರೆಗಿನ ವಿವೇಚನೆಯಿಂದ ಸ್ಪಷ್ಟವಾಗುವ ಅಂಶವೆಂದರೆ – ವಿಮರ್ಶೆ ಎಂಬುದು ಕೃತಿಯ ಸೃಜನಾತ್ಮಕ ಪರಿಷ್ಕರಣ ಪ್ರಕ್ರಿಯೆ. ಅರ್ಥವಿಸ್ತಾರದ ಈ ಸೃಜನಾತ್ಮಕ ಪ್ರಕ್ರಿಯೆಯಲ್ಲಿ, ಕೃತಿಗಾರ-ವಿಮರ್ಶಕರು ಸಹಭಾಗಿಗಳಾಗಿ, ಅನ್ಯ ಪ್ರತ್ಯಸ್ನರಾಗಿ ತೊಡಗುತ್ತಾರೆ. ಆದರೆ ಈ ಸೃಜನಾತ್ಮಕ ಬೆಳವಣಿಗೆಗೆ ಪರಿಮಿತಿಗಳಿವೆಯೇ ? ವಿಮರ್ಶೆಯ ಮೂಲವಾಗಿ ವ್ಯವಹರಿಸುವ ಜೀವನದೃಷ್ಟಿಯಲ್ಲಿ ಈ ಪ್ರಶ್ನೆಗೆ ಉತ್ತರ ಸಿಗುತ್ತದೆ. ಸೃಜನಾತ್ಮಕ ಅರ್ಥಶೋಧನೆ ಸಾಧ್ಯವಾಗುವುದು ಕೃತಿಗಾರ ಹಾಗೂ ವಿಮರ್ಶಕರ ನಡುವೆ ಸಾಮಾನ್ಯ ತರ್ಕವೊಂದು ವ್ಯವಹರಿಸಿದಾಗ ಮಾತ್ರ. ಸಮಾನಜೀವನ ದೃಷ್ಟಿಯ ತರ್ಕವೊಂದು ಅಭಿವ್ಯಕ್ತಿಯನ್ನು ರೂಪಿಸಿದಾಗ, ವಿಮರ್ಶೆ ಅದನ್ನು ಸೃಜನಾತ್ಮಕವಾಗಿ ಬಳಸಿದಾಗ, ಒಬ್ಬನು ಇನ್ನೊಬ್ಬನ ಅರ್ಥ ವಲಯವನ್ನು ಸಂಸ್ಕರಿಸುತ್ತಾನೆ ಎನ್ನಬಹುದು. ಈ ಸಂದರ್ಭದಲ್ಲಿ ಅರ್ಥೈಯಿಸುವ ಕಾರ್ಯದ ಪರಿಮಿತಿಗಳು ನಿಚ್ಚಳವಾಗುತ್ತವೆ. ಕೃತಿಗಾರ-ವಿಮರ್ಶಕರಲ್ಲಿ ಅಂತರವೊಂದು ಏರ್ಪಟ್ಟಾಗ, ಸೃಜನಾತ್ಮಕ ವಿಮರ್ಶೆಯ ಸಾಧ್ಯತೆಗಳು ಕೊನೆಗೊಳ್ಳುತ್ತವೆ.

ತನಗೆ ಹೊರತಾದುದನ್ನು, ತನಗೆ ವಿರುದ್ಧವಾಗಿ ನಿಲ್ಲುವುದನ್ನು ಶೋಧಿಸಿ ತಿಳಿಯುವುದು ಮಾನವನ ಹುಟ್ಟುಗುಣ. ಈ ಕಾರಣದಿಂದಲೇ ಶತ್ರುವಿನ ಕುರಿತು ಸಾಕಷ್ಟು ತಿಳುವಳಿಕೆ ನಮಗಿರುತ್ತದೆ ಎನ್ನಬಹುದು. ವಿಮರ್ಶೆಯಲ್ಲೂ ಇದೇ ಕಾರ್ಯ ನಡೆಯುತ್ತದೆ ಎನ್ನಬಹುದು ವಿಮರ್ಶಾತ್ಮಕ ತಿಳುವಳಿಕೆಗೆ ಮುಕ್ತಗೊಳಿಸುವ ಗುಣವಿದೆ, ಬೆಳೆಸುವ ಗುಣವಿದೆ. ಕೃತಿಯೊಂದನ್ನು ಕೈಗೆತ್ತಿಕೊಂಡಾಗ ನಾವು ಅರಿಸುವುದು ಸಂಸ್ಕೃತಿಯ ಫಲವಾದ ಆ ಕೃತಿಯ ಹಿನ್ನೆಲೆಯಲ್ಲಿ ಏನಿದೆ ಎಂಬುದನ್ನು ಮಾತ್ರವಲ್ಲ, ಆ ಕೃತಿಯು ನಮ್ಮ ವೀಕ್ಷಣೆಗೆ ಏನನ್ನು ಚಾಚಿದೆ, ಏನನ್ನು ಪ್ರಲಂಬಿಸಿದೆ, ಯೋಜಿಸಿದೆ ಎಂಬುದನ್ನು ಅರಿಯುವುದು ಮುಖ್ಯವಾಗುತ್ತದೆ. ಸೃಜನಾತ್ಮಕ ಅಭಿವ್ಯಕ್ತಿಯ ಅರ್ಥ ಯಾವಾಗಲೂ ಭಾವಾರ್ಥ – ಅರ್ಥ ಹಾಗೂ ವ್ಯಕ್ತಿಯ ನಡುವೆ ಏರ್ಪಡುವ ಸಂಬಂಧ. ವ್ಯಕ್ತಿಯ ಭಾವನೆ, ಮೌಲ್ಯಗಳು ದೃಷ್ಟಿಕೋನಗಳು ಬದಲಾದಂತೆ, ಕೃತಿಯ ಅರ್ಥವೂ ಹೊಸ ರೂಪವನ್ನು ಪಡೆಯಲು ಸಾಧ್ಯ. "If a text means what it says, then it means nothing in particular." (*E. D. Hirsch*) ಎಂಬ ಮಾತನ್ನು ಒಪ್ಪಿಕೊಳ್ಳಬಹುದೇನೋ !

‘ಪೂರ್ವ ನಿರೂಪಣಾತಂತ್ರ’ ಮತ್ತು ‘ಸಿಂಹಾವಲೋಕನ ತಂತ್ರ’ –ಒಂದು ಸ್ಪಷ್ಟನೆ

ಎ. ಚಂದ್ರಶೇಖರ್ ನಂಗಲಿ

1

"...All narration, all telling, whether of fact or fiction, is analyzable into two parts –person and time"[1] ಕಾಲದ ದೃಷ್ಟಿಯಿಂದ ಭೂತಕ್ಕೆ (past) ಸಂಬಂಧಿಸಿದ ಪೂರ್ವ ನಿರೂಪಣಾತಂತ್ರ – flash back technique ಮತ್ತು ಸಿಂಹಾವಲೋಕನತಂತ್ರ– leo look technique, ಇವುಗಳ ನಿರೂಪಣಾ ವಿಧಾನ ಹಾಗೂ ಇವುಗಳ ನಡುವೆ ಇರುವ ಪರಸ್ಪರ ಸಾಮ್ಯವೈಷಮ್ಯ ಗಳನ್ನು ಗುರುತಿಸುವುದಷ್ಟೆ ಈ ಲೇಖನದ ಉದ್ದೇಶವಾಗಿದೆ.

‘ಪೂರ್ವ ನಿರೂಪಣಾ ತಂತ್ರ’ ವೆಂದರೆ ಹೆಸರೇ ಸೂಚಿಸುವಂತೆ ಹಿಂದೆ ನಡೆದ ಸಂಗತಿಗಳನ್ನು ನಿರೂಪಿಸುವ ಒಂದು ವಿಧಾನ. ಇದು ಜಗತ್ತಿನ ಎಲ್ಲ ಭಾಷಾ ಸಾಹಿತ್ಯಗಳಲ್ಲು ಕಂಡುಬರುವ ಒಂದು ಸಾರ್ವತ್ರಿಕ ತಂತ್ರವಾಗಿದೆ. ಇದನ್ನು ಉತ್ತಮ ಮತ್ತು ತೃತೀಯ ಪುರುಷ ಭೇದವನ್ನು ಅನುಸರಿಸಿ ದ್ವಿದಾಭಿನ್ನವಾಗಿ ಗ್ರಹಿಸಬಹುದು :

i. ಉತ್ತಮ ಪುರುಷ ನಿರೂಪಣೆಯೊಂದಿಗೆ ಪೂರ್ವ ನಿರೂಪಣಾತಂತ್ರ (Flash back technique with First person narration) .

ಉದಾ : a. ‘ವಡ್ಡಾರಾಧನೆ’ಯ ‘ವಿದ್ಯುಚ್ಚೋರನೆಂಬರಿಸಿಯ ಕಥೆ’ ಯಲ್ಲಿ ವಿದ್ಯುಚ್ಚೋರನು ಪದ್ಮರಥನೆಂಬ ಅರಸನ ಅಪೇಕ್ಷೆಯಂತೆ ತನ್ನ ಮತ್ತು ಯಮದಂಡನ ಪೂರ್ವವೃತ್ತಾಂತವನ್ನು ನಿರೂಪಿಸುತ್ತಾನೆ. ಕಥೆ 13 : ಪುಟ 126.

b. ‘ಆದಿಪುರಾಣ’ದ ಶ್ರೀಮತಿಯು ಪೂರ್ವಜನ್ಮ ಸ್ಮರಣೆಯಿಂದ ಸ್ನೇಹಿತೆಯಾದ ಪಂಡಿತೆಯ ಅಪೇಕ್ಷೆಯಂತೆ ತನ್ನ "ಪ್ರಾಗ್ ಜನ್ಮ ಕಥಾವಳಿ"ಯನ್ನು ನಿರೂಪಿಸುತ್ತಾಳೆ. –3 ; 32 ವ –37.

c. ‘ಆದಿಪುರಾಣ’ದ ವಜ್ರದಂತನು ಅವಧಿಜ್ಞಾನದಿಂದ ತನ್ನ ಮಗಳಾದ ಶ್ರೀಮತಿಯ ಅಪೇಕ್ಷೆಯಂತೆ ತಾನೂ, ತನ್ನ ತಾಯಿಯೂ

ಪಡೆದುಕೊಂಡು ಬಂದಿದ್ದ ಭವಾವಳಿಯನ್ನು ವಿವರಿಸಿ ಪ್ರಸ್ತುತ, ಲಲಿತಾಂಗನು ವಜ್ರಜಂಘನಾಗಿರುವುದನ್ನು ನಿರೂಪಿಸುತ್ತಾನೆ. 3 : 49ವ–82.

ii. ತೃತೀಯ ಪುರುಷ ನಿರೂಪಣೆಯೊಂದಿಗೆ ಪೂರ್ವ ನಿರೂಪಣಾತಂತ್ರ (Flash back technique with third person narration)

a 'ಆದಿಪುರಾಣ'ದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಚಾರಣ ಯುಗಳರು ಆಯಾ ಪಾತ್ರಗಳ ಅಪೇಕ್ಷೆಯಂತೆ ಪೂರ್ವಜನ್ಮ ಭವಾವಳಿಯನ್ನು ನಿರೂಪಿಸುತ್ತಾರೆ. 2 : 35 ವ– 44, 5 : 2–20ವ, 5 : 44 ವ–50, 5 : 73–94.

b. 'ರಾಮಚಂದ್ರ ಚರಿತ ಪುರಾಣ'ದಲ್ಲಿ ಜಾಂಬೂನದನು ಶ್ರೀರಾಮನ ಅಪೇಕ್ಷೆಯಂತೆ ರಾವಣನ ಪೂರ್ವ ವೃತ್ತಾಂತವನ್ನು ನಿರೂಪಿಸುತ್ತಾನೆ. 5 : 25–74.

c. 'ಪ್ರಭುಲಿಂಗಲೀಲೆ'ಯಲ್ಲಿ ಪಾರ್ವತಿ ಪ್ರೇರಿತಳಾದ ವಿಮಲೆಯು ಮಾಯೆಯನ್ನು ಎಚ್ಚರಿಸುವ ಸಲುವಾಗಿ ಆಕೆಯ ಅಪೇಕ್ಷೆಯಂತೆ ಅಲ್ಲಮನ ವೃತ್ತಾಂತವನ್ನು ನಿರೂಪಿಸುತ್ತಾಳೆ .4 : 108–131.

ಪೂರ್ವ ನಿರೂಪಣಾತಂತ್ರವು ಉತ್ತಮ ಮತ್ತು ತೃತೀಯ ಪುರುಷ ಭೇದವನ್ನು ಅನುಸರಿಸಿ ಎರಡು ವಿಧವಾಗಿ ನಿರೂಪಿತವಾಗುವುದನ್ನು ಮೇಲಿನ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು. ಇಲ್ಲಿ ನಾನು ಕೇವಲ ಸ್ಪಷ್ಟನೆಗಾಗಿ ಒಂದೆರಡು ಉದಾಹರಣೆಗಳನ್ನು ನೀಡಿರುವೆನೇ ಹೊರತು, ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಎಲ್ಲ ಪೂರ್ವ ನಿರೂಪಣಾ ತಂತುಗಳನ್ನು ಕಲೆಹಾಕಲು ಹೊರಟಿಲ್ಲ ಎಂಬುದನ್ನು ಸಹೃದಯ ವಿಮರ್ಶಕರು ಗಮನಿಸಬೇಕು. ಮೇಲೆ ವಿವರಿಸಿದ ಎರಡು ವಿಧವಾದ ಪೂರ್ವ ನಿರೂಪಣಾ ತಂತ್ರಗಳನ್ನು ಜೆನಿಸನ್ ಗ್ರೇ ಕ್ರಮವಾಗಿ, First person, participant, past narration ಮತ್ತು Third person, past narration ಎಂದು ಕರೆದಿದ್ದಾನೆ.[2] ಈತನೇ ಹೇಳುವ First person, non participant, past narration ಎಂಬುದು ಗಮನಾರ್ಹ.* ಏಕೆಂದರೆ, ಇವು ಮೂರೂ ಕಾಲದ ದೃಷ್ಟಿಯಿಂದ ಭೂತಕ್ಕೆ ಸಂಬಂಧಿಸಿದ ಪೂರ್ವ ನಿರೂಪಣಾತಂತ್ರದ ಮೂರು ಸಾಧ್ಯತೆಗಳು.

ಪೂರ್ವ ನಿರೂಪಣಾ ತಂತ್ರವನ್ನು ಅನುಸರಿಸುವಾಗ ನಮ್ಮ ಕವಿಗಳು ಕೆಲವೊಮ್ಮೆ ಪ್ರಥಮ ಪುರುಷ ನಿರೂಪಣೆಯನ್ನು ಅಳವಡಿಸಿಕೊಂಡರೂ ಕಾವ್ಯದ

* ಇದಕ್ಕಾತ 'ಇಲಿಯಡ' ಕಾವ್ಯವನ್ನು ಉದಾಹರಿಸಿದ್ದಾನೆ.

ಅಂತ್ಯ ಭಾಗದಲ್ಲಿ ಉತ್ತಮ ಪುರುಷ ನಿರೂಪಣೆಗೆ ಬಂದು ಬಿಡುತ್ತಾನೆ. ಈ ಮಾದರಿಯ ರಚನೆಗೆ ಜನ್ನನ 'ಯಶೋಧರ ಚರಿತೆ'ಯ ಅಭಯರುಚಿ–ಅಭಯಮತಿ ಹಾಗೂ ನಾಗವರ್ಮನ 'ಕರ್ಣಾಟಕ ಕಾದಂಬರಿ'ಯ ವೈಶಂಪಾಯನ ಗಿಳಿ–ಚಂಡಾಲ ಕನ್ಯೆ ಪಾತ್ರಗಳನ್ನು ಉದಾಹರಿಸಬಹುದು. ಈ ಪಾತ್ರಗಳು ಕೃತಿಯ ಪ್ರಾರಂಭ ದಲ್ಲಿ ತಾವು ಯಾರು ? ಎಂಬುದನ್ನು ಹೇಳಿ ಕೊಳ್ಳದೆ, ಅಂತ್ಯ ಭಾಗದಲ್ಲಿ ಹೇಳಿ ಕೊಳ್ಳುವುದನ್ನು ಗಮನಿಸಬೇಕು. ಇಂತಹ ಸಂದರ್ಭಗಳಲ್ಲಿ ಪೂರ್ವ ನಿರೂಪಣಾ ತಂತ್ರವು ರಹಸ್ಯ ರಕ್ಷಣೆಗಾಗಿ ಬಂದಿದ್ದು, ಸಹೃದಯರನ್ನು ಔತ್ಸುಕ್ಯ ಸ್ಥಿತಿಯಲ್ಲಿಡು ತ್ತದೆ ಎನ್ನಬಹುದು.

ಈ ಲೇಖನದ ಪ್ರಾರಂಭದಲ್ಲಿ ಹೇಳಿರುವಂತೆ ಪೂರ್ವ ನಿರೂಪಣಾ ತಂತ್ರವು ಜಗತ್ತಿನ ಎಲ್ಲ ಭಾಷಾ ಸಾಹಿತ್ಯಗಳಲ್ಲು ಬಹು ವ್ಯಾಪಕವಾಗಿ ಕಂಡುಬರುವ ಕಥಾ ತಂತ್ರವಾಗಿದೆ. ಆಧುನಿಕ ಸಿನಿಮಾ ಜಗತ್ತಿನಲ್ಲಂತೂ ಈ ತಂತ್ರವು ವಿಪರೀತವಾಗಿ ಬಳಕೆಯಾಗುತ್ತಿದ್ದು ತುಂಬಾ ಜನಪ್ರಿಯವೆನಿಸಿಕೊಂಡಿದೆ.

ಜೈನ ಪುರಾಣಗಳನ್ನು ಬಿಟ್ಟರೆ, ಉಳಿದ ಎಲ್ಲ ಕಾವ್ಯಗಳಲ್ಲು ಈ ಪೂರ್ವ ನಿರೂಪಣಾ ತಂತ್ರವು ಒಂದೆರಡು ಸರ್ತಿ ಮಾತ್ರ ಪ್ರಯೋಗವಾಗಿದೆ. ಪಂಪನ 'ಆದಿಪುರಾಣ'ದಲ್ಲಿ ನಾನು ಗಮನಿಸಿದಂತೆ ಸುಮಾರು ಹನ್ನೊಂದು ಸರ್ತಿ ಈ ಪೂರ್ವ ನಿರೂಪಣಾ ತಂತ್ರಗಳು ಬಳಕೆಯಾಗಿವೆ. ಅಂತಹ ಸಂದರ್ಭಗಳನ್ನು ಕೆಳಗೆ ವಿವರಿಸಲಾಗಿದೆ.

1. ಸ್ವಯಂ ಬುದ್ಧನ ಅಪೇಕ್ಷೆಯಂತೆ ಚಾರಣ ಯುಗಳರಲ್ಲಿ ಒಬ್ಬರಾದ ಆದಿತ್ಯಗತಿಗಳು ಮಹಾಬಲನು ತನ್ನ ಪೂರ್ವ ಜನ್ಮದಲ್ಲಿ ಜಯವರ್ಮ ನಾಗಿದ್ದು ಸರ್ಪಕ್ಷತದಿಂದ ಹತನಾದ ಕಥೆಯನ್ನು ಹೇಳುವರು. ಜೊತೆಗೆ ಪ್ರಸ್ತುತ, ಮಹಾಬಲನ "ಅಶುಭ ಸ್ವಪ್ನದರ್ಶನಕ್ಕೆ ಕೊಕ್ಕರಿಸಿ" ಸ್ವಯಂ ಬುದ್ಧನ ನಿರೀಕ್ಷೆಯಲ್ಲಿರುವುದನ್ನು ತಿಳಿಸಿ ಆತನು ಮುಂದೆ ವಿವಿಧ ಅವಸ್ಥಾಂತರಗಳಲ್ಲಿ ತೊಡಗಿ ಆದಿದೇವನಾಗುವ ನೆಂಬುದನ್ನು ತಿಳಿಸುತ್ತಾರೆ. 2 : 35 ವ–44.

2. ಲಲಿತಾಂಗನ ವಿಯೋಗದಿಂದ ಶೋಕ ವ್ಯಾಕುಳೆಯಾಗಿದ್ದ ಸ್ವಯಂ ಪ್ರಭೆಯು ಮುಂದೆ ಶ್ರೀಮತಿಯಾಗಿ ಜನಿಸಿ, ಪೂರ್ವಜನ್ಮ ಸ್ಮರಣೆ ಯಿಂದ ಲಲಿತಾಂಗನನ್ನು ನೆನೆದು ದುಃಖಿಸುತ್ತಿರುತ್ತಾಳೆ. ಈಕೆಯ ಮನೋಗತವನ್ನು ತಿಳಿಯಲು ಅಪೇಕ್ಷಿಸಿದ ಪಂಡಿತೆಗೆ ಶ್ರೀಮತಿಯು ತನ್ನ "ಪ್ರಾಗ್ ಜನ್ಮ ಕಥಾವಳಿ"ಯನ್ನು ಅಂದರೆ ತಾನು ಧನಶ್ರೀ ಯಾಗಿ, ನಿರ್ನಾಮಿಕೆಯಾಗಿ, ಸ್ವಯಂಪ್ರಭೆಯಾಗಿ ಹುಟ್ಟಿದ್ದನ್ನು

ತಿಳಿಸುತ್ತಾಳೆ. ಜೊತೆಗೆ, ತನ್ನನ್ನು ಉದ್ಧರಿಸಿದ್ದು ಪಿಹಿತಾಸ್ರವ ಮುನಿಗಳೆಂಬುದನ್ನು ಹೇಳುತ್ತಾಳೆ. 3 : 32 ವ–37.

3. ಶ್ರೀಮತಿಯ ತಂದೆ ವಜ್ರದಂತನು ಪೂರ್ವಜನ್ಮಗಳಲ್ಲಿ ತಾನೂ ತನ್ನ ತಾಯಿಯೂ ಪಡೆದುಕೊಂಡು ಬಂದಿದ್ದ ಭವಾವಳಿಗಳನ್ನು ಮಗಳಿಗೆ ನಿರೂಪಿಸುತ್ತಾನೆ. ಇದೇ ಸಂದರ್ಭದಲ್ಲಿ ಮೊದಲು ತನ್ನ ತಾಯಾಗಿದ್ದ ಪಿಹಿತಾಸ್ರವ ಮುನಿಯೇ ನಿರ್ನಾಮಿಕೆಯಾಗಿದ್ದ ಶ್ರೀಮತಿಗೆ ಉಪದೇಶ ಕೊಟ್ಟರೆಂಬುದನ್ನು ತಿಳಿಸುತ್ತಾನೆ. 3 : 49 ವ– 70 ವ.

4. ಹಾಗೆಯೇ ಮುಂದುವರೆಯುವ ವಜ್ರದಂತನು ತಾನು ಅಚ್ಯುತೇಂದ್ರನಾಗಿದ್ದಾಗ ಲಲಿತಾಂಗ– ಸ್ವಯಂಪ್ರಭೆ ಮುಂತಾದವರಿಗೆ ಹೇಳಿದ್ದ ಯುಗಂಧರ ಮುನಿಚರಿತೆಯನ್ನೂ, ಇತರ ಅವಿನಾಣಗಳನ್ನೂ ಶ್ರೀಮತಿಗೆ ನೆನಪು ಮಾಡಿಕೊಟ್ಟು, ಆ ಲಲಿತಾಂಗನೇ ಪ್ರಸ್ತುತ ವಜ್ರಜಂಘನಾಗಿ ಹುಟ್ಟಿರುವುದನ್ನು ತಿಳಿಸುತ್ತಾನೆ. 3 : 71–82.

5. ಚಿತ್ರಪಟ ಪ್ರಸಂಗದ ಬಗ್ಗೆ ಕೇಳಲು ಕುತೂಹಲಿಯಾಗಿದ್ದ ಶ್ರೀಮತಿಗೆ ಪಂಡಿತೆಯು ವಾಸವ ದುರ್ದಾಂತರ ದುರ್ವೇಷವನ್ನೂ (3 : 84 ವ– 86) ವಜ್ರಜಂಘನ ಆಗಮನ ವೃತ್ತಾಂತವನ್ನೂ ತಿಳಿಸುತ್ತಾಳೆ. 3 : 88 ವ–89 ಮತ್ತು 4 :1-22 ವ.

6. ವಜ್ರಜಂಘನ ಅಪೇಕ್ಷೆಯಂತೆ ಚಾರಣಯುಗಳರಲ್ಲಿ ಒಬ್ಬರಾದ ಧಮಧರ ಮುನಿಗಳು ವಜ್ರಜಂಘನ ಪೂರ್ವಜನ್ಮದ ಮಂತ್ರಿಮುಖ್ಯರು ಪ್ರಸ್ತುತ ಪಡೆದುಕೊಂಡಿರುವ ವಿವಿಧ ಭವಾವಳಿಗಳನ್ನು ಹೇಳುತ್ತಾರೆ- 5 :2-20 ವ.

7. ಒಮ್ಮೆ ವಜ್ರಜಂಘನು ತನ್ನ ಪತ್ನಿಯ ಜೊತೆಗೆ ವನದಲ್ಲಿ ವಿಹರಿಸುತ್ತಿರುವಾಗ ಆಕಾಶದಿಂದ ಅವತರಿಸಿದ ಚಾರಣರನ್ನು ಕಂಡು ನಿಮ್ಮನ್ನು ನೋಡಿದೊಡನೆ ನನ್ನಲ್ಲಿ ಉಂಟಾಗುತ್ತಿರುವ ಪರವಶತೆಗೆ ಕಾರಣವೇನೆಂದು ಪ್ರಶ್ನಿಸುತ್ತಾನೆ. ಆಗ ಚಾರಣರಲ್ಲಿ ಒಬ್ಬನಾದ ಅಗ್ರಜಮುನಿಯು ಮುಗುಳ್ನಕ್ಕು ತನ್ನ ಪೂರ್ವ ವೃತ್ತಾಂತವನ್ನು ತಿಳಿಸಿ ತಾನು ಸ್ವಯಂಬುದ್ಧನೆಂಬುದನ್ನು ಅರುಹುತ್ತಾನೆ. 5 : 44 ವ-50.

8. ಶ್ರೀಧರ ದೇವನು ಪ್ರೀತಿಂಕರಾಚಾರ್ಯರಿಗೆ ಕೇವಲಜ್ಞಾನೋತ್ಪತ್ತಿ ಆದಾಗ ಅವರನ್ನು ಸಂದರ್ಶಿಸಿ, ನಾನು ಅಂಬರಚರನಾದಂದು ನನ್ನ

ಮೂವರು ಮಂತ್ರಿಗಳು ಏನಾಗಿದ್ದರು? ಎಂದು ಕೇಳಿದಾಗ ಪ್ರೀತಿಂಕರನು ಅವರ ವೃತ್ತಾಂತವನ್ನು ತಿಳಿಸಿ ಸಪ್ತನರಕಗಳನ್ನು ವರ್ಣಿಸುತ್ತಾನೆ. 5: 73-94.

9. ಭರತನು ಶ್ರೇಯಾಂಸನ ದಾನಾತಿಶಯಕ್ಕೆ ವಿಸ್ಮಯ ಹೊಂದಿ, ಈ ಮಹಾತ್ಮನು ಆದಿಭಟ್ಟಾರಕನ ಚಿತ್ತವೃತ್ತಿಯನ್ನು ಯಾವ ರೀತಿಯಲ್ಲಿ ಅರಿತನೋ? ಎಂದು ಕುತೂಹಲಿಯಾಗಿ ಶ್ರೇಯಾಂಸನನ್ನು ಭೇಟಿ ಮಾಡಿ ಬಿನ್ನವಿಸಿಕೊಂಡಾಗ, ಆತನು ತನ್ನ ಹಾಗೂ ಆದಿದೇವನ ಭವಾವಳಿಗಳನ್ನು ವಿವರಿಸಿ ದಾನ ಫಲಗಳನ್ನು ಹೇಳುತ್ತಾನೆ. 10 :7 ವ -11.

10. ಮಹತ್ತರನೆಂಬ ವಯೋವೃದ್ಧನಾದ ರಾಜದೂತನು ಭರತನ ದಿಗ್ವಿಜಯ ಯಾತ್ರೆಯನ್ನು ಬಾಹುಬಲಿಯ ಸಮಕ್ಷಮದಲ್ಲಿ ವರ್ಣಿಸುತ್ತಾನೆ 14 : 51 ವ-62.

11. ಶೋಕ ಪೀಡಿತನಾದ ಭರತನನ್ನು ಸಮಾಧಾನಪಡಿಸುತ್ತಾ ವೃಷಭಸೇನ ಗಣಧರನು ತನ್ನನ್ನೂ ಒಳಗೊಂಡಂತೆ ಆದಿದೇವ, ಶ್ರೇಯಾಂಸ, ಭರತ, ಬಾಹುಬಲಿ, ಅನಂತ ವಿಜಯ, ಅನಂತ ವೀರ್ಯ, ಅಚ್ಯುತ, ವೀರ, ಸುವೀರರ ಭವಾವಳಿಗಳೆಲ್ಲವನ್ನೂ ಸಂಕ್ಷಿಪ್ತವಾಗಿ ವಿವರಿಸುತ್ತಾನೆ. 16 : 29 ವ-30 ವ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, 'ಆದಿಪುರಾಣ'ದ ಈ ಎಲ್ಲ ಪೂರ್ವ ನಿರೂಪಣಾ ತಂತ್ರಗಳಿಗೆ ಕೃತಿಯ ಸಂದರ್ಭದಲ್ಲಿ ಸ್ವಾಯತ್ತವಾದ ಹಾಗೂ ಪ್ರತ್ಯೇಕವಾದ ಅಸ್ತಿತ್ವವಿದ್ದಂತೆ ಕಂಡುಬರುವುದಿಲ್ಲ. ಬದಲಿಗೆ ಈ ತಂತ್ರಗಳ ಮೂಲಕ ಅಭಿವ್ಯಕ್ತವಾಗಿರುವ ಕಥಾಂಶವನ್ನು ನಾವು ಒಟ್ಟು ಕಥಾಪ್ರಕ್ರಿಯೆಯ ಹಿನ್ನೆಲೆಯಲ್ಲಿ ಗುರುತಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ, ಕಾಲವನ್ನು ಸಂಪೂರ್ಣವಾಗಿ ಶೂನ್ಯಗೊಳಿಸಿ ಹೇಳುವ ಕಥಾ ನಿರೂಪಣೆಗೆ ಪೂರಕವಾಗಿ 'ಆದಿಪುರಾಣ'ದ ಪೂರ್ವ ನಿರೂಪಣಾ ತಂತ್ರಗಳು ಬಳಕೆಯಾಗಿವೆ. ಹೀಗಾಗಿ ಒಟ್ಟು 'ಆದಿಪುರಾಣ'ವನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದಾಗ ಅದರಲ್ಲಿ ಕಾಲಾನುಕ್ರಮಣಿಕೆಯ ಕಥಾ ನಿರೂಪಣೆಯು* ಇಲ್ಲದಿರುವುದು ಕಂಡುಬರುತ್ತದೆ. ಆದರೆ, ಇಂತಹ ಕಾಲಾನುಕ್ರಮಣಿಕೆಯನ್ನು 'ಆದಿಪುರಾಣ'ದ ಪೂರ್ವ ನಿರೂಪಣಾ ತಂತ್ರಗಳು ಸಾಧಿಸಿವೆ. ಈ ಮಾತಿನ ಸ್ಪಷ್ಟನೆಗಾಗಿ 'ಆದಿಪುರಾಣ'ದಲ್ಲಿ ನಿರೂಪಿತವಾಗಿರುವ ಎಲ್ಲ ಪೂರ್ವ

* ಕಾಲಾನು ಕ್ರಮಣಿಕೆಯ ಕಥಾ ನಿರೂಪಣೆಯನ್ನು ಜೆನಿಸನ್ ಗ್ರೇ Moment-by-Moment narration ಎಂದಿದ್ದಾನೆ.

ನಿರೂಪಣಾ ತಂತ್ರಗಳನ್ನು, ಇವುಗಳಲ್ಲಿ ಅಡಕವಾಗಿರುವ ವೃತ್ತಾಂತ ವಿವರಗಳನ್ನು ಗಮನಿಸಬಹುದು. ಸಾಮಾನ್ಯವಾಗಿ ಯಾವುದೇ ಪೂರ್ವ ನಿರೂಪಣಾ ತಂತ್ರವು ವರ್ತಮಾನದ ಸನ್ನಿವೇಶದಿಂದ ಭೂತಕಾಲದ ಸನ್ನಿವೇಶಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಆದರೆ, 'ಆದಿಪುರಾಣ'ದ ಸಂದರ್ಭದಲ್ಲಾದರೆ, ಇಲ್ಲಿನ ಪೂರ್ವ ನಿರೂಪಣಾ ತಂತ್ರಗಳಲ್ಲಿರುವ ವೃತ್ತಾಂತ ವಿವರಗಳು ನಮ್ಮನ್ನು ವರ್ತಮಾನದಿಂದ ಭೂತಕ್ಕೆ ಮತ್ತು ಭೂತದಿಂದ ವರ್ತಮಾನಕ್ಕೆ (ಒಮ್ಮೊಮ್ಮೆ ಭವಿಷ್ಯತ್ತಿಗೆ ಕೂಡ) ಕರೆತರುತ್ತವೆ. ಜೊತೆಗೆ ಅದುವರೆಗಿನ ಕಥಾ ನಿರೂಪಣೆಯಲ್ಲಿ ಸಹ ಸಂಬಂಧವನ್ನು ಕಂಡುಕೊಳ್ಳಲು ನೆರವಾಗುತ್ತವೆ. ಉದಾಹರಣೆಗೆ 'ಆದಿಪುರಾಣ'ದ ಪ್ರಥಮ ಪೂರ್ವ ನಿರೂಪಣಾ ತಂತ್ರವನ್ನೇ ತೆಗೆದುಕೊಳ್ಳೋಣ. ಈ ತಂತ್ರವನ್ನು ಅನುಸರಿಸಿ ನಿರೂಪಿತವಾಗಿರುವ ವೃತ್ತಾಂತವು ಭೂತ-ಭವಿಷ್ಯದ್-ವರ್ತಮಾನ ಕಾಲಗಳಲ್ಲಿ ವಿಹರಿಸುವುದನ್ನು ಗಮನಿಸಬಹುದು: ಸ್ವಯಂ ಬುದ್ಧನು ತನ್ನ ರಾಜನ ಪೂರ್ವ ಜನ್ಮದ ಕಥೆಯನ್ನು ಚಾರಣ ಯುಗಳರಿಂದ ಕೇಳಿ ತಿಳಿದುಕೊಳ್ಳುತ್ತಾನೆ [past] ಜೊತೆಗೆ, ಪ್ರಸ್ತುತ ತನ್ನ ರಾಜನು ''ಅಶುಭ ಸ್ವಪ್ನ ದರ್ಶನಕ್ಕೆ ಕೊಕ್ಕರಿಸಿ'' ತನ್ನ ನಿರೀಕ್ಷೆಯಲ್ಲಿ ಇರುವುದನ್ನು ತಿಳಿದುಕೊಳ್ಳುತ್ತಾನೆ [Present]. ಅಷ್ಟೇ ಅಲ್ಲ! ತನ್ನ ರಾಜನು ಭವ್ಯನೆಂದೂ, ಆತ ಮುಂದೆ ವಿವಿಧ ಅವಸ್ಥಾಂತರಗಳಲ್ಲಿ ತೊಡಗಿ ಆದಿದೇವನಾಗುವನೆಂಬುದನ್ನೂ ತಿಳಿದುಬಿಡುತ್ತಾನೆ [Future]. ಎರಡನೆಯ ಪೂರ್ವ ನಿರೂಪಣಾ ತಂತ್ರದಲ್ಲಿ ನಿರ್ನಾಮಿಕೆಗೆ (ಶ್ರೀಮತಿ) ಉಪದೇಶವಿತ್ತವರು ಪಿಹಿತಾಸ್ರವ ಮುನಿ ಎಂದಷ್ಟೆ ತಿಳಿದು ಬರುತ್ತದೆ. ಆದರೆ, ಮೂರನೆಯ ಪೂರ್ವ ನಿರೂಪಣಾ ತಂತ್ರದಲ್ಲಿ ಆ ಪಿಹಿತಾಸ್ರವ ಮುನಿಗಳು ಪೂರ್ವಜನ್ಮದಲ್ಲಿ ವಜ್ರದಂತನ (ಶ್ರೀಮತಿಯ ತಂದೆ) ತಾಯಿಯಾಗಿದ್ದರೆಂಬುದು ವ್ಯಕ್ತವಾಗುತ್ತದೆ. ಇಲ್ಲೆಲ್ಲ ಘಟನಾವಳಿಗಳು ಹೇಗೆ ತಮ್ಮ ತಮ್ಮಲ್ಲೆ ಹೆಣೆಗೆಗೊಳ್ಳುತ್ತಾ ಸಹ ಸಂಬಂಧವನ್ನು ಸ್ಥಾಪಿಸಿಕೊಳ್ಳುತ್ತಿವೆ ಎಂಬುದನ್ನು ಗಮನಿಸಬೇಕು. ಹೀಗಾಗಿ, ಮೂಲತಃ 'ಆದಿಪುರಾಣ'ದಲ್ಲಿ ಕಾಲಾನುಕ್ರಮಣಿಕೆಯ ನಿರೂಪಣೆಯು ಇಲ್ಲದಿದ್ದರೂ ಇಲ್ಲಿನ ಪೂರ್ವ ನಿರೂಪಣಾ ತಂತ್ರಗಳು ಅಂತಹ ಕಾಲಾನುಕ್ರಮಣಿಕೆಯನ್ನು (ಪರೋಕ್ಷವಾಗಿ) ಹಿಡಿದಿಡುವ ಸರಪಳಿಯ ಕೊಂಡಿಗಳಂತೆ ಪ್ರಮುಖ ಪಾತ್ರವಹಿಸಿವೆ. 'ಆದಿಪುರಾಣ'ವು ಮಹಾಬಲಭವದಿಂದ ಪ್ರಾರಂಭವಾದರೂ, ಮುಂದೆ ಸಾಗಿದಂತೆ ಅದರ ಹಿಂದಿನ ಮತ್ತು ಮುಂದಿನ ಭವಗಳನ್ನೆಲ್ಲ ತನ್ನಲ್ಲಿ ಸೇರಿಸಿಕೊಳ್ಳುವುದರ ಜೊತೆಗೆ, ತನಗೆ ಸಂಬಂಧಪಟ್ಟ ಇತರ ಎಲ್ಲ ವ್ಯಕ್ತಿಗಳ ವೃತ್ತಾಂತವನ್ನು ಪೂರ್ವ ನಿರೂಪಣಾ ತಂತ್ರಗಳ ಮೂಲಕ ಸಮಾವೇಶಗೊಳಿಸಿಕೊಳ್ಳುತ್ತದೆ.

ಈ ರೀತಿ 'ಆದಿಪುರಾಣ'ದಲ್ಲಿನ ಪೂರ್ವ ನಿರೂಪಣಾ ತಂತ್ರಗಳು ಕಾವ್ಯದುದ್ದಕ್ಕೂ ಪಡೆದುಕೊಂಡಿರುವ ಸಹ ಸಂಬಂಧವನ್ನು ದೃಷ್ಟಿಯಲ್ಲಿಟ್ಟುಕೊಂಡು

ಒಟ್ಟು ಕಾವ್ಯದ ರಚನಾಕ್ರಮವನ್ನು ಸರಪಳಿ ಸದೃಶ ನಿರೂಪಣಾ ತಂತ್ರ–Catenate narrative technique–ಎಂದು ಕರೆಯಬಹುದು. ಇದೇ ಮಾದರಿಯ ಪೂರ್ವ ನಿರೂಪಣಾ ತಂತ್ರಗಳು ಇತರ ಜೈನ ಪುರಾಣಗಳಲ್ಲಿ ಕಂಡುಬರುವುದು ನಿಜವಾದರೂ ಅಲ್ಲೆಲ್ಲ ಇಂತಹ ಸಹ ಸಂಬಂಧವನ್ನು ಕಾಣಲಾರೆವು. ಇದರಿಂದ ನಮಗೆ ಪೂರ್ವ ನಿರೂಪಣಾ ತಂತ್ರಗಳು ರಹಸ್ಯ ರಕ್ಷಣೆಗೆ ಮಾತ್ರವಲ್ಲದೆ, ಇತರ ಕಲಾತ್ಮಕ ಉದ್ದೇಶ ಗಳಿಗೂ ಹೇಗೆ ಉಪಕರಿಸಬಲ್ಲವು ಎಂಬುದು ಸ್ಪಷ್ಟವಾಗುತ್ತದೆ. ಆದಿ ಪುರಾಣದ ಒಟ್ಟು ರಚನಾಕ್ರಮದಲ್ಲೇ ಎದ್ದು ಕಾಣುವ ಇಂತಹ ಸರಪಳಿ ಸಂಬಂಧವು ಪಂಪ ಕವಿಯ ಸ್ವೀಯ ಸಾಧನೆಯಾಗಿ ತೋರುತ್ತಿದೆ. ಏಕೆಂದರೆ, ಜಿನಸೇನನ 'ಪೂರ್ವ ಪುರಾಣ'ದ ಆನುಪೂರ್ವಿಗೂ, ಪಂಪ ಕವಿಯ 'ಆದಿಪುರಾಣ'ದ ಆನುಪೂರ್ವಿಗೂ ಮೂಲಭೂತ ವ್ಯತ್ಯಾಸಗಳಿವೆ. ಪಂಪಕವಿ ಉದ್ದೇಶ ಪೂರ್ವಕವಾಗಿ ಜಿನಸೇನನ ಕಥಾ ಕ್ರಮದ ಆನುಪೂರ್ವಿಯನ್ನು ಮುರಿದು ಅದನ್ನು ವಿಪುಲ ಮಾರ್ಪಾಟು ಗಳೊಂದಿಗೆ, ಸಾಕಷ್ಟು ಸ್ಥಳಾಂತರಗಳೊಂದಿಗೆ, ಹೊಸ ಹೊಸ ವಿವರಗಳನ್ನು ಸಮಸ್ತ ಗೊಳಿಸಿ ಪುನರ್ ಸೃಷ್ಟಿಸಿದ್ದಾನೆ. ಇಂತಹ ಭಾಗಗಳನ್ನು ಡಾ|| ಎಲ್. ಬಸವರಾಜು ರವರು ತಾವು ಸಂಪಾದಿಸಿರುವ 'ಆದಿಪುರಾಣ'ದ ಅಡಿ ಟಿಪ್ಪಣಿಗಳಲ್ಲಿ ತೌಲನಿಕವಾಗಿ ವಿಮರ್ಶಿಸುತ್ತಾ ಪಂಪನ ಕವಿ ಮನೋಧರ್ಮವನ್ನು ಎತ್ತಿ ಹಿಡಿದಿದ್ದಾರೆ. ಪಂಪನ ಈ ಕವಿ ಮನೋಧರ್ಮವೇ ಆತನ ಕಾವ್ಯವನ್ನು ಹೆಚ್ಚು ಸುಸಂಬದ್ಧಗೊಳಿಸಿದೆ ಎಂಬುದರಲ್ಲಿ ಸಂಶಯವಿಲ್ಲ.

2

ರನ್ನ ಕವಿಯು ತನ್ನ 'ಸಾಹಸ ಭೀಮ ವಿಜಯ'ದಲ್ಲಿ ಬಳಸಿರುವ 'ಸಿಂಹಾವ ಲೋಕನ ತಂತ್ರ'ವನ್ನು ನಮ್ಮಲ್ಲಿ ಬಹಳಷ್ಟು ಮಂದಿ ವಿಮರ್ಶಕರು Flash back technique ಅಥವಾ ಪೂರ್ವ ನಿರೂಪಣಾ ತಂತ್ರವೆಂಬಂತೆ ವ್ಯವಹರಿಸುತ್ತಾರೆ : ನಿದರ್ಶನಕ್ಕೆ, ..."ಈ ದಿನ ನಾವು ಯಾವುದನ್ನು Flash back technique ಎನ್ನುತ್ತೇವೋ ಅದನ್ನು ರನ್ನ, ನಾಗವರ್ಮ, ನಾಗಚಂದ್ರ, ಜನ್ನ–ಇವರು ತಮ್ಮ ಕಾವ್ಯ ಕಥನಕ್ಕೆ ಅಳವಡಿಸಿದ ಸಂಗತಿ ಹರ್ಷದಾಯಕವಾಗಿದೆ..."[3] ಎಂಬ ಮಾತು ಗಳನ್ನು ಗಮನಿಸಬಹುದು. ಆದರೆ, ವಾಸ್ತವವಾಗಿ ಇವೆರಡು ತಂತ್ರಗಳು ಕಾಲದ ದೃಷ್ಟಿಯಿಂದ ಭೂತ ಸಂಬಂಧಿಗಳಾದರೂ, ಪರಸ್ಪರ ಸಂಪೂರ್ಣವಾಗಿ ಬೇರೆ ಬೇರೆ ಯಾದ ತಂತ್ರಗಳಾಗಿವೆ. Flash back technique ಅಥವಾ ಪೂರ್ವ ನಿರೂಪಣಾ ತಂತ್ರವು ಹಿಂದೆ ನಡೆದ ಸಂಗತಿಗಳನ್ನು ನಿರೂಪಿಸುತ್ತದೆ. Leo look technique ಅಥವಾ ಸಿಂಹಾವಲೋಕನ ತಂತ್ರವು ಹಿಂದೆ ನಡೆದ ಸಂಗತಿಗಳನ್ನು ಅವಲೋಕಿಸು ತ್ತದೆ. ಒಂದರಲ್ಲಿ 'ನಿರೂಪಣೆ' (narration) ಪ್ರಧಾನವಾದ ಅಂಶವಾಗಿದ್ದರೆ, ಮತ್ತೊಂದರಲ್ಲಿ 'ಅವಲೋಕನ' (Sight Seeing) ಪ್ರಧಾನವಾದ ಅಂಶವಾಗಿದೆ.

ಮಹಾಭಾರತದ ಕಟ್ಟ ಕಡೆಯ ಘಟ್ಟವನ್ನು ತನ್ನ ಕಾವ್ಯದ ವಸ್ತುವನ್ನಾಗಿ ಆರಿಸಿಕೊಂಡ ರನ್ನನು ತನ್ನ ಕಾವ್ಯದಲ್ಲಿ ಬರುವ ಮುಖ್ಯ ಪಾತ್ರಗಳ ಮೂಲಕ ಸಂದರ್ಭಾನುಸಾರವಾಗಿ ಒಂದೊಂದು ಮಾತನ್ನು ಹೇಳಿಸಿ ಹಿಂದೆ ನಡೆದುಹೋದ ಘಟನೆಗಳನ್ನು ಸಹೃದಯರಿಗೆ ನೆನಪಿಸುತ್ತಾ ಹೋಗುತ್ತಾನೆ. ಇದನ್ನೇ ಆತ "ಸಿಂಹಾವಲೋಕನ ಕ್ರಮ" (1 : 15) ಎಂದಿರುವುದು. ಸಿಂಹಾವಲೋಕನ ಕ್ರಮವು ನಡುನಡುವೆ ನಿಂತುನಿಂತು ಸಂದರ್ಭಾನುಸಾರವಾಗಿ ವ್ಯಕ್ತವಾಗುವಂತಹುದು, ಮತ್ತು ಈ ಕ್ರಮದಲ್ಲಿ ಸಹಜವಾಗಿಯೇ ಒಂದು ಕ್ರಮಬದ್ಧತೆ ಅಥವಾ Chronology ಎಂಬುದು ಇರುವುದಿಲ್ಲ. ಅಂದರೆ, ಘಟನೆಗಳು ತಿರುವು ಮುರುವುಗಳಾಗುವ ಸಾಧ್ಯತೆಯಿದ್ದು ಒಂದು ಘಟನೆಯಿಂದ ಮತ್ಯಾವುದೋ ಘಟನೆಗೆ ಚಕಚಕನೆ ಸಾಗಿ ಬಿಡುತ್ತದೆ.

ಉದಾ :

> ಹರಿ ಸಂಧಾನಕ್ಕೆ ವಂದಂದವಗಡಿಸಿದಹಂಕಾರವೆಲ್ಲಿತ್ತೊ ಕೃಷ್ಣಾಂ
> ಬರ ಕೇಶಾಕೃಷ್ಟಿಯಂ ಮಾಡಿಸಿದ ಮದಮದೆಲ್ಲಿತ್ತೊ ಕೌಂತೇಯರಂ ಮ
> ಚ್ಚರದಿಂ ಕಾಂತಾರದೊಳ್ ತಿಜ್ರನೆ ತಿರಿಪಿದ ಸೊರ್ಕಿಗಳೇನಾದುದೆಂದಾ
> ಕುರುವಂಶಾಧೀಶನಂ ಮೂದಲಿಸಿದನದಟಂ ಭೀಮನುದ್ದಾಮ ಭೀಮಂ ॥ 7 : 33

ಆದರೆ, ಪೂರ್ವ ನಿರೂಪಣಾ ತಂತ್ರವು ಈ ರೀತಿಯದಲ್ಲ. ಇದು ಕಾವ್ಯದ ಯಾವುದಾದರೂ ಒಂದು ಘಟ್ಟದಲ್ಲಿ ಸಂಪೂರ್ಣವಾಗಿ ವಿಶ್ರಮಿಸಿ, ನಿರ್ದಿಷ್ಟ ಪಾತ್ರದ ಅಪೇಕ್ಷೆಯಂತೆ ಹಿಂದೆ ನಡೆದುಹೋಗಿರಬಹುದಾದ ಕಥೆಯನ್ನು ಕ್ರಮಬದ್ಧವಾಗಿ ನಿರೂಪಿಸಿ, ಆನಂತರ ಯಥಾ ಪ್ರಕಾರ ಮುಂದೆ ಸಾಗುತ್ತದೆ. ಈ ಪೂರ್ವ ನಿರೂಪಣಾ ತಂತ್ರವು ಕರ್ಣಾಟಕ ಕಾದಂಬರಿ, ರಾಮಚಂದ್ರ ಚರಿತ ಪುರಾಣ, ಯಶೋಧರ ಚರಿತೆ, ಪ್ರಭುಲಿಂಗ ಲೀಲೆ ಮುಂತಾದ ಕೃತಿಗಳಲ್ಲಿ ಒಂದೆರಡು ಸರ್ತಿ ಮಾತ್ರ ಬರುತ್ತದೆ. (ಈ ಮಾತಿಗೆ ಜೈನ ಪುರಾಣಗಳ ಪೂರ್ವ ನಿರೂಪಣಾ ತಂತ್ರಗಳು ಅಪವಾದವೆಂಬುದನ್ನು ಈಗಾಗಲೇ ಗಮನಿಸಿದ್ದೇವೆ.) ಆದರೆ, ಸಿಂಹಾವಲೋಕನ ತಂತ್ರವು ಯಾವ ನಿರ್ದಿಷ್ಟ ಪಾತ್ರದ ಅಪೇಕ್ಷೆಯಿಲ್ಲದೆಯೇ, ಕೃತಿಯುದ್ದಕ್ಕೂ ಸ್ವೇಚ್ಛೆಯಾಗಿ ಕೇವಲ ಒಂದೆರಡು ನುಡಿಗಳಲ್ಲಿ ವ್ಯಕ್ತವಾಗುತ್ತಲೇ ಇರುತ್ತದೆ. ಸಿಂಹಾವಲೋಕನ ತಂತ್ರವು "ಇದು ಲಾಕ್ಷ ಗೇಹ ದಾಹಕ್ಕೆ" (8 : 13) ಎಂದರೆ ಪೂರ್ವ ನಿರೂಪಣಾ ತಂತ್ರವು ಆ ಲಾಕ್ಷ ಗೇಹದ ಪ್ರಸಂಗವನ್ನು ಒಂದು ನಿರ್ದಿಷ್ಟ ಪಾತ್ರದ ಅಪೇಕ್ಷೆಯಂತೆ ಯಥಾವತ್ತಾಗಿ, ಸವಿವರವಾಗಿ ಹೇಳಲುಪಕ್ರಮಿಸುತ್ತದೆ.

ಪೂರ್ವ ನಿರೂಪಣಾ ತಂತ್ರದಲ್ಲಿ ಅನುಸರಿಸಿದ ಉತ್ತಮ - ತೃತೀಯ ಪುರುಷ ಭೇದವನ್ನೇ ಇಲ್ಲೂ ಅನುಸರಿಸಬಹುದು :

i. ಉತ್ತಮ ಪುರುಷಾವಲೋಕನದೊಂದಿಗೆ 'ಸಿಂಹಾವಲೋಕನ' ತಂತ್ರ (Leo Look technique with First person Sight Seelng)

ಉದಾ : 3 : 25, 27, 28, 30
5 : 25, 29, 30, 34, 37
6 : 8, . . . ಇತ್ಯಾದಿ.

ii. ತೃತೀಯ ಪುರುಷಾವಲೋಕನದೊಂದಿಗೆ 'ಸಿಂಹಾವಲೋಕನ' ತಂತ್ರ (Leo Look technique with Third person Sight Seeing)

ಉದಾ : 3 : 14, 15, 16, 17, 23, 29
5 : 6, 8, 15,
6 : 14
7 : 13, 33, 44, 47, 48, 50
8 : 12, 13, 31, 35 ... ಇತ್ಯಾದಿ.

ಒಟ್ಟಾರೆ, ಇವೆರಡು ತಂತ್ರಗಳು ಹಿಂದೆ ನಡೆದ ಸಂಗತಿಗಳನ್ನು ಹೇಳುತ್ತವೆ ಎಂಬ ಸಾಧಾರಣ ಧರ್ಮವೊಂದನ್ನು ಬಿಟ್ಟರೆ, ಉಳಿದಂತೆ ಸಂಪೂರ್ಣವಾಗಿ ಬೇರೆ ಬೇರೆಯಾದ ತಂತ್ರಗಳಾಗಿವೆ. ಇವೆರಡು ತಂತ್ರಗಳು ಮೂಲತಃ ಭೂತ ವೃತ್ತದ ಸುರುಳಿಗಳನ್ನು ಬಿಚ್ಚುತ್ತಾ ಹೋಗುವಂತಹುವು. ಪೂರ್ವ ನಿರೂಪಣಾ ತಂತ್ರವುಶಬ್ದ ವ್ಯಾಪಾರದ ಮೂಲಕ ಭೂತವೃತ್ತದ ಸುರುಳಿಯನ್ನು ಬಿಚ್ಚುತ್ತಾ ಹೋದರೆ, ಸಿಂಹಾವಲೋಕನ ತಂತ್ರವು ವ್ಯಂಜನಾ ವ್ಯಾಪಾರದ ಮೂಲಕ ಭೂತವೃತ್ತದ ಸುರುಳಿಗಳನ್ನು ಬಿಚ್ಚುತ್ತಾ ಸಾಗುತ್ತದೆ. ಅಂದರೆ, ಪೂರ್ವ ನಿರೂಪಣಾ ತಂತ್ರವು ಕಾವ್ಯ ಶರೀರದಲ್ಲಿ ಸವಿವರವಾಗಿ ವ್ಯಕ್ತವಾಗಿರುತ್ತದೆ. ಆದರೆ, ಸಿಂಹಾವಲೋಕನ ತಂತ್ರವು ಕಾವ್ಯ ಶರೀರದಲ್ಲಿ ಸವಿವರವಾಗಿ ನಿರೂಪಿತವಾಗಿರುವುದಿಲ್ಲ.

ಮೊದಲ ಬಾರಿಗೆ ರನ್ನ ಕವಿಯು ಒಂದು ಕಾವ್ಯದ ಚೌಕಟ್ಟಿನಲ್ಲಿ ಬಳಸಿರುವ ಈ ಸಿಂಹಾವಲೋಕನ ಕ್ರಮವು ಅತ್ಯಂತ ವಿಶಿಷ್ಟವಾದ 'ಅನನ್ಯ' (self same) ತಂತ್ರವೆಂದು ತೋರುತ್ತದೆ. ಏಕೆಂದರೆ, ಈ ಸಿಂಹಾವಲೋಕನ ತಂತ್ರವು ಅಳವಡು ವುದು ರಾಷ್ಟ್ರವ್ಯಾಪ್ತಿಯಾದ ಭಾರತ–ರಾಮಾಯಣಗಳಂತಹ ಸಾಂಸ್ಕೃತಿಕ ಮಹತ್ವದ ಕೃತಿಗಳಿಗೆ ಮಾತ್ರ ಎಂಬುದನ್ನು ಗಮನಿಸಬೇಕು. ಇಂತಹ ಕೃತಿಗಳನ್ನು ಕುರಿತಂತೆ ಸಾಮಾನ್ಯ ಜನತೆಯಲ್ಲೂ ಸಹ (ಒಂದು ಮುಖ್ಯ ಸೂತ್ರಕ್ಕೆ ಬದ್ಧವಾದ, ವೈವಿಧ್ಯ ಮಯವಾದ) ಭಾವಕೋಶವೊಂದು ನಿರ್ಮಾಣಗೊಂಡಿರುತ್ತದೆ. ಇಂತಹ ಭಾವಕೋಶ ವನ್ನು ಸಿಂಹಾವಲೋಕನ ತಂತ್ರವು ಅಪೇಕ್ಷಿಸುತ್ತದೆಯಾದ್ದರಿಂದ ಅದು ಸಹಜ ವಾಗಿಯೆ ಸಹೃದಯರೊಂದಿಗೆ ಆತ್ಮೀಯವಾದ ಸಂಬಂಧವನ್ನು ಸ್ಥಾಪಿಸಿಕೊಂಡು

ಬಿಡುತ್ತದೆ. ಹತ್ತನೆ ಶತಮಾನದ ಕಾವ್ಯವೊಂದು ಒಂದು ನಿರ್ದಿಷ್ಟ–ಸಾಂಸ್ಕೃತಿಕ ಪರಿಸರದಲ್ಲಿ ಬೆಳೆದುಬಂದ ಯಾವುದೇ ಕಾಲದ ಸಹೃದಯ ಸಮುದಾಯದೊಂದಿಗೆ ಸ್ಥಾಪಿಸಿಕೊಳ್ಳುವ ಈ ಆತ್ಮೀಯತೆ ಸಾಹಿತ್ಯ ಪ್ರಪಂಚದಲ್ಲೆ ಅತ್ಯಂತ ವಿಶಿಷ್ಟವಾದ ಅಂಶವಾಗಿದೆ.

ವಾಸ್ತವವಾಗಿ, ರನ್ನ ಕವಿಯ ಈ ಸಿಂಹಾವಲೋಕನ ತಂತ್ರವು ಸಹೃದಯಸ್ಥವಾದ ಭಾವಕೋಶವನ್ನು ಅಪೇಕ್ಷಿಸುವುದರ ಜೊತೆ ಜೊತೆಯಲ್ಲೆ ಅದರೊಡನೆ ಘರ್ಷಣೆಗಳನ್ನು ನಡೆಸುತ್ತಾ ಅದನ್ನು ಮುರಿದು ನಿಲ್ಲಲು ಹವಣಿಸುವುದರಿಂದ ಕಾವ್ಯಾತ್ಮಕವಾಗಿಯೂ ಯಶಸ್ವಿಯಾದ ತಂತ್ರವೆನಿಸಿಕೊಂಡಿದೆ. ರನ್ನ ಕವಿ ಸಿಂಹಾವಲೋಕನ ತಂತ್ರವನ್ನು ಅನುಸರಿಸಿ ಇತರ ಪಾತ್ರಗಳ ಮೂಲಕ ದುರ್ಯೋಧನನ ದುರ್ಗುಣಗಳನ್ನು ಎತ್ತಿ ಹಾಕುತ್ತಾನೆ. ದುರ್ಯೋಧನನ ಈ ದುರ್ಗುಣಗಳು ಸಹೃದಯಸ್ಥವಾದ ಭಾವಕೋಶಕ್ಕೆ ಹೆಚ್ಚು ಪರಿಚಿತವಾಗಿದ್ದು ಅದನ್ನು ಮತ್ತಷ್ಟು ದೀಪ್ತಗೊಳಿಸುತ್ತದೆ. ಆದರೆ 'ಗದಾಯುದ್ಧ' ಕಾವ್ಯದಲ್ಲಿ ಇದಕ್ಕೆ ಪ್ರತಿಯಾಗಿ ದುರ್ಯೋಧನನ ವೀರೋದ್ಧಾತ್ತ, ಗುಣಗಳನ್ನು ಪ್ರತಿನಿಧಿಸುವ ಹೊಸ ಹೊಸ ಸನ್ನಿವೇಶಗಳು (ಇವು ಸಂಸ್ಕೃತ ಮಹಾಭಾರತದಲ್ಲಿ ಇಲ್ಲ) ಸೃಷ್ಟಿಯಾಗುತ್ತವೆ. ಪರಸ್ಪರ ಇವೆರಡು ಭಿನ್ನ ನೆಲೆಗಳು ಪಡೆದುಕೊಳ್ಳುವ ತಾಕಲಾಟದಿಂದಾಗಿಯೇ 'ಗದಾಯುದ್ಧ' ಕೃತಿಗೆ ಒಂದು ಸಂಘರ್ಷಕ ಪ್ರಕ್ರಿಯೆ – conflictive process– ಏರ್ಪಟ್ಟಿದೆ. ಈ ಕೃತಿಯು ಸಿಂಹಾವಲೋಕನ ಕ್ರಮದಿಂದಾಗಿ ಪಡೆದುಕೊಂಡ ಕಾವ್ಯಾತ್ಮಕ ಸಾಧನೆಯನ್ನು ಜಿ. ಎಚ್. ನಾಯಕರು ಮೈಸೂರು ವಿಶ್ವವಿದ್ಯಾಲಯದ ಸಾಹಿತ್ಯ ಚರಿತ್ರೆಯ ಮೂರನೆ ಸಂಪುಟದಲ್ಲಿರುವ ತಮ್ಮ ಲೇಖನದಲ್ಲಿ ವಿವರಿಸಿರುವುದನ್ನು ಆಸಕ್ತರು ಪರಿಶೀಲಿಸಬಹುದು.[4]

3

ಕೊನೆಯದಾಗಿ, ಮೇಲು ನೋಟಕ್ಕೆ ಸಿಂಹಾವಲೋಕನ ಕ್ರಮದಂತೆಯೆ ಕಂಡುಬಂದರೂ, ಇದಕ್ಕಿಂಥ ಸಂಪೂರ್ಣವಾಗಿ ಬೇರೆಯಾದ ಪೌರಾಣಿಕ ದೃಷ್ಟಾಂತಗಳನ್ನು ಗಮನಿಸೋಣ :

1. ನರ ಕೂರಂಬಿನಲೆಚ್ಚ : ಅವಂಗೊಲಿದೆಯಯ್ಯ
ಅರಳಂಬಿನಲೆಚ್ಚ ಕಾಮನನುರುಹಿದೆಯಯ್ಯ
ಇರುಳು ಹಗಲೆನ್ನದೆ ಪ್ರಾಣಘಾತವ ಮಾಡಿದ ಬೇಡನ
ಕೈಲಾಸಕೊಯ್ದೆಯಯ್ಯ
ಎನ್ನನೇತಕೊಲ್ಲೆ ಕೂಡಲಸಂಗಮದೇವ—44

('ಬಸವೇಶ್ವರ ವಚನ ಸಂಗ್ರಹ'—ಎಲ್. ಬಸವರಾಜು)

2. ಕೊಂಕಣನ ಕೊಡೆ ನೋಡೆ ನೋಡೆ ಹಾಱಿದುದಲ್ಲಿ ಪುಟ. 2
ಬಿಂಕಂದೇಱಿರ್ದ ಪೆರ್ಬುಲಿ ಮಡಿದುದಿಲ್ಲಿ ,,
ಕರುಣದಿಂ ಶಶಿಧರಂ ನಾಟ್ಯವಾಡಿದನಿಲ್ಲಿ ,,
ಹರುಷದಿಂದಂ ವ್ಯಾಘ್ರಪಾದ ನೋಡಿದನಿಲ್ಲಿ ,,
ಅಱಿಯಾ ಗಿರಿಜೆ ಕಲ್ಲಲಿಡಿಸಿಕೊಂಡುದ ಮುನ್ನ ಪುಟ. 53
ಅಱಿಯಾ ಗಿರಿಜೆ ಬಾಗಿಲಂ ಕಾದುದಂ ಮುನ್ನ ,,
ಅಱಿಯಾ ಮಹಾದೇವಿ ಅಂಬಲಿಯನುಂಡುದಂ ,,
ಅಱಿಯಾ ಮಹಾದೇವಿಯುರುಳುತ್ತೆ ಪೋದುದಂ ,,

('ಹರಿಹರ ದೇವರ ಎಂಟು ರಗಳೆಗಳು'—ಎಚ್. ದೇವೀರಪ್ಪ)

3. ಕರೆದರೆ ಓ ಎನ್ನಬಾರದೆ ॥ ಪ ॥
ಲಕ್ಷ್ಮೀರಮಣ । ಕರೆದರೆ ಓ ಎನ್ನಬಾರದೆ ॥ ಪ ॥
ಹಿರಣ್ಯಕನ ಉದರದಲ್ಲಿ ಬಂದ ಪ್ರಹ್ಲಾದನ ॥
ಪರಿಪರಿ ದುರಿತಗಳನ್ನೆಲ್ಲ ಪರಿಹರಿಸಿ ಕಾಯಿದಂಥಾ ಸ್ವಾಮಿ ॥ ೧ ॥
ಭೀಮರಥಿಯೊಳಗೊಬ್ಬ ದಾಸ ಮುಣುಗಿ ಪೋಗಿರಲು
ಪೂಮಾಲೆ ಪೀತಾಂಬರವನು ತೋಯದೆ ಕಾಯಿದಂಥಾ ಸ್ವಾಮಿ ॥ ೨ ॥
ಅಂತ್ಯಕಾಲ ಸಮಯದಲ್ಲಿ ಅರಿಯದ ಅಜಮಿಳನು ॥
ಅಂತ್ಯಾಸುತನ ಕೂಗಲು ವೈಕುಂಠ ಪದವಿತ್ತಂಥ ಸ್ವಾಮಿ ॥ ೩ ॥
ದುರುಳ ದುಶ್ಯಾಸನ ಬಂದು ಸೆರಗ ಪಿಡಿದೆಳೆವಾಗ ತರುಣಿ
ದ್ರೌಪದಿಯಭಿಮಾನವ ತ್ವರಿತದಿ ಕಾಯಿದಂಥಾ ಸ್ವಾಮಿ ॥ ೪ ॥
ಇಂತಿಂಥ ಭಕುತರಿಗೆ ಚಿಂತೆಯ ಪರಿಹರಿಸಿ ॥
ಕಂತುಪಿತ ಪುರಂದರ ವಿಠಲನಿಂತು ಕಾಯಿದಂತಾ ಸ್ವಾಮಿ ॥ ೫ ॥ ಪುಟ 44

('ಶ್ರೀ ಪುರಂದರದಾಸರ ಪದಗಳು'—ಎಚ್. ಟಿ. ಮಹಾಂತೇಶ ಶಾಸ್ತ್ರಿ)

4. ದಾನವ ಹೃತ ಮೇದಿನಿಯಂ
ದಂಷ್ಟ್ರಾಗ್ರದೊಳಿರಿಸಿ
ಭೂದಾರಂ ಪಾತಾಳವ
ನುಳಿದೆದ್ದನೊ ಎನಿಸಿ ಪು. 5
('ಮಳೆಯು ನಾಡ ತೊಯ್ಯುತಿರೆ'—ಎಂಬ ಕವಿತೆ ಪು. 20)
ನಿಜವು ವಿಷ್ಣು ವಿಶ್ವದರಸು, ವಿಶ್ವಧಾಮನು
ಒಂದೆ ಹೆಜ್ಜೆಯಿಟ್ಟು ಬುವಿಯ ನಾಕವಳೆದನು ಪುಟ. 66

('ಅತಿಥಿ' (ಆಯ್ದ ಕವಿತಾ ಸಂಗ್ರಹ)—ಪು.ತಿ.ನ)

ಇಲ್ಲೆಲ್ಲ ಪ್ರಸ್ತುತ ಸಂದರ್ಭದ ಭಾವವನ್ನು ಲೋಕಪ್ರಸಿದ್ಧವಾದ ಮತ್ತೊಂದು ಸಂದರ್ಭದ ಸಂಗತಿಗಳ ಹಿನ್ನೆಲೆಯಲ್ಲಿ ನೋಡುತ್ತಿರುವುದು ಕಂಡು ಬರುತ್ತದೆ. ಇಲ್ಲಿ ಸಿಂಹಾವಲೋಕನ ಕ್ರಮವೇ ಇದೆಯೆಂಬ ಭಾವನೆ ನಮಗೆ

ಉಂಟಾಗಬಹುದು. ಆದರೆ, ಇದು ಸಿಂಹಾವಲೋಕನ ಕ್ರಮವೆನಿಸಿಕೊಳ್ಳ ಲಾರದು. ಏಕೆಂದರೆ, ಇಲ್ಲಿ ಅವಲೋಕನಕ್ಕೆ ಒಳಗಾಗುವ ಸಂಗತಿಗಳು ಪ್ರಸ್ತುತ ಸಂದರ್ಭದ ಭಾವವೊಂದರ ಅವಗಾಹನೆಗೆ ಮಾತ್ರ ಪರಿಮಿತಗೊಳ್ಳುತ್ತವೆಯೇ ಹೊರತು, ರನ್ನನ 'ಗದಾಯುದ್ಧ' ಕೃತಿಯಲ್ಲಿರುವಂತೆ ಒಂದು ಕಾವ್ಯದ ಚೌಕಟ್ಟಿನಲ್ಲಿ ನಿರೂಪಿತವಾಗಿಲ್ಲ. ಆದ್ದರಿಂದ ಇಂತಹ ಪ್ರಯೋಗಗಳನ್ನು 'ದೃಷ್ಟಾಂತಗಳು' ಎನ್ನ ಬಹುದು. ಎಷ್ಟೋ ವೇಳೆ ಇವಕ್ಕೆ ಗ್ರಂಥ ಸಂಪಾದಕನೋ ಅಥವಾ ಕವಿಯೋ ಕೃತಿಯ ಕೊನೆಯ ಭಾಗದಲ್ಲಿ ಆಯಾ ದೃಷ್ಟಾಂತಗಳಿಗೆ ಸಂಬಂಧಿಸಿದ ಪೌರಾಣಿಕ ಉಲ್ಲೇಖಗಳನ್ನು ಟಿಪ್ಪಣಿಗಳ ರೂಪದಲ್ಲಿ ಕೊಡುವುದುಂಟು. ಸಿಂಹಾವಲೋಕನ ಕ್ರಮಕ್ಕೆ ಟಿಪ್ಪಣಿಗಳ ಅಗತ್ಯವೇನೂ ಬೇಕಿಲ್ಲ. ಮೇಲೆ ಉದಾಹರಿಸಿರುವಂತೆ ಸಾಹಿತ್ಯ ಪ್ರಪಂಚದಲ್ಲಿ ಸಾಕಷ್ಟು ದೊರೆಯುವ ಇಂತಹ ಪೌರಾಣಿಕ ದೃಷ್ಟಾಂತಗಳು ಬಹು ಮಟ್ಟಿಗೆ ಲೋಕ ಪ್ರಸಿದ್ಧವಾಗಿದ್ದು, ಸಹೃದಸ್ಥವಾದ ಭಾವಕೋಶವನ್ನು ಮತ್ತಷ್ಟು ದೀಪ್ತಗೊಳಿಸುತ್ತವೆಯೇ ಹೊರತು ಅದರೊಂದಿಗೆ ಯಾವ ಘರ್ಷಣೆಗಳನ್ನು ನಡೆಸು ವುದಿಲ್ಲ. ಆದರೆ, ಗೋಪಾಲಕೃಷ್ಣ ಅಡಿಗರ ಕವನಗಳಲ್ಲಿ ಕಂಡುಬರುವ ಪೌರಾಣಿಕ ದೃಷ್ಟಾಂತಗಳು ತಮ್ಮ ವ್ಯಕ್ತಿ ವಿಶಿಷ್ಟ ಗ್ರಹಿಕೆಯಿಂದಾಗಿ ಸಹೃದಯಸ್ಥವಾದ ಭಾವ ಕೋಶದೊಂದಿಗೆ ಘರ್ಷಣೆಗಳನ್ನು ನಡೆಸುತ್ತಾ ಅದನ್ನು ಮುರಿದು ನಿಲ್ಲುವ ಪೌರಾ ಣಿಕ ಪ್ರತಿಮೆಗಳಾಗಿ ಬಿಡುತ್ತವೆ :

ಉದಾ :

i) ಪ್ರೇಮ ಧೃತರಾಷ್ಟ್ರನಪ್ಪುಗೆಗೆ ಭಗ್ನ ಬಲ ಭೀಮ: ಎಲ್ಲು ಕೃಷ್ಣನ ಕಾವು ಕಾಣಲಿಲ್ಲ (ಭಾಗ 1–ಪಂಕ್ತಿ 44)

ii) ನೆಲತಾಯ ಮಾಯಕದ ಅರಗಿನ ಮನೆಯಲ್ಲಿ ಹಸ್ತಿನಾಪುರದ-ಸ್ಮೃತಿ ಹೊತ್ತಲಿಲ್ಲ.

ಮಯನಿರ್ಮಿತವೋ ಸುಯೋಧನ ರಚಿತವೋ ಅಂತು ಕಡ್ಡಿಗೀರುವ ತನಕ ಶಂಕೆಯಿಲ್ಲ. (3–72)

iii) ಗಂಗೆಯಲ್ಲಿ ತೇಲಿಬಂದನು ಕರ್ಣ, ರಾಧೇಯ ; ಸಾಯಿಸಲಿಕ್ಕಲ್ಲದೆ ಬರಳು ಕುಂತಿ. (3–82)

('ಭೂಮಿಗೀತ'ದಿಂದ–ಎಂ. ಗೋಪಾಲಕೃಷ್ಣ ಅಡಿಗ)

ಮಹಾಭಾರತದ ಈ ಮೂರು ಘಟನೆಗಳಲ್ಲು 'ಕ್ರೌರ್ಯ' ಮತ್ತು 'ಪ್ರೇಮ' ಗಳು ಪರಸ್ಪರ ಪೂರಕವಾಗಿದ್ದು ಏಕಕಾಲಿಕ ಕ್ರಿಯೆಗಳಾಗಿವೆ. ಅಂದರೆ, ಧೃತರಾಷ್ಟ್ರನ ಭಗ್ನ ಬಂಧದ ಹಿಂದೆ 'ಪ್ರೇಮ'ವೂ ಇದೆ ; 'ಕ್ರೌರ್ಯ'ವೂ ಇದೆ. ಲಾಕ್ಷ ಗೃಹದಲ್ಲಿ 'ಪ್ರೇಮ'ದ ಸ್ವಾಗತವಿರುವಂತೆ 'ಕ್ರೌರ್ಯ'ದ ಸತ್ಕಾರವೂ ಇದೆ. ಕುಂತಿಯ ಆಗಮನದ ಹಿಂದೆ ಪುತ್ರ 'ಪ್ರೇಮ'ವೂ ಇದೆ ; 'ಕ್ರೌರ್ಯ'ವೂ ಇದೆ. ಹಾಗೆಯೇ,

'ಭೂಮಿಗೀತ'ದ ನಾಯಕನಿಗೆ ನೆಲೆತಾಯಿ ತೋರುವ ಧೋರಣೆಯಲ್ಲು 'ಕ್ರೌರ್ಯ' ಮತ್ತು 'ಪ್ರೇಮ'ಗಳೆರಡು ಪರಸ್ಪರ ಪೂರಕವಾಗಿದ್ದು ಏಕ ಕಾಲಿಕ ಕ್ರಿಯೆಗಳಾಗಿವೆ:

ಹಕ್ಕಿ ಕೊರಳನು ಹಿಚುಕಿ ಲಾಲಿ ಹಾಡಿದಳು
ಸಸಿ ಕೊರಳ ಕೊಯ್ದು ತಿಂಡಿಯನು ತಿನಿಸಿದಳು. 1-42

ಇಲ್ಲೆಲ್ಲ ನೆಲತಾಯಿಯು ಅರ್ಥಾತ್ ಮಣ್ಣಿನ ಅಗ್ನಿಬಂಧ ಅಭಿಮಾನಗಳು ಧೃತರಾಷ್ಟ್ರನ ಭಗ್ನಬಂಧನದಂತೆ, ಲಾಕ್ಷಗೃಹದ ಸತ್ಕಾರದಂತೆ, ಕುಂತಿಯು ಆಗಮನದಂತೆ ಅಪಾಯ ರಮ್ಯವೆಂಬುದನ್ನು ಕವಿ ವ್ಯಂಜನಾ ವ್ಯಾಪಾರದ ಮೂಲಕ ಸಹೃದಯರಿಗೆ ಮನದಟ್ಟು ಮಾಡಿಕೊಡುತ್ತಾನೆ. ಆದ್ದರಿಂದಲೇ ಅಡಿಗರು ಪ್ರಯೋಗಿಸುವ ಪೌರಾಣಿಕ ಪ್ರತಿಮೆಗಳನ್ನು ವ್ಯಕ್ತಿ ವಿಶಿಷ್ಟಗ್ರಹಿಕೆಯೆಂದು ಈಗಾಗಲೇ ಒಂದೆಡೆ ಹೇಳಿದ್ದೇನೆ.

ಇದುವರೆಗಿನ ಚರ್ಚೆಯಿಂದ ಹೇಳುವುದಾದರೆ, ನಾವಿಂದು ಸಿಂಹಾವಲೋಕನ ಕ್ರಮವನ್ನು ಪೂರ್ವ ನಿರೂಪಣಾ ಕ್ರಮದಿಂದ ಹಾಗೂ ಪೌರಾಣಿಕ ದೃಷ್ಟಾಂತಗಳ ಪ್ರಯೋಗದಿಂದ ಹೊರತುಪಡಿಸಿ ನೋಡುವುದು ಅಗತ್ಯವೆಂದು ತೋರುತ್ತಿದೆ.

ಅಡಿ ಟಿಪ್ಪಣಿಗಳು

1. 'The phenomenon of literature' — Bennison Gray. p. 319. 1975
2. ಅದೇ, p. 321
3. ಕನ್ನಡ ಸಾಹಿತ್ಯ ಸಮೀಕ್ಷೆ, ಜಿ. ಎಸ್. ಶಿವರುದ್ರಪ್ಪ ಪು. 108–1975
4. ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ 3. ಪು.643, 1976

ಗ್ರಂಥಸೂಚಿ

1. ವಡ್ಡಾರಾಧನೆ – ಸಂ॥ ಡಿ. ಎಲ್. ನರಸಿಂಹಾಚಾರ್
2. ಆದಿಪುರಾಣ – ಸಂ॥ ಎಲ್. ಬಸವರಾಜು
3. 'ಗದಾಯುದ್ಧ ಸಂಗ್ರಹಂ' – ಸಂ॥ ತೀ. ನಂ. ಶ್ರೀಕಂಠಯ್ಯ
4. 'ಪಂಪರಾಮಾಯಣ ಸಂಗ್ರಹ' – ಸಂ॥ ಟಿ. ಶ್ರೀನಿವಾಸರಾಘವಾಚಾರ್, ಡಿ. ಎಲ್. ನರಸಿಂಹಾಚಾರ್
5. ಯಶೋಧರ ಚರಿತೆ – ಸಂ॥ ಕೆ. ವೆಂ. ರಾಘವಾಚಾರ್
6. 'ಪ್ರಭುಲಿಂಗ ಲೀಲೆಯ ಸಂಗ್ರಹ' - ಸಂ॥ ಎಂ. ಎಸ್. ಬಸವಲಿಂಗಯ್ಯ, ಎಂ. ಆರ್. ಶ್ರೀನಿವಾಸಮೂರ್ತಿ.

ಬಸವಪೂರ್ವಯುಗದ 'ವೀರಶೈವ'ದ ಅಧ್ಯಯನಕ್ಕೊಂದು ಆಕರ

ಡಾ॥ ಎಸ್. ವಿದ್ಯಾಶಂಕರ

ಭಾರತೀಯ ಪರಿಸರದಲ್ಲಿ ಅಭ್ಯುದಯ ಪರವಾದ ಮಾನವೀಯ ಮೌಲ್ಯಗಳನ್ನು ಪ್ರಸರಣ ಮಾಡುವ ಉದಾತ್ತ ಧ್ಯೇಯವನ್ನು ಹೊಂದಿರುವ ಧರ್ಮವು ತನ್ನ ಅಸ್ತಿತ್ವವನ್ನು ಸ್ಥಿರೀಕರಿಸಲು ಪರಂಪರೆಯೊಡನೆ ಅನಿವಾರ್ಯವಾಗಿ, ಸಮಕಾಲೀನ ಸಮಾಜದೊಡನೆ ನೇರವಾಗಿ ಸಂಘರ್ಷವನ್ನು ಎದುರಿಸಬೇಕಾಗುತ್ತದೆ. 12ನೇ ಶತಮಾನದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದ ವೀರಶೈವ ಧರ್ಮವು ಪ್ರಾಚೀನವೂ ಬಲಿಷ್ಠವೂ, ಪ್ರತಿಷ್ಠಿತವೂ ಆಗಿದ್ದ, ಸನಾತನವಾದ ಸಾಹಿತ್ತಿಕ-ಸಾಂಸ್ಕೃತಿಕ ನೆಲೆಗಟ್ಟಿನಮೇಲೆ ಸ್ಥಾಪಿತವಾಗಿದ್ದ ವೈದಿಕ ಧರ್ಮದೊಂದಿಗೂ, ರಾಜರಿಂದ ಪೋಷಿತವಾಗಿ ಪ್ರತಿಭಾವಂತ ಕವಿಗಳ ಕಾವ್ಯಮುಖೇನ ಪ್ರಸಾರಗೊಂಡ ನಿಷ್ಠಾವಂತ ಧರ್ಮಾಭಿಮಾನಿಗಳ ಮೂಲಕ ವ್ಯವಸ್ಥಿತವಾಗಿ ಪ್ರಚಾರಗೊಂಡ 10ನೇ ಶತಮಾನದ ಜೈನಧರ್ಮದೊಂದಿಗೂ, ಬೌದ್ಧಿಕವಾಗಿ ಹಿಂದುಳಿದ ಜನರ ಪ್ರಾಚೀನ ನಂಬಿಕೆಗಳು, ಕಟ್ಟುಪಾಡುಗಳು, ಅಂಧ ಆಚರಣೆಗಳು, ಸಂಪ್ರದಾಯಪರವಾದ ಮೌಢ್ಯಗಳು ಇವುಗಳೊಂದಿಗೂ, ಪುರೋಹಿತ ವರ್ಗದ ದರ್ಪ, ದೌರ್ಜನ್ಯಗಳೊಂದಿಗೂ ಬಿರುಸಿನ ಹೋರಾಟ ನಡೆಯಿಸಿ ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಪ್ರಮಾಣಿಸಬೇಕಾಗಿದ್ದಿತು. ಬಸವಾದಿ ಪ್ರಮಥರು ದೀನದಲಿತರ ಉದ್ಧಾರವನ್ನು ಪ್ರಧಾನವಾದ ಗುರಿಯಾಗಿ, ಕಾರ್ಯರೂಪಕ್ಕೆ ಅದನ್ನು ತರಹೊರಟು ಪರಂಪರೆಯ ಬಳುವಳಿಯಾಗಿ ಬಂದಿದ್ದ ಸಮಾಜದಲ್ಲಿನ ವರ್ಣ ಹಾಗೂ ವರ್ಗ ವ್ಯವಸ್ಥೆಯನ್ನೂ, ಶೋಷಣಾರಹಿತ ಆರ್ಥಿಕ ಭದ್ರತೆಯುಳ್ಳ ನವಸಮಾಜವನ್ನೂ ಸಂಘಟಿಸಿದರು. ಅವರು ನಡೆಸಿದ ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ತಿಕ ಚಳುವಳಿ ಬಹಳ ಮಹತ್ವದ್ದು; ಅರ್ಥಪೂರ್ಣವಾದದ್ದು. ಚಲನಶೀಲ ಬದುಕಿನಲ್ಲಿ ಅವರು ತರಹೊರಟ ಬದಲಾವಣೆಗಳು; ತುಕ್ಕುಗಟ್ಟಿದ ಜೀವನಮೌಲ್ಯಗಳ ನವೀಕರಣ; ಅಂತ್ಯೋದಯ ಚಳುವಳಿಯ ಮೂಲಕ ಸಾಮಾಜಿಕ ಜಾಗೃತಿ-ಇವು ಸಮೃದ್ಧ ಬದುಕಿನ ಬಗೆಗೆ ನಂಬಿಕೆ ಇಟ್ಟುಕೊಂಡಿದ್ದವರ ಪಾಲಿಗೆ, ನ್ಯಾಯವಾದ ಹಕ್ಕುಗಳು ಎಲ್ಲರಿಗೂ ದಕ್ಕಬೇಕೆಂದು ಪ್ರಾಮಾಣಿಕವಾಗಿ ಹೋರಾಟ ನಡೆಸಿದ್ದವರಿಗೆ ಭರವಸೆಯ ಸಂಕೇತವಾಗಿದ್ದಿತು. ಅತ್ಯಪೂರ್ವವಾದ ಈ ಕ್ರಾಂತಿಯ ಫಲಾಫಲಗಳ ಬಗೆಗೆ ನಮಗೆ ತಿಳುವಳಿಕೆ ಸಿಗುವುದು ಆ ಕಾಲದಲ್ಲೇ ದೈನಂದಿನ ಬದುಕು ಅನುಭವಗಳೊಡನೆ ಸಮರಸವಾಗಿ ಬಂದ,

ಸಮಾಜದ ಎಲ್ಲ ಸ್ತರದ ವ್ಯಕ್ತಿಗಳ ಅಂತರಂಗ ವ್ಯಾಪಾರದ ಅಭಿವ್ಯಕ್ತಿಯಾಗಿ ಬಂದ ವಚನ ವಾಙ್ಮಯದಲ್ಲಿ.

12ನೇ ಶತಮಾನದಲ್ಲೇ ನಡೆದ ಕಲ್ಯಾಣಕ್ರಾಂತಿಯು ಪ್ರಗತಿ ವಿರೋಧಿ ಶಕ್ತಿಗಳ ಅರಾಜಕ ದೌರ್ಜನ್ಯಗಳ ಎಡೆಯಲ್ಲಿ ಹಾಗೂ ಮುಂದಿನ ಶತಮಾನಗಳಲ್ಲಿ ಕರ್ನಾಟಕದ ಮೇಲೆ ನಡೆದ ಪರಕೀಯರ ಧಾಳಿಯು ಪರಿಣಾಮವಾದ ಸಾಮಾಜಿಕ ಜೀವನದ ಅಸ್ತವ್ಯಸ್ತ ಸ್ಥಿತಿಯಲ್ಲಿ ಕಲ್ಯಾಣದ ಶರಣರು ನಡೆಸಿದ ಮಹತ್ವಪೂರ್ಣ ಚಳುವಳಿಯ ಧ್ಯೇಯ ಧೋರಣೆಗಳನ್ನು ತಿಳಿಸುವ ಅಮೂಲ್ಯ ದಾಖಲೆಗಳಾದ ವಚನ ಸಾಹಿತ್ಯ ರಾಶಿ ಅಜ್ಞಾತವಾಯಿತು, ನಾಶವಾಯಿತು. ಇಂದು ಉಳಿದುಳಿದ ವಾಙ್ಮಯದಿಂದಲೇ ನಮ್ಮ ಸಾಮಾಜಿಕ, ಸಾಂಸ್ಕೃತಿಕ ಇತಿಹಾಸವನ್ನು ನಾವು ಪುನರ್ನಿರ್ಮಿಸಬೇಕಾಗಿದೆ.

12ನೇ ಶತಮಾನದಲ್ಲಿ ವ್ಯಾಪಕವಾಗಿ ಸಾಮಾಜಿಕ ಸ್ಥಾನಮಾನಗಳನ್ನು ಪಡೆದುಕೊಂಡ ವೀರಶೈವ ಧರ್ಮದ ಬೆಳವಣಿಗೆಯ ಘಟ್ಟಗಳನ್ನು, ಅದರ ಏಳುಬೀಳುಗಳನ್ನು, ಅದರ ಗುಣ-ದೋಷಗಳನ್ನು ಆ ಧರ್ಮದ ಸಾಹಿತ್ಯದ ಮೂಲಕ ನಾವು ಗುರುತಿಸುವ ಪ್ರಯತ್ನ ಮಾಡುತ್ತೇವೆ. ಒಂದು ಧರ್ಮ ಸಮಾಜ ವ್ಯವಸ್ಥೆಯಲ್ಲಿ 'ಪ್ರತಿಷ್ಠಿತ'ವಾಗುವುದಕ್ಕೆ ಮುನ್ನ ಅದು ಪಡೆದಿದ್ದ ಸ್ಥಾನಮಾನಗಳೇನು? ಪ್ರಾರಂಭಿಕ ಅವಸ್ಥೆ ಯಾವ ರೀತಿಯದು? ಅದಕ್ಕಿದ್ದ ಹಿನ್ನೆಲೆಯೇನು? ಅದರ ಪ್ರಾಚೀನತೆ ಏನು? ಇವುಗಳ ಬಗೆಗೆ ನಾವು ಇನ್ನೂ ಏನನ್ನೂ ಖಚಿತವಾಗಿ ಹೇಳಲಾಗುತ್ತಿಲ್ಲ. ಆಧಾರಗಳ ಕೊರತೆಯಿಂದಾಗಿ ಬಸವಪೂರ್ವದ ಹಿನ್ನೆಲೆಯನ್ನು ಕುರಿತು ಏನನ್ನೂ ಹೇಳಲಾಗದಂತೆ ಮೌನದ ತೆರೆಯನ್ನು ಕಾಲಪುರುಷ ಎಳೆದಿದ್ದಾನೆ.

ಬಸವಣ್ಣನವರಿಗಿಂತ ಹಿಂದೆ ಇದ್ದ ಪ್ರಖ್ಯಾತ ವೀರಶೈವ ಶರಣರಲ್ಲಿ ಕೊಂಡಗುಳಿ ಕೇಶಿರಾಜನೂ ಒಬ್ಬನು. ಸದ್ಯಕ್ಕೆ ಆದ್ಯ ವಚನಕಾರನೆಂದು ಗುರುತಿಸುವ ಜೇಡರ ದಾಸಿಮಯ್ಯನು ಕೊಂಡಗುಳಿ ಕೇಶಿರಾಜನಿಗೆ ಸಂಬಂಧಿಸಿದ ಕತೆಯೊಂದನ್ನು ತನ್ನ ವಚನವೊಂದರಲ್ಲಿ ಉಲ್ಲೇಖಿಸಿರುವನು. ಗೊಬ್ಬೂರು ಶಾಸನದಲ್ಲಿ ಬರುವ ಜೇಡರ ದಾಸಿಮಯ್ಯ ವಚನಕಾರ ಜೇಡರದಾಸಿಮಯ್ಯನೇ ಆಗಿದ್ದಲ್ಲಿ ಅವನ ಕಾಲ ಕ್ರಿ.ಶ. 1148 ಎಂದಾಗುತ್ತದೆ. ಇವನಿಗಿಂತ ಹಿಂದೆ ಇದ್ದ ಕೊಂಡಗುಳಿ ಕೇಶಿರಾಜನು ಕ್ರಿ.ಶ. 1107ರ ಬಿಜಾಪುರ ಜಿಲ್ಲೆಯ ಕೊಂಡಗುಳಿ ಶಾಸನದಲ್ಲಿ ಉಲ್ಲೇಖಿತನಾಗಿರುವನು. ಇದರಿಂದ ಕೊಂಡಗುಳಿ ಕೇಶಿರಾಜನ ಕಾಲವನ್ನು 12ನೇ ಶತಮಾನದ ಆದಿಭಾಗಕ್ಕೆ ಕೊಂಡೊಯ್ಯಬೇಕಾಗುತ್ತದೆ. "ಬಸವಾದಿ ಪ್ರಮಥ ಯುಗದ ಸೂರ್ಯೋದಯಕ್ಕೆ ಹಿನ್ನೆಲೆಯಾಗಿ ನಡೆದ ಅರುಣೋದಯ 'ಕ್ರೀಕಲಾಪ'ಗಳು ಈ ಕೇಶಿರಾಜನ ಬದುಕಿನಲ್ಲಿ, ಬರಹದಲ್ಲಿ ಒಡೆದು ಕಾಣುತ್ತವೆ. ಆದುದರಿಂದ ಈತನ ಅಭ್ಯಾಸ, ಈತನ ಕೃತಿಗಳ ಅಭ್ಯಾಸಗಳೆಂದರೆ 'ಬಸವಪೂರ್ವದ' ಅಭ್ಯಾಸವೇ ಆಗು

ತ್ತದೆ. ಬಸವಪೂರ್ವಯುಗದ ಶರಣನೂ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಮಹಾದಂಡನಾಯಕನೂ ಆಗಿದ್ದ ಈತ ಪ್ರಬಲ ರಾಜಕಾರಣಿ, ಕವಿ, ಅನುಭಾವಿ-ಈ ತ್ರಿಕೂಟಗಳ ಸಂಗಮ. ಹರಿಹರ ಇವನ ಬದುಕು-ಸಾಹಿತ್ಯ ಗಳಿಂದ ಬಹಳ ಪ್ರಭಾವಿತನಾಗಿ 'ಕೇಶಿರಾಜ ದಣ್ಣಾಯಕರ ರಗಳೆ'ಎಂಬ ಕೃತಿಯನ್ನು ರಚಿಸಿರುವನು. ಇವನ ಜೀವನ ಚರಿತ್ರೆಯನ್ನು ತಿಳಿಯಲು ನಮಗಿರುವುದು ಇದೊಂದೇ ಆಧಾರ. ಹರಿಹರ ಕೊಡುವ ಜೀವನ ಚಿತ್ರವನ್ನು ಹೀಗೆ ಸಂಗ್ರಹಿಸಿ ಹೇಳಬಹುದು :

ಕೊಂಡಗುಳಿ ಎಂಬ ಪುರದಲ್ಲಿ ವಿರೂಪಾಕ್ಷನ ಭಕ್ತನೂ, ನಿಚ್ಚವೂ ಎಂಟು ಪದ್ಯ ವನ್ನು 'ಅಚ್ಚರಿ ಮಿಗಲ್ಕೆ' ಹೇಳುವವನೂ, ಶಂಕರ ಸ್ತೋತ್ರದಲ್ಲೇ ಬಾಳುತ್ತಿರು ವವನೂ ಆದ ಕೇಶಿರಾಜನನ್ನು ಕಲ್ಯಾಣಪುರದ ಪೆರ್ಮಾಡಿರಾಯನು ತನ್ನಲ್ಲಿಗೆ ಬರ ಮಾಡಿಕೊಂಡು ಹಿರಿಯ ಪ್ರಧಾನಿಕೆಯನ್ನು ಅನುಗ್ರಹಿಸುವನು. 'ಮಂತ್ರಕ್ಕೆ ನೆರೆ ಕೇಶಿರಾಜ ದಣ್ಣಾಯಕರೆ, ತಂತ್ರಕ್ಕೆ ಮಿಗೆ ಕೇಶಿರಾಜ ದಣ್ಣಾಯಕರೆ' ಎನ್ನುವಂತಾಗಿ, ಶರಣರು ಬೇಡಿದ್ದನ್ನಿತ್ತು, ಒಂದು ದಿವಸ ಶರಣರ ಸುಗೀತ ಗೋಷ್ಠಿಯಲ್ಲಿ ಸಂಪೂರ್ಣ ಮಗ್ನನಾಗಿ ಬಾಹ್ಯ ಪ್ರಪಂಚವನ್ನು ಮರೆತಿರಲು ಆ ಸಮಯದಲ್ಲಿ ಪೆರ್ಮಾಡಿರಾಯನ ಸೇವಕರು ಬರುವರು. ಅರಸನ ಕರೆಯನ್ನು ಕೇಳಿ, 'ಸಿರಿಯು ಸಂಗಂ ಶರಣ ಸಂಗಕ್ಕೆ ಪಗೆಯಾಯ್ತು' ಎಂದು ನೊಂದು ಸೋಮನಾಥನಲ್ಲಿ ಮೊರೆ ಯಿಟ್ಟು ಅರಮನೆಗೆ ಬರುವನು.

ಅಲ್ಲಿ ವಿಪ್ರರು ಪೆರ್ಮಾಡಿರಾಯನಿಗೆ ದಣ್ಣಾಯಕರು 'ವಿಷ್ಣುನಿಂದಕರೆಂದೂ, ನಿಮ್ಮನ್ನೂ ಲಕ್ಷ್ಯಕ್ಕೆ ತಂದುಕೊಳ್ಳದೆ ನಿಮಗೆಂದೂ ನಮಸ್ಕರಿಸದೆ ಕೈಯ ಬೆರಳಲ್ಲಿರುವ ಮುದ್ರಿಕೆಗೆ ನಮಸ್ಕರಿಸುವರೆಂದೂ ಚಾಡಿ ಹೇಳುವರು. ಇವರ ಮಾತನ್ನು ಪರೀಕ್ಷಿಸಲು ರಾಜನು ದಣ್ಣಾಯಕರನ್ನು ಕರೆಯಿಸುವನು. ಸರಸವಾಗಿ ಸಂಭಾಷಿಸುತ್ತ ದಣ್ಣಾಯಕರ ಬೆರಳಿನಿಂದ ಉಂಗುರವನ್ನು ತೆಗೆದು ನೂತನವಿ ದೆಂದು ನೋಡುವಂತೆ ನೋಡಿ, ಮನಸ್ಸಿನಲ್ಲಿ ಮುಳಿದು ತನ್ನ ಬೆರಳಿಗೆ ಅದನ್ನು ಹಾಕಿಕೊಂಡು ಸತ್ಯಾಸತ್ಯತೆಯನ್ನು ಒರೆಹಚ್ಚಿ ನೋಡಲು ಬಯಸಿ, 'ಮನೆಗೆ ಬಿಜಯಂಗೆಯ್ಯಿರೇ ದಂಡನಾಥರೇ' ಎನ್ನುವನು. ದಣ್ಣಾಯಕರು ನಮಸ್ಕರಿಸದೆ ಗಳಗಳನೆ ಹೋಗುತ್ತಿರಲು ಕೋಪಗೊಂಡ ಅರಸ ದಣ್ಣಾಯಕರನ್ನು ಚಾರರ ಮೂಲಕ ಮತ್ತೆ ಕರೆಯಿಸಿ, "ಕಂಡಿರೇ ಎನ್ನಿಂದಮೇ ಸಂಪದಂಬಡೆದು ಅಂಡಲೆದ ದಾರಿದ್ರ್ಯವೆಲ್ಲಮಂ ನೆರೆ ತೊಡೆದು ಎನಗೆ ಪೊಡಮಡದುದಾಸೀನಮಂ ಮಾಳ್ಪರೇ..." ಎಂದು ಆಕ್ಷೇಪಿಸುವನು. ಲಿಂಗೈಕನಿಷ್ಠನಾದ ಕೇಶಿರಾಜ ಅದನ್ನು ಕೇಳಿ ಸಹಿಸ ಲಾರದೆ ಸೇವಕ ವೃತ್ತಿಯನ್ನು ಮನದ ಕಾಲಿಂದೊದೆದು, ಸರ್ವಸ್ವವನ್ನೂ ತೊರೆದು ಕಲ್ಯಾಣವನ್ನು ಬಿಡುವನು. ಅವನೊಡನೆ ಅವನ ಪತ್ನಿ ಗಂಗಾದೇವಿಯೂ

ನಡೆಯುವಳು. ಅವರು ಅಲ್ಲಿಂದ ಒಂದು ಯೋಜನ ದೂರದಲ್ಲಿದ್ದ ವಂಶವರ್ಧನ ನೆಂಬ ಬಿದಿರಕಾಯಕದ ಭಕ್ತನ ಮನೆಗೆ ಬರುವರು. ಏಳು ದಿವಸ ಶಿವಭಕ್ತಿ ಸುಖ ಪ್ರಸಂಗ ಪ್ರಸಾದ ಸಂತುಷ್ಟನಾಗಿ ಬಾಹ್ಯಪ್ರಪಂಚವನ್ನು ಮರೆತಿದ್ದ ದಣ್ಣಾಯಕರನ್ನು ಗಂಗಾದೇವಿಯು ಎಚ್ಚರಿಸಿ ಪ್ರಸಾದವನ್ನು ಕರುಣಿಸಬೇಕೆನ್ನುವಳು. ದಣ್ಣಾಯಕರ ಶಿವಾರ್ಚನೆಯ ಸಂಭ್ರಮವನ್ನು ಕೇಳಿದ ಪೆರ್ಮಾಡಿರಾಯನು ಕಾಲುನಡಿಗೆಯಿಂದ ಅಲ್ಲಿಗೆ ಬರುವನು. ತನ್ನ ತಪ್ಪನ್ನು ಕ್ಷಮಿಸುವಂತೆ ಭಕ್ತಿಯಿಂದ ಪ್ರಾರ್ಥಿಸಿ ಮತ್ತೆ ಕಲ್ಯಾಣಕ್ಕೆ ದಣ್ಣಾಯಕರನ್ನು ಕರೆದು ತರುವನು.

ಕೇಶಿರಾಜ ದಣ್ಣಾಯಕರು ಬೊಮ್ಮಣ್ಣನೆಂಬ ಭಕ್ತನ ಏಕನಿಷ್ಠೆಯ ಬಲುಹನ್ನೂ, ಉನ್ನತ ಶಿವಪ್ರಭಾವಿಭವವನ್ನೂ ಕೇಳಿ ಅವನಲ್ಲಿಗೆ ಬಂದು ಅವನ ಮನೆಯ ತುಂಬ ಮಾಂಸವಿರುವುದನ್ನು ಕಂಡು ಹೇಸಿಕೆಪಟ್ಟುಕೊಂಡು, ಅಲ್ಲಿನ ಶಿವಾಲಯದಲ್ಲಿ ದೇವರ ಪೂಜೆಗೆ ಅಣಿಮಾಡಿಕೊಂಡನು. ಬೊಮ್ಮಣ್ಣ ಬಂದು ಕರೆದಾಗ ಪೂಜೆಗೆ ಆಗಲೇ ಲಿಂಗವನ್ನು ಸ್ಥಾಪಿಸಿದ್ದೇನೆ ಎಂದು ನೆವ ಹೇಳಿ ನಿರಾಕರಿಸಿದನು. ಬೊಮ್ಮಣ್ಣನ ಪ್ರಭಾವದಿಂದ ಲಿಂಗವು ಅಲ್ಲೇ ಅಂಟಿಕೊಂಡುಬಿಟ್ಟಿತು. ಬೊಮ್ಮಣ್ಣನ ಮನೆಗೆ ಬಂದ ಕೇಶಿರಾಜ ಅವನ ಮನೆಯಲ್ಲಿ ಮಾಂಸ ತಿನ್ನಬೇಕಲ್ಲಾ ಎಂದು ಹೆದರುತ್ತಲೇ ಊಟಕ್ಕೆ ಕುಳಿತನು. ಬೊಮ್ಮಣ್ಣನ ಮಹಿಮೆಯಿಂದಾಗಿ ಮಾಂಸಾಹಾರವೆಲ್ಲಾ ಸಸ್ಯಾಹಾರವಾದುವು. ಅನಂತರ .ಅವನ ಸೇವೆಯನ್ನು ಸ್ವೀಕರಿಸಿ, ಶಿವಗೋಷ್ಠಿಯಲ್ಲಿದ್ದು ಕಲ್ಯಾಣಕ್ಕೆ ಮರುಳುವರು. ಹಾಗೆ ಬರುತ್ತಿರುವಾಗ ನದಿಯೊಂದು ಅಡ್ಡವಾಯಿತು. ಅಶೋಕೆಯ ಮಾಮರದ ನೆಳಲಿನಲ್ಲಿ ಕುಳಿತು ಶಿವಾರ್ಚನೆ ಮಾಡಿ ಪಂಚಾಕ್ಷರಿ ಜಪವನ್ನೆಣಿಸುತ್ತಿರಲು ಗಗನದಲ್ಲಿ ಹಾರುತ್ತಿದ್ದ ಹದ್ದೊಂದು ಬಂದು ಅಂಗೈಯಲ್ಲಿದ್ದ ಲಿಂಗವನ್ನು ಕಚ್ಚಿ ತೆಗೆದು ಆಗಸಕ್ಕೆ ನೆಗೆದು ಲಿಂಗವನ್ನು ನದಿಯಲ್ಲಿ ಹಾಕಿತು. ಇದನ್ನು ನೋಡಿದ ದಣ್ಣಾಯರು ಭೋಂಕನೆ ಕತ್ತಿಯನ್ನು ತೆಗೆದುಕೊಂಡು ತಮ್ಮನ್ನು ತಾವೇ ಸಂಹರಿಸಿಕೊಳ್ಳಲು ಸಿದ್ಧರಾದಾಗ ಶರಣರು ಬಂದು ಆಣೆಯಿಟ್ಟು ತಡೆದು ಲಿಂಗವನ್ನು ನದಿಯಲ್ಲಿ ಹುಡುಕಿಸುವುದಾಗಿ ಹೇಳುವರು. ಶರಣರು ಆಯಾಸಗೊಳ್ಳುವುದನ್ನು ಒಪ್ಪದ ದಣ್ಣಾಯಕರು, ಹರಿಗೋಲನ್ನು ಏರಿ ಹೋಗುತ್ತ ಸೋಮನಾಥನನ್ನು ಪ್ರಾರ್ಥಿಸಲು ಲಿಂಗವು ನೆಗೆದು ಬಂದಿತು. ಬಸವಣ್ಣಗೆಯ ಪೂಜೆಯನುಳಿದು ಬಂದ, ಗಂಧಾಕ್ಷತೆ ಹೂವುಗಳನ್ನು ಬಿಟ್ಟು ಬಂದ ಲಿಂಗವನ್ನು ಕಂಡು 'ಶರಣ ಸತಿ ಮುಳಿದು ಹುರುಡಿಸುವಂತೆ' ಶಿವನ ಸ್ನೇಹವನ್ನು ಅತಿಶಯವಾಗಿಸಲು, ಲಿಂಗವನ್ನು ಮರಳಿ ನದಿಗೆ ಬಿಡಲು ಭಕ್ತನ ಏಕನಿಷ್ಠೆಗೆ ಮೆಚ್ಚಿದ ಸೋಮನಾಥನು ದಾಸಣದ ಹೂವು, ಗಂಧಾಕ್ಷತೆಗಳೊಡನೆ ಲಿಂಗವು ದಣ್ಣಾಯಕರ ಅಂಗೈಗೆ ಬಂದು ನೆಲಸುವಂತೆ ಮಾಡಿದನು. ಶರಣ ಸಮೂಹ ಈ ಪವಾಡವನ್ನು ಕಂಡು ಉತ್ಸವಿಸಿತು. ಶಿವನು ಕೈಲಾಸದಿಂದ ವಿಮಾನವೊಂದನ್ನು

ಕಳುಹಿಸಿದನು. ಆದನ್ನೇರಿ ಕೈಲಾಸಕ್ಕೆ ಬಂದ ದಣ್ಣಾಯಕರಿಗೆ ಶಿವನು ಗಣಪದವಿಯನ್ನು ಅನುಗ್ರಹಿಸುವನು.

ಹರಿಹರ ಕೊಂಡಗುಳಿ ಕೇಶಿರಾಜನ ಜೀವನದ ಪರಿಪೂರ್ಣ ಚಿತ್ರವನ್ನು ಕೊಟ್ಟಿಲ್ಲ. ಬಹುಶಃ, ಅವನಿಗೆ ತಿಳಿದದ್ದು ಸ್ವಲ್ಪವೇ ಇರಬಹುದು. ಹರಿಹರನ 'ಕೇಶಿರಾಜ ದಣ್ಣಾಯಕರ ರಗಳೆ'ಯು ವೀರಶೈವ ಧರ್ಮದ ಬಸವಪೂರ್ವಯುಗದ ಸ್ಥಿತಿಯನ್ನು ಅರಿಯಲು ಅಗತ್ಯವಾದ ವಿಷಯ ಸಾಮಗ್ರಿಯನ್ನು ಒದಗಿಸುತ್ತದೆ. ಈ ದೃಷ್ಟಿಯಿಂದ ಇದು ಮಹತ್ವದ ಕೃತಿ. ಕೇಶಿರಾಜನ ತಂದೆ ತಾಯಿಗಳ ಬಗೆಗೆಯಾಗಲೀ, ಬಾಲ್ಯ ಯೌವನಗಳ ಬಗೆಗೆಯಾಗಲೀ ರಗಳೆಯಲ್ಲಿ ನಮಗೇನೂ ತಿಳಿದು ಬರುವುದಿಲ್ಲ. ರಗಳೆಯಲ್ಲಿ, ಕಲ್ಯಾಣದ ಪೆರ್ಮಾಡಿರಾಯನಲ್ಲಿ ಕೊಂಡಗುಳಿ ಕೇಶಿರಾಜ ಮಂತ್ರಿಯಾಗಿದ್ದನೆಂಬ ವಿಷಯ ಬರುತ್ತದೆ. "ಆರನೆಯ ವಿಕ್ರಮಾದಿತ್ಯನಿಗೆ ಪೆರ್ಮಾಡಿ ಎಂಬುದು ಇನ್ನೊಂದು ಹೆಸರು. 'ತೆಲುಗು ಜೊಮ್ಮಯ್ಯನ ರಗಳೆ'ಯ ಮೇರೆಗೆ ಇವನ ರಾಣಿ ಲಕ್ಷ್ಮೀದೇವಿ ವೀರಶೈವದತ್ತ ಒಲುಮೆಯುಳ್ಳವಳು"[2]. ಹರಿಹರನ ಪ್ರಕಾರ ಶರಣ ವಂಶವರ್ಧನ ಹಾಗೂ ಜೊಮ್ಮಯ್ಯ ಕೊಂಡಗುಳಿ ಕೇಶಿರಾಜನ ಸಮಕಾಲೀನರು. ವಂಶವರ್ಧನನ ಬಗೆಗೆ ಹೆಚ್ಚಿಗೆ ಏನೂ ತಿಳಿದು ಬಂದಿಲ್ಲ. ತೆಲುಗು ಜೊಮ್ಮಯ್ಯನು ವಚನಕಾರನಾಗಿದ್ದು 'ತೆಲುಗೇಶ್ವರಾ' ಎಂಬ ಅಂಕಿತದ ಒಂದು ವಚನ ಲಭಿಸಿದೆ.[3] ಜೇಡರ ದಾಸಿಮಯ್ಯನು ಕೇಶಿರಾಜನ ಬದುಕಿಗೆ ಸಂಬಂಧಿಸಿದ ಪ್ರಸಂಗವೊಂದನ್ನು ತನ್ನ ವಚನವೊಂದರಲ್ಲಿ[4] ನೆನೆದಿರುವನು :

ನೆರೆ ನಂಬಿ ಕರೆದಡೆ ನರಿ ಕುದುರೆಯಾಗಿ ಹರಿಯವೆ ?
ಜಗವೆಲ್ಲವರಿಯಲು ತೊರೆಯೊಳಗೆ ಬಿದ್ದ ಲಿಂಗ
ಕರೆದಡೆ ಬಂದುದು ಕರಸ್ಥಲಕ್ಕೆ
ನಂಬದೆ ಕರೆದವರ ಹಂಬಲನೊಲ್ಲ ನಮ್ಮ ರಾಮನಾಥ

ತೊರೆಯಲ್ಲಿ ಬಿದ್ದ ಲಿಂಗ ಕೇಶಿರಾಜನ ನಿಷ್ಠಾಪೂರ್ಣ ಭಕ್ತಿಯಿಂದಾಗಿ ಮತ್ತೆ ಅದು ಅವನ ಅಂಗೈಯಲ್ಲಿ ಬಂದು ಸೇರಿತು. ಈ ಪವಾಡ ಪ್ರಸಂಗವನ್ನು ಹರಿಹರನೂ ಹೇಳಿರುವನು. ಕೇಶಿರಾಜನು ನಿತ್ಯವೂ ಎಂಟು ಪದ್ಯಗಳನ್ನು ಬರೆದು ಶಿವನಿಗೆ ಅರ್ಪಿಸುತ್ತಿದ್ದನೆಂಬ ವಿಷಯ ಹರಿಹರನಿಂದ ತಿಳಿದುಬರುತ್ತದೆ :

"ಆನಂದ ಜಲದೊಡನೆ ಅಟ್ಟಹಾಸಂ ನಿಮಿರೆ
ಏನೆಂಬೆನುಬ್ಬರದ ಭಕ್ತಿ ಚಿತ್ತಮನಡರೆ
ನಿಚ್ಚಲೆಂಟುಂ ಪದ್ಯಮಂ ಸೋಮನಾಥಂಗೆ
ಅಚ್ಚರಿ ಮಿಗಲ್ಕೆ ಪೇಳ್ವಂ ಶೈವನಾಥಂಗೆ
ಪಂಚಾಕ್ಷರಾನುಬಂಧಂ ಛಂದವನುವಾಗೆ
ಪಂಚಮುಖನಾಮದಭಿಧಾನ ಬುದ್ಧಿಯದಾಗೆ
ಶಿವವಾಕ್ಯ ಶಬ್ದ ಶುದ್ಧಿ ವ್ಯಾಕರಣಮಾಗೆ
ಶಿವಭಕ್ತಿ ವೃತ್ತಕ್ಕಲಂಕಾರದಂತಾಗೆ

ಪದ್ಯಂಗಳಂ ಶಿವಂಗನುದಿನಂ ಪೇಳುತಂ
ಚೋದ್ಯವೆನೆ ಶಂಕರಸ್ತೋತ್ರದೊಳೆ ಬಾಳುತಂ"[5]

ಕೇಶಿರಾಜ ಬಸವಪೂರ್ವಯುಗದ ಮಹಾ ಅನುಭಾವಿ ; ಭಕ್ತರ ವೃತ್ತಿ ಹಾಗೂ ಜಾತಿಗಳನ್ನು ನೋಡದೆ ಶಿವನ ಸದ್ಭಕ್ತರು ಶಿವನ ಅಂಶವೆಂದೇ ಭಾವಿಸಿ ಅವರೊಡನೆ ಬೆರೆತು 'ಶಿವಗೋಷ್ಠಿ' ನಡೆಸುತ್ತಿದ್ದ ಮಹಾನುಭಾವ. ವಂಶವರ್ಧನನೆಂಬ ಭಕ್ತನಲ್ಲಿಗೆ ಬಂದು ಅವನಲ್ಲಿ ಕೆಲದಿವಸ ತಂಗಿ ಶಿವಗೋಷ್ಠಿಯಲ್ಲಿ ಮೈಮರೆತ 'ಅನುಭಾವಿ' ಕೇಶಿರಾಜನ ಸೊಗಸಾದ ಚಿತ್ರವನ್ನು ಹರಿಹರ ತನ್ನ ರಗಳೆಯಲ್ಲಿ ಹೀಗೆ ಕೊಟ್ಟಿರುವನು : "ಮಾತುಮಾತಿಂ ಪುರಾತನರ ಗೀತವಂಕುರಿಸೆ ನಿರ್ಮಳ ಚಿತ್ತಂ ನಿಮಿರ್ದು ನಿಡುಸುಯ್ಯೆ ಬೆಳೆದು ಶಾಂತಿ ಪಲ್ಲವಿಸೆ ಸತ್ಯಂ ಪೂತು ಪರಿಣಾಮಂ ಫಲಿತಮಾಗಿ ಸಮಸುಖಿ ಸಂಗದೊಳ್ಗಿಲ್ಲಕ್ಕೆ ಹೋರದೆ ತರ್ಕಕ್ಕೆ ತಲೆಯೆತ್ತದೆ ಆಸೆಗೆ ಘಾಸಿಯಾಗದೆ ಮತ್ಸರಕ್ಕೆ ಮಲೆಯದ ಗೀತಕ್ಕೊಮ್ಮೊಮ್ಮೆ ಪೊಡೆವಡುತೆ ಉಘೆಯಕ್ಕೊಮ್ಮೆ ಉರ್ಬುತ್ತೆ ಭೋಗಕ್ಕಾನಂದಾಶ್ರುವಂ ಸುರಿಸುತ್ತಿರೆ ಭಕ್ತಿಭರಂ ಮುಂದ್ಯೆಸಿದ ಸಂಗದಿಂ ಮುಂದುಗೆಟ್ಟು ಮೇರೆಗೆಟ್ಟೋರಂತೆ ಹಾರೈಸಿ ಹಬ್ಬಿ ಬೆಳೆದಂ ಶಿವಮರುಳ್ಗೊಂಡು ಜೇನ ಸೋನೆಯೊಳ್ಮಿಂಡಂತೆ ಇರುಳ್ ಪಗಲುಮನರಿಯದೆ ನಿದ್ರೆ ಪಸಿವಂ ಮರೆದು ತಮ್ಮಿಷ್ಟಲಿಂಗಕ್ಕಾನಂದರಸದ ಮಜ್ಜನಂ ಪುಳಕದ ಪೂಜೆ ನಿಜಶ್ವಾಸವೆ ಪರಿಮಳಧೂಪಂ ಗೀತದಾರತಿ ಗೋಷ್ಠಿಯಾರೋಗಣೆಯಾಗಿ ಶಿವಭಕ್ತಿಸುಖಪ್ರಸಂಗಪ್ರಸಾದ ಸಂತುಷ್ಟರಾಗಿರ್ದಲ್ಲಿ......"[6]

ಹರಿಹರನ ಈ ಚಿತ್ರ ವಾಸ್ತವವಾದುದು. ಕೇಶಿರಾಜನ 'ಮಂತ್ರಮಹತ್ವದ ಕಂದ' ಹಾಗೂ 'ಲಿಂಗ ಸ್ತೋತ್ರದ ಕಂದ'ಗಳು ಅವನ ಭಕ್ತಿಮಯ ಜೀವನದ ಚಿತ್ರವನ್ನು ಇನ್ನಷ್ಟು ಚೆನ್ನಾಗಿ ಪರಿಚಯಿಸುತ್ತವೆ. 'ಲಿಂಗಸ್ತೋತ್ರದ ಕಂದ'ದ ಬಹುತೇಕ ಪದ್ಯಗಳು ಅವನ ಉಜ್ವಲವಾದ ಭಕ್ತಿಯನ್ನೂ, ಅವನ ಪರವಶ ಸ್ಥಿತಿಯನ್ನೂ ಭಕ್ತಿಯ ಕಾರಣವಾಗಿ ಅವನು ತಳೆದ ದಶವಿಧ ಅವಸ್ಥೆಯನ್ನೂ ಚಿತ್ರವತ್ತಾಗಿ ನಿರೂಪಿಸುತ್ತವೆ. ಬಿದಿರಕಾಯಕದ ಶಿವಭಕ್ತ ವಂಶವರ್ಧನನ ಮನೆಯಲ್ಲಿ ಏಳು ದಿವಸ ಪರ್ಯಂತ ಶಿವಭಕ್ತ ಸುಖಪ್ರಸಂಗ ಪ್ರಸಾದ ಸಂತುಷ್ಟನಾಗಿ ಮೈಮರೆತಿದ್ದ ಇವನ ಭಕ್ತಿಯ ಚಿತ್ರವನ್ನು ಹರಿಹರ ಚೆನ್ನಾಗಿ ಬಿಡಿಸಿರುವನು. ಕವಿಚರಿತೆಕಾರರು ಈತನು ವಚನಗಳನ್ನೂ ಬರೆದಿರುವಂತೆ ತಿಳಿಯುತ್ತದೆ[7] ಎಂದಿರುವರು. ಅವರಿಗೆ ಈತನ ವಚನಗಳು ದೊರೆತಿಲ್ಲ. ಹರಿಹರನ ರಗಳೆಯಲ್ಲಿ ಬರುವ '...ಗೀತಕ್ಕೊಮ್ಮೊಮ್ಮೆ ಪೊಡೆವಡುತೆ...' 'ಸೌರಾಷ್ಟ್ರದೊಡೆಯ ಸೋಮೇಶ ತಂದೆ ಸೋಮನಾಥಾ ಸೊಡ್ಡಳ ಪ್ರಭುವೇ'—ಈ ಮಾತುಗಳ ಭಾವವನ್ನು ಗಮನಿಸಿದಾಗ ಈತ ವಚನಕಾರನಾಗಿದ್ದಿರಬಹುದು, ಈತನ ಅಂಕಿತ 'ಸೋಮನಾಥ ಸೊಡ್ಡಳಪ್ರಭುವೇ' ಎಂದಿರಬಹುದು ಎಂಬ ಊಹೆಗೆ ಅವಕಾಶವಿದೆ.

ಕೊಂಡಗುಳಿ ಕೇಶಿರಾಜನ ಉಪಲಬ್ಧ ಕೃತಿಗಳು ಸದ್ಯಕ್ಕೆ ಐದು – ಮಂತ್ರ ಮಹತ್ವದ ಕಂದ, ಲಿಂಗಸ್ತೋತ್ರದ ಕಂದ – 1, ಲಿಂಗಸ್ತೋತ್ರದ ಕಂದ – 2, ಶೀಲ ಮಹತ್ವದ ಕಂದ ಹಾಗೂ ನವರತ್ನಮಾಲಾ.[8] ಇವುಗಳಲ್ಲದೆ ಇನ್ನೂ ಹಲವು ಕೃತಿಗಳನ್ನು ಬರೆದಿರಬಹುದು. ಶಾಂತಲಿಂಗದೇಶಿಕನು "ಶಿವಪೂಜೆಯಂ ಮಾಡುವಾಗ ಕಂದ, ವೃತ್ತ, ಗ್ರಂಥ, ತ್ರಿವಿಧಿ, ರಗಳೆ, ವಚನ, ಪದ, ಪದ್ಯ, ಗದ್ಯ, ದಂಡಕ, ಅಷ್ಟಕ ಇವು ಮೊದಲಾದವರಿಂದ ಲಿಂಗವ ದಿನಂಪ್ರತಿಯಲ್ಲಿ..." ಪೂಜಿಸುತ್ತಿದ್ದ ಎಂದು ಹೇಳಿ ಕೇಶಿರಾಜನ ವೈವಿಧ್ಯಮಯವಾದ ಸಾಹಿತ್ಯ ಸೃಷ್ಟಿಯನ್ನು ಪ್ರಸ್ತಾಪಿಸಿರುವನು.

ಹರಿಹರನ ಬಸವರಾಜದೇವರ ರಗಳೆ, ಕೊಂಡಗುಳಿ ಕೇಶಿರಾಜ ದಣ್ಣಾಯಕರ ರಗಳೆ, ತೆಲುಗು ಬೊಮ್ಮಯ್ಯನ ರಗಳೆ, ಕೆಂಭಾವಿ ಭೋಗಣ್ಣನ ರಗಳೆ, ಮಾದಾರ ಚೆನ್ನಯ್ಯನ ರಗಳೆ, ಶಂಕರದಾಸಿಮಯ್ಯನ ರಗಳೆ – ಇವುಗಳನ್ನು ಆಧರಿಸಿ ಬಸವಣ್ಣ ಮೊದಲಾದವರ ವೀರಶೈವ ಧರ್ಮದ ಪೂರ್ವರೂಪವನ್ನು ರೇಖಿಸುವ ಪ್ರಯತ್ನವನ್ನು ಡಾ|| ಎಂ. ಚಿದಾನಂದಮೂರ್ತಿಯವರು ಮಾಡಿರುವರು.[9] ಅವರ ನಿಲುವನ್ನು ಹೀಗೆ ಸಂಗ್ರಹಿಸಿ ಹೇಳಬಹುದು :

1 ಯಾವ ಜಾತಿಯವರೇ ಆಗಿರಲಿ, ವೃತ್ತಿಯವರೇ ಆಗಿರಲಿ ಬಯಸಿದರೆ ದೇವಾಲಯದಲ್ಲಿ ಲಿಂಗದೀಕ್ಷೆಯನ್ನು ಪಡೆದು ಶಿವಭಕ್ತರಾಗಬಹುದು. ಹೆಸರನ್ನು ಬದಲಿಸಿಕೊಳ್ಳಬಹುದು.

2 ಅವರದು ಶಿವನ ಬಗ್ಗೆ ನೈಷ್ಠಿಕವಾದ ಭಕ್ತಿ. ಶಿವನೊಬ್ಬನೇ ದೈವವೆಂದು ನಂಬಿದ್ದರಿಂದ ಉಳಿದ ದೈವಗಳನ್ನು ಕ್ಷುದ್ರ ದೈವಗಳೆಂದು ಹೀನವಾಗಿ ಕಾಣುತ್ತಿದ್ದರು.

3 ಶಿವಭಕ್ತಿಗೆ ರಾಜಭಕ್ತಿ ಅಡ್ಡಿ ಎಂದು ತಿಳಿದಿದ್ದರು. ರಾಜತ್ವವನ್ನು ಸ್ಪಷ್ಟವಾಗಿ ಪ್ರತಿಭಟಿಸಿರುವರು. ಬೆರಳ ಮುದ್ರಿಕೆಯ ಶಿವಲಾಂಛನಕ್ಕೆ ವಂದಿಸುತ್ತಿದ್ದರೇ ಹೊರತು ರಾಜನಿಗೆ ವಂದಿಸುತ್ತಿರಲಿಲ್ಲ. ಹೊಲೆಯರನ್ನು ಮನೆಗೆ ಹೊಗಿಸಬಾರದೆಂಬ ರಾಜನ ಎಚ್ಚರಿಕೆಯನ್ನೂ (ಭೋಗಣ್ಣನ ಕಥೆ) ನಿರ್ಲಕ್ಷಿಸುವ ಸ್ಥೈರ್ಯ. ಶಿವದ್ರೋಹವಾದರೆ ಹಿಂಸೆಗೂ ಹಿಂಜರಿಯುತ್ತಿರಲಿಲ್ಲ. (ತೆಲುಗು ಜೊಮ್ಮಣ್ಣನ ಕಥೆ).

4 ಭಕ್ತರಲ್ಲಿ ಯಾವುದೇ ಅಸಮಾನತೆಯನ್ನಾಗಲೀ ಜಾತಿಭೇದವನ್ನಾಗಲೀ ಮಾಡುತ್ತಿರಲಿಲ್ಲ. ಕರ್ಮಪ್ರಧಾನವಾದ (ritualistic) ಬ್ರಾಹ್ಮಣ್ಯದ ಬಗ್ಗೆ ಮತ್ತು ಬ್ರಾಹ್ಮಣರ ಬಗ್ಗೆ ತಿರಸ್ಕಾರ. ಬಹುತೇಕ ಎಲ್ಲ ಕಥೆಗಳಲ್ಲೂ ಬಡವರ ವಿಷಯವಿದೆ–ಶ್ರೀಮಂತಿಕೆಯನ್ನು ಎಲ್ಲೂ ಉಜ್ವಲಗೊಳಿಸಿ ಮಾತಾಡಿಲ್ಲ.

5 ಮಾಂಸಾಹಾರದ ಬಗ್ಗೆ ಅಷ್ಟು ಕಟ್ಟುನಿಟ್ಟಾದ ವಿಧಿ ನಿಷೇಧಗಳಿಲ್ಲ. ಶಿವಭಕ್ತರಲ್ಲಿ ಮಾಂಸಾಹಾರಿಗಳೂ ಇದ್ದರು (ತೆಲುಗು ಜೊಮ್ಮಯ್ಯ), ಸಸ್ಯಾಹಾರಿಗಳೂ ಇದ್ದರು.

6 ಶಿವನನ್ನು ಇಷ್ಟಲಿಂಗ ಹಾಗೂ ಸ್ಥಾವರಲಿಂಗ ಎರಡೂ ರೂಪಗಳಲ್ಲಿ ಪೂಜಿಸುತ್ತಿದ್ದರು – ಕೊರಳಲ್ಲಿ ಕಟ್ಟಿಕೊಳ್ಳುತ್ತಿದ್ದ ಲಿಂಗವನ್ನು ಅಂಗೈಯಲ್ಲಿಟ್ಟು ಇಲ್ಲವೆ ಪೀಠದ ಮೇಲಿಟ್ಟು ಪೂಜಿಸುತ್ತಿದ್ದರು.

7 ವೃತ್ತಿಯಲ್ಲಿದ್ದವರು – ತಾವು ತಮ್ಮ ಒಡೆಯರಿಗೆ ಜೋಳವಾಳಿಗಳೆಂದೂ, ಆದರೆ ಶಿವನಿಗೆ ಮಾತ್ರ ವೇಳೆವಾಳಿಗಳೆಂದೂ ಭಾವಿಸುತ್ತಿದ್ದರು (ತೆಲುಗು ಜೊಮ್ಮಯ್ಯ). ಕೊರಳಲ್ಲಿ ಇಲ್ಲವೆ ಎದೆಯ ಮೇಲೆ ಧರಿಸಿರುವ ಲಿಂಗವು ಕಳೆದು ಹೋದರೆ ಮತ್ತು ಹುಡುಕಿಯೂ ಸಿಗದಿದ್ದರೆ ಶಿವಭಕ್ತ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಆಗಿನ ಶೈವ ಸಮಾಜವು ಒಪ್ಪಿಕೊಂಡಿತ್ತು (ಕೊಂಡಗುಳಿ ಕೇಶಿರಾಜನ ಕಥೆ). ಅದು ಒಂದು ವಿಧಿಯೂ ಆಗಿರಬಹುದು.

8 ಶಿವಭಕ್ತರನ್ನು 'ಮಾಹೇಶ್ವರ'ರೆಂದು ಕರೆಯುತ್ತಿದ್ದರು. (ಗಣ, ಶರಣ ಇವು ಇದರ ಸಮಾನಾರ್ಥಕಗಳು). ಇವರೇ ವಿಶೇಷವಾಗಿ ವಾಸಿಸುತ್ತಿದ್ದ ಬಹುಶಃ ಊರಿನ ಬಡಾವಣೆಗಳು, 'ಶಿವಪುರಗಳು'. ಒಬ್ಬ ಭಕ್ತ ಉಳಿದ ಭಕ್ತರ ಜೊತೆ ಸೇರಿ ಶಿವಗೋಷ್ಠಿಗಳನ್ನು ನಡೆಸುವುದು, ತನ್ನ ಸಂಪತ್ತನ್ನು ಹಂಚಿಕೊಳ್ಳುವುದು ಧರ್ಮಾಚರಣೆಯ ಒಂದು ಮುಖ್ಯ ಭಾಗವಾಗಿದ್ದಿತು. ಶಿವನಷ್ಟೇ ಅಥವಾ ಶಿವನಿಗಿಂತಲೂ ಶಿವಭಕ್ತ ದೊಡ್ಡವನು ಎಂಬ ನಂಬಿಕೆಯೂ ಇತ್ತು.

ಕೊಂಡಗುಳಿ ಕೇಶಿರಾಜನು ಬಸವ ಪೂರ್ವಯುಗದ ಶರಣನಾಗಿದ್ದು, ಅವನ ಕೃತಿಗಳ ಮೂಲಕ ಅವನ ಕಾಲದ ವೀರಶೈವ ಧರ್ಮದ ಸ್ಥಿತಿಗತಿಗಳನ್ನು ತಿಳಿಯಬಹುದಾಗಿದೆ. ಪ್ರಧಾನವಾಗಿ ಕೇಶಿರಾಜನು ಭಕ್ತ ಕವಿ. ಧಾರ್ಮಿಕ ವಲಯದಲ್ಲೇ ಸದಾ ವಿಹರಿಸುವ ಅವನ ಮನಸ್ಸು ತನ್ನ ಧರ್ಮದ ಪ್ರಚಲಿತ ತತ್ತ್ವಗಳ ಬಗೆಗೆ ವಿಚಾರ ಮಾಡಿದೆ. ಶೈವಧರ್ಮದಿಂದ ಭಿನ್ನವಾಗಿ ನಿಂತು ತನ್ನ ತಾತ್ತ್ವಿಕ ನಿಲವುಗಳನ್ನು ಭವ್ಯ ನೆಲೆಯಲ್ಲಿ ರೂಪಿಸ ಹೊರಟಿದ್ದ, ಸಾಮಾಜಿಕ ಪರಿಸರದಲ್ಲಿ ತನ್ನ ಆಚಾರ ಸಂಹಿತೆಯನ್ನು ಒಂದು ಸ್ಪಷ್ಟ ಆಕಾರಕ್ಕೆ ಹೊಂದಿಸುತ್ತಿದ್ದ ವೀರಶೈವ ಧರ್ಮವನ್ನು ವ್ಯಾಪಕವಾಗಿ ಹರಡಲು, ಜನಸಾಮಾನ್ಯರ ಬಳಿಗೆ ಅದನ್ನು ಕೊಂಡೊಯ್ಯಲು ತನ್ನ ಕೃತಿಗಳನ್ನು ಕೇಶಿರಾಜ ಮಾಧ್ಯಮವನ್ನಾಗಿ ಬಳಸಿದಂತಿದೆ.

ವೀರಶೈವ ಧರ್ಮದಲ್ಲಿ ಪ್ರಧಾನವಾದುದು ಭಕ್ತಿ. ದೇವನಿಗೂ ಜೀವನಿಗೂ ಮಧುರ ಸಂಬಂಧವನ್ನು ಭಕ್ತಿ ಉಂಟುಮಾಡಿರುವ ಕಾರಣ, ದೇವನನ್ನು ಕಾಣಲು ಭಕ್ತಿಯೇ ಸಾಧನವಾಗಿರುವ ಕಾರಣ ಇಲ್ಲಿ ಭಕ್ತಿಗೆ ಹೆಚ್ಚಿನ ಪ್ರಾಶಸ್ತ್ಯ. ಲೌಕಿಕದ ನೆಲೆಯಲ್ಲಿ ಸದಾ ಸುಖಾಪೇಕ್ಷಿಯಾಗಿ ಅದನ್ನರಸುತ್ತಾ ವಿಹರಿಸುತ್ತಿರುವ ಮನಸ್ಸನ್ನು ಅದರ ಕ್ಷಣಿಕ ನೆಲೆಯಿಂದ ಅಕ್ಷಯ ಸುಖದ ಎಡೆಗೆ ತಿರುಗಿಸುವ ಮಹಾಮಂತ್ರ ಷಡಕ್ಷರ ಮಂತ್ರ. ಈ ಆರಕ್ಕರದ ಮಂತ್ರ ಮುಕ್ಕಣ್ಣ ಶಿವನಿಗಿಂತಲೂ ಮಿಗಿಲು. ಇದಕ್ಕಿಂತ ಮಿಗಿಲಾದ ದೈವ ಭುವಿಯಲ್ಲಿ ಮತ್ತೊಂದಿಲ್ಲವೆಂಬುದನ್ನು ಕೇಶಿರಾಜ ಸಾರಲು ತನ್ನ ಕೃತಿಯಾದ 'ಮಂತ್ರ ಮಹತ್ವದ ಕಂದ'ದಲ್ಲಿ ಪ್ರಯತ್ನಿಸಿರುವನು. ಭಕ್ತರ ಮನಸ್ಸಿಗೆ ಮುಟ್ಟುವಂತೆ ಪಂಚಾಕ್ಷರಿ ಮಂತ್ರದ ಮಹತ್ವವನ್ನೂ, ಮಹಿಮೆಯನ್ನೂ ಒಂದುನೂರ ಹತ್ತು ಕಂದಗಳಲ್ಲಿ ಬಗೆ ಬಗೆಯಾಗಿ ನಿರೂಪಿಸಿ, ಗುರುತರವೂ ವೇದಾದಿ ಸಾರವೂ ಮುರಹರನ ಮೂಲಸಿಧಿಯೂ ಆದ 'ಓಂ ನಮಃ ಶಿವಾಯ' ಎಂಬ ಮಂತ್ರವು ಶಿವಭಕ್ತಿ, ಶಿವನ ಕೀರ್ತನೆ, ಶಿವನ ಸ್ತುತಿ, ಶಿವನ ಮಂತ್ರ, ಶಿವನಪೂಜೆ, ಸದಾಶಿವನ ಒಲವು–ಹೀಗೆ ಸಕಲವನ್ನೂ ಒಳಗೊಂಡಿದೆ, ಅಷ್ಟೇ ಅಲ್ಲ, ಅದು ಶಿವನ ಬಳಿಗೂ ನಮ್ಮನ್ನು ಕರೆದೊಯ್ಯುತ್ತದೆ ಎಂದು ಭಕ್ತರ ಮನದಲ್ಲಿ ಆಸೆಯ ಬೀಜವನ್ನೂ ಬಿತ್ತಿರುವನು, ಭಕ್ತರ ಬದುಕಿನ ಎಲ್ಲ ಕಷ್ಟ–ಸುಖಗಳಿಗೆ ಪರಿಹಾರ ಸೂತ್ರವಾಗಿ ಈ ತಾರಕ ಮಂತ್ರ ಕಾರ್ಯ ನಿರ್ವಹಿಸುತ್ತದೆಂಬುದು ಕೊಂಡಗುಳಿ ಕೇಶಿರಾಜನ ದೃಢ ನಿಲವು. ಶಿವನ ಭಕ್ತರ ಪಾಲಿಗೆ ಇದು ನಿತ್ಯ ಜಪವಾಗಬೇಕು; ಅವರ ದೈನಂದಿನ ಬದುಕಿನಲ್ಲಿ ಉಸಿರಾಗಬೇಕು. ಈ ಸಾತ್ವಿಕ ಉದ್ದೇಶದ ಹಿಂದಿರುವ ಕಳಕಳಿಯನ್ನು ಸಮಕಾಲೀನ ಭಕ್ತ ಜನ ಅರ್ಥಮಾಡಿಕೊಂಡಂತೆ ಮುಂದೆ ಬಂದ ಶರಣ ಪೀಳಿಗೆಯೂ ಗ್ರಹಿಸಿದಂತಿದೆ. ಎಲ್ಲ ಶರಣರೂ ಮಂತ್ರ ಮಹಿಮೆಯನ್ನು ತಮ್ಮ ವಚನಗಳಲ್ಲಿ ವಿಶೇಷಿಸಿ ಹೇಳಿರುವರು.

ಲಿಂಗವಂತರಿಗೆ ಲಿಂಗಮಹತ್ವವನ್ನು ತಿಳಿಯಪಡಿಸುವ ಕೃತಿಗಳು ಲಿಂಗ ಸ್ತೋತ್ರದ ಕಂದ: 1 ಮತ್ತು 2* ದೇವ ಹಾಗೂ ಭಕ್ತನ ನಡುವಣ ಪವಿತ್ರ ಹಾಗೂ ಆತ್ಮೀಯ ಸಂಬಂಧವನ್ನೂ, ತನ್ನ ಆರಾಧ್ಯ ಮೂರ್ತಿಯ ಸಾಮೀಪ್ಯದಲ್ಲಿ ಭಕ್ತನ ಅಂತರಂಗ ಸುಖಿಸುವ ರೀತಿಯನ್ನೂ, ತನ್ನ ನೆಚ್ಚಿನ ದೈವವನ್ನು ನೋಡಿ ಸುಖಿಸುವ, ಪೂಜಿಸಿ ಆನಂದಿಸುವ, ಸ್ತುತಿಸಿ ದಣಿಯದ, ನಲಿದು ಒಲಿದು ಆಡಿ ಆಯಾಸಗೊಳ್ಳದ, ಹೃದಯದ ಸ್ವಾಮಿಯ ಮೂರ್ತಿಯನ್ನು ಕಂಡು ಕಂಡು ರೋಮಾಂಚನಗೊಳ್ಳುವ, ಸುಖದ ಮಧುರ ಕಂಪನದಿಂದ ಮೈಯೆಲ್ಲ ನಡುಗಿ

* ಈ ಕೃತಿಗಳ ಹಾಗೂ ಮುಂದೆ ಹೇಳಲಿರುವ 'ಶೀಲಮಹತ್ವದ ಕಂದ' ಇವುಗಳಲ್ಲಿನ ಉದಾಹೃತ ಪದ್ಯ ಅಥವಾ ಪದ್ಯಭಾಗಗಳು ಡಾ॥ ಎಂ. ಎಂ. ಕಲ್ಬುರ್ಗಿಯವರಿಂದ ಸಂಪಾದಿತವಾಗಿರುವ 'ಕೊಂಡಗುಳಿ ಕೇಶಿರಾಜನ ಕೃತಿಗಳು' ಎಂಬ ಗ್ರಂಥದ್ದು.

ಮೂರ್ಛೆಹೋಗುವ ಭಕ್ತನ ದಶಾವಸ್ಥೆಯಲ್ಲಿನ (ಭಕ್ತನ) ಅಂತರಂಗದ ಸಂವೇದನೆಯನ್ನೂ ಸೂಕ್ಷ್ಮಭಾವಗಳನ್ನೂ ಶಬ್ದಗಳಲ್ಲಿ ನಿರೂಪಿಸುವುದು ಸಾಮಾನ್ಯನಿಗೆ ಸಾಧ್ಯವಿಲ್ಲ, ಭಕ್ತಿಕಂಪಿತನಾದ, ಆರ್ದ್ರಮನದ ಮಹಾನ್ ಭಕ್ತನಿಗೆ ಮಾತ್ರ ಸಾಧ್ಯ.

ಬರೆತಂತಿರೆ ಬೈತಂತಿರೆ
ಕರುವಿಟ್ಟಂತಿರೆ ಜಗುಳ್ದು ನಾಂದಂತಿರೆ ಕಂ
ಡರಿಸಿರ್ದಂತಿರೆ ಬೆಚ್ಚಂ
ತಿರೆ ರಮಯಿಕ್ಕೆನ್ನ ಮನದೊಳಭವ [ಪ]ದಂಗಳ್ ॥30॥

ನೋಡಿ ನಲಿನಲಿದು ಭಕ್ತಿಯೊ
ಳಾಡಿ ಮನಂ ಬೆರಸಿ ಪಾಡಿ ಮೃಡನೊಳ್ಚಿತ್ತಂ
ಗೂಡಿ ಸುಖಜಲಧಿಯೊಳ್ಮುೞು
ಗಾಡಿ ಕರಂ ಲೀಲೆಯಿಂದಮೆಂದಿರ್ದಪೆನೋ ॥32॥

ಕಡೆಗೋಡಿವಱಿಯೆ ಕಣ್ಬನಿ
ನುಡಿ ತಡಬಡವಾಗೆ ರೋಮಕೂಪದೊಳೆಲ್ಲಂ
ಬಿಡದೊಗೆಯೆ ಪುಳಕವಾಯೆ
ನ್ನೊಡೆಯನ ಮುಂದಱಿಯದಾಡುತೆಂದಿರ್ದಪೆನೋ ॥37॥

ಉಟ್ಟುದು ಪೊದೆದುದು ಮೆಲ್ದುದು
ತೊಟ್ಟುದು ತೊಡವೆಲ್ಲವೆರಸು ಲಿಂಗದ ಬಸಿಱೊ
ಳ್ಪುಟ್ಟಿ ಬಳೆದಂತೆ ಕಣ್ಮನ
ಕಿಟ್ಟಣಮಾಗಿರ್ಪ ಸುಖಮದೆಂದಾದಪುದೋ ॥59॥

ತಡವರಿಸಿ ನೋಡಿ ಕಂಡಾ
ಮೃಡನಿರ್ದಪನೆಂಬ ಭಾವವೆನ್ನೊಳ್ನೆಲಸ
ಲ್ಗುಡುಗುಡನೆ ಸುರಿವ ಕಂಬನಿ
ಮಡುಗಳೊಳೋಲಾಡುತಾನದೆಂದಿರ್ದಪೆನೋ ॥70॥

ಅಂಗೈಯೊಳಾಲಿಕಲ್ಲುಂ
ಬಿಂಗದೆ ನಡೆ ನೋಡೆ ನೋಡೆ ಕರಗುವ ತೆಱದಿಂ
ಲಿಂಗವನೆ ನೋಡಿ ಮತ್ಸ
ರ್ವಾಂಗಂ ನೆಱೆ ಕರಗಿ ಕೊಱಗುತೆಂದಿರ್ದಪೆನೋ ॥72॥

ಒಂದು ಮನಱಿಯದೆ ಶಿವಶಿವ
ಯೆಂದೆಂದುಂ ಜೋಲ್ದು ಜೋಲ್ದು ಶಿವಪೂಜೆಯೊಳಾಂ
ಬಂದುದ ಪೋದುದನಱಿಯದೆ
ನಿಂದು ಮನಂ ಲಿಂಗದೊಳಗದೆಂದಾದಪುದೋ ॥99॥

ಮೇಲಿನ ಪದ್ಯಗಳು ಭಕ್ತನ ಮನದ ಹಲವು ಅವಸ್ಥೆಗಳನ್ನೂ, ತುಡಿತ ಮಿಡಿತಗಳನ್ನೂ ಮನದಾಳದ ಹಂಬಲಿಕೆಯನ್ನೂ ಚೆನ್ನಾಗಿ ನಿರೂಪಿಸುತ್ತವೆ. ಕೊಂಡಗುಳಿ ಕೇಶಿ

ರಾಜನ ಉತ್ಕಟವಾದ ಭಕ್ತಿಗೆ ಮೇಲಿನ ಕೆಲವು ಪದ್ಯಗಳು ನಿದರ್ಶನವಷ್ಟೆ. ಶಿವನ ಪೂಜೆ, ಶಿವನ ಸೇವೆ, ಶಿವನ ತತ್ತ್ವವಿಚಾರ, ಶಿವನ ನಿಜಗುಣದ ನಾಮಸ್ತವವನ್ನು ಮಾಡಹೊರಟ ತನ್ನ ಸಮಕಾಲೀನರಿಗೆ ನಿಷ್ಠಾವಂತ ಶುದ್ಧಭಕ್ತಿ ಹೇಗಿರಬೇಕೆಂಬು ದನ್ನು ತಿಳಿಯಪಡಿಸಲು, ಭಕ್ತಿಯ ಆಚರಣೆ ಯಾವ ರೀತಿಯಲ್ಲಿರಬೇಕೆಂಬುದನ್ನು ಬೋಧಿಸಲು ಬಹುಶಃ ಕೇಶಿರಾಜನು ಇವುಗಳನ್ನು ರಚಿಸಿರಬಹುದೇನೋ !

ವೀರಶೈವ ಧರ್ಮ ಬಸವಾದಿ ಶಿವಶರಣರ ಅನುಭವ ಗೋಷ್ಠಿಯಲ್ಲಿ ತನ್ನ ತಾತ್ತ್ವಿಕಾಂಶಗಳನ್ನು ರೂಪಿಸಿಕೊಂಡಿತೆಂದು ಭಾವಿಸಲಾಗಿತ್ತು. ಆದರೆ, ಕೊಂಡ ಗುಳಿ ಕೇಶಿರಾಜನ ಕೃತಿಗಳನ್ನು ಪರಿಶೀಲಿಸಿದಾಗ ವೀರಶೈವ ಧರ್ಮ ತನ್ನ ತಾತ್ತ್ವಿಕ ನಿಲುಮೆಗಳನ್ನು ಹನ್ನೊಂದನೆ ಶತಮಾನದ ಕೊನೆಯಲ್ಲಿ ಹಾಗೂ 12ನೇ ಶತಮಾನದ ಆದಿಭಾಗದಲ್ಲಿ ರೂಪಿಸಿಕೊಂಡಿರಬೇಕೆಂಬ ಸ್ಪಷ್ಟವಾದ ಸೂಚನೆಗಳು ಕಾಣಬರು ತ್ತವೆ. ತಾನು ನಂಬಿ ಆಚರಿಸುತ್ತಿರುವ ಧರ್ಮವನ್ನು ಕೇಶಿರಾಜ 'ವೀರಶೈವ' (ಪು. 59. ವ 1), 'ಲಿಂಗಾಯತ' (ಪು. 64. ಪ 33) ಎಂದು ಹೆಸರಿಸಿರುವನು. ಒಂದು ಧರ್ಮದ ತಾತ್ತ್ವಿಕ ನಿಲುಮೆಯನ್ನು ಅದರ ಪಾರಿಭಾಷಿಕ ಪದಗಳಲ್ಲಿ ಗುರುತಿಸುತ್ತೇವೆ. ಕೊಂಡಗುಳಿ ಕೇಶಿರಾಜನ ಕೃತಿಗಳಲ್ಲಿ ತಾತ್ತ್ವಿಕಾಂಶವನ್ನು ಹೇಳುವ ಅಸಂಖ್ಯ ಪಾರಿಭಾಷಿಕ ಪದಗಳನ್ನು ನಾವು ನೋಡಬಹುದು. ಉದಾ ಹರಣೆಗೆ ಕ್ರೀಲಿಂಗ (ಪು. 40 ಪ. 8), ಇಷ್ಟಲಿಂಗ (ಪು. 40 ಪ. 8), ಲಿಂಗಾನು ಭವದ ಸುಖ(ಪು. 44 ಪ. 36), ಮೃಡನನುಭವದ ಸುಖ (ಪು. 46 ಪ. 47), ಸೆಜ್ಜೆ (ಪು. 31 ಪ. 70 ; ಪು. 46 ಪ. 49), ಉರಸೆಜ್ಜೆಯ ಲಿಂಗ (ಪು. 46 ಪ. 50), ತುರಿಯ (ಪು. 51 ಪ. 77), ಆರೋಗಣೆ (ಪು. 55 ಪ. 103), ತ್ರಿಲಿಂಗ (ಪು. 59. ಪ. 2), ತ್ರಿವಿಧ ಮಲ (ಪು. 59 ಪ. 2), ಮಹೇಶ (ಪು. 59 ಪ. 3), ತ್ರಿವಿಧ– ಆಯತ, ಸ್ವಾಯತ, ಸನ್ನಿಹಿತ (ಪು. 59 ಪ. 4), ಸಮಯಾಚಾರ– ವೀರಶೈವ ಧರ್ಮದ ಪಂಚಾಚಾರಗಳು : ಸದಾಚಾರ, ಗಣಾಚಾರ, ಶಿವಾಚಾರ, ಭೃತ್ಯಾಚಾರ, ಲಿಂಗಾಚಾರ (ಪು. 60 ಪ. 7), ಆಱುತೆಱ ಭಕ್ತಿ (ಪು. 60 ಪ. 7), ಜಂಗಮ (ಪು. 60 ಪ. 10), ಲಿಂಗಧಾರಣೆ (ಪು. 63 ಪ. 27), ಪಾದತೀರ್ಥ (ಪು. 63 ಪ. 28), ಭವಿ (ಪು. 61 ಪ. 14) ತ್ರಿವಿಧ ಮಲ (ಪು. 59 ಪ. 2), ಏಕಾದಶ ವಿಧದ ಪ್ರಸಾದ (ಪು. 70 ಪ. 78), ಆಱು ಮೂಲ ಮಂತ್ರ (ಪು. 71 ಪ. 82), ಆಱುವ್ರತ (ಪು. 71 ಪ. 82), ಆಱು ಶೀಲ (ಪು. 71 ಪ. 82), ಕಾಯ ಭೋಗ (ಪು. 71 ಪ. 82), ಲಿಂಗ ಭೋಗ (ಪು. 71 ಪ. 82), ಐದು ಜ್ಞಾನ (ಪು. 71 ಪ. 83), ಕಾಯಕ (ಪು. 73 ಪ. 98) ಇತ್ಯಾದಿ.

ಯಾವುದೇ ಧರ್ಮ ತನ್ನ ಹುಟ್ಟಿನೊಂದಿಗೇ ತನ್ನ ತಾತ್ತ್ವಿಕ ನಿಲುಮೆಗಳನ್ನು ಸ್ಥಿರೀಕರಿಸಿಕೊಂಡು ಬರುವುದು ಅಸಂಭವ. ಅನ್ಯಧರ್ಮಗಳಿಂದ ಭಿನ್ನವಾಗಿ ತಾನು

ನಿಲ್ಲಲು, ಅದು ತನ್ನದೇ ಆದ ವಿಶಿಷ್ಟ ಧ್ಯೇಯಗಳನ್ನು ಹೊಂದಿರುವುದು ಸಹಜ. ಆದರೆ, ಅದು ಮತೀಯ ಆಚರಣೆಗೆ ಸಂಬಂಧಿಸಿದ ತಾತ್ತ್ವಿಕಾಂಶಗಳಾಗಿರುವುದಿಲ್ಲ. 12ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ವೀರಶೈವ ಧರ್ಮ ಜಾತ್ಯತೀತವಾದ, ವರ್ಗರಹಿತವಾದ, ಶೋಷಣೆಯಿಂದ ಮುಕ್ತವಾದ ಸುಖೀಸಮಾಜದ ನಿರ್ಮಾಣದತ್ತ ಆಲೋಚಿಸಿ ಅದನ್ನು ಕಾರ್ಯಾಚರಣೆಗೆ ತರಲು ಬಸವನೇ ಮೊದಲಾದ ವಿಚಾರಶೀಲ ವ್ಯಕ್ತಿಗಳು ವಿಶಾಲವಾದ ತಳಹದಿಯಮೇಲೆ ಧರ್ಮದ ರೂಪ ರೇಷೆಯನ್ನು ಬಿಡಿಸಿದರು. ಕೆಲಕಾಲಾನಂತರ ವೀರಶೈವ ಧರ್ಮವು 'ಮತ'ವಾಗ ಹೊರಟಾಗ ಎಲ್ಲ ಮತಗಳಲ್ಲಿ ಕಾಣಬರುವ ಕಟ್ಟು ಪಾಡುಗಳು, ವಿಧಿ ನಿಷೇಧಗಳು, ಆಚರಣೆಗಳು, ತಾತ್ತ್ವಿಕ ವಿಚಾರಗಳು ಇದರಲ್ಲೂ ತಲೆದೋರಿತು. ಚನ್ನಬಸವಣ್ಣ ಷಟ್‌ಸ್ಥಲ ಚಕ್ರವರ್ತಿ ಎಂದು ಖ್ಯಾತನಾಗಿದ್ದು ಅವನ ವಚನಗಳಲ್ಲಿ ತಾತ್ತ್ವಿಕಾಂಶಗಳು, ಆಚರಣಾವಿಧಿಗಳು ಹೆಚ್ಚಾಗಿ ಚರ್ಚಿತವಾಗಿವೆ. ಸಿದ್ಧರಾಮನಲ್ಲಿ ಯೌಗಿಕ ವಿಷಯಗಳು ಪ್ರತಿಪಾದಿತವಾಗಿವೆ. ತೋಂಟದ ಸಿದ್ಧಲಿಂಗೇಶ್ವರರ 'ಷಟ್ಸ್ಥಲ ಜ್ಞಾನಸಾರಾಮೃತ'ದಂತಹ ಕೃತಿಗಳಲ್ಲಿ ತಾತ್ತ್ವಿಕಾಂಶಗಳು ಹಾಗೂ ಆಚರಣಾ ವಿಧಿಗಳು ಕಟ್ಟುನಿಟ್ಟಾಗಿ ಹೇಗೆ ಆಚರಣೆಗೆ ಬಂದಿದ್ದುವೆಂಬುದನ್ನೂ, ವೀರಶೈವ ಸಮಾಜದಲ್ಲಿ ಮತೀಯವಾದ ವಿಷಯಗಳು ಹೇಗೆ ಬಲವಾದ ಸಂಪ್ರದಾಯಕ್ಕೆ ಒಳಗಾಗಿದ್ದುವೆಂಬುದನ್ನೂ ತಿಳಿಯಬಹುದಾಗಿದೆ. ಬಸವಾದಿ ಶರಣರ ಕಾಲಕ್ಕೆ ಹಿಂದೆ ಇದ್ದ ವೀರಶೈವ ಸಮಾಜದಲ್ಲಿ ಆಗತಾನೇ ರೂಪಗೊಳ್ಳುತ್ತಿದ್ದ ವೀರಶೈವ ಧರ್ಮದ ಪ್ರಾರಂಭಿಕ ಚಿಹ್ನೆಗಳನ್ನು ಕಾಣುತ್ತೇವೆ. ಪ್ರಾರಂಭಾವಸ್ಥೆಯಲ್ಲಿ ಅದರ ತತ್ತ್ವಗಳು ಜಟಿಲವಾಗಿರದೆ ಸರಳವಾಗಿವೆ. ಆಚರಣಾ ವಿಧಿಗಳಲ್ಲೂ ತೀರಾ ಬಿಗಿಯನ್ನು (Regidity) ನಾವು ಕಾಣುವುದಿಲ್ಲ. ವೈದಿಕ ಧರ್ಮದ ಕರ್ಮಕಾಂಡವನ್ನೂ, ಅರ್ಥವಿಹೀನವಾದ ಆಚರಣೆಗಳನ್ನೂ ವಿರೋಧಿಸಿ ಸಿಡಿದು ನಿಂತ ಬಸವಪೂರ್ವದ ವೀರಶೈವ ಧರ್ಮದ ಪ್ರಾರಂಭಿಕ ಸೂತ್ರಗಳಲ್ಲಿ ಜೀವಕಾರುಣ್ಯ, ಮಾನವೀಯತೆ, ಕೌಟುಂಬಿಕ ಜೀವನದಲ್ಲಿ ನೆಮ್ಮದಿ, ಸತ್ಯ ಶುದ್ಧ ಕಾರ್ಯಾಚರಣೆ, ಸರಳವೂ ಶಾಂತಿಯುತವೂ ಆದ ಜೀವನಾದರ್ಶ, ಸ್ವಧರ್ಮನಿಷ್ಠೆ, ಲಿಂಗಪೂಜೆ, ಜಂಗಮದಾಸೋಹ, ಕಾಯಕನಿಷ್ಠೆ– ಇವೇ ಮೊದಲಾದ ಸಾಮಾನ್ಯ ವಿಷಯಗಳು ಪ್ರತಿಪಾದಿತವಾಗಿರುವುದನ್ನು ಕಾಣುತ್ತೇವೆ. ಕೊಂಡಗುಳಿ ಕೇಶಿರಾಜನ 'ಶೀಲಮಹತ್ವದ ಕಂದ'ವು ಈ ಹಿನ್ನಲೆಯಲ್ಲಿ ಮುಖ್ಯ ಕೃತಿಯಾಗುತ್ತದೆ. ಒಂದು ನೂರ ಒಂದು ಪದ್ಯಗಳಲ್ಲಿ ವೀರಶೈವದ 64 ಶೀಲಗಳನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ. ಇದು ವೀರಶೈವ ಆಚಾರಕ್ಕೆ ಸಂಬಂಧಿಸಿರುವುದರಿಂದ, ಇದು ಒಂದು ವಿಧದಲ್ಲಿ ಬಸವಪೂರ್ವದ ವೀರಶೈವವನ್ನು ಪ್ರತಿನಿಧಿಸಿರುವುದರಿಂದ, ಆ ಕಾಲದ ವೀರಶೈವ ಧರ್ಮದ ಗೊತ್ತು ಗುರಿಗಳನ್ನು ನಿರ್ಣಯಿಸಲು ದಿಕ್ಸೂಚಿಯಂತಿದೆ. ಬಸವಯುಗದಲ್ಲಿ ನಾವು ಕಾಣುವ ವರ್ಣ, ವರ್ಗರಹಿತ ಸಾಮಾಜಿಕ ಕಲ್ಪನೆ; ಹೆಣ್ಣು–ಗಂಡು

ಗಳ ನಡುವಿನ ಕೀಳು ಮೇಲೆನ್ನದ ಸಮಾನ ಭಾವ; ಸಮರಸ ದಾಂಪತ್ಯ; ವಾರ-ತಿಥಿ-ಲಗ್ನ-ಶುಭದಿನ-ತಾರಾಬಲ-ಚಂದ್ರಬಲ-ನವಗ್ರಹಬಲ-ಶುಭ ಅಶುಭ-ಶಕುನ ಇತ್ಯಾದಿ ಮೂಢ ನಂಬಿಕೆಗಳ ಖಂಡನೆ; ಕ್ಷೇತ್ರಯಾತ್ರೆ, ಪಾಪ-ಪುಣ್ಯ ಇವೇ ಮೊದಲಾದುವುಗಳ ಬಗೆಗಿರುವ ಪೂಜ್ಯ ಭಾವನೆಗಳ ಬಗೆಗೆ ತಿರಸ್ಕಾರ; ಕಾಯಕ ತತ್ತ್ವ ಇವೇ ಮೊದಲಾದ ಪ್ರಮುಖ ವಿಷಯಗಳನ್ನೂ ಬಸವಪೂರ್ವ ಯುಗ ದಲ್ಲಿಯೇ ನಾವು ಕಾಣುತ್ತೇವೆ.

ಬಸವಪೂರ್ವಯುಗದ ವೀರಶೈವದ 'ಆಚಾರ ಸಂಹಿತೆ'ಯನ್ನು ಕೊಂಡಗುಳಿ ಕೇಶಿರಾಜನು ತನ್ನ 'ಶೀಲಮಹತ್ವದ ಕಂದ'ದಲ್ಲಿ ಸಂಕ್ಷಿಪ್ತವಾಗಿ, ಅಷ್ಟೇ ಖಚಿತ ರೂಪದಲ್ಲಿ ನಿರೂಪಿಸಿರುವನು. ಮೊದಲ ಪದ್ಯದ ಮೊದಲ ಸಾಲಿನಲ್ಲೇ ತನ್ನ ಧರ್ಮವನ್ನು 'ಪರ ವೀರಶೈವ' ಎಂದು ಕರೆದು, ಅನಂತರ 'ಭಕ್ತ'ನ ಲಕ್ಷಣವನ್ನು ಹೇಳತೊಡಗುವನು: ಅನುಕ್ರಮವಾಗಿ ಗುರುವಿನ ಮಹಿಮೆಗಳನ್ನು ಸಮರ್ಥವಾದ ವೀರಶೈವಧರ್ಮ ಸಿದ್ಧಾಂತದಿಂದ ತಿಳಿದು, ಅವನ ಕರುಣೆಯನ್ನು ಪಡೆದು, ಯಾವಾತ ಸನ್ಮಾರ್ಗದಲ್ಲಿ ನಡೆಯುವನೋ ಅವನೇ ಗುರುಭಕ್ತನು, ಗುರುವಿನಲ್ಲಿ ಬೆರೆಸಿಹ ಮುಕ್ತನು. ಸದಾ ಪ್ರಸನ್ನನಾಗಿ, ಶಿವಾಥಿಕ್ಯವನ್ನು ಪ್ರತಿಪಾದಿಸಿ, ಆಣವ, ಮಾಯಾ ಹಾಗೂ ಕಾರ್ಮಿಕಗಳೆಂಬ ತ್ರಿವಿಧ ಮಲವನ್ನು ನಿವಾರಿಸಿ, ಇಷ್ಟ, ಪ್ರಾಣ, ಭಾವ ಗಳೆಂಬ ತ್ರಿಲಿಂಗಗಳನ್ನು ಧಾರಣಮಾಡಿ ಕಾಪಾಡುವ ಗುರುವನ್ನು 'ಮಹಾಗುರು' ಎಂದು ಯಾವಾತ ಕರೆಯುವನೋ ಅವನೇ ಗುರುಭಕ್ತನು. ಇನ್ನು 'ಮಹೇಶ'ನ ಲಕ್ಷಣ: ಪರಧನ, ಪರವಸ್ತು, ಪರದೈವಗಳನ್ನು ತೊರೆದು, ಲಿಂಗದಲ್ಲಿ ಮನವನ್ನು ಏಕವಾಗಿಸಿ ಅನ್ಯವನರಿಯದೆ ಇರಬಲ್ಲವನೇ ಮಹಾತ್ಮನು, ಆತನೇ ಮಹೇಶನು. ಆಯುತ, ಸ್ವಾಯುತ ಸನ್ನಿಹಿತಗಳಿಗೆ ವ್ಯತ್ಯಯವಾಗದಂತೆ, ಕೊನೆಯಿಲ್ಲದಂತೆ ಮೋಹಿ ಯಾಗಿ ನಡೆಯುವಾತನೆ ಕಡುನಿಷ್ಠೆ ಗಟ್ಟಿಗೊಂಡು ವ್ಯವಹರಿಸುವಾತನೆ ಮಹೇಶನು. (ಆಯುತ, ಸ್ವಾಯುತ, ಸನ್ನಿಹಿತಗಳೆಂಬ ತ್ರಿವಿಧಗಳು ಶರಣಸ್ಥಾನದಲ್ಲಿರುವವನ ಲಿಂಗ ಸಾನ್ನಿಧ್ಯವನ್ನು ಸೂಚಿಸುತ್ತವೆ. ಲಿಂಗಾಯತ ಎಂದರೆ ಲಿಂಗದ ಮರ್ಮವನ್ನು ಸ್ಥೂಲಕ್ರಿಯೆಗಳಲ್ಲಿ ಅರಿತವನು ಎಂಬರ್ಥವು ಇಲ್ಲಿ ಇರುತ್ತದೆ. ಆದರೆ ಲಿಂಗದ ಮರ್ಮವನ್ನು ಹೆಚ್ಚಿಗೆ ತಿಳಿದು ಆಚರಿಸುವವನು ಲಿಂಗಸಾಯುತ. ಇದಕ್ಕೂ ಹೆಚ್ಚಿಗೆ ತಿಳಿದವನು ಲಿಂಗ ಸನ್ನಿಹಿತನು ಎಂದು ಇವರು ಹೇಳಲ್ಪಡುತ್ತಾರೆ-ಫ.ಗು. ಹಳಕಟ್ಟಿ: ಶಿವಾನುಭವ ಶಬ್ದಕೋಶ, ಪು. 72). ವೀರವ್ರತನೂ, ನಿಷ್ಠಾವಂತನೂ, ದೇಹ ಸಂಬಂಧಿಯಾದ ಗುಣಗಳನ್ನೂ ಇಂದ್ರಿಯ ಸಂಬಂಧಿಯಾದ ವಿಕಾರಗಳನ್ನೂ ಕಳೆದು ಕೊಂಡಿರುವವನೂ, ಶೀಲವಂತನೂ, ಧೀರನೂ, ಸಜ್ಜನನೂ, ಸತ್ಯಾಚಾರನೂ, ಸನ್ಮಾರ್ಗಿಯೂ ಆಗಿರುವವನು ಸಹಜವಾಗಿ ಮಹೇಶನು (ಪ. 6). ಪರಸತಿಯನ್ನು ಕಂಡಾಗ ತನ್ನ ತಾಯಿ, ಮಗಳು, ಕೂಡಹುಟ್ಟಿದ ತಂಗಿಯೆಂದು ಯಾವಾತ ಇರು

ತ್ತಾನೊ, ಪರಸ್ತ್ರೀಯನ್ನು ಕಣ್ಣೆತ್ತಿ ಕಾಮಭಾವನೆಯಿಂದ ಯಾವಾತ ನೋಡುವುದಿಲ್ಲವೊ ಅವನೇ ಮಹೇಶನು (ಪ. 18). ಪರಧನವನ್ನು ಯಾವಾತ ಪರೀಕ್ಷಿಸುವುದಿಲ್ಲವೊ, ನೋಡುವುದಿಲ್ಲವೊ, ಅದರ ಸಮೀಪ ಹೋಗುವುದಿಲ್ಲವೊ ಅದಕ್ಕೆ ಸೋಲುವುದಿಲ್ಲವೊ, ಅದಕ್ಕೆ ವಶನಾಗುವುದಿಲ್ಲವೊ, ಪರಧನ ಅಪಹಾರಿಗಳಜೊತೆ ಸೇರುವುದಿಲ್ಲವೊ ಅವನೇ ಮಹೇಶನು (ಪ. 19). ಯಾವಾತ ತನ್ನ ಭಾವದಲ್ಲಿ ಪರಮಾತ್ಮನ ಅಚ್ಚೊತ್ತಿ, ಮನದಲ್ಲಿ ಪರಮಾತ್ಮನನ್ನು ಚೆನ್ನಾಗಿ ನಂಬಿ, ನಿಷ್ಠೆಗಟ್ಟಿಗೊಂಡು ಇರುವನೊ ಅವನೇ ಮಹೇಶ. (ಪ. 20). 'ಜಂಗಮ' ಪದಕ್ಕೆ ಸಂವಾದಿಯಾದ 'ಚರ' ಶಬ್ದವನ್ನು ಕೇಶಿರಾಜ ಬಳಸಿ, ಅವನ ಲಕ್ಷಣವನ್ನೂ ಹೇಳಿರುವನು: ಜಂಗಮನು ಸಾಕ್ಷಾತ್ ಪರಶಿವನು, ಪಂಚವದನನು. ನೊಸಲು ಹಾಗೂ ಮೈಗೆಲ್ಲಾ ಭಸ್ಮಧಾರಣ ಮಾಡಿಕೊಂಡಿರುವವನು. ಮುಖದಲ್ಲಿ ಶಿವನ ನೆನಹು (=ಬಾಯಲ್ಲಿ ಸದಾಶಿವನ ನಾಮಸ್ಮರಣೆ ಮಾಡುತ್ತಿರುವವನು) ಕಂಠದಲ್ಲಿ ಲಿಂಗಧರಿಸಿರುವವನು, ರುದ್ರಾಕ್ಷಿಮಾಲೆ ಹಾಕಿಕೊಂಡಿರುವವನು. ಅವನೇ ಬೇರಾರೂ ಅಲ್ಲ ಮುಕ್ಕಣ್ಣನು (ಪ. 8). ಕೈಲಾಸದಿಂದ ನಮ್ಮ ಭಾಗ್ಯ ರೂಪದಲ್ಲಿ ಆ ಶಿವನೇ ಜಂಗಮರೂಪ ಧರಿಸಿ ಬಂದು ನಮ್ಮ ಕಣ್ಣಿಗೆ ಕಾಣುತ್ತಿರುವನು. ಶಿವನೇ ಆದ ಜಂಗಮವು ನಮಗೆ ಗುರುವು (ಪ. 9). ಚರಮೂರ್ತಿಗೆ ನಾವು ದಾಸರು. ತನಗೆಂದು ಮನೆಯವರಿಗೆಂದು ಅಡಿಗೆ ಮಾಡದೆ ಘನ ಲಿಂಗ ಜಂಗಮಕ್ಕೆಂದು ಕ್ರಮವಾಗಿ ಮಾಡಿಸುವುದು ಹಾಗೂ ಇದಿರಿಗೆ ಕಂಡ ಜಂಗಮಮೂರ್ತಿಯನ್ನು ಬಳಲಿರುವಿರಿ ಮಹಾಸ್ವಾಮಿ, ನನ್ನ ಭಾಗ್ಯವೋ ಎನ್ನುವಂತೆ ನನ್ನ ಕರ್ಮನಿವಾರಣೆಗಾಗಿ ನನ್ನಲ್ಲಿಗೆ ಬಂದಿರಿ ಎಂದು ಸೇವಕಾಭಾವದಲ್ಲಿರುವುದು ಜಂಗಮಭಕ್ತಿ. ಜಂಗಮದಲ್ಲಿ ದಾಸರ ದಾಸ ಭೃತ್ಯರ ಭೃತ್ಯ ತಾನು ಎಂಬ ಪ್ರತಿಜ್ಞೆಯನ್ನೂ, ಸಜ್ಜನನು ತನ್ನ ಸಮಯ (=ಧರ್ಮ)ದ ಆಚಾರವಾದ ಶ್ರದ್ಧಾ, ನೈಷ್ಠಿಕ, ಸಾವಧಾನ, ಅನುಭಾವ, ಆನಂದ ಹಾಗೂ ಸಮರಸವೆಂಬ ಷಡ್ವಿಧ ಭಕ್ತಿಯನ್ನೂ ಆಚರಿಸಬೇಕು. ಚರಮೂರ್ತಿಯನ್ನು ಶಿವನೆಂದೇ ಭಾವಿಸಿದ ಬಳಿಕ ಅವನಲ್ಲಿ ಅವಗುಣವನ್ನು ಕಾಣಬಾರದು, ಅವನನ್ನು ಧಿಕ್ಕರಿಸಬಾರದು. ಶಿವನಿಗೆ ಹೇಗೆ ಅವಗುಣಗಳಿಲ್ಲವೋ ಹಾಗೆ ಜಂಗಮಗೆ ಅವಗುಣಗಳಿಲ್ಲ (ಪ. 10–12).

ಲಿಂಗಪ್ರಸಾದವಲ್ಲದೆ ಬೇರಾವುದನ್ನೂ ಶಿವಭಕ್ತನಾದವನು ಸೇವಿಸಕೂಡದು. ಲಿಂಗಪ್ರಸಾದವಲ್ಲದದು ಕಿಲ್ಬಿಷ. ಆದಕಾರಣ, ಏನನ್ನೇ ಆಗಲಿ ಭಕ್ತನಾದವನು ಲಿಂಗಕ್ಕೆ ಅರ್ಪಿಸಿ ಬಳಿಕ ಅದನ್ನು ಸ್ವೀಕರಿಸುವುದು. (ಗುರುವಿನಿಂದ ದೀಕ್ಷೆಯಾಗುವಾಗ ಮಾಂಸಪಿಂಡವು ಮಂತ್ರಪಿಂಡವಾಗಿ ಪರಿವರ್ತನೆಗೊಳ್ಳುವುದು. ಮಲತ್ರಯಗಳನ್ನು ನೀಗಿದ ಶರೀರವು ಲಿಂಗತನುವಾಗುವುದು. ಲಿಂಗಶರೀರಿಯಾದ ಮಂತ್ರಶುದ್ಧನಾದ ಜೀವನು ಅಂಗನೆನಿಸಿಕೊಳ್ಳುವನು.) ಆದ್ದರಿಂದಲೇ, ಕೇಶಿರಾಜನು 'ಲಿಂಗಶರೀರಿಯಾದ

ಮಂತ್ರಶುದ್ಧನಾದ ಜೀವನು ಅಂಗನೆನಿಸಿಕೊಳ್ಳುವುದರಿಂದ ಲಿಂಗದ ಶೇಷವನ್ನು ಮಾತ್ರ ಸ್ವೀಕರಿಸುವುದು' (ಪ. 13) ಎಂದು ತನ್ನ ಕಾಲದ ಆಚಾರವನ್ನು ಹೇಳುವನು. ಗುರುವಿನಿಂದ ದೀಕ್ಷೆ ಪಡೆದು ಶುದ್ಧಾಂಗದವರನ್ನು ಲಿಂಗದೇಹಿಗಳಲ್ಲದವರನ್ನು 'ಭವಿ' ಎಂದು ಕೇಶಿರಾಜ ಗುರುತಿಸಿರುವನು (ಮುಂದೆ ಇದು ವಚನಕಾರರಿಗೆ, ವೀರಶೈವರಲ್ಲದವರನ್ನು ಕುರಿತು ಹೇಳುವಾಗ ನಿಶ್ಚಿತ ಅರ್ಥವುಳ್ಳ 'ಪಾರಿಭಾಷಿಕ ಪದ' ವಾಗಿಬಿಟ್ಟಿತು). ಭವಿಯು ಕೊಟ್ಟುದನ್ನು ಲಿಂಗಕ್ಕೆ ಅರ್ಪಿಸಿದರೆ ರೌರವ ನರಕ. ತಿಳಿದೂ ತಿಳಿದೂ ಭವಿಪಾಕವನ್ನು ಸ್ವೀಕರಿಸಿದ್ದೇ ಆದರೆ ನರಕದಲ್ಲಿ ಭವಿಗಿಂತ ಗಟ್ಟಿಯಾಗಿ ಕಟ್ಟಿಬೀಳುವನು (ಪ.14). ಭವಿಯನ್ನು ಮುಟ್ಟಲಾಗದು. ಅಷ್ಟೇ ಅಲ್ಲ, ಅವನು ನಿರ್ಮಿಸಿದ ಮನೆ, ಒಲೆ, ಕೈಗಾಣ, ಮಡಕೆ, ಮೊರ, ಒರಳು, ಒನಕೆ-ಇವುಗಳು ವೀರಶೈವನಿಗೆ ಸ್ವೀಕಾರಾರ್ಹವಲ್ಲ. (ಭವಿಯ ಬಗ್ಗೆ ತುಂಬ ಮಡಿವಂತಿಕೆಯನ್ನು ಪ್ರಕಟಿಸಿರುವ ಕೇಶಿರಾಜ ಅದಕ್ಕಾಗಿಯೇ ಹತ್ತಾರು ಪದ್ಯಗಳನ್ನೇ ಮೀಸಲಿಟ್ಟಂತಿದೆ). ವೀರಶೈವನು ತನಗೆ ತನ್ನ ಸಂಸಾರಕ್ಕೆ ಬೇಕಾದ ದಿನನಿತ್ಯದ ಬಳಕೆಯ ವಸ್ತುಗಳನ್ನು ತಾನೇ ಮಾಡಿಕೊಳ್ಳಬೇಕು. ಹಾಗೆ ಮಾಡಿಕೊಳ್ಳದಿದ್ದರೆ ಕೇಶಿರಾಜನ ಪ್ರಕಾರ ಅಂತಹವನು 'ದುಃಶೀಲ' ನಾಗುವನು. ವೀರಶೈವನು ಭವಿಯನ್ನು ಹೇಗೆ ಸ್ಪರ್ಶಿಸಲಾಗದೊ ಹಾಗೆಯೇ ಬೇರೆಯವರ ಹೊನ್ನು-ಹೆಣ್ಣು-ಮಣ್ಣುಗಳನ್ನೂ ಮುಟ್ಟಲಾಗದು (ಪ. 15-16). (ಮುಂದೆ ವಚನಕಾರರು ಈ 'ಶೀಲಕ್ಕೆ' ಕೊಟ್ಟ ಮಹತ್ವವನ್ನು ಅವರ ವಚನಗಳಿಂದ ನಾವು ಅರಿಯಬಹುದಾಗಿದೆ.) ಭವಿಯನ್ನು ಮನೆಗೆ ಹೊಗಿಸುವುದನ್ನು ಖಂಡಿಸುವ ಕೇಶಿರಾಜ ಬೇರೆಯವರಿಗೆ ದಾನ ಕೊಡುವುದನ್ನು ಖಂಡಿಸಿಲ್ಲ. ಬೇರೆಯವರಿಗೆ ತನ್ನಲ್ಲಿರುವುದನ್ನು ಅವರು ಬೇಡಿದರೆ ಕೊಡಲಾರೆ ಎನ್ನುವುದು ಶೀಲವಲ್ಲ. ಎಂದಿರುವನು (ಪ. 17). ಅನ್ಯರ ದೈವ ಹಾಗೂ ಪರದ್ರವ್ಯ ಇವುಗಳು ವೀರಶೈವನಿಗೆ ಸ್ವೀಕಾರಾರ್ಹವಲ್ಲ. ಅವನ್ನು ಬಿಡುವುದೇ ಶೀಲ. ಭವಿಪಾಕ, ಭವಿಯ ಭಾಂಡ, ಭವಿಯ ಲಿಂಗ, ಭವಿಯ ಭೂಮಿ, ಭವಿಯ ವಂದನೆ, ಭವಿಯ ನೋಟ–ಮಾಟ, ಭವಿಯ ಸೇವೆ––ಇವುಗಳನ್ನು ಹೊಂದದೆ ಇರುವವನೇ ಶೀಲವಂತನು (ಪ. 21).

ಕೊಂಡಗುಳಿ ಕೇಶಿರಾಜನು ತನ್ನ ಕಾಲದ ತನ್ನ ಧರ್ಮದ ತಾತ್ತ್ವಿಕಾಂಶಗಳನ್ನು ಪ್ರತಿಪಾದಿಸುವ ಪಾರಿಭಾಷಿಕ ಪದಗಳನ್ನು ತನ್ನ ಕೃತಿಗಳಲ್ಲಿ ಹೇರಳವಾಗಿ ಬಳಸಿರುವನೆಂಬುದನ್ನು ಹಿಂದೆಯೇ ಹೇಳಲಾಗಿದೆ. 'ಶೀಲಮಹತ್ವದ ಕಂದ'ವು ಪ್ರಧಾನವಾಗಿ ವೀರಶೈವದ ತತ್ತ್ವ ಹಾಗೂ ಆಚರಣೆಗಳಿಗೆ ಬೆಲೆಕೊಟ್ಟಿದೆ. ಇದರ ಬಂಧ (Structure) ವಿಶಿಷ್ಟವಾದುದು. ಪ್ರಾರಂಭ ಹಾಗೂ ಅಂತ್ಯ ಭಾಗಗಳಲ್ಲಿ ತತ್ತ್ವ ನಿರೂಪಣೆ ಮಾಡಿ ಮಧ್ಯೆ ಅದರ ಪ್ರಾಣರೂಪವಾದ ಆಚರಣೆಗಳನ್ನು ವಿವರಿಸಿರುವನು. ಪ್ರಾರಂಭದಲ್ಲಿ, ಷಟ್ಸ್ಥಲದ ಗುರು-ಲಿಂಗ-ಜಂಗಮ ಲಕ್ಷಣಗಳ ಪ್ರಸ್ತಾಪ

ಬರುತ್ತದೆ. ಅವು ಶಿವನ ತ್ರಿವಿಧ ರೂಪಗಳು ಎಂದು ಒತ್ತಿ ಹೇಳುವನು. ಕೊನೆಯ ಭಾಗದಲ್ಲಿ, ಅಕ್ರೋಧ, ಸತ್ಯವಚನ, ಕ್ಷಮೆ, ಭವಿಭಕ್ತ ಭೇದ, ಅನುಗ್ರಹ, ಸತ್ಪಾತ್ರ ದ್ರವ್ಯಾರ್ಪಣಗಳೆಂಬ ಷಡ್ವಿಧ ಶೀಲಗಳನ್ನೂ (ಪ. 87–89) ; ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ, ಭಕ್ತಿಗಳೆಂಬ ಷಡ್ವಿಧ ವ್ರತಗಳನ್ನೂ (ಪ. 90-93) ವಿವರಿಸುವನು. ಷಡ್ವಿಧ ಶೀಲಗಳಿಗಿಂತ ಷಡ್ವಿಧ ವ್ರತಗಳಿಗೆ ಹೆಚ್ಚಿನ ವಿವರಣೆ ನೀಡಿರುವುದು ಇಲ್ಲಿ ಮುಖ್ಯ. ಗುರು-ಲಿಂಗ-ಜಂಗಮ ವ್ರತಗಳ ಬಗೆಗೆ ಕೊಂಡಗುಳಿ ಕೇಶಿರಾಜ ಪ್ರಾರಂಭದಲ್ಲಿಯೇ ಸಾಕಷ್ಟು ಹೇಳಿರುವುದರಿಂದ, ಷಡ್ವಿಧ ವ್ರತಗಳಲ್ಲಿ ಮೊದಲ ಮೂರರ ಬಗೆಗೆ ಹೆಚ್ಚು ಹೇಳದೆ, ಉಳಿದವಕ್ಕೆ ಹೆಚ್ಚಿನ ವಿವರ ನೀಡುವನು. ಷಡ್ವಿಧ ವ್ರತಗಳಲ್ಲಿ ನಾಲ್ಕನೆಯದು, 'ಪ್ರಸಾದ ವ್ರತ'. ವೀರಶೈವನ ಪ್ರಗತಿಗೆ ಸಂಬಂಧಿಸಿದ ಎಲ್ಲ ಆಚರಣೆಗಳು 'ಏಕಾದಶ ಪ್ರಸಾದ'ಗಳಲ್ಲಿ ಸೇರಿವೆ. ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದ, ಆಪ್ಯಾಯನ ಪ್ರಸಾದ, ಸಮಯ ಪ್ರಸಾದ, ಪಂಚೇಂದ್ರಿಯ ವಿರಹಿತಪ್ರಸಾದ, ಅಂತಃಕರಣ ಚತುಷ್ಟಯ ವಿರಹಿತ ಪ್ರಸಾದ, ಪ್ರಸಾದಿಯ ಪ್ರಸಾದ, ಸಮಯ ಪ್ರಸಾದ, ಸದ್ಭಾವ ಪ್ರಸಾದ, ಸಮತಾ ಪ್ರಸಾದ, ಜ್ಞಾನ ಪ್ರಸಾದ–ಇವು ಏಕಾದಶ ಪ್ರಸಾದಗಳು* ಇವುಗಳನ್ನು ಹೀಗೆ ವಿವರಿಸ ಬಹುದು :

1. ಮಂತ್ರಧ್ಯಾನದಿಂದ ಪದಾರ್ಥದ ಪೂರ್ವಾಶ್ರಯವಳಿದುದೇ ಶುದ್ಧ (= ಗುರು) ಪ್ರಸಾದ.
2. ಗುರು ಪ್ರಸಾದವನ್ನು ಲಿಂಗಕ್ಕರ್ಪಿಸಲು ಆಗ ಪ್ರಸಾದ ಕಳೆ ಲಿಂಗದಲ್ಲಿ ನೆಲೆಗೊಳ್ಳುವುದು. ಇದು ಲಿಂಗ ಪ್ರಸಾದ.
3. ಲಿಂಗ ಪ್ರಸಾದವನ್ನು ಜಿಹ್ವೆಯ ಮೂಲಕ ಸ್ವೀಕರಿಸುವುದು. ಇದು ಜಂಗಮಮುಖವಾದುದೆಂದು ಭಾವಿಸಿ ಹಾಗೆ ಸ್ವೀಕರಿಸಿದಲ್ಲಿ ಜಂಗಮ ಪ್ರಸಾದ.
4. ಗುರು-ಲಿಂಗ-ಜಂಗಮ ಪ್ರಸಾದಗಳು ಲಿಂಗಮುಖವಾದವುಗಳೆಂಬ ದೃಢ ಭಾವವು ನೆಲೆಗೊಳ್ಳಲು ಅದು ಆಪ್ಯಾಯನ ಪ್ರಸಾದವು.
5. ಪ್ರಸಾದ ಸೇವನಾಕಾಲದಲ್ಲಿ ಇತರ ಪದಾರ್ಥಗಳಿಗೆ ಲಕ್ಷ್ಯವಿಡದೆ ಅವು ಅನರ್ಪಿತವೆಂದು ತಿಳಿಯುವುದು ಸಮಯ ಪ್ರಸಾದವು.
6. ಪ್ರಸಾದ ಸೇವನೆಯಲ್ಲಿ ಪಂಚೇಂದ್ರಿಯಗಳು ಮುಟ್ಟದ ಮುನ್ನವೇ ಅವುಗಳನ್ನು ಸೇವಿಸುವುದು ಪಂಚೇಂದ್ರಿಯ ವಿರಹಿತ ಪ್ರಸಾದವು.

---

* ನೋಡಿ : ಚನ್ನಬಸವಣ್ಣನವರ ವಚನಗಳು : ಸಂ. ಡಾ|| ಆರ್. ಸಿ. ಹಿರೇಮಠ, ವ. 819.

7. ಅಂತಃಕರಣ ಚತುಷ್ಟಯುಗಳಿಗೆ ದೂರವಾಗಿ ಪ್ರಸಾದ ಸೇವಿಸುವುದು ಅಂತಃಕರಣ ಚತುಷ್ಟಯು ವಿರಹಿತ ಪ್ರಸಾದವು.
8. ಪ್ರಸಾದಿಯು ಪ್ರಸಾದವನ್ನು ಜಂಗಮಕ್ಕೆ ಕೊಟ್ಟು ಸಮರಸ ಭೋಗ ಮಾಡುವುದು ಪ್ರಸಾದಿಯು ಪ್ರಸಾದವು.
9. ಪ್ರಸಾದವನ್ನು ಸದ್ಭಾವದಿಂದ ಸೇವಿಸುವುದೇ ಸದ್ಭಾವ ಪ್ರಸಾದವು.
10. ಹಸಿವು ಅಡಗಿ ಶಾಂತಿ ಸೈರಣೆಯಿಂದಾಗುವುದೇ ಸಮತಾ ಪ್ರಸಾದವು.
11. ಸಮತಾ ಪ್ರಸಾದದಲ್ಲಿ ತೃಪ್ತಿಯನ್ನು ಹೊಂದಿ ಕ್ರಿಯಾ ಖಂಡಿತ ಮಾಡುವಲ್ಲಿ ಅಖಂಡ ಪರಿಪೂರ್ಣ ಪ್ರಸಾದಿಯಾಗಿರುವುದು ಜ್ಞಾನ ಪ್ರಸಾದವು[10].

ಷಡ್ವಿಧ ವ್ರತಗಳಲ್ಲಿ ಐದನೆಯದು, ಪಾದೋದಕ ವ್ರತ. ವೀರಶೈವರಲ್ಲಿ ದಶವಿಧ ಪಾದೋದಕಗಳು ಬಳಕೆಯಲ್ಲಿವೆ. ಪಾದೋದಕ, ಲಿಂಗ, ಮಜ್ಜನ, ಸ್ಪರ್ಶನ, ಅವಧಾನ, ಆಪ್ಯಾಯನ, ಹಸ್ತ, ಪರಿಣಾಮ, ನಿರ್ನಾಮ, ಸತ್ಯ – ಇವು ದಶವಿಧ ಪಾದೋದಕಗಳು. ಅಷ್ಟಾವರಣಗಳಲ್ಲಿ ಪಾದೋದಕವೂ ಒಂದು. ಇದು ಮನುಷ್ಯನ ಅಂತರಂಗ ಬಹಿರಂಗಗಳನ್ನು ಶುದ್ಧಗೊಳಿಸುತ್ತದೆ. "ಸ್ಪರ್ಶನೋದಕ ಅವಧಾನೋದಕಗಳು ಅನುಕ್ರಮವಾಗಿ ಆಚಾರಲಿಂಗ ಗುರುಲಿಂಗಗಳಿಗೆ ಸಂಬಂಧಿಸಿದವು. ಇವು ಗುರುಪಾದೋದಕವಾಗಿ ಇಷ್ಟಲಿಂಗಾರ್ಪಿತವಾಗುತ್ತವೆ. ಇದು ಅನಾದಿ ಗುರು ಸ್ವರೂಪವು. ಆಪ್ಯಾಯನೋದಕ, ಹಸ್ತೋದಕಗಳು ಅನುಕ್ರಮವಾಗಿ ಶಿವಲಿಂಗ ಜಂಗಮಲಿಂಗಗಳಿಗೆ ಸಂಬಂಧಿಸಿದವು. ಇವು ಲಿಂಗಪಾದೋದಕವಾಗಿ ಪ್ರಾಣಲಿಂಗಾರ್ಪಿತವಾಗುತ್ತವೆ. ಇದು ಅನಾದಿ ಲಿಂಗ ಸ್ವರೂಪವು. ಪರಿಣಾಮೋದಕ ನಿರ್ನಾಮೋದಕಗಳು ಅನುಕ್ರಮವಾಗಿ ಪ್ರಸಾದಲಿಂಗ ಮಹಾಲಿಂಗಗಳಿಗೆ ಸಂಬಂಧಿಸಿದವು. ಇವು ಜಂಗಮ ಪಾದೋದಕವಾಗಿ ಭಾವಲಿಂಗಾರ್ಪಿತವಾಗುತ್ತವೆ. ಇದು ಅನಾದಿ ಜಂಗಮ ಸ್ವರೂಪವು. ಕಡೆಗೆ ಉಳಿಯುವ ಸತ್ಯೋದಕವು ನಿಃಕಲ ಪರತತ್ವಕ್ಕೆ ಸಮರ್ಪಣೆಯಾಗುತ್ತದೆ. ಇದು ಅನಾದಿ ಶರಣ ಪ್ರಸನ್ನಮೂರ್ತಿಯು"[11]

ಷಡ್ವಿಧ ವ್ರತಗಳಲ್ಲಿ ಕೊನೆಯದು, ಭಕ್ತಿ, ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಸುಜ್ಞಾನ, ಸಮರಸಗಳೆಂದು ಆರು ವಿಧವಾದ ಭಕ್ತಿಗಳು ಪ್ರಸಿದ್ಧವಿವೆ. ಚನ್ನಬಸವಣ್ಣ ತನ್ನ ವಚನವೊಂದರಲ್ಲಿ[12] "ನಂಬುಗೆಗೆ ಇಂಬಾಗದೆ ನೈಷ್ಠೆ ನೆಲೆಗೊಳ್ಳದು; ನೈಷ್ಠೆ ನೆಲೆಗೊಳ್ಳದೆ ಎಚ್ಚರವಚ್ಚೊತ್ತದು ; ಎಚ್ಚರವಿಲ್ಲದೆ ಅನುಭವವು ಮನಂಗೊಳ್ಳದು; ಅನುಭವವಿಲ್ಲದೆ ಆನಂದವು ತಲೆದೋಱದು ; ಆನಂದವಿಲ್ಲದೆ ಶಿವಲಿಂಗದಲ್ಲಿ ಸಮರಸವಾಗದು. ಇಂತೀ ಆಱು ತೆಱನಾದ ಭಕ್ತಿಯ ಗೊತ್ತನಱಿದಡೆ ಭಕ್ತನೆಂಬೆನು, ಮಹೇಶ್ವರನೆಂಬೆನು ; ಇಲ್ಲದಿರ್ದಡೆ ಶುದ್ಧ ಭವಿಯೆಂಬೆನು..."

ಎಂದಿರುವನು. ಅವನೇ ಮತ್ತೊಂದು ವಚನದಲ್ಲಿ[13] "ಆತ್ಮಾಂಗದಲ್ಲಿ ಸದ್ಭಾವಹಸ್ತದಿಂದ ಎಲ್ಲಾ ಇಂದ್ರಿಯಂಗಳ ಪರಿಣಾಮವನು ಸಮರಸಭಕ್ತಿಯಿಂದ ಮಹಾಲಿಂಗಕ್ಕರ್ಪಿಸುವಾತನೆ ಐಕ್ಯ. ವ್ಯೋಮಾಂಗದಲ್ಲಿ ಸುಜ್ಞಾನ ಹಸ್ತದಿಂದ ಸುಶಬ್ದದ್ರವ್ಯವನು ಆನಂದ ಭಕ್ತಿಯಿಂದ ಪ್ರಸಾದಲಿಂಗಕ್ಕರ್ಪಿಸುವಾತನೆ ಶರಣ. ಅನಲಾಂಗದಲ್ಲಿ ಮನೋಹಸ್ತದಿಂದ ಸುಸ್ಪರ್ಶನದ್ರವ್ಯವನು ಅನುಭಾವ ಭಕ್ತಿಯಿಂದ ಜಂಗಮಲಿಂಗಕ್ಕರ್ಪಿಸುವಾತನೆ ಪ್ರಾಣಲಿಂಗಿ. ಅನಲಾಂಗದಲ್ಲಿ ನಿರಹಂಕಾರ ಹಸ್ತದಿಂದ ಸುರೂಪು ದ್ರವ್ಯವನು ಅವಧಾನ ಭಕ್ತಿಯಿಂದ ಶಿವಲಿಂಗಕ್ಕರ್ಪಿಸುವಾತನೆ ಪ್ರಸಾದಿ. ಜಲಾಂಗದಲ್ಲಿ ಸುಬುದ್ಧಿ ಹಸ್ತದಿಂದ ಸುರಸದ್ರವ್ಯವನು ನೈಷ್ಠಿಕಾಭಕ್ತಿಯಿಂದ ಗುರುಲಿಂಗಕ್ಕರ್ಪಿಸುವಾತನೆ ಮಾಹೇಶ್ವರ. ಭೂಮ್ಯಂಗದಲ್ಲಿ ಸುಚಿತ್ತಹಸ್ತದಿಂದ ಸುಗಂಧದ್ರವ್ಯವನು ಸದ್ಭಕ್ತಿಯಿಂದಾಚಾರಲಿಂಗಕ್ಕರ್ಪಿಸುವಾತನೆ ಭಕ್ತ" ಎಂದಿರುವನು.

ಷಟ್ಸ್ಥಲದ ಪ್ರಾಣಲಿಂಗಿ ಅವಸ್ಥೆಯಲ್ಲಿನ ಶಿವಯೋಗಕ್ಕೆ ಸಂಬಂಧಿಸಿದ ವಿವರಗಳನ್ನು ಸೂಕ್ಷ್ಮವಾಗಿ ಕೊಂಡಗುಳಿ ಕೇಶಿರಾಜನು 'ಶೀಲಮಹತ್ವದ ಕಂದ'ದಲ್ಲಿ ಹೇಳಿರುವನು (ಪ. 94–97). ವ್ಯೋಮಚಕ್ರದಲ್ಲಿನ ವಸ್ತು ಪರಬ್ರಹ್ಮನಾದ ಸುಧಾಮಯ ಲಿಂಗವನ್ನು ಸ್ವಸ್ಥಾನದಿಂದ ಭಾವಿಸಿ, ಸ್ವಸ್ಥಿರದ ವಿವೇಕಬುದ್ಧಿಯಿಂದ ತಿಳಿಯುವುದು (ಪ. 94). ಮೂಲಚಿತ್ತು ಅಥವಾ ಜ್ಞಾನಚಿತ್ತು ಓಂಕಾರದ ಮೂಲಕ ಇಡೀ ಬ್ರಹ್ಮಾಂಡವನ್ನು ವ್ಯಾಪಿಸಿರುತ್ತದೆ. ಈ ಮೂಲಚಿತ್ತು ಅತ್ಯಂತ ಪ್ರಕಾಶಮಾನವಾದದ್ದು, ಆನಂದಮಯವಾದದ್ದು, ಜ್ಞಾನಮಯವಾದದ್ದು. ಇದನ್ನೇ ಪ. 95ರಲ್ಲೂ ಹೇಳಿದಂತಿದೆ. ಹದಿನಾರು ದಳಗಳುಳ್ಳ ವಿಶುದ್ಧಿ ಚಕ್ರದಲ್ಲಿಯ ಲಿಂಗಕ್ಕೆ ಷೋಡಶಕಳಾಲಿಂಗವೆಂದು ಕರೆಯುವರು. ಇದನ್ನೇ ಪ. 96ರಲ್ಲಿ ಹೇಳಲಾಗಿದೆ. ಚಿದ್ಘನ ಲಿಂಗಕ್ಕೆ ಚಿದ್ಘನವು ಆಕಾಶ ; ಚಿಚ್ಚಕ್ಷು, ಚಿತ್ಪ್ರಾಣ, ಚಿದ್ಘನವು ಅಂಗವಾಗಿರುವುದು. ಚಿದ್ಘನ ಲೋಲನು ಚಿದ್ಘನ ಶೀಲದಲ್ಲಿ ಇರುವನು (ಪ. 97) – ಹೀಗೆ ಇಲ್ಲಿ ಯೌಗಿಕಾನುಭವಗಳು ಸೂಕ್ಷ್ಮ ವಿವರಣೆ ಪಡೆದುಕೊಂಡಿವೆ.

'ಕಾಯಕ' ವೀರಶೈವಧರ್ಮದ ವಿಶಿಷ್ಟ ಪಾರಿಭಾಷಿಕ ಪದ. ಇದನ್ನು ಮೊದಲಿಗೆ ಬಳಸಿ, ಅದರ ಅಂತಸ್ಥವನ್ನು ಮೊದಲಿಗೆ ತಿಳಿಸಿ, ಮುಂದಣವರಿಗೆ ಸ್ಫೂರ್ತಿ ನೀಡಿದವನು ಕೊಂಡಗುಳಿ ಕೇಶಿರಾಜ. ಅವನ ಪ್ರಕಾರ ಯಾವುದೇ ಕೆಲಸ (=ವೃತ್ತಿ) ಶಿವಾನುಗ್ರಹವೆಂದು ಭಾವಿಸಿ, ಶಿವನ ಸೇವೆಯೆಂದೇ ನಂಬಿ ಮಾಡುವುದು 'ಕಾಯಕ' (ಪ. 98). ಕೊನೆಯದಾಗಿ, ಕೊಂಡಗುಳಿ ಕೇಶಿರಾಜ ನಿಡುಬಾಳಿನಲ್ಲಿ ಕಂಡುಕೊಂಡ ಪರಮ ಸತ್ಯಗಳಿವು : ಶಿವಭಕ್ತಿಯೇ ಭಕ್ತರಿಗೆ ಮೂಲಧನ ; ಶಿವಭಕ್ತಿಯೇ ಭಕ್ತನಿಗೆ ಕುಲವು ; ಶಿವಭಕ್ತಿಯೇ ಭಕ್ತನಿಗೆ ಬಲವು ; ಶಿವಭಕ್ತಿಯೇ ಭಕ್ತನಿಗೆ ನೆಲವು–ಫಲವು; ಶಿವನೇ ಶಿವಭಕ್ತನಿಗೆ ಸಿರಿಯು, ಭಂಡಾರವು (ಪ. ೯೯).

ಕೊಂಡಗುಳಿ ಕೇಶಿರಾಜನ 'ಶೀಲಮಹತ್ವದ ಕಂದ'ದಲ್ಲಿ ಬರುವ 64 ಶೀಲಗಳನ್ನು ಆಧರಿಸಿ ನಾವು ಬಸವಪೂರ್ವದ ವೀರಶೈವ ಸಮಾಜದ ಆಚಾರ ಸಂಹಿತೆಯನ್ನು ಹೀಗೆ ರೂಪಿಸಬಹುದು :

ವೀರಶೈವನು ತಾನು ವಾಸಿಸುವ ಮನೆ, ಸಾಕುವ ಪಶು, ಉಪಯೋಗಿಸುವ ವಸ್ತುಗಳು–ಹೀಗೆ ಎಲ್ಲದಕ್ಕೂ ಶಿವಮುದ್ರೆ ಹಾಕುತ್ತಿದ್ದನು. ತನಗೊಂದು ಶೀಲ ತನ್ನ ಮಡದಿಗೊಂದು ಶೀಲವೆನ್ನದೆ ಸಮಶೀಲವುಳ್ಳವರಾಗಿ ಏಕಮನಸ್ಕರಾಗಿ ನೆಳಲಿನಂತೆ ದಂಪತಿಗಳು ಪರಸ್ಪರ ಅರಿತು ನಡೆಯುವವರಾಗಿದ್ದರು. ತನ್ನ ಪತ್ನಿ ತನ್ನ ಅರ್ಧಾಂಗಿಯಾಗಿರುವುದರಿಂದ ತನಗೊಂದು ನೀತಿ ತನ್ನ ಪತ್ನಿಗೊಂದು ನೀತಿ ಎನ್ನದೆ, ಆಕೆ ರಜಸ್ವಲೆಯಾಗಿದ್ದರೂ ಮೈಲಿಗೆ ಎಂದು ಆವಳನ್ನು ದೂರವಿರಿಸದೆ ನಿತ್ಯದಂತೆ ಪತಿಯು ಆವಳನ್ನು ನಡೆಸಿಕೊಳ್ಳುತ್ತಿದ್ದನು. ಪತಿಯು ಏನೇ ವಿಚಾರಮಾಡಿದರೂ, ಏನೇ ಮಾಡಿದರೂ ತಾನೇನೂ ಅನ್ನದೆ ಸುಖದುಃಖಗಳನ್ನು ಸಮಾನವಾಗಿ ಸ್ವೀಕರಿಸಿ, ಗಂಡನಿಗೆ ಅನುಕೂಲೆಯಾಗಿ ಪತ್ನಿ ವರ್ತಿಸುತ್ತಿದ್ದಳು. ಭಕ್ತಿಯ ಮರ್ಮವನ್ನರಿತು ನಿರ್ಮಲನೂ ನಿಶ್ಚಿಂತನೂ ಆಗಿ ಕರ್ಮಪ್ರಧಾನವಾದ ಪೂಜೆಗಳನ್ನು ವರ್ಜಿಸಿ ಧರ್ಮಾಚಾರದಲ್ಲಿ ನಡೆಯುತ್ತಿದ್ದರು. ತನ್ನ ಪತ್ನಿ ಗರ್ಭವತಿಯಾಗಿರಲು ತನಗಿಂತ ಉತ್ತಮರೂ ಶೀಲಸಂಪನ್ನರೂ ವೇದಾಧ್ಯಯನ ಮಾಡಿರುವವರೂ ಆದವರಿಂದ ಭಸಿತವಿಡಿಸಿ ಲಿಂಗಧಾರಣೆ ಮಾಡಿಸುವನು. ಜಂಗಮವು ಶಿವನಿಗಿಂತ ಅಧಿಕವಾದ್ದರಿಂದ ಜಂಗಮದ ಪಾದತೀರ್ಥವನ್ನು ಲಿಂಗಮಜ್ಜನಕ್ಕೆ ಬಳಸಿ, ಜಂಗಮದ ಪ್ರಸಾದವನ್ನು ಲಿಂಗಕ್ಕೆ ಅರ್ಪಿಸಿ ಸ್ವೀಕರಿಸುವನು. ಗುರು ಲಿಂಗ ಜಂಗಮರು ಒಬ್ಬನೇ ಆದ ಪರಮಾತ್ಮನ ತ್ರಿವಿಧ ಮೂರ್ತಿಗಳು. ಲಿಂಗವೇ ಜಂಗಮವೆಂದು ಬಲವಾಗಿ ನಂಬುವನು. ಬಾವಿಯ ನೀರನ್ನು ತುಂಬಿಡಲಾಗಿರುವ ಹೊಸ ಪಾತ್ರೆಗೆ ವಸ್ತ್ರವನ್ನು ಕವಿಸಿ, ಮಂತ್ರದಿಂದ ಅದನ್ನು ಶುದ್ಧೀಕರಿಸಿ, ಅನಂತರ ಶಿವನಿಗೆ ಎಡೆಮಾಡಲು ಅಡಿಗೆಗೆ ಆ ನೀರನ್ನು ಬಳಸುವನು. ಶಿವನಿಗೆ ಹಸುವಿನ ಹಾಲಲ್ಲದೆ ಅನ್ಯಪ್ರಾಣಿಗಳ ಹಾಲನ್ನು ಅರ್ಪಿಸಬಾರದು. ಎಮ್ಮೆಯ ಹಾಲನ್ನು ಶಿವನಿಗೆ ಅರ್ಪಿಸಿದರೆ ಕೇಡೆಂದು ಬಗೆದು ಅದನ್ನು ಅರ್ಪಿಸದಿರುವನು. ಶಿವಭಕ್ತನ ಕೈಯಲ್ಲಿ ಬಟ್ಟೆ, ಪಾತ್ರೆ ಹಾಗೂ ಮನೆಯನ್ನು ಶುಚಿಮಾಡಿಸುವ, ಶಿವಭಕ್ತನಿಂದಲೇ ಕೇಶಚ್ಛೇದನ ಮಾಡಿಸುವ ನಿಯಮವುಳ್ಳವನು.

ಲಿಂಗಾಯತ ಧರ್ಮಿಯು ತನ್ನ ಹಸು ಮತ್ತು ಕರುವಿನ ಮೇಲೆ ಲಕ್ಷಣವಾಗಿ ಲಿಂಗಮುದ್ರೆಯನ್ನು ಒತ್ತುವನು. ಅವುಗಳಿಗೆ ಭಕ್ತನ ಕೈಯಿಂದಲೇ ಹುಲ್ಲನ್ನೂ, ನೀರನ್ನೂ, ಉಣಿಸನ್ನೂ ಹಾಕಿಸಿ ಭಕ್ತನಿಂದಲೇ ಅವುಗಳ ಆರೈಕೆ ಮಾಡಿಸುವನು. ಬಗೆ ಬಗೆಯ ಪ್ರಾಣಿಗಳು ಹರಿವ ನೀರಿನಲ್ಲಿ ವಾಸಿಸುವುದರಿಂದ, ನಾನಾ ಬಗೆಯ ಜನರು ಸಮುದ್ರದ ನೀರನ್ನು ಕಟ್ಟಿ ಕಟ್ಟಿ ಉಪ್ಪನ್ನು ತಯಾರಿಸುವುದರಿಂದ ಅದನ್ನು

ಸ್ವೀಕರಿಸುವುದು ದೋಷವೆಂದು ಹೇಳುವರಾದ್ದರಿಂದ ಉಪ್ಪನ್ನು ವರ್ಜಿಸುವನು. ತನ್ನ ಮನೆಯ ಹಸುವಿನ ಸೆಗಣಿಯಿಂದ ಮನೆಯನ್ನು ಸಾರಿಸುವನು. ಸೆಗಣಿಯನ್ನು ಒಣಗಿಸಿ ಸುಟ್ಟು ಅದರಿಂದ ಬಂದ ಭಸ್ಮವನ್ನು ಧರಿಸುವನು. ಪ್ರಾಣಿಗಳ ನರ, ಚರ್ಮಗಳನ್ನು ಮುಟ್ಟದೆ ಶಿವಭಕ್ತರು ನೂತ ನೂಲಿನಿಂದ ಸಿದ್ಧವಾದ ವಸ್ತ್ರವನ್ನು ಧರಿಸುವನು. ತನ್ನ ಮನೆಗೆ ಬೇಕಾದ ಪಾತ್ರೆಯನ್ನು ತನ್ನ ಮನೆಯಲ್ಲಿಯೇ ಸಿದ್ಧ ಮಾಡಿ ಲಿಂಗಮುದ್ರೆಯನ್ನು ಅದಕ್ಕೆ ಒತ್ತುವನು, ನೀರುತುಂಬಿದ ಪಾತ್ರೆಯ ಮೇಲೆ ವಸ್ತ್ರವನ್ನು ಹೊದಿಸುವನು. ಮೈಮೇಲಿನ ಹಾಗೂ ಇಷ್ಟಲಿಂಗದ ಮೇಲಿನ ವಸ್ತ್ರವನ್ನು ಕಳೆದು, ತುಂಬಿದ ಭಾವಿಯ ನೀರಿನಲ್ಲಿ ಅವನ್ನು ತೊಳೆಯುವನು. ಪ್ರಾಣಿಗಳ ಮಾಂಸ ಶಿವನಿಗೆ ಸಲ್ಲದು. ನಿರ್ಮಲವಲ್ಲದ ಚರ್ಮದ ಪಾದರಕ್ಷೆಯನ್ನು ಶಿವನ ಭಕ್ತರು ಧರಿಸಬಾರದ ಕಾರಣ ತೊಡದಿರುವನು. ಚೆನ್ನಾಗಿ ಬೆಳೆದ ತಮ್ಮ ತೋಟಕ್ಕೆ ಭವಿಯದೃಷ್ಟಿ ತಾಗದ ರೀತಿಯಲ್ಲಿ ಮರೆಮಾಡಿ, ಭಾವಿಯ ನೀರನ್ನು ಶಿವನ ಸೊಮ್ಮೆಂದು ಭಾವಿಸಿ ಹಾಯಿಸುವನು ಭಕ್ತರಿರುವ ಗ್ರಾಮದಲ್ಲಿ ವಾಸವಿದ್ದು, ಅವರ ಭೂಮಿಯನ್ನು ಮಾತ್ರ ಕ್ರಯಕ್ಕೆ ಪಡೆದು ಅದಕ್ಕೆ ಲಿಂಗಮುದ್ರೆಯ ಗಡಿ ಕಲ್ಲನ್ನು ಹಾಕಿಸುವನು. ಲಿಂಗದ ಮುದ್ರೆಯನ್ನು ಬಸವನಿಗೆ, ಭಾವಿಗೆ, ಭೂಮಿಯ ಗಡಿಗೆ ಹಾಕಿಸುವನು. ಚರ್ಮದ ವಸ್ತುಗಳನ್ನು ಅಂಗೀಕರಿಸದೆ ವರ್ಜಿಸುವನು. ಗುರುಲಿಂಗ ಜಂಗಮವನ್ನು ಶಿವನೆಂದೇ ಭಾವಿಸಿ, ಅವರ ಅನುಗ್ರಹವನ್ನು ಪಡೆದು, ಅವರ ಮಾತು ಶಿವವಾಕ್ಯವೆಂದೇ ಸ್ವೀಕರಿಸಿ ಇರುವನು. ಭವಿಯೊಡನೆ ಕೊಳು ಕೊಡೆ ವ್ಯವಹಾರ ಮಾಡುವುದಿಲ್ಲ. ಭವಿಯೊಡನೆ ನಂಟುತನ ಮಾಡುವುದಿಲ್ಲ. ಭವಿಯ ಕೈಯಿಂದ ತಂದ ಪದಾರ್ಥ ಶಿವಭಕ್ತರಿಗೆ ಸಲ್ಲವು[14] ಭವಿಯು ಮುಟ್ಟಿದ್ದೆಲ್ಲ ಮೈಲಿಗೆ. ಹೀಗೆ ಭವಿಯನ್ನು ಲಿಂಗವಂತನು ಬಿಟ್ಟಿರುವನು. ಭವಿ ಶಬ್ದ, ಭವಿಯ ಹೊಗಳಿಕೆ, ಭವಿದೈವ, ಭವಿಯ ಸ್ಪರ್ಶ ಇವೆಲ್ಲ ವರ್ಜ್ಯ, ಭವಿಯ ಸಂಪರ್ಕ ಪಾಪವೆಂದು ಭಾವಿಸುವನು. ಭವಿಯ ನೆರೆ, ಭವಿಯ ಮನೆ, ಭವಿಯ ಬೆಳಸು, ಭವಿಯ ಹೊಗಳಿಕೆ, ಭವಿಯ ನೋಟ, ಭವಿಯೊಡನೆ ಕೂಟ ಸಲ್ಲದೆಂದು ಬಿಡುವನು.

ಶಿವನ ಭಕ್ತನು ಶಿವನೇ ಘನವೆಂದು, ಶಿವಮಂತ್ರ-ಶಿವಾನುಭವವೇ ಘನವೆಂದು ಶಾಸ್ತ್ರಮುಖದಿಂದ ಮತ್ತು ಗುರುಮುಖದಿಂದ ಕೇಳಿ, ಪ್ರತ್ಯಕ್ಷ ಕಂಡು ಇತರರಿಗೆ ಅದನ್ನು ವಿವರಿಸುವನು. ಜಾತಿ ಸೂತಕ, ಜನನ ಸೂತಕ, ಪ್ರೇತ ಸೂತಕ, ಕಟ್ಟು ಕಟ್ಟಲೆಗಳ ಸೂತಕ-ಇವುಗಳನ್ನು ಬಿಟ್ಟು ಶಿವಪರವಾದ ಧೋರಣೆಯಿಂದಿರುವನು. ಪರಧನ, ಪರಸ್ತ್ರೀ, ಪರಗೃಹ, ಪರರಕ್ಷೇತ್ರ, ಅನ್ಯರ ಮನೆಯ ನೀರು - ಇವುಗಳು ಸ್ವೀಕಾರಾರ್ಹವಲ್ಲವೆಂದು ಸರಿದುಬಿಡುವನು. ಕಾಮಿಸಿ, ಕಲ್ಪಿಸಿ, ನೇಮಿಸಿ, ಭಾವಿಸಿ, ಭಜಿಯಿಸಿ ಇರುವ ಲಿಂಗದಲ್ಲಿ ತಾಮಸಭಾವನೆಯನ್ನು ಬಿಟ್ಟಿರುವನು. ಶಿವನ ಕುಲದಲ್ಲಿ ಬಂದವನೆ ಭಕ್ತನೆಂದೂ, ಶಿವಭಕ್ತರೆ ತನಗೆ ತಂದೆ-ತಾಯಿಗಳೆಂದೂ ಭಾವಿಸಿ ಶಿವ

ಭಕ್ತಿಮಾರ್ಗದಲ್ಲಿ ನಡೆಯುವನು. ಭಕ್ತರಲ್ಲಿ ಸರಸವಾಡದೆ, ಭಕ್ತರು ಅವಗುಣಗ ಳೆಂದು ದೋಷಾರೋಪ ಮಾಡದೆ, ಭಕ್ತರ ಮನಸ್ಸಿಗೆ ನೋವನ್ನುಂಟುಮಾಡದೆ ಭಕ್ತರ ಮನೆಮಗನಾಗಿರುವನು. ಭಕ್ತರೊಡನೆ ವಾದಿಸುವುದಿಲ್ಲ, ಭಕ್ತರನ್ನು ಬೇಡಿ ಕಾಡುವುದಿಲ್ಲ. ಭಕ್ತರು ತನಗೆ ಸಮನೆನ್ನುವುದಿಲ್ಲ, ಶುದ್ಧ ಭಕ್ತಿಯಲ್ಲಿ ಭೃತ್ಯಭಾವದಲ್ಲಿರುವನು. ನಾಯಿ, ಹಂದಿ, ಕೋಳಿ, ಬೆಕ್ಕು. ಇಲಿ-ಇವಾವ ಪ್ರಾಣಿಗಳೂ ತನ್ನ ಮನೆಯನ್ನು ಪ್ರವೇಶಿಸದಂತೆ ಎಚ್ಚರಿಕೆಯಿಂದಿರುವನು. ದೇಹ ವನ್ನು ರೋಗ ಆವರಿಸಿದರೆ ಅದರ ಪರಿಹಾರಕ್ಕೆ ನಾರು ಬೇರು ಮಣಿ ಮಂತ್ರಗಳನ್ನು ಬಳಸುವುದಿಲ್ಲ, ಅವನ್ನು ಮನಸಾ ನೆನೆಯುವುದಿಲ್ಲ. ವಾರ, ತಿಥಿ, ಲಗ್ನ. ಶುಭದಿನ, ತಾರಾಬಲ, ಚಂದ್ರಬಲ, ನವಗ್ರಹಬಲವನ್ನೂ, ಶುಭ ಅಶುಭ ಶಕುನವನ್ನೂ ನಿರೀಕ್ಷಿಸುವುದಿಲ್ಲ. ಶಿವರಾತ್ರಿ, ಸಂಕ್ರಾಂತಿ, ಮಂಗಳವಾರ, ಒಪ್ಪೊತ್ತು, ಉಪವಾಸ- ಇವು ಶಿವಪಥಕ್ಕೆ ಸಲ್ಲವು ಎಂದು ಬಗೆದು ಅವನ್ನು ಸಂಪೂರ್ಣವಾಗಿ ವರ್ಜಿಸುವನು. ಗುರು-ಲಿಂಗ-ಜಂಗಮಗಳಿಗೆ ಕ್ರಮವಾಗಿ ತನು-ಮನ-ಧನವನ್ನು ವಂಚನೆಯಿಲ್ಲದೆ ಶುದ್ಧ ಮನದಿಂದ ಅರ್ಪಿಸುವನು. ಪಾಪನಿವಾರಣೆಗಾಗಿ ತೀರ್ಥಕ್ಷೇತ್ರಗಳಿಗೆ ಹೋದದ್ದೇ ಆದರೆ ನರಕಕ್ಕೆ ತಾನೇ ಮುಂದಾಗಿ ಹೋದಂತೆ. ಆದಕಾರಣ ತೀರ್ಥ ಕ್ಷೇತ್ರಗಳಿಗೆ ಹೋಗಲಾರನು. ಯಾರಿಗೂ ಉಪದೇಶ ಕೊಡದೆ, ಪರಾತ್ಪರ ವಸ್ತು ವಿನಲ್ಲಿ ಮನಸ್ಸನ್ನು ನಿಲ್ಲಿಸುವನು. ಜಂಗಮ ಸೇವೆಯಲ್ಲಿ ಸ್ವಾರ್ಥ-ನಿಸ್ವಾರ್ಥ ಗಳೆರಡನ್ನೂ ಬಿಟ್ಟು, ಭಕ್ತನಾಗಿ ಸಹಜವೆನ್ನುವಂತೆ ಸೇವೆಯಲ್ಲಿ ನಿರತನಾಗುವನು. ತನ್ನ ಸಮಶೀಲದ ಒಡೆಯರು ಸಂತೋಷದಿಂದ ಪ್ರಸಾದ ಸ್ವಿಕರಿಸುತ್ತಿರುವಾಗ ಪ್ರಾಣಬಿಟ್ಟರೆ, ಅವರೊಡನೆ ತಾನೂ ಪ್ರಾಣ ಬಿಡಲು ಸನ್ನದ್ಧನಾಗುವನು.

ಲಿಂಗವಂತನು ಇತರರನ್ನು ಕಣ್ಣುಮುಚ್ಚಿ ಅನುಸರಿಸದೆ, ಮನಸ್ಸನ್ನು ಲೌಕಿಕದ ಆಕರ್ಷಣೆಗೆ ಒಳಗಾಗಿಸದೆ ತನು-ಮನದ ಆಸೆಯನ್ನೇ ಪ್ರಧಾನವಾಗಿಸಿ ಪೂರೈಸ ತೊಡಗದೆ ನೆನಹನ್ನು ನಿಸ್ಸಂಗಿಯಾಗಿಸಲು ಪ್ರಯತ್ನಿಸುವನು. ತನುವಿಗೆ ಹಾಗೂ ಮನಸ್ಸಿಗೆ ಪ್ರಾಣರೂಪವಾದ ಆಚಾರವು ಜಂಗಮವೆಂದು ಭಾವಿಸಿ 'ಅನುಭಾವ'ದಲ್ಲಿ ಲೀನನಾಗುವನು. ಕಾಲಕಲ್ಪಿತಗಳನ್ನು ಬಿಟ್ಟು, ಮುಖ್ಯವೆನ್ನಿಸಿರುವ ಪುಣ್ಯಪಾಪ ಗಳನ್ನು ನಿರಾಧಾರವೆಂದು ತಿರಸ್ಕರಿಸಿ ವೈಚಾರಿಕ ಪ್ರಜ್ಞೆಯನ್ನು ಬದುಕಿನಲ್ಲಿ ಅಳ ವಡಿಸಿಕೊಂಡಿರುವನು. ಜಿಹ್ವಾಚಾಪಲ್ಯವಿಲ್ಲದೆ, ನಾಲಗೆಯಲ್ಲಿ ಕೆಟ್ಟಮಾತೇನನ್ನೂ ನುಡಿಯದೆ, ಅನ್ಯರ ನಾಲಗೆ ನುಡಿದ ಕಾರ್ಯವನ್ನು ಮಾಡಲು ಹೊರಡದೆ ತನ್ನ ನಾಲಗೆಯನ್ನೇ ಶಿವನಿಗೆ ಮೀಸಲು ಮಾಡುವನು. ಭವಿಯ ಮಾತುಗಳೇನನ್ನೂ ಕೇಳನು. ಭವಿಯು ಹೇಳುವ ಕಾವ್ಯವನ್ನು ಆಲಿಸನು. ಭವಿಯ ಸಂಪರ್ಕ ಮಾಡ ದಿರುವುದರಿಂದ ಭವ ಘೋರದಲ್ಲಿ ಬೀಳದಿರುವನು. ಜಾಗ್ರತ್ ಸ್ವಪ್ನ ಸುಷುಪ್ತಿ ಯಲ್ಲಿ ಸದಾ ಶಿವಲಿಂಗವಲ್ಲದೆ ಅನ್ಯವನರಿಯನು. ಬೇರೆಡೆ ನೆನಹೂ ಇಲ್ಲದವನು.

ಉದಯಾಸ್ತಮಾನಗಳನ್ನು, ಚಂದ್ರಸೂರ್ಯರ ಬೆಳಗೆಲ್ಲವನ್ನು ಶಿವನ ಪ್ರಜ್ವಲಿಸುವ ಬೆಳಗಿನಲ್ಲಿ ಕಾಣುವನು. ತನ್ನ ಎಲ್ಲೆಯೊಳಗೆ ಶಿವನನ್ನು ಅತಿಶಯವಾಗಿ ಹಾಡಿ, ಪೂಜಿಸಿ, ಪರರ ಸೇವೆಯನ್ನು ಬಿಟ್ಟು ಇರುವನು. ಪಂಚೇಂದ್ರಿಯಗಳಲ್ಲಿ ಒಂದೊಂದೂ ತನ್ನತ್ತ ಸೆಳೆಯುತ್ತಿರಲು ಅವುಗಳಿಚ್ಛೆಗೆ ಒಳಗಾಗದೆ ಮನಸ್ಸನ್ನು ಶಿವನ ನೆನಹಿನಲ್ಲಿ ಸಂಧಿಸಿರುವನು. ಅರಿಷಡ್ವರ್ಗಗಳನ್ನ ತ್ಯಜಿಸಿ ಶಿವತತ್ವದಲ್ಲಿ ಮನಸ್ಸನ್ನು ಲಯಗೊಳಿಸಿರುವನು. ಕಸ್ತೂರಿ, ಕರ್ಪೂರ, ಪುಣಗು, ಜವಾದಿ, ಕುಂಕುಮ ಇವೇ ಮೊದಲಾದ ಹಚ್ಚಿಕೊಳ್ಳುವ ಸುಗಂಧದ್ರವ್ಯಗಳನ್ನು ಶಿವಧರ್ಮಿಗೆ ನಿಯಮಬಾಹಿರವೆಂದು ಬಿಟ್ಟು ಸ್ಥಿರಮನದಿಂದಿರುವನು. ಶಿವನ ಉರಿಗಣ್ಣಿಂದ ಹೊರಬಂದುದು, ಆಭರಣಗಳಲ್ಲೆಲ್ಲ ಮಿಗಿಲಾದುದು, ಪರಶಿವನೇ ಆಗಿರುವುದು ರುದ್ರಾಕ್ಷಿ—ಎಂಬ ಭಾವನೆಯಿಂದ ಸಂತಸಯುಕ್ತನಾಗಿ ಅದನ್ನು ಧರಿಸುವನು. ಎಲ್ಲರಲ್ಲೂ ಶಿವನಿರುವುದಿಲ್ಲ, ಸದ್ಭಕ್ತರಲ್ಲಿ ಇರುವನೆಂಬುದನ್ನು ಶಾಸ್ತ್ರಗಳ ಮೂಲಕ ತಿಳಿಸುವನು.

ಲಿಂಗವಂತನು ದಶವಿಧ ಪಾದೋದಕ, ಏಕಾದಶ ಪ್ರಸಾದ ಇವುಗಳ ಬಗೆಗೆ ಇತರರಿಗೆ ವಿವರಿಸುವನು. ಆಯುತ ಸ್ವಾಯತ ಹಾಗೂ ಸನ್ನಿಹಿತಗಳೆಂಬ ತ್ರಿವಿಧ ಗಳಲ್ಲಿ ವರ್ತಿಸಿ ಅವುಗಳಿಗೆ ವಶನಾಗಿರುವನು. ಪುರುಷಾರ್ಥಗಳನ್ನು ಆಶ್ರಯಿಸದೆ, ಕಾಮ್ಯಾದಿ ಫಲಪದಗಳನ್ನು ಬಯಸದೆ ಅಹಂಕಾರ ವರ್ಜಿತನಾಗಿ ಪರಮಾತ್ಮನಲ್ಲಿ ಮನಸ್ಸನ್ನು ನಿಲ್ಲಿಸುವನು. ಪಂಚೇಂದ್ರಿಯಗಳಿಗೆ ಮನಸ್ಸನ್ನು ಹರಿಯಬಿಡದೆ ಶಿವಲಿಂಗದಲ್ಲಿ ಮನಸ್ಸನ್ನು ನಿಲ್ಲಿಸುವನು. ಷಟ್‌ಸ್ಥಲಜ್ಞಾನಿಯಾಗಿ ಲಿಂಗಾಂಗ ಸಾಮರಸ್ಯವನ್ನು ಹೊಂದಿ ಸುಖಿಸುವನು. ಕಾಮಿಸುವುದು ಕಾಯಭೋಗ, ಕಾಮಿಸದಿರುವುದು ಲಿಂಗಭೋಗವೆಂದು ತಿಳಿದು ಕಾಮಿತ ಕಲ್ಪಿತಗಳನ್ನು ಬಿಟ್ಟು ಪ್ರೇಮದಿಂದಿರುವನು. ಮತಿ, ಶ್ರುತಿ, ಮನಃಪರಿಯಯ, ಅತಿಜ್ಯೋತಿ ಹಾಗೂ ಕೇವಲ ಎಂಬ ಐದು ಜ್ಞಾನಗಳನ್ನು ಚೆನ್ನಾಗಿ ತಿಳಿದು ಕ್ಷೇಮದಿಂದಿರುವನು. ತ್ರಿಕಾಲಗಳಲ್ಲೂ ಶಿವನನ್ನು ಪ್ರೀತಿಯಿಂದ ಅರ್ಚಿಸುವನು. ಪರಬ್ರಹ್ಮವಾದ ಲಿಂಗ ವನ್ನು ಆಶ್ರಯಿಸಿ ಲಿಂಗ ಪ್ರಸಾದವಲ್ಲದೆ ಮತ್ತೇನನ್ನೂ ಹೊಂದದೆ ನಾನು ನೀನೆಂಬ ದ್ವೈತಭಾವವನ್ನು ನೀಗಿ ಅದ್ವೈತ ಸ್ಥಿತಿಯಲ್ಲಿ ನಿಲ್ಲುವನು. ಜಪತಪಗಳೇನನ್ನೂ ಮಾಡದೆ ಲಿಂಗಾಂಗ ಸಾಮರಸ್ಯದ ಅಪರಿಮಿತವಾದ ಆನಂದ ಸ್ಥಿತಿಯೊಳಗೆ ನಿಂತು ಶಿವನೊಳಗೆ ಮನಸ್ಸನ್ನು ಬೆರೆಯಿಸುವನು.

ಮೇಲೆ ತಿಳಿಸಲಾದ ಆಚಾರ ಸಂಹಿತೆಗಳೆಲ್ಲಾ ಬಸವಪೂರ್ವದ ವೀರಶೈವ ಸಾಮಾಜಿಕ ಜೀವನವನ್ನು ಪ್ರತಿನಿಧಿಸುತ್ತದೆಂದು ಭಾವಿಸಿದರೆ ತಪ್ಪಾಗುತ್ತದೆ. ಕೊಂಡಗುಳಿ ಕೇಶಿರಾಜ ನಿರೂಪಿಸುವ 64 ಶೀಲಗಳ ಮೂಲಕ ನಾವು ಅಂದಿನ ಸಾಮಾಜಿಕ ಜೀವನ ವಿಧಾನವನ್ನು ತಿಳಿಯಲು ಪ್ರಯತ್ನಿಸುತ್ತಿದ್ದೇವೆ. ಕೇಶಿರಾಜ

ಹೇಳುವ 64 ಶೀಲಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಇವುಗಳಲ್ಲಿ ಅಂದು ಪ್ರಚಲಿತವಿದ್ದ ಪ್ರದುವಾದ (General) ಸಾಮಾಜಿಕ ಆಚರಣೆ ಹಾಗೂ ವೈಯಕ್ತಿಕ ನಂಬಿಕೆಗಳಿಗೆ ಬದ್ಧವಾದ ಆಚರಣೆ–ಹೀಗೆ ಎರಡು ರೂಪಗಳನ್ನು ಕಾಣುತ್ತೇವೆ. ಮೊದಲನೆಯದು, ಆ ಕಾಲದ ವೀರಶೈವ ಸಮಾಜದ ಸಾರ್ವತ್ರಿಕವಾದ ಆಚರಣೆಗೆ ಹಾಗೂ ಬಸವಾದಿ ಶರಣರು ತಮ್ಮ ವಚನಗಳಲ್ಲಿ ಪ್ರತಿಪಾದಿಸಿರುವ ಸೋಪಜ್ಞತೆಯುಳ್ಳ ಜೀವನ ಮೌಲ್ಯಗಳಿಗೆ ತೀರ ಹತ್ತಿರವಾದುದು. ಎರಡನೆಯದು, ಕೊಂಡಗುಳಿ ಕೇಶಿರಾಜನ ಖಾಸಗಿಯಾದ ನಂಬಿಕೆಗಳು. ಇವು ಮೊದಲನೆಯ ರೂಪದಿಂದ ಭಿನ್ನವಾಗಿವೆ. ಕೊಂಡಗುಳಿ ಕೇಶಿರಾಜನದು ಬಸವಾದಿ ಶರಣರ 'ಧರ್ಮ' ಅಥವಾ 'ಜಾತಿ' ಗಿಂತ ಸ್ವಲ್ಪ ಭಿನ್ನವಾದುದು.

ಅರವತ್ತುನಾಲ್ಕು ಶೀಲವನ್ನು ತಮ್ಮ ಬದುಕಿನಲ್ಲಿ ಕಟ್ಟುನಿಟ್ಟಾಗಿ ಆಚರಣೆಗೆ ತಂದವರು ತಮ್ಮನ್ನು 'ಶೀಲವಂತ'ರೆಂದು ಕರೆದುಕೊಂಡರೋ, ಇಲ್ಲವೇ ಬಿಗಿಯಾದ ಆಚರಣೆಗಳನ್ನು ತಮ್ಮ ಬಾಳಿನಲ್ಲಿ ಅಳವಡಿಸಿಕೊಂಡು ಸಮಾಜದ ಕಣ್ಣಿಗೆ 'ಮಡಿವಂತ'ರೆಂದು ಕಾಣಿಸಿದ ಇವರನ್ನು ಇತರರು 'ಶೀಲವಂತ'ರೆಂದು ಕರೆದರೋ ತಿಳಿಯದು. ಬಸವನ ಕಾಲಕ್ಕೆ ಶೀಲವಂತರು ಹಾಗೂ ಅವರ ಆಚರಣೆಗಳು ಪರಿಚಿತವಿದ್ದಿರಬೇಕು. ಶೀಲವಂತರ ಉಲ್ಲೇಖ ಪ್ರಭು, ಚನ್ನಬಸವಣ್ಣ, ಸಕಳೇಶ ಮಾದರಸ, ಅಂಬಿಗರ ಚೌಡಯ್ಯ (ವ. 221) ಮೊದಲಾದ ವಚನಕಾರರ ವಚನಗಳಲ್ಲಿ ಕಾಣಬರುತ್ತದೆ. ಚೆನ್ನಬಸವಣ್ಣನ ಪ್ರಕಾರ ಬಸವಣ್ಣನು 'ಅಱುವತ್ತುನಾಲ್ಕು ಶೀಲದಲ್ಲಿ ನಡೆದು ತೋಱಿದ'ವನು (ಚೆಬವ 460). ಭೀಮಕವಿಯು 'ಬಸವಪುರಾಣ'ದಲ್ಲಿ ಬಸವನು ತಾನು ಭೂಲೋಕಕ್ಕೆ ಬಂದ ಉದ್ದೇಶವನ್ನು ಯಶಸ್ವಿಗೊಳಿಸಲು ಕೆಲವು ಭಾಷೆಗಳನ್ನು ಕೈಗೊಂಡನೆಂದು ಹೇಳಿ, ಬಸವಣ್ಣನ ಮೂವತ್ತಮೂರು ಭಾಷೆಗಳನ್ನು ಹೆಸರಿಸಲಾಗಿದೆ (ನೋಡಿ: ಬಸಪು ಸಂ. 6 ಪ. 1–7). ಕೊಂಡಗುಳಿ ಕೇಶಿರಾಜ ಹೇಳುವ ಅರುವತ್ತುನಾಲ್ಕು ಶೀಲಗಳಿಗೂ ಬಸವಪುರಾಣದಲ್ಲಿ ಹೇಳಲಾಗಿರುವ ಬಸವನ ಭಾಷೆಗಳಿಗೂ ಹೋಲಿಸಿ ನೋಡಿದಾಗ ಹೆಚ್ಚಿನ ವ್ಯತ್ಯಾಸ ತೋರುತ್ತಿಲ್ಲ. ಬಸವಣ್ಣನ ವಚನಗಳಲ್ಲಿ ಒಂದೇ ವಚನಗಳಲ್ಲಿ ಹಲವಾರು 'ಭಾಷೆ' ಅಥವಾ 'ಶೀಲ'ಗಳೂ, ಮತ್ತೆ ಕೆಲವು ವಚನಗಳಲ್ಲಿ ಬಿಡಿಬಿಡಿಯಾಗಿ ಈ 'ಭಾಷೆ' ಅಥವಾ 'ಶೀಲ'ಗಳೂ ಬಂದಿವೆ. ಪ್ರಯತ್ನಪಟ್ಟರೆ ಬಸವಣ್ಣನ ವಚನಗಳಲ್ಲಿ ಈ 64 ಶೀಲಗಳನ್ನು ಗುರುತುಮಾಡಿ ಹೇಳಬಹುದು. ಬಸವಣ್ಣನಂತೆಯೇ ಚೆನ್ನಬಸವಣ್ಣ, ಸಿದ್ಧರಾಮ ಮೊದಲಾದ ವಚನಕಾರರೂ ತಮ್ಮ ವಚನಗಳಲ್ಲಿ 'ಶೀಲ'ಗಳ ಬಗೆಗೆ ಹೇಳಿರುವರು.

---

* ಈಗ ವೀರಶೈವ ಜನಾಂಗದಲ್ಲಿ 'ಶೀಲವಂತ'ರೆಂಬ ಉಪಪಂಗಡವೇ ಇದೆ. ವೀರಶೈವ ಜನಾಂಗದಲ್ಲಿ ತಮ್ಮದು ಶ್ರೇಷ್ಠ ಪಂಗಡ ; ತಾವೇ ನಿಜವಾದ ವೀರಶೈವರು ; ತಮ್ಮ ಆಚರಣೆಗಳು ಪವಿತ್ರವಾದುವು ಎಂಬ ನಂಬುಗೆಯನ್ನು ಅವರು ಹೊಂದಿರುವರು.

ವಚನಕಾರರ ವಚನಗಳಲ್ಲಿ ಶೀಲವಂತರ ಬಗೆಗೆ ಆಡಿರುವ ಮಾತುಗಳನ್ನು ಗಮನಿಸಿದಾಗ ಶೀಲವಂತರ ಕಟ್ಟುನಿಟ್ಟಿನ ಆಚರಣೆಗಳ ಬಗೆಗೆ, ನುಡಿದಂತೆ ನಡೆಯದ ಶೀಲವಂತರ ಬಗೆಗೆ ವಿರೋಧದ ದನಿ ಕೇಳಬರುತ್ತದೆ. ಭಾಷೆ ತೊಡುವ, ವ್ರತ–ನೇಮಗಳನ್ನು ಬಿಗಿಯಾಗಿ ದೈನಂದಿನ ಜೀವನದಲ್ಲಿ ಅನುಸರಿಸುವ ಶೀಲವಂತರು ಪ್ರಭುವಿನ ಕಟುಟೀಕೆಗೆ ಒಳಗಾಗಿರುವರು (ನೋಡಿ : ಅಪ್ರವ 326, 327–358) ಪ್ರಭುವಿನ ಪ್ರಕಾರ 'ಶೀಲವೆಂಬುದು ಸಂಕಲ್ಪ' (ಅಪ್ರವ 524) ; 'ಶೀಲವೆಂಬುದು ಸೂತಕ* (ಅಪ್ರವ 107). ಚೆನ್ನಬಸವಣ್ಣನ ವಚನಗಳಲ್ಲಿ ಶೀಲವಂತರ ಬಗೆಗಿನ ವಿರೋಧ ಇನ್ನಷ್ಟು ಕಟುವಾಗಿ ತೋರುತ್ತದೆ. ಚೆನ್ನಬಸವಣ್ಣ ಹಾಗೂ ಅಂಬಿಗರ ಚೌಡಯ್ಯ ತಮ್ಮ ಕಾಲದ ಶೀಲವಂತರು ಶೀಲ ಶೀಲ ಎಂದು ಹೇಳುತ್ತ ಆಚರಣೆಯಲ್ಲಿ 'ಪುರೋಹಿತ ವರ್ಗ'ದ ಮಡಿವಂತಿಕೆ ತಂದು, ಬಸವ ಹಾಗೂ ಅವನ ಸಮಕಾಲೀನ ಶರಣರ ಮೂಲಭೂತ ಧೋರಣೆಗಳಿಗೆ ವ್ಯತಿರಿಕ್ತವಾಗಿ ತಮ್ಮದೇ ಆದ ಒಂದು 'ವರ್ಗ' ನಿರ್ಮಿಸಹೊರಟುದನ್ನು ನೋಡಿ ನೊಂದು ಉಗ್ರವಾಗಿ ಅವರನ್ನು ಟೀಕಿಸಿದಂತಿದೆ. ಶ್ರೀಮಂತರ ಆಚರಣೆಗಳನ್ನೇ ಗಮನದಲ್ಲಿಟ್ಟುಕೊಂಡು ಚೆನ್ನಬಸವಣ್ಣ ಅವರನ್ನು ತೀವ್ರವಾಗಿ ವಿರೋಧಿಸುವನು :

"ನದಿ ಕೂಪ ತಟಾಕ ಜಲಾಶಯದಲ್ಲಿ ಅಗ್ಗಿಣಿಯ ತಂದು
ಮಜ್ಜನಕ್ಕೆ ನೀಡುವರೆಲ್ಲ ಶೀಲವಂತರೆ ?
ಪಾಕದಲ್ಲಿ ಪರಪಾಕ, ಭವಿಪಾಕ ಎಂಬವರೆಲ್ಲ ಶೀಲವಂತರೆ ?
ತಳಿಗೆ ಬಟ್ಟಲ ಪ್ರಗಾಳಿಸಿ ನೇಮವ ಮಾಡಿಕೊಂಬವರೆಲ್ಲ ಶೀಲವಂತರೆ ?
ಕಂಠಪಾವಡ, ಧೂಳಿಪಾವಡ, ಸರ್ವಾಂಗಪಾವಡವೆಂಬವರೆಲ್ಲ ಶೀಲವಂತರೆ ?
ಅದೇನು ಕಾರಣವೆಂದಡೆ :
ಅವರು "ಸಂಕಲ್ಪ ಚ ವಿಕಲ್ಪಂ ಚ......" ಎಂದುದಾಗಿ ಶುದ್ಧ ಭವಿಗಳು.
ಭವಿ ಎಂಬವನೆ ಶ್ವಪಚ ; ವ್ರತಸ್ಥನೆಂಬವನೆ ಸಮ್ಮಗಾಱ,
ಶೀಲವಿನ್ನಾವುದೆಂದಡೆ :
ಅಶನ ಅಱತು, ವ್ಯಸನ ನಿಂದು,
ವ್ಯಾಪ್ತಿಯಳಿದು, ಅಪ್ಪುಮದವೆಲ್ಲ ನಷ್ಟವಾದಲ್ಲದೆ,
ಕೂಡಲ ಚೆನ್ನ ಸಂಗಮ ದೇವರಲ್ಲಿ ಶೀಲವಿಲ್ಲ ಕಾಣಿರೋ ! (ಚೆಬವ, 518)

ಇದೇ ಧೋರಣೆ ಚೆನ್ನಬಸವಣ್ಣನ ಬೇರೆ ವಚನಗಳಲ್ಲಿ ಕಾಣಬಹುದಾಗಿದೆ (ನೋಡಿ : ಚೆಬವ 594 ; 792 ; 591 ; 593). ಚೆನ್ನಬಸವಣ್ಣ (ವ. 518 ರಲ್ಲಿ) ಹೇಳುವ 'ಕಂಠಪಾವಡ, ಧೂಳಿಪಾವಡ, ಸರ್ವಾಂಗಪಾವಡವೆಂಬವರೆಲ್ಲ

---

* ಚೆನ್ನಬಸವಣ್ಣನೂ ಇದೇ ಮಾತನ್ನು ಬಳಸಿರುವನು, ನೋಡಿ ಚೆಬವ. 1170 ; 'ಶೀಲವಂತನಱಿವು ಸೂತಕದಲ್ಲಿ ಹೋಯಿತ್ತು' (ಚೆಬವ. 1099)

ಶೀಲವಂತರೆ ?' ಎನ್ನುವ ಮಾತು ಅಲ್ಲಮಪ್ರಭುದೇವರ ವಚನದಲ್ಲೂ ಬರುತ್ತದೆ– ಇದೇ ಧೋರಣೆ ಚೆನ್ನಬಸವಣ್ಣನ ಬೇರೆ ವಚನಗಳಲ್ಲೂ ಕಾಣಬಹುದಾಗಿದೆ (ನೋಡಿ : ಚೆಬವ. 594 ; 192 ; 591; 593). ಚೆನ್ನಬಸವಣ್ಣ (ವ. 518 ರಲ್ಲಿ) ಹೇಳುವ 'ಕಂಠಪವಾಡ, ಧೂಳಿಪವಾಡ, ಸರ್ವಾಂಗ ಪಾವಡವೆಂಬವರೆಲ್ಲ ಶೀಲವಂತರೆ ?' ಎನ್ನುವ ಮಾತು ಅಲ್ಲಮ ಪ್ರಭುದೇವರ ವಚನದಲ್ಲೂ ಬರುತ್ತದೆ— ಚೆನ್ನಬಸವಣ್ಣನ ಮಾತಿಗಿಂತ ಇನ್ನಷ್ಟು ಮೊನಚಾಗಿ (ನೋಡಿ : ಅಪ್ರವ. 1035). ಅರಿಷಡ್ವರ್ಗಗಳಿಂದ ಮುಕ್ತರಾಗದೆ ಅವುಗಳ ಬಂಧಿಯಾದವರನ್ನು ಶೀಲವಂತರೆನ್ನುವುದಾದರೂ ಹೇಗೆ ? ಅರಿಷಡ್ವರ್ಗ ವಶರಾದ ಶೀಲವಂತರನ್ನು ಹಲವು ವಚನಗಳಲ್ಲಿ ಚೆನ್ನಬಸವಣ್ಣ ಕಡೆನುಡಿದಿರುವನು (ನೋಡಿ : ಚೆಬವ. 496 ; 592). ಶೀಲವಂತ ತನ್ನ ಮನೆ, ಒಲೆ, ಅಡಿಗೆಮಾಡುವ ಮಡಕೆ, ಕೆರೆ, ಬೆಳೆ ಇವುಗಳಿಗೆ 'ಶೀಲ'ದ ಕಟ್ಟು ಹಾಕುವನು, ಆದರೆ ಕಟ್ಟಿಗೆ ಒಳಪಡದ ಮನಸ್ಸನ್ನು ಬಿಗಿಹಿಡಿದು ನಿಲ್ಲಿಸಲಾರನು. ಇದೆಂತಹ ಶೀಲವೆಂದು ಚೆನ್ನಬಸವಣ್ಣ ವ್ಯಂಗ್ಯವಾಡುವನು :

"ಶೀಲ ಶೀಲವೆಂದೇನೋ ?
ಮಾಡಿದ ಮನೆ, ಹೂಡಿದ ಒಲೆ, ಅಟ್ಟುಂಬ ಮಡಕೆ, ಕಟ್ಟಿದ ಕೆರೆ, ಬಿತ್ತಿದ ಬೆಳೆ
ಇಂತಿವಕೆ ಶೀಲವಲ್ಲದೆ ತನ್ನ ಮನಕೆ ಶೀಲವಿಲ್ಲ.
ಶೀಲವದೆಂತೆಂದಡೆ :
ಲಿಂಗ ಬಂದು ಮನವನಿಂಬುಗೊಂಬುದೆ ಶೀಲ ;
ಜಂಗಮ ಬಂದು ಧನವನಿಂಬುಗೊಂಬುದೆ ಶೀಲ ;
ಪ್ರಸಾದ ಬಂದು ತನುವನಿಂಬುಗೊಂಬುದೆ ಶೀಲ.
ಇಂತಪ್ಪ ಶೀಲಕ್ಕೆ ನಮೋ ನಮೋ ಎಂಬೆ !
ಉಳಿದ ದುಃಶೀಲರನೆನಗೆ ತೋರದಿರು ಕೂಡಲ ಚೆನ್ನಸಂಗಮದೇವಾ !
(ಚೆಬವ. 589)

ಇದೇ ರೀತಿಯ ಧೋರಣೆ ಸಕಳೇಶ ಮಾದರಸರ ಕೆಳಗಿನ ವಚನದಲ್ಲೂ ಕಂಡು ಬರುತ್ತದೆ :

ಶೀಲ ಶೀಲವೆಂಬರು ಗರ್ಭೀಕೃತವಜ್ರಾಯದ ಉದ್ದೇಶಪ್ರಾಣಿಗಳು.
ಇಂತನಂತ ಶೀಲ ಹೂ ಭಾವಿ ಮಠಕ್ಕೆ ಸೀಮೆಯ ಮಾಡೂದು ಶೀಲವೆ?
ಮನಕ್ಕೆ ಸೀಮೆಯ ಮಾಡೂದೆ ಶೀಲವಲ್ಲದೆ?
ಹುಸಿಯ ಕಳೆವುದು ಶೀಲವಲ್ಲದೆ, ಭಕ್ತರ ಕಳೆವುದು ಶೀಲವೆ?
ಲಿಂಗ ಪ್ರಾಣವ ಮಾಡೂದು ಶೀಲವಲ್ಲದೆ, ಪ್ರಾಣಲಿಂಗವ ಮಾಡೂದು ಶೀಲವೆ?
ಇಂತೆಲ್ಲಾ ಶೀಲರು ದುಶ್ಶೀಲರು
ಸಕಳೇಶ್ವರದೇವಾ ನಾನೇಂಸೆಂದಜ್ರಾಯೆ ನೀನರಿಸಿದಂತಿರ್ಪೆ
(ಸವುವ- ೨ ವು 614, ವ.1734)

ಚೆನ್ನಬಸವಣ್ಣ ಹೇಳುವಂತೆ ಶೀಲ ಶೀಲ ಎಂದು ಹೇಳುವ ಶೀಲವಂತರು 'ಉದ್ದೇಶ ಪ್ರಾಣಿಗಳು.' ಅವರು ಅನಂತ ಶೀಲರು; ಅಱಿವಿನ ನಿರ್ಣಯವನಱಿಯರು; ಹೊಱಗನೆ ಬಳಸುವರು, ಒಳಗಣ ಶುದ್ಧಿಯನಱಿಯರು; ನೇಮ ಶೀಲವೆಂದು ಹೆಸರಿಡುವರು, ನಿರ್ಣಯವನಱಿಯರು (ಚೆಬವ. 849.)

ಜಾತಿಯ ಹೊಲೆ, ಜನನದ ಹೊಲೆಯ ಬಗೆಗೆ ವೈದಿಕ ಭಾವನೆ ಏನಿದ್ದಿತೋ ಅದಕ್ಕೆ ವಿರುದ್ಧವಾಗಿ ಬಸವಾದಿ ಶರಣರ ಭಾವನೆಗಳಿಗೆ ಹತ್ತಿರವಾಗಿ 'ಶಿವಭಕ್ತನೇ ಕುಲಜ'ನೆಂದು ಉದಾತ್ತೀಕರಿಸಿ ಹೇಳುವ ಕೊಂಡಗುಳಿ ಕೇಶಿರಾಜ, ವೈಯಕ್ತಿಕ ಜೀವನದಲ್ಲಿ ಆಚಾರವಂತ, ಹಾಗೆಯೇ ತುಂಬ ನಿಷ್ಠಾವಂತ ಮಡಿವಂತಿಕೆಯುಳ್ಳಿ. ತನ್ನ ಮನೆಗೆ ತನ್ನಲ್ಲಿರುವ ಪಶುವಿಗೆ, ನಿತ್ಯ ಬಳಸುವ ವಸ್ತುಗಳೆಲ್ಲಕ್ಕೆ ಶಿವಮುದ್ರೆಯನ್ನು ಒತ್ತುವ; ನಿತ್ಯ ಬಳಸುವ ಭಾವಿಯ ನೀರನ್ನು ಪಾತ್ರೆಯಲ್ಲಿ ತುಂಬಿಟ್ಟು, ಅದರ ಬಾಯಿಗೆ ವಸ್ತ್ರವನ್ನು ಮುಚ್ಚಿ, ಮಂತ್ರದಿಂದ ನೀರನ್ನು ಶುದ್ಧೀಕರಿಸಿ ಅಡುಗೆಗೆ ಬಳಸುವ; ಶಿವನಿಗೆ ಹಸುವಿನ ಹಾಲಲ್ಲದೆ ಎಮ್ಮೆಯ ಹಾಲನ್ನು ಅರ್ಪಿಸದ; ಸಮುದ್ರದ ನೀರಿನಲ್ಲಿ ನಾನಾ ಪ್ರಾಣಿಗಳು ವಾಸಿಸುವುದರಿಂದ, ನಾನಾ ಬಗೆಯ ಜನರು ಅದನ್ನು ತಂದು ಉಪ್ಪನ್ನಾಗಿ ಪರಿವರ್ತಿಸಿ ಮಾರುವರಾದ್ದರಿಂದ ಉಪ್ಪನ್ನೇ ಬಳಸದ; ಚರ್ಮದ ಪಾದರಕ್ಷೆಗಳನ್ನು ಮಡಿಯ ದೃಷ್ಟಿಯಿಂದ ತೊಡದ, ಭವಿಯೊಡನೆ ಸಂಪರ್ಕ, ಭವಿಯ ಹೊಗಳಿಕೆ, ಭವಿಯ ನೋಟ, ಸೋಂಕು, ಭವಿಯ ಸೆರೆ, ಭವಿಯ ಬೆಳಸು – ಇವಾವುದಕ್ಕೂ ಇಷ್ಟಪಡದ, ಸುಗಂಧ ದ್ರವ್ಯಗಳನ್ನು ಏನೇ ಆಗಲಿ ಬಳಸದ; ತನ್ನ ಸಮಶೀಲದ ಒಡೆಯರಲ್ಲಿ ಸಂತಸದಿಂದ ಪ್ರಸಾದ ಸ್ವೀಕರಿಸುತ್ತಿರುವಾಗ ಅವರು ಪ್ರಾಣ ಬಿಟ್ಟರೆ ಅವರ ಜೊತೆ ತಾನೂ ಪ್ರಾಣ ಬಿಡುವ ನೈಷ್ಠಿಕ ಆಚರಣೆಗಳು ಕೊಂಡಗುಳಿ ಕೇಶಿರಾಜನವು. ವೈಯಕ್ತಿಕ ಹಾಗೂ ಸಾರ್ವಜನಿಕ ಆಚರಣೆಗಳ ನಡುವೆ ವ್ಯತ್ಯಾಸವೇನನ್ನೂ ಕಾಣದ ಕಾರಣ ಅವೆರಡೂ ಅವನು ನಿರೂಪಿಸಿರುವ 64 ಶೀಲಗಳಲ್ಲಿ ಬೆರೆತುಹೋಗಿವೆ. 'ಶೀಲ' ಎನ್ನುವ ಪದಕ್ಕೆ ಪರ್ಯಾಯ ಅರ್ಥ 'ಆಚರಣೆ'. ಕೇಶಿರಾಜನು ಶಿವನಿಗೆ ಮೆಚ್ಚುಗೆಯಾಗುವ, ಶಿವನ ಪ್ರೀತ್ಯರ್ಥವಾದ 'ಆಚರಣೆ' (ಅ) 'ಆಚಾರ'ಗಳನ್ನು 'ಶೀಲ'ಗಳೆಂದು ಸ್ವೀಕರಿಸಿದಂತಿದೆ. ಭೀಮಕವಿ ಈ 'ಶೀಲ' (ಅ) 'ಆಚರಣೆ'ಗಳಿಗೆ ಪರ್ಯಾಯವಾಗಿ 'ಭಾಷೆ' ಎಂಬ ಮಾತನ್ನು ಬಳಸಿರುವಂತಿದೆ.

ಕೊಂಡಗುಳಿ ಕೇಶಿರಾಜ ಬಸವ ಪೂರ್ವ ಯುಗದ ವೀರಶೈವ ಧರ್ಮವನ್ನು ತನ್ನ ಕೃತಿಗಳ ಮೂಲಕ ಪ್ರತಿನಿಧಿಸಿದಂತೆ, ತನ್ನ ಮುಂದಣ ವಚನಕಾರರ–ಕವಿಗಳ ಮೇಲೆ ತನ್ನ ಪ್ರಭಾವ ಮುದ್ರೆಯನ್ನು ಸ್ಪಷ್ಟವಾಗಿ ಒತ್ತಿರುವನು. ಬಸವಾದಿ ಶರಣರು ನಡೆಸಿದ ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿಯ ಪೂರ್ವ ಚಿಹ್ನೆಯನ್ನು ಕೊಂಡಗುಳಿ ಕೇಶಿರಾಜನ ಕೃತಿಗಳಲ್ಲಿ ಸ್ಪಷ್ಟವಾಗಿ ನಾವು ಕಾಣುತ್ತೇವೆ. ವಚನ

ಚಳುವಳಿಗೆ ಪೂರ್ವ ಸಿದ್ಧತೆಯೊಂದು ಕೇಶಿರಾಜನ ಕಾಲದಲ್ಲಿ ಆದಂತೆ ಕಾಣುತ್ತದೆ. ಅವನ ಕೃತಿಗಳನ್ನು ಓದುತ್ತಿದ್ದಂತೆ ಬಸವಣ್ಣನ ಅನೇಕ ವಚನಗಳ ಭಾವಗಳು ಇಡಿಯಾಗಿ ಇಲ್ಲವೆ ಬಿಡಿಯಾಗಿ ಕಣ್ಣಮುಂದೆ ನಿಲ್ಲುತ್ತವೆ. ಬಹುಪಾಲು ಕೇಶಿರಾಜನ ವಿಚಾರಗಳು ಬಸವಣ್ಣನ ವಚನಗಳಲ್ಲಿ ಪ್ರತಿಫಲಿಸಿವೆ. (ಅವರಿಬ್ಬರೂ ಸಮಾನ ಹೃದಯಿಗಳು, ಸಮಾನ ಮನಸ್ಕರು). ಉದಾಹರಣೆಗೆ ಕೆಲವನ್ನಿಲ್ಲಿ ನೋಡಬಹುದು :

ಕೊಂಡಗುಳಿ ಕೇಶಿರಾಜ	ಬಸವಣ್ಣ
ಮೊಗದ ತೆರೆ ನೆಗೆದು ನೆರೆಗಳ್ ಬಿಗಿದು ಶಿರಂ ನಡುಗಿ ಒಡಿವ ನಡೆವ ಕೈಕಾಲ್ ಮಿಗೆಯುಡುಗದೆ ಜವ್ವನಮಂ ಜಗುಳದೆ ನೆನೆಯೋಂ ನಮಃ ಶಿವಾಯೆಂಬ ಪದಂ ॥	ನೆರೆ ಕೆನ್ನೆಗೆ ತೆರೆಗಲ್ಲಕೆ ಶರೀರ ಗೂಡುವೋಗದ ಮುನ್ನ......
ಉಪಪಾತಕ ಕೋಟಿಗಳ ತ್ಯಪರಾಧವನಂತಕೋಟಿಯುಂ ಮಾಡಿದೊಡೇಂ 'ಜಪತೋ ಪಾಪಂ ನಾಸ್ತಿ' ಶ್ವಪಚೋತ್ತಮಗೋಂ ನಮಃ ಶಿವಾಯೆಂಬ ಪದಂ ॥	ಪಾತಕ ಶತಕೋಟಿಯುನೊರೆಸಲು ಸಾಲದೆ ಒಂದು ಶಿವನ ನಾಮ ? ಸಾಲದೆ ಒಂದು ಹರನ ನಾಮ......
ಕರಿಯಂಕುಶಕಂಜುಗುಮಾ ಗಿರಿಯುಂಜುಗು ಕುಲಿಶಕ್ಕೆ ತಮಂಧಂ ಪರಿಗುಂ ಖರಕರಕಿರಣಕ್ಕೆಮಗಂ ಪರಿವೊಡೆ ಪಾಪೋಂನಮಃ ಶಿವಾಯೆಂಬ ಪದಂ ॥	ಕರಿಯಂಜುವುದಂಕುಶಕ್ಕಯ್ಯಾ : ಗಿರಿಯಂಜುವುದು ಕುಲಿಶಕ್ಕಯ್ಯಾ : ತಮಂಧವಂಜುವುದು ಜ್ಯೋತಿಗಯ್ಯಾ ....
ಉರಿಯಾ ಬಲು ಹೊಯ್ಲಿಗಾಂ ತಿರಬಲ್ಲುವೆಯರಗಿನಲ್ಪ ಬೊಂಬೆಗಳಿಲ್ಲಂ ಪರಮನ ಮಂತ್ರಕ್ಕೃಘವಾಂ ತಿರಬಲ್ಲುದೆ ? ಓಂ ನಮಃ ಶಿವಾಯೆಂಬ ಪದಂ ॥	ಅರಗಿನ ಪುತ್ಥಳಿಯುನುರಿಯು ನಾಲಗೆ ಹೊಯಿದು ಮಾತಾಡುವ ಸರಸ ಬೇಡ ! ....
ಎನ್ನ ಮನವೆಂಬ ಶಕುನಂ ನಿನ್ನಗ್ಗದ ಭಕ್ತಿವನಿತೆ ಪಿಡಿದೊಯ್ದು ಶಿವಾ ಯೆನ್ನೆಂದೋದಿಸಿ ನಿಜ ಪಾ ದೋನ್ನತ ಪಂಜರದೊಳೆಂದು ಸೆಱೆಯಿಟ್ಟಪಳೋ ॥	ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ 'ಶಿವ ಶಿವಾ' ಎಂದೋದಿಸಯ್ಯಾ. ಭಕ್ತಿಯೆಂಬ ಪಂಜರದೊಳಗಿಕ್ಕಿಸಲಹು, ಕೂಡಲ ಸಂಗಮದೇವಾ.
ನೋಡಿ ಕಣ್ ಪಾಡಿ ನಾಲಗೆ ಯಾಡಿ ಪದಂ ಬಿಡದೆಯರ್ಚಿಸುತ್ತಂ ಕರದೊಳ್ ಕೂಡಿ ಮನ ನಿರ್ವ್ವೋಳಿರ್ಪುದ ಮಾಡು ಗಡಾ.................	ಆಡಿ ಕಾಲು ದಣಿಯವು, ನೋಡಿ ಕಣ್ಣು ದಣಿಯವು. ಹಾಡಿ ನಾಲಿಗೆ ದಣಿಯದು ; ಇನ್ನೇವೆನಿನ್ನೇವೆ

ನಿಮ್ಮ ಕೈಯಾರೆ ಪೂಜಿಸಿ ಮನ ದಣಿಯ
ಲೊಲ್ಲದಿನ್ನೇವೆನಿನ್ನೇವೆ ?
....

ಒಗೆವಶ್ರು ಪುಳಕತತಿಯಿಂ
ದಗಲದೆ ಶಿವ ಶಿವ ಶಿವ ಪ್ರಘೋಷದೊಳೆಂದುಂ
ಪಗಲಿರುಳೆಂಬುದನಱಿಯದೆ
ನೆಗಜಾವಲ್ಲಭನೊಳಾಟುತೆಂದಿರ್ದಪೆನೋ ॥

ವಾರವೆಂದಱಿಯೆ, ದಿನವೆಂದಱಿಯೆ ;
ಏನೆಂದಱಿಯೆನಯ್ಯಾ !
ಇರುಳೆಂದಱಿಯೆ ಹಗಲೆಂದಱಿಯೆ ;
ಏನೆಂದಱಿಯೆನಯ್ಯಾ !
ನಿಮ್ಮುವ ಪೂಜಿಸಿ ಎನ್ನುವ ಮಱೆದೆ
ಕೂಡಲ ಸಂಗಮದೇವಾ.

ಮನವುಡುಗಲ್ಮನು ಕರಗ
ಲ್ಕೊನೆದೋಱಲ್ ರೋಮರಾಜಿ ಲಿಂಗದೊಳನಿಶಂ
ತನಿನೇಹ ದಿನ ಶ್ರುಜಲಂ
ಜನಿಯಿಸಲಾನೆಂದು ಕಂಡು ಸುಖಿಯಾದಪೆನೋ ॥
ತಡವರಿಸಿ ನೋಡಿ ಕಂಡಾ
ಮೃಡನಿರ್ದಪನೆಂಬ ಭಾವವೆನ್ನೊಳ್ನೆಲಸ
ಲ್ಗುಡುಗುಡನೆ ಸುರಿವ ಕಂಬನಿ
ಮಡುಗಳೊಳೋಲಾಡುತಾನದೆಂದಿರ್ದಪೆನೋ ॥

ಅಂಗೈಯೊಳಗಣ ಲಿಂಗವ ನೋಡುತ್ತ
ಕಂಗಳು ಕಡೆಗೋಡಿವಱಿವುತ್ತ
ಸುರಿಯುತ್ತ ಎಂದಿಪ್ಪೆನೊ ?
ನೋಟವೇ ಪ್ರಾಣವಾಗಿ ಎಂದಿಪ್ಪೆನೊ,
ಕೂಟವೇ ಪ್ರಾಣವಾಗಿ ಎಂದಿಪ್ಪೆನೊ,
ಎನ್ನಂಗವಿಕಾರದ ಸಂಗವಳಿದು,
ಕೂಡಲಸಂಗಯ್ಯಾ, ಲಿಂಗಯ್ಯಾ, ಲಿಂಗ
ಲಿಂಗ ಲಿಂಗವೆನುತ್ತ ?

ನೀವಿರಿಸಿದಂತೆ ಇರಲುಂ
ನೀಂ ಸಲಹಿದೊಲೆನ್ನಯಸುವು ನೀನೆ ಕರ್ತನ್
ನೀನೆ ಭರ್ತನ್ ಹರ್ತನ್
.... ॥
ನೀನೆ ಕುಲಂ ನೀನೆ ಧನಂ
ನೀನೆ ಕುಲಸ್ವಾಮಿ[ಯುಂ] ನೀನೆ ದೇವತೆಯುಂ
ನೀನೆ ಕುಲವಿದ್ಯೆ...
.... ॥

ನಾ ನಿಮ್ಮ ನೆನೆವೆನು :
ನೀವೆನ್ನನಱಿಯಿರಿ ;
....
ನಾನೆಂತು ಬದುಕುವೆನೆಂತು
ಜೀವಿಸುವೆನಯ್ಯಾ ?
ಕೂಡಲ ಸಂಗಮದೇವಾ,
ಎನಗೆ ನೀನೇ ಪ್ರಾಣ ಗತಿ ಮತಿ
ನೋಡಯ್ಯಾ !
ತಂದೆ ನೀನು, ತಾಯಿ ನೀನು ;
ಬಂಧು ನೀನು ಬಳಗ ನೀನು ;
ನೀನಲ್ಲದೆ ಮತ್ತಾರೂ ಇಲ್ಲಯ್ಯಾ !
ಕೂಡಲ ಸಂಗಮದೇವಾ,
ಹಾಲಲದ್ದು, ನೀರಲದ್ದು !

ಭಕ್ತರೊಳು ವಾದವಿಲ್ಲದೆ
ಭಕ್ತರುಗಳು ಬೇಡಿ ಕಾಡಿ ಭೇದವದಿಲ್ಲದೆ
ಭಕ್ತರೊಳನುಸರಿಯಿಲ್ಲದೆ
ಭಕ್ತಿಯುಲಿರೆ ಮೂವತ್ತೊಂದನೆ ಶೀಲಪದುಂ ॥

ಉರಿವ ಕೊಳ್ಳಿಯ ಮಂಡೆಯಲಿಕ್ಕಿ
ದೊಡುರಿವುದು
ಮಾಣ್ಬುದೆ............

ಭಕ್ತರೊಳು ಸರಸವಾಡದೆ
ಭಕ್ತರೊಳವಗುಣಿಗಳೆಂದು ಕುಂದಂ ನುಡಿಯುದೆ
ಭಕ್ತರ ಮನ ನೋವ್ ಮಾಡದೆ
ಭಕ್ತರ ಮನೆಮಗನದಾಗೆ ಮೂವತ್ತೆನಿಕುಂ ॥

ಹಾವಿನ ಹೆಡೆಗಳ ಕೊಂಡು ಕೆನ್ನೆಯ
ತುಱುಸುವಂತೆ,
ಉರಿವ ಕೊಳ್ಳಿಯ ಕೊಂಡು ಮಂಡೆಯ
ಸಿಕ್ಕ ಬಿಡಿಸುವಂತೆ
....

ಶಿವಭಕ್ತ ಶಿವನೆ ಘನವುಂ
ಶಿವಮಂತ್ರ ಶಿವಾನುಭಾವವೇ ಘನವೆಂದುಂ
ತವೆ ಶ್ರುತದೃಷ್ಟದಿ ತೋಱಲು
ವಿವರಿಸಲಿಪ್ಪತ್ತ ಐದನೆಯ ಶೀಲವದುಂ ॥

ಶಿವಭಕ್ತರೆ ಅಧಿಕರು ನೋಡಯ್ಯಾ,
ಎಲ್ಲರಿಂದವು.
ಇದಕ್ಕೆ ಅಧಿಕವಾಗಿ ಜಂಗಮವ ಕಂಡೆ
ಈ ದ್ವಿವಿಧವನೊಂದೇ ಎಂದು ನಂಬಿದೆ,
ಕೂಡಲ ಸಂಗಮದೇವಾ.

ವಾರ ತಿಥಿ ಲಗ್ನ ಶುಭದಿನ
ತಾರಾಬಲ ಚಂದ್ರಬಲ ನವಗ್ರಹಬಲಗಳ
ಸೇರಿ ಶುಭವಶುಭ ಶಕುನವ
ಹಾರದ...........................

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ!
ರಾಶಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯಾ
ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ;
ನಾಳಿನದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ:
....

ಶಿವರಾತ್ರಿ ಶಂಕುರಾಂತಿಯು
ಶಿವವಾರಂ ಏಕಭುಕ್ತವುಪವಾಸಗಳುಂ
ಶಿವಪಥಗಳಲ್ಲವೆಂದವ
ತವೆ ಬಿಟ್ಟು...........................

ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ,
ಗ್ರಹಣ-ಸಂಕ್ರಾಂತಿಯಿಂದ ವೆಗ್ಗಳ,
ಏಕಾದಶಿ-ವ್ಯತೀಪಾತದಿಂದ ವೆಗ್ಗಳ,
ಸೂಕ್ಷ್ಮ ಶಿವಪಥವಱಿದವಂಗೆ
ಹೋಮ-ನೇಮ-ಜಪ-ತಪದಿಂದ ವೆಗ್ಗಳ
....

ಹರಿದು ಶಿವತೀರ್ಥವೆಂದುಂ
ಇರದಲ್ಲಿಗೆ ಹೋಗಿ ಪಾಪವೆಲ್ಲಕೆ ನಿಂದುಂ

ನೀರ ಕಂಡಲ್ಲಿ ಮುಳುಗುವರಯ್ಯಾ
....

ಬಸವಣ್ಣನ ಮೇಲಾದಷ್ಟೇ ಗಾಢ ಪ್ರಭಾವ ಹರಿಹರನ ಮೇಲೂ ಆದಂತೆ ತೋರುತ್ತದೆ. ಕೇಶಿರಾಜನ ಪ್ರಭಾವಕ್ಕೆ ಒಳಗಾಗಿದ್ದುದು, ಹರಿಹರ ಅವನ ಬಗೆಗೆ ರಗಳೆಯೊಂದನ್ನು ಬರೆದಿರುವುದರಿಂದ ಸ್ಪಷ್ಟವಾಗುತ್ತದೆ. 'ಲಿಂಗಸ್ತೋತ್ರದ ಕಂದ'ಗಳಲ್ಲಿ ವ್ಯಕ್ತವಾಗಿರುವ ಓಜಸ್ಸು, ತುಂಬುಭಕ್ತಿ, ಶಿವನಲ್ಲಿನ ನಿಷ್ಠೆ, ಮಧುರಭಾವ ಹರಿಹರನ ಅನೇಕ ರಗಳೆಗಳಲ್ಲಿ ಎದ್ದು ಕಾಣುತ್ತವೆ. ಕೇಶಿರಾಜನದು ಭಕ್ತಿಮಯವಾದ ಜೀವನ. ಇದಕ್ಕೆ ಸಮಾನವಾದುದು ಹರಿಹರನ ಪ್ರಪಂಚ. ಈರ್ವರೂ ತುಂಬು ಭಕ್ತಿಯ ದೃಷ್ಟಿಯಿಂದ ಸಮಾನ ಹೃದಯಿಗಳು. ಭಕ್ತಿಯ ರಸಾವೇಶಕ್ಕೆ ಬಹು ಬೇಗನೆ ಸೋಲುವವರು, ಮನವನ್ನು ಅರ್ಪಿಸುವವರು, ಮನದ ಭಾವವನ್ನು ಅಡೆ ತಡೆಯಿಲ್ಲದ ಭಕ್ತಿ ರಸಪೂರದಲ್ಲಿ ತೇಲಿಬಿಡುವವರು. 'ಲಿಂಗಸ್ತೋತ್ರದ ಕಂದ'ಗಳನ್ನು ಓದುತ್ತಿದ್ದಾಗ ಹರಿಹರನ ಬಸವರಾಜದೇವರ ರಗಳೆ, ಮಹಾದೇವಿಯಕ್ಕನ ರಗಳೆ,

ತಿರುನೀಲಕಂಠನ ರಗಳೆ, ಪುಷ್ಪ ರಗಳೆ, ಪಂಪಾ ಶತಕ, ರಕ್ಷಾ ಶತಕ ಇವೇ ಮೊದಲಾದ ಕೃತಿಗಳ ಸಾಲು ಸಾಲುಗಳೇ ಮೇಲಿಂದ ಮೇಲೆ ನೆನಪಿಗೆ ಬರುತ್ತವೆ; ಭಕ್ತಿಯ ರಸೋತ್ಕಟ ಸನ್ನಿವೇಶಗಳು ಧುತ್ತೆಂದು ಕಣ್ಣಮುಂದೆ ನಿಲ್ಲುತ್ತವೆ. ಭಕ್ತಿಯ ಆವೇಶದಲ್ಲಿ ಮೈಮರೆತ ಹರಿಹರನ ಚಿತ್ರವೇ ನಮ್ಮ ಕಣ್ಣಮುಂದೆ ನಿಲ್ಲುತ್ತದೆ. ಇಬ್ಬರೂ ಸಮಾನ ಮನಸ್ಕರಾಗಿರುವುದರಿಂದ ಸಮಾನ ಭಾವಗಳು ಒಮ್ಮೊಮ್ಮೆ ಭಕ್ತಿಯ ಉದ್ರೇಕಾವಸ್ಥೆಯಲ್ಲಿ ಸಮಾನ ಪದ-ಪದಪುಂಜಗಳು ಬಳಕೆಗೊಳ್ಳುವುದನ್ನು ಕಂಡು ನಾವು ಬೆರಗಾಗುತ್ತೇವೆ.

ಒಟ್ಟಿನಲ್ಲಿ, ಕೊಂಡಗುಳಿ ಕೇಶಿರಾಜನ ಕೃತಿಗಳು ಬಸವ ಪೂರ್ವಯುಗದ ವೀರಶೈವ ಧರ್ಮದ ಸ್ಥಿತಿ–ಗತಿಗಳನ್ನು ಚೆನ್ನಾಗಿ ಬಿಂಬಿಸುತ್ತವೆ. ಸೂರ್ಯೋದಯಕ್ಕೆ ಮುನ್ನ ಅದರ ಪೂರ್ವಸೂಚನೆಗಳು ಆಗಸದ ಅಂಚಿನಲ್ಲಿ ಸ್ಪಷ್ಟವಾಗಿ ಕ್ರಮ ಕ್ರಮವಾಗಿ ಹೇಗೆ ಗೋಚರವಾಗುತ್ತವೆಯೋ ಹಾಗೆ. ಬಸವಣ್ಣನೇ ವೀರಶೈವ ಧರ್ಮದ ಸ್ಥಾಪಕನೆಂದಾಗಲೀ, ವೀರಶೈವ ಧರ್ಮ ಸ್ಪಷ್ಟವಾದ ರೂಪವನ್ನು ಪಡೆದುದು ಬಸವಣ್ಣನ ಕಾಲದಲ್ಲೇ ಎಂದಾಗಲೀ ಹೇಳಿದರೆ ವಸ್ತುಸ್ಥಿತಿಗೆ ಅಪಚಾರ ವೆಸಗಿದಂತೆ. ವೀರಶೈವ ಧರ್ಮ ಬಸವನಿಗಿಂತಲೂ ಪೂರ್ವದಲ್ಲಿ, ಅಂದರೆ, 11ನೇ ಶತಮಾನದ ಮಧ್ಯಭಾಗದಲ್ಲೇ ಸಾಕಷ್ಟು ಬೆಳೆದಿದ್ದಿತು, ತನ್ನ ರೂಪರೇಷೆಗಳನ್ನು ಸ್ಪಷ್ಟಪಡಿಸಿಕೊಂಡಿತ್ತು. ಬಸವಣ್ಣ ಹಾಗೂ ಅವನ ಅನುಯಾಯಿಗಳು ಅದಕ್ಕೆ ಹೆಚ್ಚಿನ ವ್ಯಾಪ್ತಿಯನ್ನು, ಅರ್ಥವಂತಿಕೆಯನ್ನು, ಮೌಲ್ಯವನ್ನು ದೊರಕಿಸಿಕೊಡಲು ಶ್ರಮಿಸಿದರು. ಅವರ ಶ್ರಮ ಸಾಧಾರಣವಾದದ್ದಲ್ಲ, ಗಮನಾರ್ಹವಾದುದು. ತಾಯಿ ಬೇರಿಗೆ ನೀರೂಡಿದರೆ ವೃಕ್ಷದ ಟೊಂಗೆ ಟೊಂಗೆಗಳು ನಳನಳಿಸಿ ಬೆಳೆಯುತ್ತವೆ. ಹಾಗೆಯೇ, ಬಸವಾದಿ ಶಿವಶರಣರು ತಮ್ಮ ಹಿಂದಿದ್ದ, ಅಷ್ಟಾಗಿ ವ್ಯಾಪಕತೆಯನ್ನು ಪಡೆಯದೆ ಕೃಶವಾಗಿದ್ದ ವೀರಶೈವ ಧರ್ಮಕ್ಕೆ ಶಕ್ತಿ ಸಂಚಯನ ಮಾಡಿದರು; ವಿಶಾಲವಾಗಿ, ಶಕ್ತಿಯುತವಾಗಿ, ಅಂತಃಸತ್ವ ಇಮ್ಮಡಿಯಾಗಿ ಬೆಳೆಯಲು ತ್ರಿಕರಣ ಪೂರ್ವಕವಾಗಿ ದುಡಿದರು; ಶಕ್ತಿಯನ್ನು ಶ್ರಮದ ಮೂಲಕ ಧಾರೆಯೆರೆದರು. ಆಗಸದಲ್ಲಿ ಅನೇಕ ಗ್ರಹಗಳಿವೆ, ಅವುಗಳಿಗೆ ತಮ್ಮದೇ ಆದ ಪ್ರಭೆಯಿದ್ದರೂ ಸೂರ್ಯನಷ್ಟು ಕಣ್ಣು ಕುಕ್ಕುವ ಪ್ರಭೆಯಿಲ್ಲ. ಬಸವಣ್ಣ ತನ್ನ ವ್ಯಕ್ತಿತ್ವದ ಪ್ರಭೆಯಿಂದ ಲೋಕಕ್ಕೆ ಕಾಣುವವನಾದ. ಸಾಂಕೇತಿಕ ಅರ್ಥದಲ್ಲಿ ಹೇಳುವುದಾದರೆ, ಹಲವು ಶಕ್ತಿಗಳು ಸಂಚಯನಗೊಂಡು, ಏಕೀಭವಿಸಿದ ಮೂರ್ತಿ ಬಸವಣ್ಣ. ಬಸವಣ್ಣನಲ್ಲಿ ಆ ಶಕ್ತಿ ಬಂದುದು, ಹಲವಾರು ಮಂದಿ ಶರಣ ಶರಣೆಯರ ಸಮಾನ ಗುಣ–ಧರ್ಮಗಳುಳ್ಳ ಮನಸ್ಸು ಅಜ್ಞಾತವಾಗಿ ಬೆಂಬಲಿಸಿ ನಿಂತುದರಿಂದ. ಬಸವಣ್ಣ ವೈಯಕ್ತಿಕವಾಗಿ ಸರ್ವಗುಣ ಸಂಪನ್ನನಾದ ಆದರ್ಶ ನಾಯಕ. ಈ ನಾಯಕನಿಗೆ ವಚನ ಚಳುವಳಿಯ ಸಾಫಲ್ಯದ ಪಟ್ಟವನ್ನು ಕಟ್ಟುವುದು ಹೇಗೆ ಅರ್ಥವಿಹೀನವೋ ಹಾಗೆ,

ಬಸವಣ್ಣನಿಗೆ ವೀರಶೈವ ಧರ್ಮ ಸ್ಥಾಪಕನೆನ್ನುವ ಹೆಗ್ಗಳಿಕೆಯು ಆರೋಪ ಮಾಡುವುದು. ವೀರಶೈವ ಧರ್ಮವು ಬಸವಾದಿ ಶರಣರಿಗಿಂತ ಹಿಂದೆ, ಸುಮಾರು ನೂರು ವರ್ಷಗಳ ಪೂರ್ವದಲ್ಲಿ, ತನ್ನ ನೆಲೆ–ಬೆಲೆಯನ್ನು ಕಂಡುಕೊಂಡಿದ್ದಿತು. ಕೊಂಡಗುಳಿ ಕೇಶಿರಾಜನಂತಹ ನಿಷ್ಠಾವಂತ ಪ್ರತಿಪಾದಕರು ಅದಕ್ಕೆ ಬೆಂಬಲವಾಗಿದ್ದರು ಎಂಬುದೊಂದು ಹೆಮ್ಮೆಯ ವಿಷಯ. ನಾವೀಗ ವೀರಶೈವದ ಉದಯದ ಕಾಲವನ್ನು ಬಸವನಿಗಿಂತ ಹತ್ತಿರ ಹತ್ತಿರ ನೂರು ವರುಷ ಹಿಂದಕ್ಕೆ ತಳ್ಳುವುದು ಸಾಧುವೂ, ಅನಿವಾರ್ಯವೂ ಆಗುತ್ತದೆ.

ಅಡಿ ಟಿಪ್ಪಣಿಗಳು

1. ಕೊಂಡಗುಳಿ ಕೇಶಿರಾಜನ ಕೃತಿಗಳು : ಸಂ : ಡಾ॥ ಎಂ. ಎಂ. ಕಲ್ಬುರ್ಗಿ, ನಮನ, ಪು. iii
2. ಅದೇ, ಪ್ರಸ್ತಾವನೆ, ಪು. vi
3. ಅದೇ, ಪು. vi
4. ಜೇಡರ ದಾಸಿಮಯ್ಯನ ವಚನಗಳು : ಸಂ : ಎಚ್. ದೇವೀರಪ್ಪ ಹಾಗೂ ಆರ್. ರಾಚಪ್ಪ, ವ. 17
5. ನೂತನ ಪುರಾತನರ ರಗಳೆಗಳು : ಸಂ : ಎಂ. ಎಸ್. ಸುಂಕಾಪುರ, ಪು. 183-184 ಸಾಲು 21-30
6. ಅದೇ, ಪು. 191
7. ಕರ್ಣಾಟಕ ಕವಿಚರಿತೆ ಸಂಪುಟ 1 (ಪರಿಷತ್ ಪ್ರಕಟಣೆ) ಪು. 199
8. 'ಮಂತ್ರಮಹತ್ವದ ಕಂದ'ವನ್ನು ಮೊದಲಿಗೆ ಗುರುತಿಸಿದವರು ದಿ॥ ಆರ್. ನರಸಿಂಹಾಚಾರ್ಯರು. 1913ರಲ್ಲಿ ಮೊದಲಿಗೆ ಬಿ. ಬಸವಾರಾಧ್ಯರೂ ನಂತರ ಲಿಂ. ಬಿ. ಶಿವಮೂರ್ತಿಶಾಸ್ತ್ರಿಗಳೂ ಇದನ್ನು ಬೆಳಕಿಗೆ ತಂದರು. 'ಲಿಂಗಸ್ತೋತ್ರದ ಕಂದ'ವನ್ನು 'ಶಿವಪ್ರಾರ್ಥನಾ ಶತಕ' ಎಂಬ ಹೆಸರಿನಲ್ಲಿ ಮೊದಲಿಗೆ ಗುರುತಿಸಿದವರು ದಿ. ಆರ್. ನರಸಿಂಹಾಚಾರ್ಯರು. 'ಶಿವಪ್ರಾರ್ಥನಾ ಶತಕ' ಹೆಸರಿನ ಕೆಳಗೆ ಲಿಂಗಸ್ತೋತ್ರದ ಮೂರು ಕಂದಗಳನ್ನು ಅವರು ಉದಾಹರಿಸಿರುವರು. 'ಶೀಲಮಹತ್ವದ ಕಂದ' ಶ್ರೀ ಜಿ. ಎ. ಶಿವಲಿಂಗಯ್ಯ ಅವರಿಂದ ಮೊದಲಿಗೆ ಬೆಳಕು ಕಂಡಿತು. 'ನವರತ್ನ ಮಾಲಾ'ವನ್ನು ಡಾ॥ ವೀರಣ್ಣ ರಾಜೂರ ಅವರು ಪ್ರಥಮಬಾರಿಗೆ ಬೆಳಕು ಕಾಣಿಸಿದರು. ಕೊಂಡಗುಳಿ ಕೇಶಿರಾಜನ ಉಪಲಬ್ಧ ಸಮಗ್ರ ಕೃತಿಗಳನ್ನು ಮೊದಲಿಗೆ ಒಂದೆಡೆ ಸಂಪಾದಿಸಿ ಕೊಟ್ಟು ಉಪಕರಿಸಿರುವವರು ಡಾ॥ ಎಂ. ಎಂ. ಕಲ್ಬುರ್ಗಿ ಅವರು.
9. ವಚನ ಸಾಹಿತ್ಯ (ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ; ಸಂಪುಟ 5), ಪು. 30-32
10. ಫ. ಗು. ಹಳಕಟ್ಟಿ : ಶಿವಾನುಭವ ಶಬ್ದಕೋಶ (1972) ಪು. 108)
11. ಅದೇ, ಪು. 123
12. ಚನ್ನಬಸವಣ್ಣನವರ ವಚನಗಳು : ಸಂ : ಡಾ. ಆರ್. ಸಿ. ಹಿರೇಮಠ, ವ. 212
13. ಅದೇ, ವ. 358
14. ಕುಲಹೀನನಿಗೆ ಲಿಂಗದೀಕ್ಷೆ ಮಾಡಿ ಅವನನ್ನು ಭಕ್ತನನ್ನಾಗಿ ಪರಿವರ್ತಿಸಿದ ಮೇಲೂ ಅವನ ಮನೆಯಲ್ಲಿ ಉಣ್ಣದೆ ಅಕ್ಕಿ. ಕಣಕಗಳನ್ನು ಅವನಿಂದ ತೆಗೆದುಕೊಂಡು ಹೋಗಿ ಬೇರೆಯಾಗಿ ಅಡಿಗೆಮಾಡಿ ಉಣ್ಣುವ ಗುರುಗಳನ್ನು ಅಂಬಿಗರ ಚೌಡಯ್ಯ ಟೀಕಿಸಿರುವನು (ನೋಡಿ : ಅಂಬಿಗರ ಚೌಡಯ್ಯನ ವಚನಗಳು, ವ. 222, ಸಂ. ಬಸವರಾಜ ಸಿದ್ಧಾಶ್ರಮ, ಡಾ. ವಿದ್ಯಾಶಂಕರ). ಬಹುಶಃ ಈ ಟೀಕೆ ತನ್ನ ಕಾಲದ ಶೀಲವಂತರನ್ನು ಕುರಿತದ್ದಾಗಿರಬಹುದೆ?

ಆಕ್ರಮಣ

ಎಂ. ಕೆ. ರೇಣುಕಪ್ಪಗೌಡ

ತಮ್ಮಾ,
ವಸಂತದ ಮೈಮರೆಸುವ ಮೋಡಿಯ ಮಾತಿಗೆ ಕರಗಿ ನೀರಾಗದಿರು !
ಎಚ್ಚರ ಮೈಗಿಂತ ಮನಕ್ಕೆ ಲೇಸು.
ಇಲ್ಲವೆ,
ನಿನ್ನ ಮೈ ಮನ ಬುದ್ಧಿಯನೆಲ್ಲ ನಾನು
ನುಣ್ಣನೆ ಸಾರಿಸಿ
ಹೀರಿ ಹಿಗ್ಗಿ ಮಡಿಯಾಗಿ ಬಿಟ್ಟೇನು !
ಜಿಗಣೆಗಳ ಬಲ್ಲೆಯಾ,
ನಾನು-ನೀವು–ನಾವುಗಳೆಲ್ಲ
ದಾಟ ಬಯಸುವ ಕಾನನ ಕೆಸರು ಹುಲ್ಲುಗಾವಲಲ್ಲೆಲ್ಲಾ
ಹುಲ್ಲಾಗಿ ಕಲ್ಲಾಗಿ
ಕೂದಲೆಳೆಯ ನಯನಾಜೋಕಿನಲಿ
ಸದ್ದಿಲ್ಲದಂತೆ ಅಡರಿ
ಗೊತ್ತಾಗದಂತೆ ಕಡಿದು
ನೋವಾಗದಂತೆ ಹೀರಿ
ಊದಿ ಊದಿ ಇಪ್ಪಟ್ಟದ್ದ ನಿಗುರಿ
ಕೈಕೊಟ್ಟು ಕಳಚಿಕೊಳ್ಳುವೆ ;
ನವಿರಿನ ಮಾಯೆ ಬಿರಿಸುವ
ಅಂಗನೆಯರ ಸುಪುಷ್ಟ ಶಾರೀರದಂತಹ ;
ನೀರಿಲ್ಲದೆ ನುಣ್ಣನೆ ತಲೆಯ ಬೋಳಿಸಿ ಆಕಾಶದೆತ್ತರ ಕನಸ ಕಾಣಿಸುವ
ದೊಡ್ಡ ಹೊಟ್ಟೆಯ ಪುಡಾರಿಯಂತಹ ;
ನುಡಿಯ ಮೋಹನ ಮುರಳಿಯ
ಕವಿವರ್ಯರಂತಹ,
ಆತ್ಮ-ಪರಮಾತ್ಮವೆಂದೆಂಬ
ಭ್ರಾಂತಿಯ ಸುಳಿಯಲ್ಲಿ ಸುತ್ತಿಸುವ.
ಮಡಿಯಾಗುವುದಕೆ ಮುನ್ನವೆ

ಅವಸರದ ಉಬ್ಬೆಹಾಕಿ
ಹುಳಿಹಣ್ಣು ಕೊಳೆಸುವ,
ಜಾತಿ-ಮತ-ಧರ್ಮ-ಸಂಸ್ಕೃತಿ-ಪರಮಾತ್ಮ-ಮೋಕ್ಷಗಳೆಂದು ಬಡಬಡಿಸುವ,
ಕಚ್ಚುವ
ಜಿಗಣೆಗಳ ಬಲ್ಲೆಯಾ ?
ಪರೋಪಜೀವಿ ಬಂದಲಿಕೆಯ ಈ
ಹಾದರಗಿತ್ತಿ ಬದುಕಿನಲ್ಲಿ
ಉಣಬಲ್ಲವರೆಲ್ಲ
ಭಂಡರಾಗೇ ಇಂದ್ರರಾಗುತ್ತಾರೆ!
ನಮ್ಮಂಥ ಕಣ್ಣು ತೆರೆದ ಗಾವಿಲರೆಲ್ಲ
ತಲೆಗೊಟ್ಟು ಕುರಿಯಾಗುತ್ತೇವೆ.
ತರಹಾವರಿ ಜಿಗಣೆಗಳ ಈ ಜೀವಗಾಡಲ್ಲಿ
ನೀನೂ ಒಬ್ಬ ಇಂಬಳ.
ತಮ್ಮಾ,
ಹೀರಿದರೆ ನೆಲಮುಗಿಲನ್ನೆಳೆದುಳಿಯುವ
ಅಸಾಮಾನ್ಯತೆ ಈ ತಾಯಿಗ್ಗಂಡರದು.
ಇಲ್ಲದಿರೆ ಗೊತ್ತಲ್ಲ: ನೆಲಮಟ್ಟ.
ಆದ್ದರಿಂದ, ಬದುಕಬೇಕೆಂದರೆ
ನಿಧಾನವಾಗಿ ಆಕ್ರಮಿಸುವ
ಪಾಠ ಕಲಿ.

ಮಹಾಪ್ರಾಣಗಳು

ಪಿ. ರಾಮಭಟ್

ಕನ್ನಡ ವೈಯಾಕರಣರ ಅಭಿಪ್ರಾಯವನ್ನು ನೋಡಿದಾಗ ಕನ್ನಡದಲ್ಲಿ ಮಹಾಪ್ರಾಣದ ಬಗ್ಗೆ ಸಂದೇಹವಿದ್ದಿರುವುದು ಸ್ಪಷ್ಟವಾಗುತ್ತದೆ. ಅವನ್ನು ಇಲ್ಲವಾದರೂ ಸೇರಿಸಿಕೊಂಡಂತಿದೆ. ಅವರ ಹೇಳಿಕೆಯ ಹಿನ್ನೆಲೆಯಲ್ಲಿ ವಾಸ್ತವಿಕತೆಯನ್ನಿಲ್ಲಿ ವಿಚಾರಿಸಬಹುದು.

ನಾಗವರ್ಮನು ಕಾವ್ಯಾವಲೋಕನದ 'ಶಬ್ದಸ್ಮೃತಿ' ಅಧಿಕರಣದಲ್ಲಿ "ದೊರೆಕೊಂಡ ಸಂಖ್ಯೆಯೊಳಂ ಅನುಕರಣದೊಳಂ ವರ್ತಿಕುಂ ಮಹಾಪ್ರಾಣಂಗಳ್" ಎಂದು ಉದಾಹರಣೆಗಳನ್ನು ಕೊಟ್ಟಿದ್ದಾನೆ. ಹಾಗಾದರೆ ಸಂಖ್ಯೆ ಮತ್ತು ಅನುಕರಣ ಶಬ್ದಗಳನ್ನು ಬಿಟ್ಟರೆ ಕನ್ನಡದಲ್ಲಿ ಮಹಾಪ್ರಾಣಗಳಿಲ್ಲ ಎಂದಂತಾಯಿತಲ್ಲವೇ ? ಅವನು ಕೊಟ್ಟಿರುವ ಸಂಖ್ಯೆಗಳೋ ಸಂಸ್ಕೃತದ ತದ್ಭವದವು. ಅನುಕರಣೆಗಳಂತೂ ಸಾರ್ಥಕ ಶಬ್ದಗಳಲ್ಲವಾದುದರಿಂದ ನಗಣ್ಯವಾದುವು.

ಭಾಷಾಭೂಷಣಕಾರನು "ನಾತ್ರಪ್ರಾಯೇಣ ವರ್ಗಾಣಾಂ ದ್ವಿತೀಯ ಚತುರ್ಥಾಃ" ಪ್ರಾಯೇಣೇತಿ ವಚನಾತ್ ಸಂಖ್ಯಾನುಕರಣಾದೌದೃಶ್ಯಂತೇ ಎಂದು ಉದಾಹರಣೆಗಳನ್ನು ಕೊಟ್ಟಿದ್ದಾನೆ. ಕನ್ನಡದಲ್ಲಿ ಹೆಚ್ಚಾಗಿ ಮಹಾಪ್ರಾಣಗಳಿಲ್ಲ ಎಂದಿರುವ ಇವನ ಮಾತು ವಿವೇಚಿಸಿದರೆ ಸತ್ಯವೆನ್ನಿಸುತ್ತದೆ. ಶಬ್ದಸ್ಮೃತಿಯ ಉದಾಹರಣೆಯಂತಹವೇ ಇಲ್ಲೂ ಬಂದಿರುವುದರಿಂದ ಪ್ರತ್ಯೇಕ ವಿವೇಚಿಸಬೇಕಾಗಿಲ್ಲ. ಕೇಶಿರಾಜನು "ವರ್ಗದ್ವಿತೀಯ ಚತುರ್ಥವರ್ಣಗಳು ಮಹಾಪ್ರಾಣಗಳು. ಅವನ್ನು ಮಾರ್ಗವಿದರು ಸಂಖ್ಯೆಯಲ್ಲೂ ಅನುಕರಣವಲ್ಲೂ ಪ್ರಯೋಗಿಸುತ್ತಾರೆ" ಎಂದು ಹಿಂದೆ ಹೇಳಿದಂತೆಯೇ ಹೇಳಿ ಕೆಲವು ಹೆಚ್ಚು ಉದಾಹರಣೆಗಳನ್ನು ನೀಡಿದ್ದಾನೆ. ಇವನು ಸಂದೇಹವನ್ನು ಹೇಳದೆ ಉಂಟೆಂದು ವಿಶ್ವಾಸದಿಂದ ಹೇಳಿದ್ದಾನೆ. ಹಿಂದಿನವನು ಸಂದೇಹ ಹೇಳಿದ್ದರಿಂದ ಪ್ರಯೋಗದಲ್ಲಿ ಬಂದ ಸಂಖ್ಯೆ ಅನುಕರಣಗಳನ್ನು ನೋಡಿಕೊಂಡು ಅವು ಕನ್ನಡದಲ್ಲಿವೆಯೆಂದಿದ್ದಾನೆ. ಆದರೆ ಉದಾಹರಣೆಗಳನ್ನು ಪರಿಶೀಲಿಸಿದರೆ ಅವು ಕನ್ನಡಕ್ಕೆ ನೈಜವಲ್ಲ ಎನ್ನಿಸದಿರದು.

ಭಟ್ಟಾಕಳಂಕನು ಸಂಸ್ಕೃತವನ್ನೇ ಆಧರಿಸಿಕೊಂಡಿರುವುದರಿಂದ ಅವನಿಗೆ ಈ ಸಂದೇಹಕ್ಕೇ ಅವಕಾಶವುಂಟಾಗಲಿಲ್ಲ. ಅವನ ಕಾಲಕ್ಕೆ ಸಾಕಷ್ಟು ಮಹಾಪ್ರಾಣ

ಯುಕ್ತ ಸಂಸ್ಕೃತ ಶಬ್ದಗಳು ಕನ್ನಡದವೇ ಆಗಿ ಉಪಯೋಗವಾಗುತ್ತಿದ್ದದ್ದರಿಂದ ಅವನಿಗೆ ಅದನ್ನು ಯೋಚಿಸುವ ಅಗತ್ಯವೇ ಕಾಣಲಿಲ್ಲವೆಂದು ತೋರುತ್ತದೆ. ಅವುಗಳು ಇರುವುದಾಗಿಯೇ ಭಾವಿಸಿಕೊಂಡು ಮುಂದುವರಿದಿದ್ದಾನೆ. ಮೇಲಿನ ಮೂರು ವ್ಯಾಕರಣಗಳೂ ಮಹಾಪ್ರಾಣವನ್ನು ಗುರುತಿಸಿರುವುದು ಕೇವಲ ಸಂಖ್ಯೆ ಮತ್ತು ಅನುಕರಣೆಗಳಲ್ಲಿ. ಆದ್ದರಿಂದಲೇ ಅವುಗಳ ಬಗ್ಗೆ ಸಂದೇಹ ಮೂಡಲು ಅವಕಾಶವುಂಟಾಗುತ್ತದೆ. ಮಹಾಪ್ರಾಣಗಳು ನಿಜವಾಗಿದ್ದರೆ ಆ ಎರಡು ವರ್ಗದ ಶಬ್ದಗಳಿಗೇ ಅದು ಸೀಮಿತವಾಗುವುದೆಂತು ?

ಹೆಚ್ಚು ಉಸಿರಿನ ಒತ್ತಡದಿಂದ ಉಚ್ಚರಿಸಲ್ಪಡುವ ಅಕ್ಷರಗಳಿಗೆ ಮಹಾಪ್ರಾಣಗಳೆಂದು ಹೆಸರು. ಪಾಣಿನಿಯ ಪ್ರಕಾರ ವರ್ಗದ್ವಿತೀಯ ಚತುರ್ಥವರ್ಣಗಳಲ್ಲದೆ ಶ, ಷ, ಸ, ಹ ಗಳೂ ಮಹಾಪ್ರಾಣಗಳು. ಕನ್ನಡ ವ್ಯಾಕರಣಗಳಲ್ಲಿ ಕೇವಲ ವರ್ಗದ್ವಿತೀಯ ಮತ್ತು ಚತುರ್ಥ ವರ್ಣಗಳನ್ನು ಮಾತ್ರ ಮಹಾಪ್ರಾಣಗಳೆನ್ನಲಾಗಿದೆ. ಮಹಾಪ್ರಾಣಾಕ್ಷರಗಳು ಶುದ್ಧದ್ರಾವಿಡದಲ್ಲಿಲ್ಲ. ಈ ಭಾಷೆಗಳನ್ನು ವಿಚಾರಿಸಿದಾಗ ತಿಳಿಯುತ್ತದೆ.

ಮೂಲದ್ರಾವಿಡವನ್ನು ಹೆಚ್ಚಾಗಿ ಪ್ರತಿನಿಧಿಸುವ ತಮಿಳಿನಲ್ಲಿ ಇಂದಿಗೂ ಮಹಾಪ್ರಾಣವಿಲ್ಲ. ವರ್ಗದ ಮೊದಲಿನ ಮತ್ತು ಕೊನೆಯ ವರ್ಣಗಳು ಮಾತ್ರ ತಮಿಳಿನಲ್ಲಿವೆ. ಶ, ಷ, ಸ, ಹ ಗಳೂ ತಮಿಳಿನಲ್ಲಿಲ್ಲ. ಇವುಗಳ ಬಗೆಗೆ ಕಾಲ್ಡ್‌ವೆಲ್ಲರು ಹೇಳುತ್ತಾ ಈ ನಾಲ್ಕು ವರ್ಣಗಳೂ ತಮಿಳಿಗೆ ಹೊರತಾಗಿವೆ. ಉಳಿದ ದ್ರಾವಿಡ ಭಾಷೆಗಳಲ್ಲಿ ಸಂಸ್ಕೃತದ ಪ್ರಭಾವದಿಂದ ಪ್ರಯೋಗಿಸಲಾಗುತ್ತದೆ. ಸಂಸ್ಕೃತದ 'ಶ' ಧ್ವನಿಯನ್ನು ಹೋಲುವ ಧ್ವನಿ ತಮಿಳಿನಲ್ಲಿದೆ. ಅದನ್ನು 'ಚ್' ಎಂಬಂತೆ ಉಚ್ಚರಿಸಲಾಗುತ್ತದೆ. ಕೆಲವೊಮ್ಮೆ 'ಶ್' ಎಂಬಂತೆ ಉಚ್ಚರಿಸಲಾಗುತ್ತದೆ. ಷ್, ಸ್ ಗಳೂ ತಮಿಳಲ್ಲಿಲ್ಲ. ಕೆಲವು ವಿದ್ಯಾವಂತರು ಇತ್ತೀಚೆಗೆ ಮಾತು, ಬರಹಗಳಲ್ಲಿ ಉಪಯೋಗಿಸುತ್ತಾರೆ. ಬರೆಯುವಾಗ ಗ್ರಂಥಾಕ್ಷರಗಳನ್ನು ಬಳಸಲಾಗುತ್ತದೆ......। ಮುಂದುವರಿಸಿ "ಷಕಾರವು ದ್ರಾವಿಡ ಭಾಷೆಗಳಲ್ಲೆಲ್ಲಾ ಇಲ್ಲ. ತೆಲುಗು, ಕನ್ನಡಗಳಿಗೆ ಸಂಸ್ಕೃತದಿಂದ ಬಂದಿವೆ"[2] ಎಂದಿದ್ದಾರೆ. ವರ್ಗ ದ್ವಿತೀಯ ಚತುರ್ಥಗಳಾಗಲೀ ಶ, ಷ, ಸ, ಹ ಗಳಾಗಲೀ ತಮಿಳಿನಲ್ಲಿಲ್ಲ. ಮೂಲ ದ್ರಾವಿಡದಲ್ಲೇ ಇದ್ದಿರಲಿಲ್ಲ ಎಂದಮೇಲೆ ಕನ್ನಡದಲ್ಲೂ ಇರುವುದು ಅಸಾಧ್ಯ. ಮಹಾಪ್ರಾಣಗಳನ್ನು ಅಲ್ಪಪ್ರಾಣಗಳಾಗಿ ಪರುಷಗಳನ್ನು ಮೃದುವಾಗಿ ಉಚ್ಚರಿಸುವುದು ದ್ರಾವಿಡದ ಜಾಯಮಾನ.

ತೆಲುಗಿನಲ್ಲೂ ವರ್ಗದ್ವಿತೀಯ ಚತುರ್ಥಾಕ್ಷರಗಳು ಮೊದಲು ಇರಲಿಲ್ಲ. ನನ್ನಯ ಭಟ್ಟನ ಆಂಧ್ರಶಬ್ದ ಚಿಂತಾಮಣಿಯಲ್ಲಿ "ಆದ್ಯಾಯಾಃ ಪಂಚಾಶದ್ವರ್ಣಾಃ ಪ್ರಶ್ವತೇಸ್ತು ದಶೋನಾಃ ಸ್ಯುಃ ಷಟ್‌ತ್ರಿಂಶದತ್ರತೇ ಅನ್ಯೇಚಾನುಪ್ರವಿಶಂತಿ

ಶಬ್ದಯೋಗವಶಾತ್" ಆದಿಭಾಷೆಯಾದ ಸಂಸ್ಕೃತದಲ್ಲಿ 50 ಅಕ್ಷರಗಳು, ಪ್ರಾಕೃತದಲ್ಲಿ 10 ಕಡಿಮೆ ಎಂದರೆ 40. ಇಲ್ಲ ಅಂದರೆ ತೆಲುಗಿನಲ್ಲಿ 36, ಶಬ್ದಯೋಗವಶದಿಂದ ಇತರ ವರ್ಣಗಳೂ ತೆಲುಗಿಗೆ ಸೇರುತ್ತವೆಯೆಂದೂ ಅಭಿಪ್ರಾಯ. ಅಚ್ಚತೆಲುಗಿನಲ್ಲೂ ಮಹಾಪ್ರಾಣವಿಲ್ಲ.

ಹಳೆಯ ಮಲಯಾಳದಲ್ಲೂ ತಮಿಳಿನಂತೆ ವರ್ಗಪ್ರಥಮ ಮತ್ತು ಅನುನಾಸಿಕ ಮಾತ್ರ ಇವೆ. ವಟ್ಟೆಳುತ್ತು ಕೋಲೆಳುತ್ತು ಲಿಪಿಗಳಲ್ಲಿ ಈ ಮೂಲವರ್ಣಗಳು ಮಾತ್ರ ಇವೆ. ಅಚ್ಚಮಲಯಾಳದಲ್ಲೂ ಶ್ರಾವಣಚಾಕ್ಷುಷಿಗಳೆರಡು ವರ್ಣಮಾಲೆ ಗಳಲ್ಲೂ ಮಹಾಪ್ರಾಣಗಳಿಲ್ಲವೆಂಬುದು ಸ್ಪಷ್ಟ.

ಹೀಗೆಯೇ ತುಳುವಿನಲ್ಲೂ ಮಹಾಪ್ರಾಣ ಧ್ವನಿಗಳಿಲ್ಲ. ಸಂಸ್ಕೃತಮಹಾಪ್ರಾಣ ಗಳನ್ನು ಅಲ್ಪಪ್ರಾಣವಾಗಿಯೇ ಉಚ್ಚರಿಸುವುದಾಗಿದೆ. ಕನ್ನಡವೂ ಒಂದು ದ್ರಾವಿಡ ಭಾಷೆಯಾದ್ದರಿಂದ ಅದರಲ್ಲೂ ಮಹಾಪ್ರಾಣಗಳಿರಲು ಸಾಧ್ಯವಿಲ್ಲ.

ಸಂಸ್ಕೃತದ ಮಹಾಪ್ರಾಣವುಳ್ಳ ಶಬ್ದಗಳು ತದ್ಭವವಾಗಿ ಕನ್ನಡಕ್ಕೆ ಬರುವಾಗ ಅಲ್ಪಪ್ರಾಣವಾಗಲು ಕಾರಣ ಕನ್ನಡದಲ್ಲಿ ಮಹಾಪ್ರಾಣವಿಲ್ಲದಿರುವುದೇ. ಉದಾ— ಧ್ವನಿ–ದನಿ, ಭಾಷೆ–ಬಾಸೆ, ಸಂಧಿ–ಸಂದು, ಸಂದಿ; ಖರ್ಜೂ–ಕಜ್ಜಿ, ಕಜ್ಜು, ಇತ್ಯಾದಿ. ನಮ್ಮ ವೈಯಾಕರಣರಿಗೆ ಕನ್ನಡದಲ್ಲಿ ಮಹಾಪ್ರಾಣಗಳಿವೆಯೆಂಬ ಸಂದೇಹ ಬರಲು ಕಾರಣ ಗ್ರಂಥಸ್ಥ ಭಾಷೆಯಲ್ಲಿ ತೋರುವ ಶಬ್ದಗಳು, ಸಂಖ್ಯೆ ಅನುಕರಣೆಗಳಲ್ಲಿ ಬರುವ ಮಹಾಪ್ರಾಣಗಳು. ಶ್ರಾವಣಧ್ವನಿಯನ್ನನುಸರಿಸಿ ಅವರು ಹೇಳುವುದಲ್ಲ ವೆಂಬುದು ಅವರು ಕೊಟ್ಟ ಉದಾಹರಣೆಗಳಿಂದ ತಿಳಿಯುತ್ತದೆ. ಮುಖ್ಯವಾಗಿ ಕೇಶಿರಾಜನು ಕೊಟ್ಟ ಉದಾಹರಣೆಗಳನ್ನಿಲ್ಲಿ ವಿಮರ್ಶಿಸಬಹುದು.

ಅನುಕರಣಕ್ಕೆ—ಖಣಿಲನೆ, ಛಮ್ಮನೆ, ಘುಮ್ಮನೆ ಇತ್ಯಾದಿ. ಇವು ಶಬ್ದ ಭಂಡಾರದಲ್ಲಿರುವ ಸಾರ್ಥಕ ಶಬ್ದಗಳಲ್ಲಿ, ಕೇವಲ ಕೇಳಿದ ಧ್ವನಿಯ ಅನುಕರಣೆಗಳು. ಇದನ್ನು ಒಬ್ಬೊಬ್ಬ ತನಗೆ ತೋರಿದಂತೆ ಅನುಕರಿಸಲು ಸಾಧ್ಯವಿದೆ. ಇದನ್ನು ಅಲ್ಪಪ್ರಾಣದಲ್ಲೂ ಹೇಳುವ ರೂಢಿಯಿಲ್ಲದಿಲ್ಲ. ಒತ್ತಡದಿಂದ ಕೂಡಿ ಉಚ್ಚರಿಸಿದ ಅನುಕರಣದಲ್ಲಿ ಮಹಾಪ್ರಾಣತ್ವ ಕಂಡ ಮಾತ್ರಕ್ಕೆ ಭಾಷೆಯಲ್ಲಿ ಮಹಾಪ್ರಾಣ ವಿವೆಯೆಂದು ಸಾಧಿಸಲು ಬರುವುದಿಲ್ಲ. ಫಕ್ಕನೆ ಎಂದಂತೆ ಪಕ್ಕನೆ ಎನ್ನಲೂಬಹುದು. ಆದುದರಿಂದ ಇವುಗಳನ್ನು ನಿರ್ಲಕ್ಷಿಸಬಹುದು.

ಸಂಖ್ಯಾವಾಚಕಗಳು— ಶಬ್ದಮಣಿದರ್ಪಣದಲ್ಲಿ ಕೊಟ್ಟ ಉದಾಹರಣೆಗಳು 'ಸಹಸ್ರ' ಸಂಸ್ಕೃತ ಶಬ್ದದ ತದ್ಭವವಾದ 'ಸಾಸಿರ'ದಿಂದ ಕೂಡಿದುವು. 'ಇರ್ಛಾಸಿರಂ ಎಣ್ಛಾಸಿರಂ' ಇತ್ಯಾದಿ. ಇರ್ + ಸಾಸಿರ ಇತ್ಯಾದಿ ಸಂಧಿಯಾಗುವಾಗ 'ಸ' ಕಾರದ ತಾಲವ್ಯೀಕರಣ (Platatization)ದಿಂದ 'ಚ'ಕಾರವಾಗುವುದು ಸ್ವಾಭಾವಿಕವಾದರೂ

ಸಕಾರಕ್ಕೆ ಛಕಾರಾದೇಶವೆಂಬ ವಿಧಿಯನ್ನು ಕೊಡುವುದಕ್ಕೆ ಕಾರಣವೇನು ? 'ಸ'ಕಾರವು ಚಕಾರವಾಗುವುದಕ್ಕೆ 'ಅಲರ್ಚು' (ಅಲರಿಸು), ಉದುರ್ಚು, ಉದಿರ್ಚು, (ಉದುರಿಸು) ಮುಂತಾದ ಅನೇಕ ಉದಾಹರಣೆಗಳಿವೆ."[3] ಎಂದು ಆರ್. ರಘುನಾಥ ರಾಯರೂ ಹೇಳಿದ್ದಾರೆ. ಈ ಬಗ್ಗೆ ವಿವೇಚಿಸಿದ ಪ್ರೊ॥ ಮರಿಯಪ್ಪಭಟ್ಟರು "......ಇರ್ಛಾಸಿರಂ ಎಂಬಲ್ಲಿ ಮಹಾಪ್ರಾಣ ಬಂದಂತೆ ಇರ್ಚಾವಡಿ, ಇರ್ಚೆಱಂಗು ಎಂಬಲ್ಲಿ ಸಕಾರವು ಚಕಾರದ ಮಹಾಪ್ರಾಣವಾಗಿಲ್ಲ. ಶ್ರೀಮತ್+ಶಶಾಂಕಂ– ಶ್ರೀಮಚ್ಛಶಾಂಕಂ ಎಂಬಲ್ಲಿ ಶಕಾರವು ಮಹಾಪ್ರಾಣವಾದಂತೆ ಕನ್ನಡ ಸಂಖ್ಯಾ ವಾಚಿಗಳ ಮಹಾಪ್ರಾಣದಲ್ಲಿ ಸಂಸ್ಕೃತಸಂಧಿಯು ವರ್ಜಿಸ್ಸಿರಲೇಬೇಕ.."[4] ಎಂದು ಅಭಿಪ್ರಾಯಪಟ್ಟಿದ್ದಾರೆ. ನಮ್ಮ ಉಡುಪಿ ಎಂ.ಜಿ.ಎಂ. ಕಾಲೇಜಿನ ಗೋವಿಂದಪೈ ಸಂಶೋಧನಕೇಂದ್ರದಲ್ಲಿ ದಿ॥ ಪೈಗಳವರ ಗ್ರಂಥಸಂಗ್ರಹದಲ್ಲಿ ಪ್ರೊ॥ ಮರಿಯಪ್ಪ ಭಟ್ಟರ 'ಮಹಾಪ್ರಾಣಗಳು' ಲೇಖನ ಪ್ರಕಟವಾಗಿರುವ ಪ್ರಬುದ್ಧ ಕರ್ಣಾಟಕದ ಪ್ರತಿಯಿದೆ.[5] ಅದರಲ್ಲಿ ಶ್ರೀ ಪೈಗಳು ಚಕಾರ ಮಹಾಪ್ರಾಣವಾದುದಕ್ಕೆ 'ಸಾಸಿರ'ದ ಮೇಲೆ (a) ಗುರುತುಮಾಡಿ ಬದಿಯಲ್ಲಿ ಸ್ವಹಸ್ತಾಕ್ಷರದಲ್ಲಿ ಹೀಗೆ ಟಿಪ್ಪಣಬರೆದಿದ್ದಾರೆ– "Due to the influence of perhaps 'ಹ' in 'ಸಹಸ್ರ' ?" ಎಂದು ಪ್ರಶ್ನಾರ್ಥಕ ಚಿಹ್ನೆಹಾಕಿ ಊಹಿಸಿದ್ದಾರೆ. ಅಂದರೆ 'ಸಹಸ್ರ' ಎಂಬ ಶಬ್ದದಲ್ಲಿರುವ 'ಹ'ಕಾರದ ಪ್ರಭಾವದಿಂದ ಆ ಮಹಾಪ್ರಾಣ (ಛ) ಬಂದಿರಬಹುದೇ ಎಂಬುದು ಅವರ ಊಹೆಯೆಂದು ಸ್ಪಷ್ಟವಾಗುತ್ತದೆ. ಆದರೆ ಸಹಸ್ರದ ತದ್ಭವವಾಗಿ 'ಸಾಸಿರ' ಆದಮೇಲೆ ಪುನಃ ಹಿಂದಿನ 'ಸಹಸ್ರ'ದ 'ಹ'ಕಾರದ ಪ್ರಭಾವ ಬರಲು ಹೇಗೆಸಾಧ್ಯ ? ಅದೇರೀತಿ ಇರ್+ಸಾಸಿರ ಎಂಬ ಕನ್ನಡದ ಸಂಧಿಯಲ್ಲಿ ಶ್ರೀಮಚ್ಛಶಾಂಕ' ಎಂಬಂತೆ ಸಂಸ್ಕೃತ ಸಂಧಿಯ ಪ್ರಭಾವವುಂಟಾಗುವುದೂ ಅಸಾಧ್ಯವೆಂದೇ ತೋರುತ್ತದೆ. ಹಾಗಾದರೆ ಇದಕ್ಕೇನು ಕಾರಣವಿರಬಹುದು ? ನನ್ನ ಅಭಿಮತದಂತೆ ಸಾಸಿರ ವೆಂಬುದು ದೊಡ್ಡಸಂಖ್ಯೆ. ಇದನ್ನು ತೋರಿಸುವುದಕ್ಕಾಗಿ ಸ ಕಾರದ ಸ್ಥಾನದಲ್ಲಿ ಬಂದ 'ಚ'ಕಾರವನ್ನು ಒತ್ತಿ ಉಚ್ಚರಿಸುವ ರೂಢಿಯಾಗಿದ್ದು ಅದು ಬರವಣಿಗೆ ಯನ್ನೂ ಪ್ರವೇಶಿಸಿರಬೇಕು. ದೊಡ್ಡ ಆನೆಯೆಂಬಲ್ಲಿ ಆನೆಯ ದೊಡ್ಡತನವನ್ನು ಕೇಳುವವನಿಗೆ ಸರಿಯಾಗಿ ಮನವರಿಕೆಮಾಡಲು ದೊಡ್ಡಆನೆ ಎನ್ನುವುದಿಲ್ಲವೇ ? ಸಾವಿರಗಳ ಗುಣಿತಗಳನ್ನು ಹೇಳುವಾಗಲೂ ಅವು ದೊಡ್ಡ ಸಂಖ್ಯೆಯೆಂದು ತೋರಿಸಲು ಎರಡುಸ್ಸಾವಿರ, ಮೂರುಸ್ಸಾವಿರ ಎಂದು ನಾವು ಆಡುಮಾತಿನಲ್ಲಿ ಪ್ರಯೋಗಿಸುವುದಿಲ್ಲವೇ ? ಅಂತೆಯೇ 'ಇರ್ಚಸಿರ'ವು ಇರ್ಛಾಸಿರ ಆಗಿರಬೇಕೆನ್ನಿ ಸುತ್ತದೆ. ಇರ್ಚಾವಡಿ ಮೊದಲಾದೆಡೆ ಹೀಗೆ ಒತ್ತಿಹೇಳುವ ಆವಶ್ಯಕತೆ ಇಲ್ಲದ್ದರಿಂದ ಅಲ್ಲಿ ಮಹಾಪ್ರಾಣ ಬಂದಿಲ್ಲ. ವ್ಯಾಕರಣದಲ್ಲಿ ಕೊಟ್ಟ ಸಂಖ್ಯಾವಾಚಕಗಳು ಇಂತಹವೇ ಕೇವಲ ಸಾವಿರ ಪದಗಳಾದ್ದರಿಂದ ಇಲ್ಲಿ ಬಂದ ಮಹಾಪ್ರಾಣವನ್ನು ಸ್ವೀಕರಿಸುವುದು ಸರಿಯೆನಿಸುವುದಿಲ್ಲ. ಇದು ಕೇವಲ ಮಹತ್ವನ್ನು ಬೋಧಿಸುವ

ದಕ್ಕಾಗಿ ಬಂದ ಒತ್ತಡ ಮಾತ್ರ. ಕನ್ನಡದ ಇತರ ಯಾವ ಸಂಖ್ಯಾವಾಚಕದಲ್ಲೂ ಮಹಾಪ್ರಾಣವಿಲ್ಲದಿರುವುದರಿಂದ ಇದನ್ನು ತಳ್ಳಿಹಾಕಬಹುದು. ಒನ್+ಪತ್ತು— ಒಂಬತ್ತು ಎಂಬುದನ್ನು ಕೆಲವರು ಒಂಭತ್ತು ಎಂಬುದಾಗಿ, ಹೀಗೆ ತೊಂಭತ್ತು ಎಂದು ಒತ್ತಡಸಹಿತ ಉಚ್ಚರಿಸುವ, ಕೆಲವೊಮ್ಮೆ ತಪ್ಪಾಗಿ ಬರೆಯುವ ರೂಢಿ ಅಜ್ಞತೆಯಿಂದ ಉಂಟಾಗಿದ್ದರೂ ಅದು ಸರಿಯಲ್ಲ. ಅದೇ ಸರಿಯೆಂದು ಭ್ರಮಿಸು ತ್ತಾರೆ. ಇನ್ನು ಸಹಜ ಮಹಾಪ್ರಾಣಕ್ಕೆ ಕೇಶಿರಾಜನು ಕೊಟ್ಟ ಉದಾಹರಣೆಗಳನ್ನು ನೋಡಿದರೆ ಅವು ಕನ್ನಡದ ದೇಶಿ ಶಬ್ದಗಳಲ್ಲವೆಂದು ತಿಳಿಯುತ್ತದೆ. ಖೊಪ್ಪರಂ, ವಖ್ಖಾಣಂ, ಪಖ್ಖಾಳಂ ಮೊದಲಾದವು ಪ್ರಾಕೃತವಾದರೆ ಧನಿ, ಭಂಗಾರ, ಭಾವ ಮೊದಲಾದವು ಸಂಸ್ಕೃತದವು. ಎಷ್ಟೋ ಶಬ್ದಗಳ ಅರ್ಥವಾಗಲೀ ಮೂಲವಾಗಲೀ ತಿಳಿಯುವುದಿಲ್ಲ. ಬಹುಶಃ ಅವನ ಕಾಲದಲ್ಲಿ ಅವೆಲ್ಲಾ ಪ್ರಯೋಗದಲ್ಲಿದ್ದರೂ ಇರಬಹುದು. ಅಥವಾ ಗ್ರಂಥಗಳಲ್ಲಿ ಕಂಡುಬಂದುದರಿಂದ ಮಹಾಪ್ರಾಣಗಳಿವೆ ಯೆಂದು ಅವನು ಹೇಳಿರಬೇಕು. ಮಹಾಪ್ರಾಣಗಳ ಬಗ್ಗೆ ವಿಮರ್ಶಿಸಿ ಈ ಶಬ್ದಗಳಲ್ಲಿ ಕೆಲವದರ ಮೂಲವನ್ನು ಶೋಧಿಸಿ ಪ್ರೊ॥ ಮರಿಯಪ್ಪಭಟ್ಟರು ಹಿಂದೆ ಹೇಳಿದ ತಮ್ಮ ಲೇಖನದಲ್ಲಿ "ಈ ಅಂಶಗಳನ್ನು ಗಮನಿಸಿದರೆ ಕನ್ನಡದಲ್ಲಿ ಸ್ವಾಭಾವಿಕವಾಗಿ ಮಹಾಪ್ರಾಣಗಳಿಲ್ಲವೆಂದು ಹೇಳಬೇಕಾಗುತ್ತದೆ"[6] ಎಂದಿದ್ದಾರೆ. ಇದರ ಬಗ್ಗೆ ಚರ್ಚಿಸಿ ಕನ್ನಡ ಕೈಪಿಡಿಕಾರರೂ "ಕನ್ನಡದಲ್ಲಿ ಸ್ವಾಭಾವಿಕವಾಗಿ ಮಹಾಪ್ರಾಣಾಕ್ಷರ ಗಳಿಲ್ಲ"[7] ಎಂದಿದ್ದಾರೆ. ಶ್ರೀ ಸೇಡಿಯಾಪು ಕೃಷ್ಣಭಟ್ಟರು ಪೊಸಗನ್ನಡದಲ್ಲಿ ಅಂಥ, ಇಂಥ, ಅಷ್ಟು, ಇಷ್ಟು ಇತ್ಯಾದಿ ಮಹಾಪ್ರಾಣಗಳು ಹುಟ್ಟಿಕೊಂಡಿವೆ. ಈಸು— ಇಷ್ಟು, ಆಸು—ಅಷ್ಟು, ಏಸು—ಎಷ್ಟು—ಇವುಗಳ ಮೂಲ ಈಸಿ, ಈ ಫತ್ ಎಂಬವು ಗಳಲ್ಲಿ ಅಡಗಿದೆಯೆಂದು ನನಗೆ ತೋರುತ್ತದೆ"[8] ಎಂಬ ಮಾತಿನಿಂದ ಹಳಗನ್ನಡದಲ್ಲಿ ಮಹಾಪಾಣವಿಲ್ಲಂವೆದು ಸೂಚಿಸಿದ್ದಾರೆ. "ಅಚ್ಚಗನ್ನಡದಲ್ಲಿಲ್ಲದಿದ್ದರೂ ಹೊಸ ಗನ್ನಡದಲ್ಲಿ ಅನುಸ್ವರಾದಿಗಳಂತೆ ಮಹಾಪ್ರಾಣಗಳು ಅವಶ್ಯ ಎಂದು ಅಭಿಪ್ರಾಯ ಪಡಲಾಗಿದೆ"[9].

ಪ್ರಾಚೀನ ಮತ್ತು ಆಧುನಿಕ ವೈಯಾಕರಣರ ಅಭಿಪ್ರಾಯಗಳನ್ನು ಮಥಿಸಿ ದಾಗ ಅಚ್ಚಕನ್ನಡದಲ್ಲಿ ಮಹಾಪ್ರಾಣವಿಲ್ಲವೆಂಬುದು ಸ್ಪಷ್ಟ. ಸಂಸ್ಕೃತದ ಪ್ರಭಾವ ದಿಂದ ಅದರ ಶಬ್ದಗಳೊಂದಿಗೆ ಅವು ದ್ರಾವಿಡ ಭಾಷೆಗಳನ್ನು ಪ್ರವೇಶಿಸಿವೆ. ತದ್ಭವೀಕರಿಸುವುದರ ಮೂಲಕ ಅವನ್ನು ಅಲ್ಪಪ್ರಾಣವಾಗಿಯೇ ಬಳಸಬಹುದಲ್ಲ ? ತಮಿಳು ಮಹಾಪ್ರಾಣಗಳಿಲ್ಲದೆ ಸಂಸ್ಕೃತ ಶಬ್ದಗಳನ್ನು ತನ್ನದನ್ನಾಗಿ ಬಳಸುವು ದಿಲ್ಲವೆ ? ತಮಿಳು ಆ ಕ್ರಮವನ್ನು ಬಹು ಹಿಂದಿನಿಂದ ಹಾಗೆಯೇ ನಡೆಸಿಕೊಂಡು ಬಂದಿದೆ. ಕನ್ನಡವಲ್ಲಿ ಆದಿಯಿಂದಲೇ ಸಂಸ್ಕೃತ ಶಬ್ದಗಳನ್ನು ಇದ್ದಂತೆ ಬಳಸುವುದೇ ಹೆಚ್ಚು, ತದ್ಭವೀಕರಿಸುವುದು ಬಹಳ ಕಡಿಮೆ. ಈಗ ಒಮ್ಮೆಲೇ ಮಹಾಪ್ರಾಣ

ಗಳನ್ನೆಲ್ಲಾ ತೆಗೆದುಹಾಕಿ ಅಲ್ಪಪ್ರಾಣವಾಗಿಸಿ ತದ್ಭವವಾಗಿಸುವುದು ಗೊಂದಲಕ್ಕೆ ಕಾರಣವಾದೀತು. ಉದಾ- ಧನ-ದನ, ಬಂಧ-ಬಂದ, ಭರ-ಬರ. ವಾಕ್ಯದಲ್ಲಿ ಸಂದರ್ಭಹೊಂದಿ ಇವುಗಳ ಅರ್ಥವನ್ನು ಭಾವಿಸಬಹುದಾದರೂ ಪ್ರತ್ಯೇಕ ಶಬ್ದಗಳಾಗಿ ಬಂದಾಗ ಅರ್ಥಕ್ಕೆ ತೊಡಕುಂಟಾಗುತ್ತದೆ.

ಬಿಡಿ ಶಬ್ದಗಳಾಗಿ ಬಂದಾಗ ಪ್ರಯತ್ನಪಟ್ಟು ತದ್ಬವಗಳಾಗಿಸಬಹುದು. ಸಮಸ್ತ ಪದಗಳಲ್ಲಿ ಆ ಮಹಾಪ್ರಾಣ ಬಂದಾಗ ಇಡೀ ಪದವನ್ನೇ ತದ್ಭವೀಕರಿಸಿ ಅಲ್ಪಪ್ರಾಣವಾಗಿಸುವುದೂ ತೊಡಕಿನದೇ. ಉದಾ. ಆ ಪದ್ಧರ್ಮ, ಶ್ವೇತಚ್ಛತ್ರ, ಭಸ್ಮಾವಶೇಷ ಇತ್ಯಾದಿ. ಹೀಗೆ ಸಮಸ್ತ ಶಬ್ದಗಳು ಬಂದಾಗ ತದ್ಭವಾಗಿಸದೆ ಇದ್ದಂತೆ ಬಳಸುವುದು ರೂಢಿ. ಅಂತಹ ಶಬ್ದಗಳಿಗಾಗಿಯಾದರೂ ಮಹಾಪ್ರಾಣ ಬೇಕೆಂದಾಯಿತು. ಬಿಡಿ ಶಬ್ದಗಳಲ್ಲೇ ಮಹಾಪ್ರಾಣಗಳನ್ನು ತಳ್ಳಿ ಅಲ್ಪಪ್ರಾಣವಾಗಿಸುವುದು ಹಿತವೆನಿಸುವುದಿಲ್ಲ. ಬಹುತಃ ಅವನ್ನು ಮಹಾಪ್ರಾಣವನ್ನಾಗಿ ಉಪಯೋಗಿಸಿ ರೂಡಿಯಾಗಿರುವುದರಿಂದ ಇನ್ನು ಅಲ್ಪಪ್ರಾಣವಾಗಿಸಲು ಮನವೊಪ್ಪದಿರುವುದೇ ಕಾರಣ. ಉದಾ. ವಿಫಲ, ಅಖಿಂಡನಿಷ್ಠೆ ಇತ್ಯಾದಿ. ಅಲ್ಪಪ್ರಾಣವಾಗಿಸುವ ಪ್ರಯತ್ನ ಸಂಸ್ಕೃತದ ಬಳಕೆ ಕನ್ನಡದಲ್ಲಿ ಆರಂಭವಾದಂದಿನಿಂದಲೇ ನಡೆಯುತ್ತಿದ್ದರೆ ಅದು ಹೊಸದಾಗುತ್ತಿರಲಿಲ್ಲ. ಹೀಗೆ ಇದಕ್ಕಿದ್ದಂತೆ ಒಮ್ಮೆಲೇ ಹಾಗೆ ಪ್ರಾರಂಭಿಸಲಾಗುವುದಿಲ್ಲ. ಕನ್ನಡ ಕವಿಗಳು ಮೊದಲಾಗಿ ಸಂಸ್ಕೃತ ಪಂಡಿತರಾಗಿಯೇ ಕನ್ನಡದ ಕವಿಗಳಾಗಿರುವುದು ಇದಕ್ಕೆ ಕಾರಣ. ಸಂಸ್ಕೃತದ ಮೇಲಿನ ಅವರ ಅಭಿಮಾನ ಆ ಶಬ್ದಗಳನ್ನು ವಿರೂಪಗೊಳಿಸಲು ಒಪ್ಪಲಿಲ್ಲ. ಇದ್ದಂತೆಯೇ ಬಳಸಲು ಪ್ರೇರೇಪಣೆ ನೀಡಿತು. ಆದ್ದರಿಂದಲೇ ತದ್ಭವ ಶಬ್ದಗಳ ಸಂಖ್ಯೆ ತತ್ಸಮಗಳಿಗಿಂತ ತೀರಾ ಕಡಿಮೆ. ಆಂಡಯ್ಯನಂಥವರ ಮುಂದಿನ ಪ್ರಯತ್ನ ಸಫಲವಾಗಲಿಲ್ಲ. ದ್ರಾವಿಡ ಜಾಯಮಾನಕ್ಕನುಸರಿಸಿ ಸಂಸ್ಕೃತ ಶಬ್ದಗಳನ್ನು ಬದಲಿಸಿ ಉಚ್ಚರಿಸಿದರೆ ಅದು ತಪ್ಪೆಂದು ಮೂಲರೂಪವನ್ನೇ ಸಾಧಿಸುವ ಪ್ರಯತ್ನ ನಮ್ಮ ಸಂಸ್ಕೃತ ಪಂಡಿರದಾದ್ದರಿಂದ ನಾವು ಸಂಸ್ಕೃತದ ಯಥಾವತ್ ಪ್ರಯೋಗವನ್ನೇ ಹೆಚ್ಚು ರೂಢಿಗೆ ತರುವಂತಾಯಿತು. ಹಾಗಾಗಿ ಸಂಸ್ಕೃತದ ಮಹಾಪ್ರಾಣಾಕ್ಷರಗಳು ಆ ಶಬ್ದಗಳೊಂದಿಗೆ ನಮ್ಮ ಭಂಡಾರ ಸೇರಿದುವು. ಇದರಿಂದ ಕನ್ನಡದ ಸ್ವಂತಿಕೆಗೆ ಸ್ವಲ್ಪ ಭಂಗ ಬಂದರೂ ಅದು ಸಂಪನ್ನವಾಯಿತು. ಕನ್ನಡದ ಬೆಳವಣಿಗೆಯು ಹಂತದಲ್ಲೇ ಸಂಸ್ಕೃತದ ನೆರವು ಕನ್ನಡಕ್ಕೆ ಬಂದುದರಿಂದ ಪ್ರಾಚೀನ ಶಿಲಾ ಶಾಸನಗಳಲ್ಲೇ ಹೆಚ್ಚು ಸಂಸ್ಕೃತ ಶಬ್ದಗಳನ್ನೂ ಅವುಗಳಲ್ಲಿ ಮಹಾಪ್ರಾಣಗಳನ್ನೂ ನೋಡಬಹುದು.—ಅರಿತ ಕುಸ್ಥ ಭಟ್ಟೋರ ನಾಳೆ...ಪ್ವಗೇಶ ನಾಗೇಂದ್ರಾ ಭೀಳಬ್ಭಟ ಹರಪ್ಪೊರ್. ಇತ್ಯಾದಿ.

ಬೆಳವಣಿಗೆಯ ಎಳವೆಯಲ್ಲೇ ಮೈಗೂಡಿಕೊಂಡ ಮಹಾಪ್ರಾಣ ಇನ್ನು ಅಲ್ಪಪ್ರಾಣವಾಗುವುದೆಂತು ? ದ್ರಾವಿಡ ಭಾಷೆಯ ಜಾಯಮಾನಕ್ಕೆ ಮಹಾಪ್ರಾಣವು

ಹೊರತಾದರೂ ಆ ವರ್ಗದ ಕನ್ನಡಭಾಷೆ ಅತ್ಯಂತ ಪ್ರಾಚೀನ ಕಾಲದಿಂದಲೇ ಅದನ್ನು ಸ್ವೀಕರಿಸಿ ಮೈಗೂಡಿಸಿಕೊಂಡಿರುವುದರಿಂದ ಸಂಸ್ಕೃತ ಶಬ್ದಗಳ ಬಳಕೆಗಾಗಿ ಮಹಾ ಪ್ರಾಣ ಬೇಕಾಗುತ್ತದೆ. ಅಚ್ಚಗನ್ನಡಕ್ಕೆ ಮಹಾಪ್ರಾಣ ಬೇಕಿಲ್ಲ. ಈ ದೃಷ್ಟಿ ಯಿಂದಲೇ ಕೇಶಿರಾಜ ಅವನ್ನು ಸ್ವೀಕರಿಸಿರಲೂಬಹುದು.

ಅಡಿ ಟಿಪ್ಪಣಿಗಳು

1 A Comparative grammar of the Dravidian-R Caldwell, Page 146
2 ಅದೇ, Page 147
3 ವ್ಯಾಕರಣೋಪನ್ಯಾಸ ಮಂಜರಿ : ಆರ್. ರಘುನಾಥರಾವ್, ಪುಟ 22-23
4 "ಮಹಾಪ್ರಾಣಗಳು"-ಕನ್ನಡ ಸಂಸ್ಕೃತಿ, ಪುಟ 324
5 "ಮಹಾಪ್ರಾಣಗಳು"-ಪ್ರೊ. ಮರಿಯಪ್ಪಭಟ್ಟ–ಪ್ರಬುದ್ಧ ಕರ್ಣಾಟಕ, ಸಂಪುಟ 28, ಸಂ 2, ಪುಟ 5, 1946
6 "ಮಹಾ ಪ್ರಾಣಗಳು"-ಅದೇ,
7 ಕನ್ನಡ ಕೈಪಿಡಿ, ಪುಟ 317
8 ಕನ್ನಡ ವರ್ಣಗಳು, ಅಡಿ ಟಿಪ್ಪಣಿ, ಪುಟ 102
9 ಕನ್ನಡ ಭಾಷೆಯ ಚರಿತ್ರೆ – ಪ್ರ. ಗೋ. ಕುಲಕರಣಿ
10 ಕನ್ನಡ ಶಾಸನ ಸಂಪದ - ಹಲ್ಮಿಡಿ ಶಾಸನ - ಸು. ಕ್ರಿ. ಶ. 450, ಸಂ. ಡಾ. ಆರ್. ಸಿ. ಹಿರೇಮಠ್ ಮತ್ತು ಡಾ॥ ಎಂ. ಎಂ. ಕಲಬುರ್ಗಿ

ವಿಜ್ಞಾನ ಕಲ್ಪನಾ ಸಾಹಿತ್ಯ

ಸೂ. ಸುಬ್ರಹ್ಮಣ್ಯಂ

ವಿಜ್ಞಾನ ಕಲ್ಪನಾ ಸಾಹಿತ್ಯ, ಹೆಸರೇ ಸೂಚಿಸುವಂತೆ, ಒಂದು ರೋಮಾಂಚಕಾರಿ ಹಾಗೂ ರಂಜನೀಯ ಸಾಹಿತ್ಯ ಪ್ರಕಾರ. ಅದೊಂದು ಸಾಹಿತ್ಯಿಕ ಭಕ್ಷ್ಯವೂ ಹೌದು. ಅದಕ್ಕೆ ಬಳಸುವ ಪರಿಕರಗಳು ವಿಜ್ಞಾನ ಮತ್ತು ಕಲ್ಪನೆ. ತೋರಿಕೆಗೆ ಇವು ಬೇರೆಬೇರೆಯಂತೆ ಕಂಡರೂ ಇವೆರಡೂ ಮನಸ್ಸಿನ ಪ್ರಪಂಚಕ್ಕೇ ಸೇರಿದವು. ಆದರೆ, ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯುವಂತೆ, ವಿಜ್ಞಾನ ವಾಸ್ತವಿಕತೆಯತ್ತ ಎಳೆದರೆ ಕಲ್ಪನೆ ಕನಸಿನತ್ತ ಸೆಳೆಯುತ್ತದೆ. ಒಂದು ವಾಸ್ತವಿಕತೆಯ ಬೀಡಾದರೆ ಮತ್ತೊಂದು ಕನಸಿನ ಕಾಡು. ಒಂದು ಸತ್ಯ; ಮತ್ತೊಂದು ಮಿಥ್ಯ.

ವಿಜ್ಞಾನ ಮತ್ತು ಕಲ್ಪನೆಗಳನ್ನೊಳಗೊಂಡ ಸೃಜನಾತ್ಮಕ ಸಾಹಿತ್ಯಕ್ಕೆ ಇಂಗ್ಲೀಷಿನ ಸಂವಾದಿ ಪದ – ‘Science fiction’. ಇಂಗ್ಲೀಷಿನಿಂದ ನಮಗೆ ಬಳುವಳಿಯಾಗಿ ಬಂದ ಈ ಅವಳಿ ಶಬ್ದಗಳಿಗೆ ಕನ್ನಡದಲ್ಲಿ ಸಮಾನಾರ್ಥ ಪದಗಳಾಗಿ ಬಳಸಬಹುದಾದ ತ್ರಿವಳಿ ಶಬ್ದಗಳೆಂದರೆ ವಿಜ್ಞಾನ ಕಲ್ಪನಾ ಸಾಹಿತ್ಯ.

ವಿಚಿತ್ರ ಜಗತ್ತುಗಳು ಹಾಗೂ ಪ್ರಾಣಿಗಳು, ಪ್ರಕೃತಿ ಸಹಜವಾದ ನಿಯಮಗಳಿಗಿಂತ ಪ್ರತ್ಯೇಕವಾದವುಗಳು, ಕೇವಲ ಯಕ್ಷಿಣಿಗಳಾಗಿರದೆ ವೈಜ್ಞಾನಿಕ ಸಾಧ್ಯತೆಗಳನ್ನುಳ್ಳ ಶೋಧನೆಗಳು— ಇವುಗಳನ್ನು ಕುರಿತ ಅಥವಾ ಇವುಗಳನ್ನೊಳಗೊಂಡ ಸಾಹಿತ್ಯವನ್ನು ‘ವಿಜ್ಞಾನ ಕಲ್ಪನಾ ಸಾಹಿತ್ಯ’ವೆಂದು ಸೂತ್ರೀಕರಿಸುವುದಾದರೆ, ಆಗ ನಾವು ಈ ಸಾಹಿತ್ಯ ಪ್ರಕಾರದ ಆದಿಯನ್ನು ಪ್ರಾಚೀನ ಸಾಹಿತ್ಯದ ಉಗಮದಲ್ಲಿಯೇ ಕಾಣಬಹುದು. ಏಕೆಂದರೆ ಪವಿತ್ರ ಗ್ರಂಥಗಳಲ್ಲಿಯೂ ಪ್ರಾಚೀನ ಪುರಾಣಗಳಲ್ಲಿಯೂ ಇಂಥ ವ್ಯಕ್ತಿ-ಶಕ್ತಿಗಳು, ಸಂಗತಿ-ಸನ್ನಿವೇಶಗಳು ಬಂದಿರುವುದನ್ನು ನಾವು ಕಾಣುತ್ತೇವೆ.

ವಿಜ್ಞಾನ ಕಲ್ಪನಾ ಸಾಹಿತ್ಯ ಎಂದು, ಎಲ್ಲಿ, ಹೇಗೆ ಉದಯವಾಯಿತೆಂದು ನಾವು ಹಿಮ್ಮುಖವಾಗಿ ಅರಸುತ್ತಾ ಹೊರಟಾಗ ನಮ್ಮ ಅನ್ವೇಷಣಾ ಪಥದ ಕೊನೆಕೊನೆಯಲ್ಲಿ ನಮ್ಮ ಕಣ್ಮುಂದೆ ಕಾಣಬರುವುದು ವಿಜ್ಞಾನ ಕಲ್ಪನಾ ಸಾಹಿತ್ಯ ಮತ್ತು ಕೇವಲ ರಂಜಕ ಹಾಗೂ ಕಾಲ್ಪನಿಕ ಬರವಣಿಗೆಗಳ ಗೋಜಿನ ದೃಶ್ಯ. ಈ ಗೊಂದಲಮಯದ ಬರವಣಿಗೆಯನ್ನು ಗಮನಿಸಿ, ಕೇವಲ ಭ್ರಾಮಕ ಹಾಗೂ ಊಹಾಚಿತ್ರಣವನ್ನೇ ವಿಜ್ಞಾನ ಕಲ್ಪನಾ ಸಾಹಿತ್ಯವೆಂದು ಹೆಸರಿಸಿ, ಅದರ ಮೂಲವನ್ನು ಪ್ರಾಚೀನ ಕೃತಿಗಳಿಗೆ ಆರೋಪಿಸುವುದೂ ಉಂಟು.

ವಿಜ್ಞಾನ ಕಲ್ಪನಾ ಸಾಹಿತ್ಯದ ಉಗಮ ಇಂದು–ನಿನ್ನಿನ ಪರಮಾಣು ಬಾಂಬುಗಳ ಸ್ಫೋಟಗಳಿಂದಾಗಲೀ ವಿಮಾನಗಳ ಹಾರಾಟ ಹೋರಾಟಗಳಿಂದಾಗಲಿ ಸಮಕಾಲೀನ ಸಮಾಜದ ಸೋಜಿಗದ ಶೋಧಗಳಿಂದಾಗಲಿ ಉಂಟಾದುದಲ್ಲ. ಅದರ ಅರ್ವಾಚೀನ ನೆಲೆ-ಬೆಲೆಗಳಿಗೆ ಅದರದೇ ಪ್ರಾಚೀನ ಹಿನ್ನೆಲೆ ಬಹುಮಟ್ಟಿಗೆ ಕಾರಣ.

ನಾವಿಂದು ಚಂದ್ರನತ್ತ ಹಾರಿದ್ದೇವೆ; ಆದರೆ ಭೂಮಿಯ ಮೇಲೆ ಪರಮಾಣು ಸ್ಫೋಟಗಳು ನಡೆಯುತ್ತಲೇ ಇವೆ. ಭಸ್ಮಾಸುರನಂತೆ, ನಮ್ಮ ನಾಶವನ್ನು ನಾವೇ ಕೈಯಾರ ಮಾಡಿಕೊಳ್ಳುತ್ತೇವೆಯೋ ಎಂಬ ಭೀತಿಯೂ ಇದ್ದೇ ಇದೆ. ಕೆಲವಾರು ವರ್ಷಗಳ ಹಿಂದೆ ಇವು ನಂಬಲಾಗದಂತಹ ಕೇವಲ ಭಾವನೆಗಳಷ್ಟೇ ಆಗಿದ್ದುವು. ಆದರಿಂದು ಅವು ನಮ್ಮ ಮುಂದೆ ನಿಂತಿರುವ ನಗ್ನ ಸತ್ಯಗಳು.

ವಿಜ್ಞಾನ ಕಲ್ಪನಾ ಸಾಹಿತ್ಯ ಸ್ಫೂರ್ತಿದಾಯಕ ಆಶಾಭಾವನೆಯನ್ನಾಗಲಿ ಭಯಂಕರ ನಿರಾಶಾಭಾವನೆಯನ್ನಾಗಲಿ ನಮ್ಮಲ್ಲಿ ಮೂಡಿಸಬಲ್ಲುದು, ರೂಢಿಸ ಬಲ್ಲುದು; ಅದು ಭವಿಷ್ಯವನ್ನು ಸೂಚಿಸಿಯೋ ಭೂತವನ್ನು ಸ್ಮರಿಸಿಯೋ ರಂಜಿಸ ಬಲ್ಲದು, ಅದು ಮಾನವನ ವಿಚಾರಾತ್ಮಕ ಹಾಗೂ ಅವಿಚಾರಾತ್ಮಕ ಮನಸ್ಸಿಗೆ ರಂಜನೆಯನ್ನೂ ಒದಗಿಸಬಲ್ಲದು. ಅದರ ಇತಿಹಾಸದತ್ತ ನಮ್ಮ ಇಣಕು ನೋಟಕ್ಕೆ ಕಾಣಸಿಗುವ ದೃಶ್ಯ ಪರಂಪರೆ ಆಹ್ಲಾದಕರ ಹಾಗೂ ಆಶ್ಚರ್ಯಕರ,

ಕ್ರಿ.ಶ. ಎರಡನೆಯ ಶತಮಾನದಲ್ಲಿದ್ದ ವಿಡಂಬನಕಾರ ಸಮೋಸಟದ ಲೂಸಿಯನ್ ಬರೆದ 'Vera Historia' ಪ್ರಪ್ರಥಮ ವಿಜ್ಞಾನ ಕಲ್ಪನಾ ಸಾಹಿತ್ಯ ವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಇಲ್ಲಿನ ಕಥಾನಾಯಕ ಚಂದ್ರಗ್ರಹಕ್ಕೆ ಹೋಗುತ್ತಾನೆ, ಶುಕ್ರಗ್ರಹಕ್ಕೆ ಹಾರುತ್ತಾನೆ, ಸೂರ್ಯಚಂದ್ರರಲ್ಲಿ ವಾಸಿಸು ತ್ತಿರುವರ ನಡುವಣ ಯುದ್ಧಗಳಲ್ಲಿ ಭಾಗವಹಿಸುತ್ತಾನೆ. ಹೀಗೆ ಹಲವು ಅದ್ಭುತಗಳಲ್ಲಿ ಅವನು ಮೆರೆಯುತ್ತಾನೆ. ಹೊರನೋಟಕ್ಕೆ ಇದು ವಿಜ್ಞಾನ ಕಲ್ಪನಾ ಸಾಹಿತ್ಯದ ಮೆರುಗನ್ನೇ ನೀಡಿದರೂ ಮೂಲತಃ ಇದರಲ್ಲಿ ವೈಜ್ಞಾನಿಕ ಅಂಶಗಳು ಅಸಮಂಜಸ ವಾಗಿವೆ; ವಿಜ್ಞಾನದ ದೃಷ್ಟಿಯಿಂದ, ಅವು ಅರ್ಥವಿಹೀನವೆನಿಸುತ್ತವೆ. ಅಲ್ಲಿ ವಾಸ್ತವಿಕತೆಯ ಅಭಾವ ಒಂದು ಕಡೆ; ಅದ್ಭುತ ರಮ್ಯಗಳ ಅತಿರೇಕ ಮತ್ತೊಂದು ಕಡೆ. ಪ್ರಾಚೀನ ಭ್ರಾಮಕ ಕೃತಿಗಳೆಲ್ಲದರ ಕಥೆಯೂ ಇದೇ ಆಗಿದೆ. ಉದಾಹರಣೆಗೆ, ಒಡೆಸ್ಸಿಯ ಪ್ರವಾಸ ಕಥನಗಳು, ಪ್ಲೇಟೋವಿನ ಅಟ್ಲಾಂಟಿಸ್ ಕುರಿತ ಚಿತ್ರಣಗಳು, ಅರೇಬಿಯನ್ ನೈಟ್ಸ್ ಕಥೆಗಳು, ಇತ್ಯಾದಿ. ಈವರೆಗೆ ನಮಗೆ ತಿಳಿದಿರುವಂತೆ, ಅವು ವಿಜ್ಞಾನದ ಆಧಾರದ ಮೇಲೆ ನಿರ್ಮಿತವಾಗಿಲ್ಲ. ಆದುದರಿಂದಲೇ ವಿಜ್ಞಾನ ವಿಲ್ಲದೆ, ಅವು ವಿಜ್ಞಾನ ಕಲ್ಪನಾಸಾಹಿತ್ಯವೂ ಆಗುವುದಿಲ್ಲ.

ನಮ್ಮ ಸಮಾಜದ ನಡಾವಳಿಗಳನ್ನೂ ನೀತಿ-ನೇಮಗಳನ್ನೂ ದೌರ್ಬಲ್ಯಗಳನ್ನೂ ವಿಡಂಬಿಸುವ ಸಲುವಾಗಿ ಮತ್ತಾವುದೋ ದೂರ ಪ್ರದೇಶದಲ್ಲಿ ಅಥವಾ ಕಾಲ್ಪನಿಕ

ದೇಶವೊಂದರಲ್ಲಿ ಘಟನೆಗಳು ಸಂಭವಿಸುವಂತೆ ಆರೋಪಿಸಿ ನಿರೂಪಿಸಿರುವ ಕಥೆಗಳನ್ನು ನಾವು ಓದಿಬಲ್ಲೆವು. ಅಲ್ಲಿ ನಾವು ಕಾಣುವುದು ನಮ್ಮದೇ ಸಮಾಜ ಅಥವಾ ಅದರ ಪ್ರತಿರೂಪ ಇಲ್ಲವೆ ವಕ್ರರೂಪ. ಆದರೆ ಅದು ನಡೆಯುವ ಸ್ಥಳ ನಮಗಂತೂ ತೀರ ಪರಸ್ಥಳ! ಸರ್ ಥಾಮಸ್ ಮೋರ್ ಕ್ರಿ.ಶ. 1516 ರಲ್ಲಿ ಬರೆದ 'ಯುಟೋಪಿಯ' ಇಂಥ ಕೃತಿಗಳಲ್ಲೊಂದು ಇಂಥ ಕೃತಿಗಳ ಲೇಖಕರು ಮನುಷ್ಯ ಮತ್ತು ಸಮಾಜದ ಕಡೆಗೆ ತಮ್ಮ ಭಾವನೆಗಳನ್ನು ಹರಿಯಬಿಡುತ್ತಾರೆಯೇ ವಿನಾ ವಿಜ್ಞಾನ ಮತ್ತು ತಂತ್ರ ಜ್ಞಾನಗಳ ಕಡೆಗೆ ಅವರ ಚಿಂತನೆ ವಿಶೇಷವಾಗಿ ಒಲುವುದಿಲ್ಲ.

ವಿಜ್ಞಾನ ಕಲ್ಪನಾ ಸಾಹಿತ್ಯದ ಲಕ್ಷಣಗಳನ್ನು ಸಮೀಪಿಸುವ ಒಂದು ಕೃತಿ ಯೆಂದರೆ ಇಂಗ್ಲೀಷ್ ವಿಡಂಬನಕಾರ ಜೋನಾಥನ್ ಸ್ವಿಫ್ಟ್ ಕ್ರಿ.ಶ. 1725ರಲ್ಲಿ ಪ್ರಕಟಿಸಿದ 'ಗಲಿವರ್ಸ್ ಟ್ರಾವೆಲ್ಸ್'. ಇಲ್ಲಿಯೂ ನೀತಿಗಳ ನಿರೂಪಣೆಗಾಗಿ ಕಾಲ್ಪನಿಕ ಸಮಾಜಗಳ ನಿರ್ಮಾಣವಿದೆ. ಜೊತೆಗೆ, ಈ ವಿಡಂಬನೆಯಲ್ಲಿ ಹಾರುವ ದ್ವೀಪ ಲಾಪುಟವನ್ನು ಗಲಿವರ್ ಭೇಟಿ ಮಾಡುವ ವಿಷಯ ಬರುತ್ತದೆ. ಈ ದ್ವೀಪ, ಕಾಂತಶಕ್ತಿಯಿಂದ ಆಕಾಶ ಮಧ್ಯದಲ್ಲಿ ನಿಂತಿರುವಂತೆ ನಿರೂಪಿಸಲಾಗಿದೆ. ಒಂದು ರೀತಿಯಲ್ಲಿ ಇದು ನಮ್ಮ ತ್ರಿಶಂಕು ಸ್ವರ್ಗವಿದ್ದಂತೆ ಎನ್ನಬಹುದು. ಅವೈಜ್ಞಾನಿಕವೇ ಆದರೂ, ಅಯಸ್ಕಾಂತದ ಅಸ್ತಿತ್ವ ಹಾಗೂ ಅದ್ಭುತ ಶಕ್ತಿಯ ಮುನ್ಸೂಚನೆ ಈ ಕಥೆಯಲ್ಲಿ ನಮಗೆ ಕಂಡು ಬರುತ್ತದೆ.

ಹದಿನೇಳನೆಯ ಶತಮಾನದ ವಿಖ್ಯಾತ ಜರ್ಮನ್ ಖಗೋಳ ವಿಜ್ಞಾನಿ ಜೋಹಾನ್ಸ್ ಕೆಪ್ಲರ್‌ನ ಬರವಣಿಗೆಗಳೊಂದಿಗೆ ರಮ್ಯ ಸಾಹಿತ್ಯವು ವಿಜ್ಞಾನ ಕಲ್ಪನಾ ಸಾಹಿತ್ಯವಾಗಿ ಮಾರ್ಪಾಟು ಹೊಂದತೊಡಗಿತೆನ್ನಬಹುದು. 'ಸೋಮ್ನಿಯಂ' ಅವನ ಒಂದು ಪ್ರಸಿದ್ಧ ಕಥೆ. ಕೆಪ್ಲರ್ ಇಲ್ಲಿ ಸಮಕಾಲೀನ ವೈಜ್ಞಾನಿಕ ಅಂಶಗಳನ್ನು ಗಣನೆಗೆ ತೆಗೆದುಕೊಂಡು ವಾಸ್ತವವಾದ ಚಂದ್ರನನ್ನು ಕುರಿತು ಹೇಳ ಹೊರಟಿದ್ದಾನೆ. 'ಸೋಮ್ನಿಯಂ' ವಿಚಾರಪರ ವಿಜ್ಞಾನ ಕಲ್ಪನಾ ಸಾಹಿತ್ಯದ ಪ್ರಥಮ ಕೃತಿ ಎಂಬ ಅಭಿಪ್ರಾಯವೂ ಇದೆ.

ಫ್ರೆಂಚ್ ಸಾಹಿತಿ ಸಿರಾನೋ ಡಿ ಬರ್ಗ್‌ರಾಕ್ ಕ್ರಿ.ಶ.1650 ರಲ್ಲಿ ಪ್ರಕಟವಾದ ತನ್ನ 'A Voyage to the Moon' ಎಂಬ ಕೃತಿಯಲ್ಲಿ ಚಂದ್ರಲೋಕ ಯಾನಕ್ಕೆ ಸಿಡಿಮದ್ದಿನ ರಾಕಟ್ಟನ್ನು ಉಡಾಯಿಸುವ ವಿಷಯವನ್ನು ಹೇಳುತ್ತಾನೆ. ಅಂತರ ಗ್ರಹಯಾನಕ್ಕೆ ರಾಕೆಟ್ಟುಗಳ ಬಳಕೆಯ ಸೂಚನೆ ಯಾವುದೇ ವೈಜ್ಞಾನಿಕ ಪ್ರಬಂಧದಲ್ಲಿ ಕಾಣಸಿಗದೆ ಹೀಗೆ ಪ್ರಪ್ರಥಮವಾಗಿ ವಿಜ್ಞಾನ ಕಲ್ಪನಾ ಸಾಹಿತ್ಯದಲ್ಲಿ ಕಂಡು ಬರುವುದು ಸೋಜಿಗವೇ ಸರಿ!

ಎಲ್ಲಿಯವರೆಗೆ ವೈಜ್ಞಾನಿಕ ಹಾಗೂ ತಾಂತ್ರಿಕ ಆವಿಷ್ಕಾರಗಳೂ ಅಭ್ಯುದಯ ಗಳೂ ಗಮನೀಯವಾಗಿರಲಿಲ್ಲವೋ ಅಲ್ಲಿಯವರೆಗೆ ವಿಜ್ಞಾನ ಕಲ್ಪನಾ ಸಾಹಿತ್ಯ

ರಚನೆಯೂ ಕುಂಟಿತವಾಗಿಯೇ ಇದ್ದಿತೆನ್ನಬಹುದು. ಆದರೆ 'ಕೈಗಾರಿಕಾ ಕ್ರಾಂತಿ'ಯ ಬಳಿಕ ವಿಜ್ಞಾನ ಮತ್ತು ತಾಂತ್ರಿಕ ವಿಚಾರಗಳಲ್ಲಿ ಮುಂಭಾವನೆಗಳನ್ನು ನೀಡುವ ಮನೋಧರ್ಮ ವಿಪುಲವಾಗಿ ಬೆಳೆಯಿತು. ವಾಸ್ತವದಲ್ಲಿ, ವಿಜ್ಞಾನ ಕಲ್ಪನಾ ಸಾಹಿತ್ಯವು ಕೈಗಾರಿಕಾ ಕ್ರಾಂತಿಯ ಸಾಹಿತ್ಯಿಕ ಪ್ರತಿಕ್ರಿಯೆ ಎನ್ನುವಷ್ಟರಮಟ್ಟಿಗೆ ಈ ಭಾವನೆಗಳು ಬೆಳೆದುವು, ಬೆಳೆದು ಬೇರೂರಿದವು. ಮೇರಿಷೆಲ್ಲಿಯ 'ಫ್ರಾಂಕೆನ್‌ಸ್ಟೈನ್' ಅಮೆರಿಕದ ಎಡ್ಗರ್ ಅಲನ್ ಪೋ ರಚಿಸಿದ ಕಥೆಗಳು ಈ ಹೇಳಿಕೆಗೆ ಸಾಕ್ಷಿಯಾಗಿವೆ. ಗಂಟೆಗೆ ನೂರು ಮೈಲಿ ವೇಗದಲ್ಲಿ ಅಟ್ಲಾಂಟಿಕ್ ಸಾಗರವನ್ನು ಅತ್ತಿಂದಿತ್ತ ದಾಟುವ ವಾಯುನೌಕೆ ಇನ್ನು ಸಾವಿರ ವರ್ಷಗಳಲ್ಲಿ ಬರುವ ಸಾಧ್ಯತೆಯನ್ನು ಪೋ ತನ್ನ ಕಥೆಯಲ್ಲಿ ಕಲ್ಪಿಸಿದ. ಆದರೆ, ಕಲ್ಪನೆಯನ್ನೇ ನಾಚಿಸುವಂತೆ, ಈ ಮುಂಭಾವನೆಯನ್ನೂ ಮೀರಿದ ವಾಸ್ತವ ಘಟನೆ ನೂರು ವರ್ಷಗಳಿಗೂ ಕಡಮೆ ಕಾಲದಲ್ಲಿ ಸಂಭವಿಸಿರುವುದು ಒಂದು ವಿಸ್ಮಯಕರ ಸಂಗತಿಯಾಗಿದೆ.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದವೇಳೆಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳು ಐರೋಪ್ಯ ಸಂಸ್ಕೃತಿಯ ಮೇಲೆ ವಿಶೇಷ ಪ್ರಭಾವ ಬೀರಿದುವು. ಆ ಕಾಲದ ವಿಜ್ಞಾನ ಕಲ್ಪನಾ ಸಾಹಿತ್ಯದ ಒಬ್ಬ ಸುವಿಖ್ಯಾತ ಲೇಖಕ–ಫ್ರಾನ್ಸಿನ ಜೂಲ್ಸ್‌ವರ್ನ್. ವರ್ನ್ 1863ರಲ್ಲಿ 'Five weeks in a Balloon' ಎಂಬ ತನ್ನ ಪ್ರಥಮ ಕಾಲ್ಪನಿಕ ಹಾಗೂ ಕೋಲಾಹಲಕರ ಕಿರು ಕಾದಂಬರಿ ಬರೆದು ಜನಪ್ರಿಯನಾದ; ಇಂಥವೇ ಇನ್ನೂ ಕೆಲವು 'ವಿಶೇಷಯಾನ'ಗಳನ್ನೂ ರಚಿಸಿ ಯಶಸ್ಸುಗಳಿಸಿದ. ಜ್ವಾಲಾಮುಖಿಯ ಕೆಳಭಾಗದಲ್ಲಿನ ಸಾಹಸಗಳು, ನಾಟಿಲಸ್ ಜಲಾಂತರ್ಗಾಮಿ ನೌಕಾಯಾನ, ಚಂದ್ರಲೋಕಯಾನ, ಕೃತಕ ಉಪಗ್ರಹ, ಹೆಲಿಕಾಪ್ಟರ್, ಸಮರ ನೌಕೆಯನ್ನು ಸದೆಬಡಿಯುವ ನಿರ್ದೇಶಿತ ಕ್ಷಿಪಣಿ–ಹೀಗೆ ವರ್ನ್‌ನ ಕಥಾಕೋಶವು ಅನೇಕ ಅದ್ಭುತಗಳ ಆಗರವಾಗಿದೆ.

ವರ್ನ್‌ನ ಭವಿಷ್ಯವಾಣಿಗಳಲ್ಲಿ ವೈಜ್ಞಾನಿಕ ಅಂಶಗಳ ಭದ್ರ ಬುನಾದಿಯಿದೆ, ಸುಂದರ ಸಾಹಿತ್ಯದ ಬಂಧವಿದೆ. ಅವನನ್ನು ಅನುಕರಣ ಮಾಡಿದ ಇತರರಲ್ಲಿ ಕಾಣದ ಈ ಅಂಶಗಳೇ ಅವನ ಸಾಹಿತ್ಯದ ಹೆಗ್ಗಳಿಕೆಯಾಗಿವೆ. ಅದಕ್ಕೆ ಶಾಶ್ವತತೆಯನ್ನು ತಂದು ಕೊಟ್ಟಿವೆ. ಅಂದ ಮೇಲೆ, ವರ್ನ್‌ನನ್ನೂ ಪ್ರಥಮ ವೃತ್ತಿಪರ ವಿಜ್ಞಾನ ಕಲ್ಪನಾ ಸಾಹಿತ್ಯ ಲೇಖಕನೆಂದು ಪರಿಗಣಿಸುವುದರಲ್ಲಿ ಅರ್ಥ ಔಚಿತ್ಯಗಳೆರಡೂ ಇವೆಯೆನ್ನಬಹುದು.

ವರ್ನ್ ಬಳಿಕ ನಿಜಾರ್ಥದಲ್ಲಿ ವಿಜ್ಞಾನ ಕಲ್ಪನಾ ಸಾಹಿತ್ಯದ ದೈತ್ಯ ಬರಹಗಾರನೆಂದು ಹೆಸರಿಸಬಹುದಾದವನೆಂದರೆ ಇಂಗ್ಲೆಂಡಿನ ಹೆಚ್. ಜಿ. ವೆಲ್ಸ್. ಕಾಲ್ಪನಿಕ ಅಂಶಗಳ ಬಳಕೆಯಲ್ಲಿ ವರ್ನ್‌ಗಿಂತ ತೀಕ್ಷ್ಣತೆಯನ್ನೂ ತೀವ್ರತೆಯನ್ನೂ ತೋರಿದ ವೆಲ್ಸ್‌ನ ಪ್ರಮುಖ ಪ್ರಥಮ ವಿಜ್ಞಾನ ಕಲ್ಪನಾ ಸಾಹಿತ್ಯವೆಂದರೆ 'The Time

Machine' ಎಂಬ ಕಿರುಕಾದಂಬರಿ. ವೆಲ್ಸ್ ಇದರಲ್ಲಿ ಕಾಲಯಾತ್ರೆಯನ್ನು ವಿಚಾರಾತ್ಮಕ ವಿವರಣೆ-ವಿಶ್ಲೇಷಣೆಗಳಿಗೊಳಪಡಿಸಿರದಿದ್ದರೂ ಓದುಗರು ಅದನ್ನು ಅಷ್ಟಾಗಿ ಆಕ್ಷೇಪಿಸದೆ, ಅದರಲ್ಲಿ ಬರುವ ಭವಿಷ್ಯದ ಎರಡು ವಿಭಿನ್ನ ಹಾಗೂ ವಿಶಿಷ್ಟ ಜನಾಂಗಗಳ ವಿಚಿತ್ರ ಹಾಗೂ ವಿಸ್ಮಯಕರ ಬದುಕು-ಬಂಧನಗಳನ್ನು ಕಂಡು ಆನಂದಿಸಿದರು ; ಆದರಿಸಿದರು.

ಅಂತರ ಗ್ರಹಗಳ ಯುದ್ಧ, ಅದೃಶ್ಯಮಾನವ, ಚಂದ್ರ ಲೋಕದಲ್ಲಿ ಮಾನವ, ದೈತ್ಯಕೀಟಗಳು, ಮತಿವಿಕಲ್ಪನಾದ ವಿಜ್ಞಾನಿ, ಸಮಾನಾಂತರ ವಿಶ್ವಗಳು – ಈ ಮೊದಲಾದ ವಿವಿಧ ವಿಷಯಗಳ ಬಗೆಗೆ ವೆಲ್ಸ್ ತನ್ನ ವಿಜ್ಞಾನ ಕಲ್ಪನೆಯನ್ನು ಹರಿಸಿರುವುದನ್ನು ನಾವು ಅವನ ಕೃತಿಗಳಿಂದ ಕಾಣುತ್ತೇವೆ. ವರ್ನ್‌ನಂತೆ, ವೆಲ್ಸ್ ಕೂಡ ಶಾಸ್ತ್ರಜ್ಞಾನದಲ್ಲಿ ತನ್ನ ಸಮಕಾಲೀನ ವೈಜ್ಞಾನಿಕ ಇತಿ-ಮಿತಿಗಳಿಂದ ಸೀಮಿತನಾಗಿದ್ದುದು ಅವನ ಕೃತಿಗಳಿಂದ ಸ್ಪಷ್ಟವಾಗಿದೆ.

ವರ್ನ್ ಹಾಗೂ ವೆಲ್ಸ್ ಅವರ ಕೃತಿಗಳು ವಿಜ್ಞಾನಿಗಳಲ್ಲಿ ಅವರ ಕಲ್ಪನೆಗಳಿಗೆ ಎಷ್ಟರ ಮಟ್ಟಿಗೆ ಇಂಬುಕೊಟ್ಟವು, ಸ್ಫೂರ್ತಿ ನೀಡಿದುವು ಎಂಬುದು ಅಸ್ಪಷ್ಟ ; ಆದರೂ ಅವುಗಳ ಸಾಮಾಜಿಕ ಪ್ರಭಾವ ಪರಿಣಾಮಗಳು ಅಷ್ಟೇ ಸ್ಪಷ್ಟ. ಏಕೆಂದರೆ, ಇಪ್ಪತ್ತನೆಯ ಶತಮಾನದ ತೀವ್ರಗತಿಯ ವೈಜ್ಞಾನಿಕ ಪ್ರಗತಿ ಮಾರ್ಪಾಟುಗಳನ್ನು ಸಮಾಜವು ಸ್ವೀಕರಿಸುವಲ್ಲಿ ವಿಜ್ಞಾನ ಕಲ್ಪನಾಸಾಹಿತ್ಯದ ಪಾತ್ರ ಗಣನೀಯ ಹಾಗೂ ಗಮನಾರ್ಹವೆಂಬುದು ಈಗ ನಿಸ್ಸಂದೇಹವಾಗಿದೆ, ಸುಸ್ಪಷ್ಟವಾಗಿದೆ.

ವಿಜ್ಞಾನ ಕಲ್ಪನಾ ಸಾಹಿತ್ಯದ ಮುಂದಿನ ಮಹಾದೈತ್ಯನೆಂದರೆ ಅಮೆರಿಕಕ್ಕೆ 1904ರಲ್ಲಿ ಬಂದು ನೆಲೆಸಿದ ಲಕ್ಸೆಂಬರ್ಗ್ ದೇಶಸ್ಥ ಹೂಗೋಗರ್ನ್ಸ್‌ಬ್ಯಾಕ್. ಗರ್ನ್ಸ್‌ಬ್ಯಾಕ್ ಎಲೆಕ್ಟ್ರಿಕಲ್ ಇಂಜಿನಿಯರ್ ಹಾಗೂ ಶೋಧಕ ; Modern Electrics ಎಂಬ ಸಂಕೀರ್ಣ ಪತ್ರಿಕೆಯ ಪ್ರಕಾಶಕ. ವಿಜ್ಞಾನ ಕಲ್ಪನಾ ಸಾಹಿತ್ಯದಲ್ಲಿ ಆಸ್ಥೆಯಿದ್ದ ಗರ್ನ್ಸ್‌ಬ್ಯಾಕ್ ಆ ಸಾಹಿತ್ಯ ಪ್ರಕಾರಕ್ಕೇ ಮೀಸಲಾದ ಸಂಕೀರ್ಣ ಪತ್ರಿಕೆಯೊಂದನ್ನು ಪ್ರಕಟಿಸುವ ನಿರ್ಧಾರಮಾಡಿದ. ಹೀಗೆ ಹುಟ್ಟಿತು ವಿಜ್ಞಾನ ಕಲ್ಪನಾ ಸಾಹಿತ್ಯದ ಪ್ರಪ್ರಥಮ ಸಂಕೀರ್ಣ ಸಂಚಿಕೆ 'Amazing Stories'—ಏಪ್ರಿಲ್ 1926ರಲ್ಲಿ.

ಮೊದ ಮೊದಲಲ್ಲಿ ವಿಜ್ಞಾನ ಕಲ್ಪನಾ ಸಾಹಿತ್ಯ ರಚನೆ ಕಡಮೆಯಿದ್ದುದರಿಂದ ವರ್ನ್ ಮತ್ತು ವೆಲ್ಸ್‌ರವರ ಕೃತಿಗಳ ಮರು ಪ್ರಕಟಣೆಯೊಂದಿಗೆ ಅಷ್ಟು ಪ್ರಸಿದ್ಧರಲ್ಲದ ಅನಂತರದ ಜರ್ಮನ್ ಲೇಖಕರ ಕೃತಿಗಳನ್ನೂ ಗರ್ನ್ಸ್‌ಬ್ಯಾಕ್ ಪ್ರಕಟಿಸಬೇಕಾಯಿತು. ಕ್ರಮೇಣ ಅಮೆರಿಕದ ಲೇಖಕರು ಈ ಸಾಹಿತ್ಯ ಪ್ರಕಾರದತ್ತ ಆಕರ್ಷಿತರಾಗಿ ಬರೆಯ ತೊಡಗಿದಾಗ ಅದು ಸಮೃದ್ಧವಾಯಿತು. ಅಷ್ಟೇ ಅಲ್ಲ. ಆಲ್ಡಸ್ ಹಕ್ಸ್ಲೆ ಮೊದಲಾದ ಈ ಪೀಳಿಗೆಯ ಲೇಖಕರ ಕಲ್ಪನಾ ವಿಹಾರ ವೆಲ್ಸನಿಗಿಂತಲೂ ಮುಂದೆ ಹೋಯಿತು ; ಮೇಲಕ್ಕೂ ಹಾರಿತು.

ಈ ಸುಮಾರಿಗೆ ಬಂದ ಸಾಹಿತ್ಯೋಪಾಸಕರು ಬಹುಮಟ್ಟಿಗೆ ತರುಣರು. ಅವರು ಇಂಥ ಸಾಹಿತ್ಯಾಸಕ್ತರ ಸಂಘಗಳನ್ನು ಸ್ಥಾಪಿಸಿ ನಿಯತ ಕಾಲಗಳಲ್ಲಿ ಸಭೆ ಸಮ್ಮೇಳನಗಳನ್ನೂ ವಿಚಾರ ವಿಮರ್ಶೆಗಳನ್ನೂ ನಡೆಸತೊಡಗಿದರು. ಈ ಸಾಹಿತ್ಯ ಪ್ರಕಾರದ ಬಗೆಗೆ ಜನಜಾಗೃತಿಯನ್ನುಂಟುಮಾಡಿದರು; ಕ್ರಾಂತಿಯ ನಾಂದಿ ಕಹಳೆ ಯನ್ನೂ ಊದಿದರು. ಇಂದು ವಿಜ್ಞಾನ ಕ್ಷೇತ್ರದಲ್ಲಿ ಪಂಡಿತರೆನಿಸಿರುವ ಹಲವರಾದರೂ ತಮ್ಮ ಬಾಲ್ಯದ ದಿನಗಳಲ್ಲಿ ಆ ಕಾಲದ ವಿಜ್ಞಾನ ಕಲ್ಪನಾ ಸಾಹಿತ್ಯ ವನ್ನು ಓದಿ ಪ್ರಭಾವಿತರಾಗಿ ವೈಜ್ಞಾನಿಕ ವೃತ್ತಿಗಳಿಗೆ ಪದಾರ್ಪಣೆ ಮಾಡಿದವರು.

ವಿಜ್ಞಾನ ಕಲ್ಪನಾ ಸಾಹಿತ್ಯದ ಇತಿಹಾಸದಲ್ಲಿ ಸುವರ್ಣಯುಗ ಆರಂಭವಾದುದು 1938ರಲ್ಲಿ. ಇದಕ್ಕೆ ಕಾರಣ ಪುರುಷ John W. Campbell. ವಿಜ್ಞಾನ ಕಲ್ಪನಾ ಸಾಹಿತ್ಯ ಕುರಿತ ಪತ್ರಿಕೋದ್ಯಮಕ್ಕೆ ಹೊಸ ಹುರುಪನ್ನೂ ಚೇತನವನ್ನೂ ನೀಡಿದಾತ. ಕ್ಯಾಂಪ್‌ಬೆಲ್ ಸ್ವತಃ ವಿಜ್ಞಾನ ತಂತ್ರ ಜ್ಞಾನಗಳಲ್ಲಿ ಪರಿಣತ; ಹಲವಾರು ವಿಜ್ಞಾನ ಕಲ್ಪನಾ ಸಾಹಿತ್ಯವನ್ನು ರಚಿಸಿದಾತ. 'Astounding Stories' ಎಂಬ ಪತ್ರಿಕೆಯ ಸಂಪಾದನೆಯ ಹೊಣೆಗಾರಿಕೆಯನ್ನು ಅವನಿಗೆ ವಹಿಸಿದಾಗ ನಾಲ್ಕೇ ತಿಂಗಳಿನಲ್ಲಿ ಆ ಪತ್ರಿಕೆಯ ಹೆಸರನ್ನು 'Astounding Science Fiction' ಎಂದು ಅವನು ಪರಿವರ್ತಿಸಿದ; ಜೊತೆಗೆ ಆ ಸಾಹಿತ್ಯಪ್ರಕಾರಕ್ಕೆ ಹೊಸತಿರುವನ್ನೂ ತಾತ್ತ್ವಿಕ ಧೋರಣೆಯನ್ನೂ ನೀಡಿದ.

ಕ್ಯಾಂಪ್‌ಬೆಲನ ಕಾಲಕ್ಕೆ ಸ್ವಲ್ಪ ಮುಂಚೆಯೇ ವಿಜ್ಞಾನ ಕಲ್ಪನಾ ಸಾಹಿತ್ಯದಲ್ಲಿ ವರ್ನ್ ಮತ್ತು ವೆಲ್ಸ್ ಶೈಲಿಯ ಕೃತಿಗಳ ಅಭಾವವಾಗತೊಡಗಿತು. ಅತ್ತ, 'ಸೂಪರ್‌ಮ್ಯಾನ್', 'ಫ್ಲಾಷ್‌ಗಾರ್ಡನ್' ಮಾದರಿಯ ಅತಿರಂಜಕತೆಯ ಕೃತಿಗಳ ಪ್ರಭಾವವೂ ಏರತೊಡಗಿತು. ಕೇವಲ ಕಲ್ಪನೆಯ ಗಾಳಿಪಟಕ್ಕೆ ವಿಜ್ಞಾನದ ಬಾಲಂಗೋಚಿ ಜೋತು ಬೀಳಿಸುವ ಪ್ರಯತ್ನಗಳಿಗೆ ಪ್ರಚಾರ ದೊರಕತೊಡಗಿದಾಗ ಅದೇ ಕಲ್ಪನೆಯ ಗಾಳಿಪಟಕ್ಕೆ ವಿಜ್ಞಾನ ಸೂತ್ರವನ್ನು ಹಾಕಿ ಹಾರಿಸಿದಾಗ ಕ್ಯಾಂಪ್‌ಬೆಲ್. ಅಬದ್ಧ ವಿಜ್ಞಾನಗಳಿಂದ ಅಡಕವಾಗಿದ್ದು, ಅದ್ಭುತ ಕಲ್ಪನೆಗಳಿಂದ ಕೂಡಿದ್ದು, ಮಿದುಳಿನ ಮಸಲತ್ತಿಗಿಂತ ಮಾಂಸಖಂಡಗಳ ಕಸರತ್ತಿನಿಂದಲೇ ತಾಂಡವ ವಾಡುತ್ತಿದ್ದ ವಿಜ್ಞಾನ ಕಲ್ಪನಾ ಸಾಹಿತ್ಯಕ್ಕೆ ಕ್ಯಾಂಪ್‌ಬೆಲ್ ಹೊಸ ಸೂತ್ರವೊಂದನ್ನು ಸೂಚಿಸಿದ. ಅದೆಂದರೆ ವಿಜ್ಞಾನ ಮತ್ತು ಕಲ್ಪನೆ ಎಂಬ ಶಬ್ದಗಳಿಗೆ ಆ ಸಾಹಿತ್ಯ ಪ್ರಕಾರದಲ್ಲಿ ಸಮಾನಸ್ಥಾನ ನೀಡುವುದು. ಒತ್ತಾಯ ಪೂರ್ವಕವಾಗಿ ಆದಷ್ಟು ವಿಜ್ಞಾನಿಗಳಿಂದಲೇ ಪಡೆದ ಬರಹಗಳ ಪ್ರಕಟಣೆ, ಆವರಣಗಳ ಸೂಚನೆಗಿಂತ ವಿವರಣೆಗಳ ವಿಶೇಷ ನಿರೂಪಣೆಗಳಿಗೆ ಮನ್ನಣೆ, ವಿಜ್ಞಾನ ಕಲ್ಪನೆಯ ಗಂಭೀರ ಸಾಹಿತ್ಯದಲ್ಲಿಯೂ ಹಾಸ್ಯದ ಸಿಂಪಡಣೆ, ವಿಜ್ಞಾನದ ವಿವಿಧ ಪ್ರಭೇದಗಳಲ್ಲಿ ಚಿಂತನೆ ಕಲ್ಪನೆಗಳಿಗೆ ಪ್ರೇರಣೆ–ಹೀಗೆ ವಿಜ್ಞಾನ ಕಲ್ಪನಾ ಸಾಹಿತ್ಯದ ಶೈಲಿಯಲ್ಲೂ ಚಿಂತನ ದಲ್ಲೂ ಕ್ರಾಂತಿಯನ್ನುಂಟುಮಾಡಿದವ ಕ್ಯಾಂಪ್‌ಬೆಲ್.

ಎರಡನೆಯ ಜಾಗತಿಕ ಯುದ್ಧದ ಅಂತ್ಯಕ್ಕೆ ಕಾರಣವಾದ ಪರಮಾಣು ಬಾಂಬಿನ ಸ್ಫೋಟದೊಂದಿಗೆ ವಿಜ್ಞಾನ ಕಲ್ಪನಾಸಾಹಿತ್ಯದಲ್ಲಿ ಪರ್ವಕಾಲವೊಂದು ಉದಯಿಸಿತು. ಈ ಬಗೆಯ ಪತ್ರಿಕೆಗಳು, ಕಥೆ ಕಾದಂಬರಿಗಳ ಪ್ರಕಟಣೆ ಬೆಳೆಯಿತು. ಜೊತೆಗೆ ರೇಡಿಯೋ ಹಾಗೂ ಇತರ ಸಂಕೀರ್ಣ ಪತ್ರಿಕೆಗಳು ಇತ್ತ ಗಮನ ಹರಿಸಿದುವು. ವಿಜ್ಞಾನ ಕಲ್ಪನಾ ಸಾಹಿತ್ಯ ಪ್ರಪಂಚವೀಗ ಚಲನಚಿತ್ರ, ಟೆಲಿವಿಷನ್‌ಗಳಲ್ಲಿಯೂ ಹೊಸ ಆಯಾಮವನ್ನು ಕಂಡುಕೊಂಡಿತು. ಮೊದಲು ಮೂದಲಿಸಿ ನಿರಾಕರಿಸಿದ್ದ ರಷ್ಯಾಸಹ ಅನಂತರ ತನ್ನದೇ ಆದ ಈ ಸಾಹಿತ್ಯ ಪ್ರಕಾರವನ್ನು ಸೃಜಿಸಿ ಬೆಳೆಸಿಕೊಂಡು ಬಂದಿತು. ಅದೇ ಕಾಲಕ್ಕೆ ಯೂರೋಪಿನ ಇತರ ರಾಷ್ಟ್ರಗಳಲ್ಲಿಯೂ ವಿಜ್ಞಾನ ಕಲ್ಪನಾ ಸಾಹಿತ್ಯ ವಿಜೃಂಭಿಸತೊಡಗಿತು.

ಆಧುನಿಕ ವಿಜ್ಞಾನ ಕಲ್ಪನಾ ಸಾಹಿತ್ಯದ ಧಾಟಿ ಧೋರಣೆಗಳು ಸಮಕಾಲೀನ ಸಾಹಿತ್ಯ ಪ್ರವಾಹಕ್ಕೆ ಹಿಂದೆಂದಿಗಿಂತಲೂ ತೀರಾ ಸನಿಹದಲ್ಲಿ ಪ್ರವಹಿಸುತ್ತಾ ಬಂದಿದೆಯೆನ್ನಬಹುದು. ಇಂದು ವಿಜ್ಞಾನ ಕಲ್ಪನಾ ಸಾಹಿತ್ಯದಲ್ಲಿ ನಾವು 'ವಿಜ್ಞಾನ ಎತ್ತ ಸಾಗಲಿದೆ?' ಎಂಬುದಕ್ಕಿಂತಲೂ 'ಮಾನವನ ಪ್ರತಿಕ್ರಿಯೆ ಎಂತಹುದು?' ಎನ್ನುವುದು ಪ್ರಧಾನ ಪ್ರಶ್ನೆಯಾಗಿರುವುದನ್ನು ಕಾಣುತ್ತೇವೆ. ಮಿತಿ ಮೀರಿದ ಜನಸಂಖ್ಯೆ, ಪರಮಾಣು ಸಮರಸಾಧನಗಳ, ಕೋಲಾಹಲಕರ ಕಂಪ್ಯೂಟರುಗಳು, ರೊಬಾಟ್, ಆಂಡ್ರಾಯ್ಡ್ ಮೊದಲಾದ ಯಂತ್ರ ಮಾನವರು – ಇವೆಲ್ಲ ಮಾನವನ ಅಳಿವಿಗೆ ಮಾನವನಿಂದಲೇ ಸೃಷ್ಟಿಯಾದ ಸಾಧನಗಳಾಗುವುದು ಸನ್ನಿಹಿತವೇ ಎಂಬ ಸಂಶಯ ತಲೆದೋರಬಹುದು. ಜೊತೆಗೆ, ಇಂದು ನಮಗೆ ದೊರೆತಿರುವ ವೈಜ್ಞಾನಿಕ ಅನುಭವ, ಶೈಲಿಯ ವೈಭವ – ಇವುಗಳಿಗೆ ಸರಿಸಾಟಿಯಾದ ಸಾಹಿತ್ಯ ಸೃಷ್ಟಿಯಾಗಿದೆಯೇ ಎಂಬ ಪ್ರಶ್ನೆಯೂ ಸಹಜವಾಗಿಯೇ ಏಳಬಹುದು.

ಸಾಹಿತ್ಯ ಸಮಾಜದ ಪ್ರತಿಬಿಂಬವೆನ್ನುವ ಮಾತೊಂದಿದೆ. ಹಾಗಿದ್ದಲ್ಲಿ, ವಿಜ್ಞಾನ ಯುಗದ ಸಾಹಿತ್ಯದಲ್ಲಿ ವಿಜ್ಞಾನ ಕಲ್ಪನಾ ಸಾಹಿತ್ಯ ಸಮೃದ್ಧವಾಗಿ ಬರಬೇಕಾದುದು ಅನಿವಾರ್ಯ. ವಿಜ್ಞಾನ ಮತ್ತು ವಿಜ್ಞಾನ ಕಲ್ಪನಾ ಸಾಹಿತ್ಯ – ಇವು ಒಂದಕ್ಕೊಂದು ಪೂರಕವಾಗಿ, ಪ್ರೇರಕವಾಗಿ ಪರಸ್ಪರ ಪೈಪೋಟಿಯಲ್ಲಿ ಪ್ರಗತಿ ಕಾಣುವುದು, ಕಾಣಬೇಕಾದುದು ಅಪೇಕ್ಷಣೀಯ ಹಾಗೂ ಆದರಣೀಯ.

ಅದೇನೇ ಇರಲಿ, ಇಷ್ಟು ಮಾತ್ರ ಸತ್ಯ. ಅದೆಂದರೆ, ಈಗ ಬಂದಿರುವ ಸಾಹಿತ್ಯವು ಶ್ರೀಸಾಮಾನ್ಯನಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವ ಯಶಸ್ವಿಯಾಗಿದೆ ಎನ್ನುವುದು. ವಿಜ್ಞಾನ ಕಲ್ಪನಾ ಸಾಹಿತ್ಯದ ಸಾಮಾಜಿಕ ಪ್ರಭಾವ ಪರಿಣಾಮಗಳನ್ನಷ್ಟೇ ಕುರಿತು ಹೇಳುವುದಾದರೆ ಅದು ಬಹುಮಟ್ಟಿಗೆ ಶೈಕ್ಷಣಿಕ, ಸ್ವಲ್ಪಮಟ್ಟಿಗೆ ಸ್ಫೂರ್ತಿದಾಯಕ; ಆದರೆ ಸರ್ವದಾ ರೋಚಕ ಹಾಗೂ ರಂಜಕ.

(ಆಕಾಶವಾಣಿ ಕೃಪೆಯಿಂದ)

ಪಂಪ–ಹೋಮರ್ : ಒಂದು ಪ್ರಸಂಗ

ಜಿ. ಎಸ್. ಶಿವರುದ್ರಪ್ಪ

ಪಂಪನ 'ವಿಕ್ರಮಾರ್ಜುನ ವಿಜಯ' ದಲ್ಲಿ ಒಂದು ಪ್ರಸಂಗ: ಕುರುಕ್ಷೇತ್ರದ ರಣರಂಗ ನಿಶ್ಚಿತವಾಗಿದೆ. ಕೌರವರ ಪಾಂಡವರ ಸೇನೆಗಳು ಕುರುಕ್ಷೇತ್ರ ರಣಾಂಗಣದ ಹೊರವಲಯಗಳಲ್ಲಿ ಬೀಡುಬಿಟ್ಟಿವೆ. ಯುದ್ಧ ಪ್ರಾರಂಭದ ಹಿಂದಿನ ದಿನದ ಸಂಜೆ. ಸಾಣೆಗೆ ಒಡ್ಡಿದ ಇಟ್ಟಿಗೆಯ ಧೂಳಿಸಂತೆ ಸಂಜೆಯ ಕೆಂಪು ಪಡುವಣ ಬಾನತುಂಬ ಹಬ್ಬಿಕೊಂಡಿದೆ. ಎರಡೂ ಕಡೆಯ ಸೈನ್ಯ ಶಿಬಿರಗಳಲ್ಲಿ ಯುದ್ಧ ಪೂರ್ವ ಸನ್ನಾಹಗಳು ನಡೆದಿವೆ. ಕತ್ತಲಾವರಿಸುವ ಶಿಬರಗಳಲ್ಲಿ, ಉರಿಯುವ ಬೊಂಬಾಳ ದೀಪಗಳ ಬೆಳಕಿನಲ್ಲಿ ವೀರರು ಯುದ್ಧ ಪೂರ್ವ ಧಾರ್ಮಿಕ ವಿಧಿಗಳಲ್ಲಿ ತೊಡಗಿದ್ದಾರೆ. ಮತ್ತೆ ಕೆಲವರು ರಣರಂಗದ ಬಗೆಗೆ ವೀರಾಲಾಪಗಳಲ್ಲಿ ಮಗ್ನರಾಗಿದ್ದಾರೆ. ಈ ಪರಿಸರದಲ್ಲಿ ಒಂದೆಡೆ ಶ್ರೀಸಾಮಾನ್ಯರ ಸಂಸಾರದಲ್ಲಿ ಗಂಡಹೆಂಡಿರ ಮಾತುಕತೆ ನಡೆದಿದೆ :

''ಈ ಹೊತ್ತೀ ಹೊತ್ತು ನಾಳೆ ನಾನು ದೇವ ಲೋಕದ
ಕನ್ಯಕೆಯರ ಓಲಗದಲ್ಲಿರುತ್ತೇನೆ'–ಎನ್ನುತ್ತಾನೆ ಗಂಡ.
ಅವಕ್ಕೆ ಹೆಂಡತಿ ಹೇಳುತ್ತಾಳೆ ; 'ನೀನೆಂದ ಹಾಗೆ ಆಗುವುದಿಲ್ಲ ;
ನಾಳೆ ಮತ್ತೆ ಬಂದು ನನ್ನೊಡನೆ ಕೂಡುತ್ತೀಯ"
"ಅದು ನಿನಗೆ ಹೇಗೆ ಗೊತ್ತು ?"
"ಗೊತ್ತು ನನಗೆ ಓಲೆ ಭಾಗ್ಯ ಉಂಟು".

[ಪಂ.ಭಾ. 10–44 ವ.]

ಇನ್ನೊಂದೆಡೆ, ಯುದ್ಧಕ್ಕೆ ಹೋಗುವ ನಲ್ಲ, ತಾನು ನಾಳಿನ ರಣರಂಗದಲ್ಲಿ ಸಾಯುವುದು ನಿಶ್ಚಯ ಎಂದುಕೊಂಡಿದಾನೆ. ಅದನ್ನು ತಿಳಿದ ನಲ್ಲಳು ಹೇಳಿಕೊಳ್ಳುತ್ತಾಳೆ :

"ನನ್ನ ಗಂಡ ನಾಳೆ ರಣಾಂಗಣದಲ್ಲಿ ಹೋರಾಡಿ ದೇವಲೋಕದ ಸ್ತ್ರೀಯರಲ್ಲಿ ಸೇರುತ್ತಾನಲ್ಲವೆ ? ಹಾಗೆಂದು ನಾನು ಸುಮ್ಮನೆ ಇರುವಷ್ಟು ಬೆಪ್ಪಳೆ ? ಅವನಿಗಿಂತ ಮೊದಲೆ ನಾನು ಅಲ್ಲಿಗೆ ಹೋಗಿ, ನನ್ನ ನಲ್ಲನನ್ನು ಅಲ್ಲಿ ಎದುರುಗೊಳ್ಳುತ್ತೇನೆಯೆ ಹೊರತು, ಆ ದೇವಲೋಕದ ತೊತ್ತಿರ ಸಹವಾಸಕ್ಕೆ ನನ್ನ ಗಂಡನನ್ನು ಬಿಟ್ಟೇನೆ ?"

[ಪಂ. ಭಾ. 10-45]

ಮೇಲುನೋಟಕ್ಕೆ ತೀರಾ ಸರಳವೂ, ವಿನೋದಮಯುವೂ ಆಗಿ ತೋರುತ್ತವೆ, ಈ ಎರಡು ಸಂಸಾರಗಳಲ್ಲಿ ನಡೆಯುವ ಮಾತುಕತೆ. ಇರುಳು ಕಳೆದು ಬೆಳಗಾದಾಗ,

ಕಾದಿರುವ ಮಹಾ ರಣರಂಗದ ಹಿನ್ನೆಲೆಯಲ್ಲಿ ಪಂಪ, ಈ ಸಾಮಾನ್ಯ ವ್ಯಕ್ತಿಗಳ ಪ್ರತಿಕ್ರಿಯೆಗಳನ್ನು ದಾಖಲು ಮಾಡಿದ್ದಾನೆ. ಪಾಂಡವರ ಪರವಾಗಿಯೋ ಕೌರವರ ಪರವಾಗಿಯೋ ಹೋರಾಡಲೇಬೇಕಾಗಿರುವ ಈ ಸಾಮಾನ್ಯ ಸೈನಿಕರಿಗೆ ಗೊತ್ತು, ತಮ್ಮ ಹಣೆಯ ಬರಹವೇನೆಂದು. ಒಂದು ಯುಗದ ಹಣೆಯ ಬರೆಹವನ್ನೇ ನಿರ್ಣಯಿಸುವ ಮಹಾ ಸಂಘರ್ಷದ ಸಂದರ್ಭದಲ್ಲಿ, ತಾನು ಬದುಕುವುದು, ಮತ್ತು ಬದುಕಿರುವುದು ಈ ಹೊತ್ತು ಮಾತ್ರ; ನಾಳೆ ಈ ವೇಳೆಗೆ ತಾನಿರುವುದಿಲ್ಲ ಎಂಬುದನ್ನು ಬಲ್ಲ ನಲ್ಲನಿಗೆ, ತನ್ನ ಓಲೆ ಭಾಗ್ಯ ಉಂಟೆಂದು ನಂಬುವ, ಆಶಿಸುವ, ತನ್ಮೂಲಕ ತನ್ನ ನಲ್ಲನನ್ನು ಸಂತೈಸುವ ಹೆಣ್ಣಿನ ಚಿತ್ರ ಒಂದೆಡೆಯಾದರೆ, ಮತ್ತೊಂದೆಡೆ ತಾನು, ಅವನಿಗಿಂತ ಮೊದಲೇ ಸಾಯುವುದು ಅಗತ್ಯ ಹಾಗೂ ಅನಿವಾರ್ಯವೆಂದು ಭಾವಿಸುವ ಹೆಣ್ಣಿನ ಚಿತ್ರ ಇನ್ನೊಂದೆಡೆ, ಅಕ್ಕಪಕ್ಕದಲ್ಲೇ ಚಿತ್ರಿತ ವಾಗಿವೆ. ಆದರೆ ಈ ವೀರರಾಗಲಿ, ಅವರ ಹೆಂಡತಿಯರಾಗಲಿ, ಮಾತನಾಡುವುದು, ವಯ್ಯಕ್ತಿಕವಾದ ನಷ್ಟದ, ಮತ್ತು ಸಾವಿನ ಭಯದ ಭಾಷೆಯಲ್ಲಿ ಅಲ್ಲ. ಅವರು ಮಾತಾಡುವುದು, ದೇವಲೋಕಕ್ಕೆ ಹೋಗುವ, ಮತ್ತು ಅಲ್ಲಿನ ದೇವ ಕನ್ಯೆಯ ರೊಂದಿಗೆ ಸೇರುವ, ಅಥವಾ ದೇವಲೋಕದಲ್ಲೇ ಪರಸ್ಪರ ಭೆಟ್ಟಿಯಾಗುವ–ಧಾಟಿ ಯಲ್ಲಿ. ಹೀಗೆ ಮಾತನಾಡುವುದು ಸಾವನ್ನು ಕುರಿತ ಭಾರತೀಯ ಕಲ್ಪನೆಗೆ ಅನುಸಾರ ವಾಗಿದೆ ಎಂದುಕೊಂಡರೂ, ಅದಕ್ಕೂ ಮಿಗಿಲಾಗಿ ಪಂಪನ ಕಾಲದ ಹತ್ತನೆ ಶತ ಮಾನದ ವೀರಯುಗದ ಮೌಲ್ಯಗಳ ದೃಷ್ಟಿಯಿಂದಲೂ ಗಮನಿಸತಕ್ಕದ್ದಾಗಿದೆ.

ಪಂಪ ಚಿತ್ರಿಸುತ್ತಿರುವುದು, ಒಂದು ಮಹಾರಣರಂಗದ ಹಿನ್ನೆಲೆಯಲ್ಲಿ, ಸಾಮಾನ್ಯ ವ್ಯಕ್ತಿಗಳ ಪ್ರತಿಕ್ರಿಯೆಯನ್ನು. ಆದರೆ ಹಾಗೆ ಚಿತ್ರಿಸುವಲ್ಲಿ, ಯಾರದೋ ಪ್ರತಿಷ್ಠೆಯ ಹೋರಾಟದಲ್ಲಿ ಸಾಮಾನ್ಯ ಜನದ ಬದುಕು ಹೇಗೆ ದುರಂತಕ್ಕೆ ಈಡಾಗು ತ್ತಿದೆಯಲ್ಲ ಎಂಬ ಕಡೆಗೆ ಅವನ ಕಣ್ಣು ಹಾಯುವುದಿಲ್ಲ. ವೀರಯುಗದ ಮೌಲ್ಯಗಳಲ್ಲಿ, ಶೌರ್ಯ, ತ್ಯಾಗ, ಜೋಳದ ಪಾಳಿ ಇವು ಪ್ರಧಾನವಾದವುಗಳು. ಸ್ವಾಮಿಕಾರ್ಯಕ್ಕಾಗಿ ಹೋರಾಡುವುದು, ಮಡಿಯುವುದು ಬದುಕಿನ ಒಂದು ಪುರುಷಾರ್ಥವೆಂದು ಭಾವಿಸಿದ ವೀರರ ನಡವಳಿಕೆಗಳನ್ನು ಚಿತ್ರಿಸುವುದು ಪಂಪನ ಉದ್ದೇಶ. ಈ ಮೌಲ್ಯ ಗಳನ್ನು ಉದ್‌ಘೋಷಿಸುವ ಸಂದರ್ಭಗಳನ್ನು ಮತ್ತೆಮತ್ತೆ ಚಿತ್ರಿಸುತ್ತಾನೆ. ಮೇಲೆ ಹೇಳಿದ ಪ್ರಸಂಗವೂ ಅಷ್ಟೆ. ಸಾಮಾನ್ಯ ಸೈನಿಕರೂ, ಈ ವೀರಯುಗದ ನಿಲವುಗಳನ್ನು ಎಷ್ಟರಮಟ್ಟಿಗೆ ಪ್ರಕಟಿಸುತ್ತಿದ್ದರೆನ್ನುವುದನ್ನು ತೋರಿಸುವುದು. ಆದುದರಿಂದಲೇ, ಆ ಸಾಮಾನ್ಯ ಸೈನಿಕರು, ಮರಣವನ್ನು ವೈಭವಿಸುವ, ಅದು ದೇವಲೋಕಕ್ಕೆ ಕೈಕೊಳ್ಳುವ ಪ್ರಯಾಣವೆಂದು ಹಿಗ್ಗಿನಿಂದ ವರ್ಣಿಸುವ ಮತ್ತು ಈ ನಲ್ಲೆಯರೂ, ತಾವೂ ದೇವಲೋಕದಲ್ಲಿ ಗಂಡಂದಿರನ್ನು ಭೆಟ್ಟಿಯಾಗುವೆವೆಂದು ಹೇಳುವ–ಮಾತುಕತೆಯಾಗಿ, ತಮಗೊದಗುವ ದುಃಖದುರಂತಗಳನ್ನು ಮುಚ್ಚುವ, ಮೌಲ್ಯಗಳ ವೈಭವೀಕರಣವಾಗಿ ಇಲ್ಲಿ ಚಿತ್ರಿತವಾಗಿದೆ.

ಮಹಾಕವಿ ಹೋಮರನ 'ಇಲಿಯಡ್'ನಲ್ಲಿ ಇಂಥದೇ ಒಂದು ಸಂದರ್ಭವಿದೆ. ಅದು ಯುದ್ಧ ಪೂರ್ವ ಪ್ರಸಂಗವಲ್ಲ; ಯುದ್ಧದ ನಡುವಣ ಒಂದು ದಿನದ ಪ್ರಸಂಗ. ಟ್ರಾಯ್ ನಗರದ ಮಹಾವೀರ ಹೆಕ್ಟರ್, ತಾನು ಯುದ್ಧಕ್ಕೆ ನೇರವಾಗಿ ಇಳಿಯುವ ದಿನ, ರಣರಂಗದಿಂದ ಬಂದು ತನ್ನ ಮಡದಿಯಾದ ಆಂಡ್ರೊಮೆಕೆ ಯನ್ನು ಕಟ್ಟಕಡೆಯ ಬಾರಿಗೆ ಸಂಧಿಸುವ ಸಂದರ್ಭ ಅದು. ಇಲ್ಲಿ ಪರಸ್ಪರ ಭೇಟಿ ಯಾಗುವವರು, ಸಾಮಾನ್ಯ ಸಂಸಾರದವರಲ್ಲ; ರಾಜ ಮನೆತನದವರು. ಅವರು ಯಾರಾದರೇನು, ಅವರು ಮೂಲತಹ ಮನುಷ್ಯರು ಎಂಬುದನ್ನು ಹೋಮರ್ ಮರೆತಿಲ್ಲ.

''ಹೆಕ್ಟರ್ ತನ್ನ ಮಡದಿಯನ್ನು ಕಾಣಲೆಂದು ಮನೆಯತ್ತ ಬಂದನು. ಆದರೆ ಆಕೆ ಅಲ್ಲಿರಲಿಲ್ಲ. ಟ್ರೋಜನರು ಆಘಾತಕ್ಕೆ ಸಿಲುಕಿದರೆಂಬುದನ್ನು ಕೇಳಿ ಹುಚ್ಚು ಹಿಡಿದವಳಂತೆ, ಮಗುವನ್ನು ಕರೆದು ಕೊಂಡು ಕೋಟೆಯ ಗೋಡೆಯತ್ತ ಧಾವಿಸಿದ್ದಳು. ಹೆಕ್ಟರನು ಟ್ರಾಯ್‌ನಗರದ ವಿಶಾಲವಾದ ಬೀದಿಗಳಲ್ಲಿ ಕೋಟೆಯ ಕಡೆ ನಡೆದನು. ಅವನು ಹೆಬ್ಬಾಗಿಲನ್ನು ಸಮೀಪಿಸುವ ಹೊತ್ತಿಗೆ ಅವನ ಹೆಂಡತಿ ಅವನನ್ನು ಕಂಡಳು; ಹತ್ತಿರಕ್ಕೆ ಓಡಿಬಂದಳು. ಅವಳ ಹಿಂದೆ ಅವಳ ಸೇವಕಿ ಮಗು ವನ್ನು ಎತ್ತಿಕೊಂಡು ಬಂದಳು. ಆಂಡ್ರೊಮೆಕೆ ತನ್ನ ಗಂಡನ ಕೈಯನ್ನು ಹಿಡಿದುಕೊಂಡು ಅಳುತ್ತಾ ನಿಂತುಕೊಂಡಳು. ಹೆಕ್ಟರ್ ತನ್ನ ಮಗುವಿನ ಕಡೆ ನೋಡಿ ಮುಗುಳ್ನಕ್ಕನು. ಆತ ಏನನ್ನೂ ಮಾತಾಡಲಿಲ್ಲ. ಆಂಡ್ರೊಮೆಕೆ ಬಿಕ್ಕಿ ಬಿಕ್ಕಿ ಅಳುತ್ತಾ ''ನನ್ನ ಹೆಕ್ಟರ್, ನಿನಗೆ ಏನೋ ಆವೇಶ ಅಮರಿಕೊಂಡಿದೆ. ನಿನ್ನ ಈ ಶೌರ್ಯವೇ ನಿನ್ನ ನಾಶಕ್ಕೆ ದಾರಿಯಾಗಿದೆ. ಯಾಕೆ ನೀನು ಈ ಪುಟ್ಟ ಮಗುವಿನ ಬಗೆಗಾಗಲಿ, ನಾಳೆ ವಿಧವೆಯಾಗಲಿರುವ, ನತದೃಷ್ಟಳಾದ ನಿನ್ನ ಹೆಂಡತಿಯಾದ ನನ್ನ ಬಗೆಗಾಗಲಿ ಯೋಚಿಸುವುದಿಲ್ಲ? ಇಂದೋ ನಾಳೆಯೋ ಅಕಿಯನರು ನಿನ್ನನ್ನು ಕೊಲ್ಲುವುದು ನಿಶ್ಚಯ. ನಿನ್ನನ್ನು ಕಳೆದುಕೊಂಡ ನಾನು ಬದುಕಿದ್ದರೂ ಸತ್ತಂತೆಯೇ. ನೀನು ಸತ್ತನಂತರ ನನಗೆ ಉಳಿಯುವ ಸಮಾಧಾನವಾದರೂ ಏನು? ನನಗೋ, ತಂದೆ ಇಲ್ಲ, ತಾಯಿ ಇಲ್ಲ. ಅವರನ್ನು ಹಿಂದೆಯೇ ನಾನು ಕಳೆದುಕೊಂಡೆ...ಈಗ ನೀನೇ ನನ್ನ ಪಾಲಿಗೆ ತಂದೆ, ತಾಯಿ, ಬಂಧು ಬಳಗ ಎಲ್ಲವೂ. ಹಾಗೆಯೇ ಪ್ರೀತಿಯ ಯಜಮಾನ ಕೂಡಾ. ನನ್ನ ಮೇಲೆ ಕರುಣೆ ಇಟ್ಟು ಇಲ್ಲೇ ನಿಲ್ಲು ನಿನ್ನ ಮಗುವನ್ನು ಅನಾಥನನ್ನಾಗಿ ಮಾಡದಿರು; ನನ್ನನ್ನು ವಿಧವೆಯನ್ನಾಗಿ ಮಾಡಬೇಡ..."

ಹೆಕ್ಟರ್ ಹೇಳಿದ; "ಪ್ರಿಯತಮೆ, ನಾನು ಇದೆಲ್ಲವನ್ನೂ ಯೋಚಿಸಿದ್ದೇನೆ. ಆದರೆ, ನಾನು ಯುದ್ಧಕ್ಕೆ ಹೋಗದೆ ಹೇಡಿಯಂತೆ ಅಡಗಿಕೊಂಡರೆ, ಟ್ರಾಯ್ ನಗರದ ಮಹನೀಯರಿಗೆ, ಮಹಿಳೆಯರಿಗೆ ಹೇಗೆ ಮತ್ತೆ ಮುಖ ತೋರಿಸಲಿ? ಹಾಗೆ ಮಾಡುವುದು ನನ್ನ ಸ್ವಭಾವಕ್ಕೇ ವಿರುದ್ಧ ವಾದದ್ದು; ಯಾಕೆಂದರೆ ನಾನು ಸದಾ ಉತ್ತಮ ಯೋಧನಂತೆ ಶಿಕ್ಷಣ ಪಡೆದವನು; ಯುದ್ಧದಲ್ಲಿ ಸದಾ ಮೊದಲ ಪಂಕ್ತಿಯಲ್ಲಿಯೇ ಇದ್ದು, ನನಗೂ, ನನ್ನ ತಂದೆಗೂ ಹೆಸರು ತರಬೇಕಾದವನು. ನನಗೆ ಖಚಿತವಾಗಿ ಗೊತ್ತಿದೆ. ಈ ಪವಿತ್ರವಾದ ಇಲಿಯಂ ನಾಶವಾಗುವ ದಿನ ಹತ್ತಿರಕ್ಕೆ ಬರುತ್ತಿದೆ. ಇದರ ರಾಜ ಪ್ರಿಯಮ್ ಮತ್ತು ಆತನ ಪ್ರಜೆಗಳು ಉಳಿಯುವುದಿಲ್ಲ. ಆದರೆ ನಾನು ಇದಕ್ಕಾಗಿ ಹೆಚ್ಚು ವ್ಯಥೆಪಡುವುದಿಲ್ಲ. ದೊರೆ ಪ್ರಿಯಮ್‌ಗಾಗಲಿ, ಆತನ ಹೆಂಡತಿಗಾಗಲಿ, ಧೂಳೀಪಟವಾಗುವ ನನ್ನ ಸಹೋದರರ ಬಗೆಗಾಗಲಿ, ಸಾಯಬೇಕಾದ ಬಹು ಸಂಖ್ಯೆಯ ಟ್ರೋಜನರಿಗಾಗಲಿ ಅಲ್ಲ; ಆದರೆ ನಿನಗಾಗಿ, ನಿನಗೊದಗುವ ಪಾಡನ್ನು ಕುರಿತು ಹೆಚ್ಚು ಸಂಕಟ ವಾಗುತ್ತದೆ ನನಗೆ. ಇಲಿಯಂ ಪತನವಾದ ನಂತರ, ಕಣ್ಣೀರು ಸುರಿಸುವ ನಿನ್ನನ್ನು ಅಕಿಯನರಲ್ಲಿ

ಯಾರೋ ಎಳೆದುಕೊಂಡು ಹೋಗುತ್ತಾರೆ. ಅಲ್ಲಿ ದೂರದ ಅರ್ಗಾಸ್‌ನಲ್ಲಿ, ಯಾರಿಗಾಗಿಯೋ ಮಗ್ಗದ ಬಳಿ ದುಡಿಯಬೇಕಾಗುತ್ತದೆ, ದೂರದ ಬಾವಿಯಿಂದ ನೀರನ್ನು ಹೊತ್ತು ತರಬೇಕಾಗುತ್ತದೆ. ಅಸಹಾಯಕಳಾಗಿ ಹೀಗೆ ನೀರು ಹೊತ್ತು ತರುವ ನಿನ್ನನ್ನು ನೋಡಿ "ಅಗ್ರೋ ಟ್ರಾಯ್ ಮಹಾಯುದ್ಧದ ವೀರ ಹೆಕ್ಟರನ ಹೆಂಡತಿ ಇವಳು"–ಎಂದು ಅಲ್ಲಿನ ಜನ ನಿನ್ನ ಕಡೆ ಬೆರಳುಮಾಡಿ ಮಾತನಾಡುತ್ತಾರೆ. ಹೀಗೆ ಪ್ರತಿ ಸಲವೂ ಮಾತಾಡಿಕೊಂಡಾಗ, ನಿನ್ನನ್ನು ಸಂರಕ್ಷಿಸಬಲ್ಲವನಾದ ಪುರುಷನನ್ನು ಕಳೆದುಕೊಂಡ ದುಃಖ ನಿನ್ನ ಕೊರಳನ್ನು ಅಮುಕುವುದು. ಇಂಥ ದಾಸ್ಯಕ್ಕೆ ನಿನ್ನನ್ನು ಎಳೆದುಕೊಂಡು ಹೋಗುವಂದು, ನಿನ್ನ ಚೀರಾಟವನ್ನು ಕೇಳುವ ಮೊದಲೇ ನನಗೆ ಸಾವು ಬಂದರೆ ಎಷ್ಟು ಒಳ್ಳೆಯದು ಅನ್ನಿಸುತ್ತದೆ ನನಗೆ."

ಹೀಗೆ ಹೇಳಿ ಹೆಕ್ಟರ್ ಮಗುವನ್ನು ಎತ್ತಿಕೊಳ್ಳಲು ತೋಳು ಚಾಚಿದನು. ಸೇವಕಿಯ ಕೈಯಲ್ಲಿದ್ದ ಮಗು, ತನ್ನ ತಂದೆ ಧರಿಸಿದ ಯುದ್ಧದ ಕವಚ-ಶಿರಸ್ತ್ರಾಣಗಳನ್ನು ಕಂಡು ಬೆದರಿ, ದಾದಿಯ ಎದೆಯನ್ನಪ್ಪಿಕೊಂಡಿತು. ತಂದೆ-ತಾಯಂದಿರಿಬ್ಬರೂ ಇದನ್ನು ನೋಡಿ ಗಟ್ಟಿಯಾಗಿ ನಕ್ಕುಬಿಟ್ಟರು. ಹೆಕ್ಟರ್ ಝಗಝಗಿಸುವ ತನ್ನ ಶಿರಸ್ತ್ರಾಣವನ್ನು ತೆಗೆದು ಕೆಳಗೆ ಇಟ್ಟನು. ಅನಂತರ ತನ್ನ ಮಗುವನ್ನು ಮುದ್ದಿಸಿ, ತೋಳುಗಳ ಮೇಲೆ ಕುಣಿಸಿದನು. ಜ್ಯೂಸ್ ದೇವನನ್ನು ಬೇಡಿಕೊಂಡನು : ನನ್ನಂತೆ ನನ್ನ ಮಗನೂ ಒಂದು ದಿನ ಟ್ರೋಜನರ ನಡುವೆ ಧೀರನಾಗಿ, ನಾಯಕನಾಗಿ, ರಾಜನಾಗಿ ವಿರಾಜಿಸಲಿ ಎಂದು ದೇವತೆಗಳು ಅನುಗ್ರಹಿಸಲಿ. ಎಂತ ಇವನು ತನ್ನ ತಂದೆಗಿಂತ ಪೌರುಷವಂತ, ಎನ್ನುವಂತಾಗಲಿ. ಅವನು ಶತ್ರುಗಳನ್ನು ನಿರ್ನಾಮ ಮಾಡಿ, ಸೆರೆಸಿಕ್ಕವರ ಶಸ್ತ್ರಾಸ್ತ್ರಗಳನ್ನು ತಂದು ತನ್ನ ತಾಯಿಯನ್ನು ಸಂತೋಷಪಡಿಸಲಿ.

ಹೀಗೆಂದು ಹೇಳಿ ಮಗುವನ್ನು, ಅದರ ತಾಯಿಯ ಕೈಗೆ ಒಪ್ಪಿಸಿದನು. ತಾಯಿ ಕಂಪು ಸೂಸುವ ತನ್ನ ಎದೆಗೆ ಮಗುವನ್ನು ಒತ್ತಿ ಹಿಡಿದಳು. ತಾಯಿ–ಮಗುವನ್ನು ನೋಡಿ ಹೆಕ್ಟರನ ಮನಸ್ಸು ಕರಗಿತು. ತನ್ನ ಮಡದಿಯನ್ನು ತಟ್ಟಿ ಹೇಳಿದ. "ಪ್ರಿಯೆ, ಹೆಚ್ಚು ದುಃಖಿಸಬೇಡ. ನನ್ನ ಕಾಲ ಬರುವ ಮುನ್ನ ಯಾರೂ ನನ್ನನ್ನು ಕೊಲ್ಲಲಾರರು. ವಿಧಿಯನ್ನು ಯಾರೇ ಆಗಲಿ,—ಅವನು ಹೇಡಿಯೇ ಆಗಲಿ ವೀರನೇ ಆಗಲಿ—ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಈಗ ಮನೆಗೆ ಹೋಗು. ಮನೆಗೆಲಸವನ್ನು ನೋಡಿಕೋ. ಯುದ್ಧ ಮಾಡುವುದು ಗಂಡಸರ ಕೆಲಸ ; ಈ ಯುದ್ಧವಂತೂ ಇಲಿಯಂನ ಎಲ್ಲ ಗಂಡಸರ ಕೆಲಸ, ಅದರಲ್ಲೂ ಎಲ್ಲರಿಗಿಂತ ಮಿಗಿಲಾಗಿ ನನ್ನ ಕೆಲಸ."

ಹೀಗೆಂದು ಶಿರಸ್ತ್ರಾಣವನ್ನು ಹೆಕ್ಟರ್ ಎತ್ತಿಕೊಂಡ. ಆಂಡ್ರೊಮೇಕಿ ಕಂಬನಿ ದುಂಬಿದ ಕಣ್ಣುಗಳಿಂದ ಹೆಕ್ಟರನ ಕಡೆ ಮತ್ತೆ ಮತ್ತೆ ನೋಡುತ್ತ ಮನೆಯ ಕಡೆ ನಡೆದಳು.*

ಯುದ್ಧದ ನಡುವಣ ಕಾಲದಲ್ಲಿ ಸ್ವಲ್ಪ ಹೊತ್ತು ಗಂಡ ಹೆಂಡಿರು ಭೆಟ್ಟಿಯಾಗುವ ಈ ಸಂದರ್ಭ ಅತ್ಯಂತ ಮಾನವೀಯವಾದದ್ದು. ತಪ್ಪಿಸಲಾಗದ ಮಹಾ ದುರಂತದ ನಡುವೆ. ಕಂಡುಬರುವ ಈ ಸಂಸಾರ ಚಿತ್ರ ಅತ್ಯಂತ ರಮ್ಯವೂ, ಮನಕರಗಿಸುವಂಥದೂ ಆಗಿದೆ. ಯುದ್ಧಕ್ಕೆ ಹೋಗಬೇಡ ಎನ್ನುವ, ನೀನು ಹೋಗಿ ಮಡಿದರೆ ಅನಾಥವಾಗುವ ಮಗುವಿನ, ಮತ್ತು ವಿಧವೆಯಾಗುವ ತನ್ನ ಗತಿ ಏನು ಎಂದು ಚಿಂತಿಸುವ ಹೆಂಡತಿ ; ತನ್ನ ಮರಣಾನಂತರ, ತನ್ನ ಹೆಂಡತಿಗೆ ಒದಗುವ

* (Homer : The Iliad Book IV, p. 128-130 Translated by B. V.Rieu)

ದುರ್ಗತಿಯನ್ನು ಕುರಿತು ಕೊರಗುವ ಗಂಡ; ಈ ನಡುವೆ ಮಗುವನ್ನು ಮುದ್ದಿಸುವ ರಮ್ಯಕ್ಷಣ; ತಾನು ವೀರನಾದದ್ದರಿಂದ, ಹಿಮ್ಮೆಟ್ಟುವಂತಿಲ್ಲವೆನ್ನುವ ಮೌಲ್ಯ ಪ್ರಜ್ಞೆ; ಗಂಡಿನ ಕೆಲಸ ಹೋರಾಡುವುದು, ಹೆಣ್ಣಿನ ಕೆಲಸ ಮನೆವಾರ್ತೆಯನ್ನು ನೋಡಿಕೊಳ್ಳುವುದು ಎಂದು ನಿರ್ದೇಶನ ಮಾಡಿಕೊಳ್ಳುವುದರ ಮೂಲಕ ಪ್ರಕಟವಾಗುವ ಬದುಕಿನ ನಿರಂತರತೆ; ವಿಧಿ ತಂದೊಡ್ಡುವುದನ್ನು ಯಾರೂ ತಪ್ಪಿಸಿಕೊಳ್ಳಲಾರರು ಎಂಬ ಸಾಂತ್ವನದಲ್ಲಿರುವ, ನಿಲುವು–ಇವೆಲ್ಲವೂ ಹೋಮರನ ಅದ್ಭುತ ಕಲಾವಂತಿಕೆಗೆ ಉಜ್ವಲ ನಿದರ್ಶನವಾಗಿವೆ. ರಣರಂಗದ ರುದ್ರ ರಭಸಗಳ ನಡುವೆಯೂ ಮಾನವೀಯ ಸಂದರ್ಭಗಳ ವಿವರವಾದ ವರ್ಣನೆಯನ್ನು ಕೊಡಲು ಹೋಮರನು ಮರೆಯುವುದಿಲ್ಲ. ಇದೇ ಸಂದರ್ಭವನ್ನು ಪಂಪನ ಯುದ್ಧ ಪೂರ್ವ ಶಿಬಿರದಲ್ಲಿನ ಗಂಡ–ಹೆಂಡಿರ ಸಂಭಾಷಣೆಯ ಸಂದರ್ಭದೊಡನೆ ಹೋಲಿಸಿದರೆ, ಪಂಪನದು ಕೇವಲ ಮೌಲ್ಯ ಪ್ರಜ್ಞೆಯುಳ್ಳವನ ಬರೆಹವೆಂದೂ, ಹೋಮರನದು ಮೌಲ್ಯಪ್ರಜ್ಞೆಯನ್ನು ವೈಭವಿಸದೆಯೂ, ವಾಸ್ತವತೆಯ ಅರಿವಿರುವ ಮನುಷ್ಯನೊಬ್ಬನು ಬರೆದ ಸಹಜವಾದ ಚಿತ್ರಣವೆಂದೂ ತೋರುತ್ತದೆ. ಇಂಥ ಕಡೆ ಹೋಮರ್ ಪಂಪನಿಗಿಂತ ಬಹಳ ದೊಡ್ಡವನೆಂದು ಅನ್ನಿಸುತ್ತದೆ.

ಪಂಪ ಮತ್ತು ಹೋಮರ್ ಇಬ್ಬರೂ ವೀರಯುಗದ ಕವಿಗಳು. ಪಂಪ ಮತ್ತು ಹೋಮರ್ ಇಬ್ಬರ ಸಾಂಸ್ಕೃತಿಕ ಪರಿಸರಗಳು ಭಿನ್ನವಾದುವೆಂಬುದನ್ನೂ, ಆ ಕಾರಣದಿಂದ ಕೆಲವು ವಿಷಯಗಳನ್ನು ಕುರಿತ ನಿಲುವುಗಳು ಅವರಿಬ್ಬರಲ್ಲಿ ಬೇರೆ ಬೇರೆಯಾಗಿರುತ್ತವೆ ಎಂಬುದನ್ನು ಒಪ್ಪಿದರೂ, ವೀರಯುಗದ ಕೆಲವು ಮುಖ್ಯ ಮೌಲ್ಯಗಳು ಇಬ್ಬರಲ್ಲಿಯೂ ಸಮಾನವಾಗಿ ಪ್ರತಿಪಾದಿತವಾಗಿವೆ. ವೀರಯುಗದ ಮೌಲ್ಯಗಳಾದ, ವೀರ, ತ್ಯಾಗ, ಸ್ವಾಮಿಭಕ್ತಿ, - ಇತ್ಯಾದಿಗಳು, ಪಂಪನಿಗೂ ಹೋಮರನಿಗೂ ಸಮಾನವಾದವುಗಳು. ಕುರುಕ್ಷೇತ್ರದ ಶಿಬಿರವೊಂದರಲ್ಲಿನ ದಂಪತಿಗಳ ಸಂಭಾಷಣೆಯಲ್ಲಾಗಲೀ, ಟ್ರಾಯ್ ನಗರವಲ್ಲಿ ಯುದ್ಧದ ನಡುವಣ ಅವಧಿಯಲ್ಲಿ ಸಂಧಿಸುವ ಹೆಕ್ಟರ್ ಮತ್ತು ಆಂಡ್ರೊಮಕೆಯರ ಸಂಭಾಷಣೆಯಲ್ಲಾಗಲಿ, ಕಂಡು ಬರುವುದು, ರುದ್ರ ಭಯಂಕರವಾದ ಯುದ್ಧವೊಂದರಿಂದ ತಮ್ಮ ವೈಯಕ್ತಿಕವಾದ ಬದುಕಿಗೆ ಮತ್ತು ಸಾಂಸಾರಿಕ ಜೀವನಕ್ಕೆ ಒದಗುವ ಆಘಾತದ ಭಯವೇ. ಇದನ್ನು ಪಂಪ ಕೇವಲ ಮೌಲ್ಯದ ಉದ್ಘೋಷದ ಮೂಲಕ – ಅಂದರೆ ‘ನಾಳೆ ಈ ಹೊತ್ತಿಗೆ ದೇವಲೋಕದ ಕನ್ಯಕೆಯರ ಓಲಗದಲ್ಲಿರುತ್ತೇನೆ’ ಎಂದು ಕೊಳ್ಳುವ ಸೈನಿಕನ ಮಾತಿನಲ್ಲಿ, ಮರಣವೆಂಬುದು ವೀರಸ್ವರ್ಗವೆಂದು ವೈಭವೀಕರಿಸುವ ಮಾತಿನಲ್ಲಿ, ಅಭಿವ್ಯಕ್ತಪಡಿಸಿ, ಈ ಬಗ್ಗೆ ಆ ದಂಪತಿಗಳಲ್ಲಿ ಇನ್ನು ಯಾವ ಮಾನವೀಯ ತಾಕಲಾಟಗಳೂ ಈ ಸಂದರ್ಭದಲ್ಲಿ ಉಂಟಾಗಲೀ ಇಲ್ಲವೇನೋ ಎಂಬ ಭಾವನೆಯನ್ನು ಉಂಟು ಮಾಡುತ್ತಾನೆ; ಆದರೆ ಹೋಮರ್, ರಣರಂಗಕ್ಕೆ ಧುಮುಕಿದವರಿಗೆ ಮರಣ

ಅನಿವಾರ್ಯವೆಂಬುದನ್ನೂ, ಹೆಕ್ಟರನಂಥವರು ಹೋರಾಡುವುದು ಪೌರುಷದ ಹಾಗೂ ಕರ್ತವ್ಯನಿಷ್ಠೆಯ ಕೆಲಸವೆಂಬುದನ್ನೂ ಹೇಳುತ್ತಲೇ, ಯುದ್ಧದ ದುರಂತ ದುಷ್ಪರಿಣಾಮಗಳನ್ನೂ, ಅದರಿಂದ ಮಾನವೀಯ ಸಂಬಂಧಗಳಿಗೆ ಉಂಟಾಗುವ ಆಘಾತಗಳನ್ನೂ ಚಿತ್ರಿಸುವುದರ ಮೂಲಕ ಮಹಾಕವಿಗೆ ಉಚಿತವಾದ ಸಮಗ್ರದೃಷ್ಟಿಯನ್ನು ಪ್ರಕಟಿಸುತ್ತಾನೆ. ಯಾವ ದೊಡ್ಡ ಕವಿಯೆ ಆಗಲಿ, ತನ್ನ ಕೃತಿ, ತನ್ನ ಕಾಲದ ಮೌಲ್ಯಗಳನ್ನು ಪ್ರಕಟಿಸುತ್ತಲೇ, ಅದಕ್ಕೆ ಹಿನ್ನೆಲೆಯಾದ ಮಾನವೀಯವಾದ ವೈಯಕ್ತಿಕ ಸಂಘರ್ಷಗಳನ್ನೂ, ನೋವುಗಳನ್ನೂ ಚಿತ್ರಿಸಬೇಕು. ಹಾಗಲ್ಲದೆ, ವ್ಯಕ್ತಿಗಳನ್ನು, ಪಾತ್ರಗಳನ್ನು, ಕೇವಲ ಮೌಲ್ಯದ ಪ್ರತಿನಿಧಿಗಳೆಂದೋ, ಉದ್‌ಘೋಷಕರೆಂದೋ ಭಾವಿಸುವುದು ಅಸಮಗ್ರವಾದ ಕ್ರಿಯೆಯಾಗುತ್ತದೆ.

ಇದರಿಂದ ನಿಷ್ಪನ್ನವಾಗುವ ಇನ್ನೊಂದು ಸಂಗತಿಯೇನೆಂದರೆ, ನಮ್ಮ ಸಾಂಸ್ಕೃತಿಕ ಇತಿಹಾಸವೆಲ್ಲವೂ, ಮಾನವನ ನೋವುಗಳನ್ನೂ, ತಾಕಲಾಟಗಳನ್ನೂ ಗಣನೆಗೆ ತೆಗೆದುಕೊಳ್ಳದೆ, ತತ್ಪರಿಣಾಮವಾದ ಸಾಧನೆಗಳನ್ನೂ (achievements) ಮತ್ತು ಮೌಲ್ಯಗಳನ್ನೂ ಮಾತ್ರವೇ ವ್ಯಾಖ್ಯಾನಿಸುವ ಸ್ವರೂಪದ್ದಾಗಿರುವುದರಿಂದ, ಅದು ಕೇವಲ ಸಂಸ್ಕೃತಿಯ ವೈಭವೀಕರಣವಾಗಿದೆಯೇನೋ – ಎಂದು ಅನುಮಾನ ನನಗೆ. ಚರಿತ್ರೆಯ ಹಿನ್ನೆಲೆಗಿರುವ ಶೋಷಣೆ, ನೋವು, ಸಂಕಟಗಳು ಮತ್ತು ಮೌಲ್ಯದ ಹೆಸರಿನಲ್ಲಿ ಜನಸಾಮಾನ್ಯರು ಸದ್ದಿಲ್ಲದೆ ಅನುಭವಿಸಿದ ಯಾತನೆಗಳು, ಯಾವುದೇ ಸಾಂಸ್ಕೃತಿಕ ಸಾಧನೆಯನ್ನು ಅಧ್ಯಯನ ಮಾಡುವವರ ಪಾಲಿಗೆ ನಿರ್ಲಕ್ಷ್ಯದ ಸಂಗತಿಗಳಾಗಿ ಉಳಿದಿರುವ ತನಕ, ನಮ್ಮ ಸಾಂಸ್ಕೃತಿಕ ಚರಿತ್ರೆ ಒಂದು ರೀತಿಯಲ್ಲಿ ಏಕಮುಖವೂ ಅಸಮಗ್ರವೂ ಆಗಿಯೇ ಉಳಿದಿರುತ್ತದೆ.

ನಿನ್ನದೇನು ತಕರಾರು ?

ಎಚ್. ಎಚ್. ಗಂಗಾಧರಾಚಾರ್

ತಾಳಕ್ಕೆ ತಕ್ಕ ಹೆಜ್ಜೆಹಾಕು, ಎಡ-ಬಲ ನೋಡಬೇಡ.
ನೆಟ್ಟಗೆ ನಡೆ, ಎಲ್ಲರೂ ನಮಸ್ಕರಿಸಿದಡೆ ನಮಸ್ಕರಿಸು
ಅಡ್ಡಬಿದ್ದಡೆ ಅಡ್ಡಬೀಳು
ತೀರ್ಥತೆಗೆದು ಕೊಂಡ ಕಡೆ ತೀರ್ಥ ತೆಗೆದುಕೊ-
'ಇದು ಏಕೆ ಹೀಗೆ ? ಅದು ಏಕೆ ಹಾಗೆ ?'
ನಿನ್ನದೇನು ಇಲ್ಲಿದ ತಲೆಹರಟೆ ?
ಎಲ್ಲರೂ ಪುರಸ್ಕರಿಸಿದ್ದಕ್ಕೆ ನಿನ್ನದೇನು ಟೀಕೆ ಟಿಪ್ಪಣಿ ?
ಗೋವಿಂದಾ ಅಂದುಬಿಡು ಗುಂಪಿನಲ್ಲಿ ; ಅಪಾಯವಿಲ್ಲ.
ತಲೆ ತಗ್ಗಿಸಿ ನಡೆ ಗುರು ಹಿರಿಯರಿಗೆ ;
ಹೊರೆ ಹೊರಿಸಿಲ್ಲವೆ-ಅವರು ನಿನ್ನಮೇಲೆ ?
ನೀನು ತಲೆ ಎತ್ತದಿದ್ದರೇ ಚೆನ್ನ,
ಬಾಯಿ ಬಿಗಿ ಹಿಡಿದಿದ್ದರೆ ಮತ್ತೂ ಚೆನ್ನ,
ನಿನ್ನಂಥ ಸುಂದರಾಂಗ ಇನ್ನಿಲ್ಲ ನೋಡು !
ಬೇಕಾದರೆ ಹಾಡಿ ಹೊಗಳುತ್ತೇವೆ–ನಿನ್ನ.
ಎಲ್ಲರೂ ನಡೆದಂಥ ಹಾದಿಯಲ್ಲಿ ನಡೆಯುವುದಕ್ಕೆ
ನಿನ್ನದೇನು ತಕರಾರು ?
ಏಕೆ ಮೈ ಪರಚಿಕೊಳ್ಳಬೇಕು ? ವೃಥಾ ಅರಚಿಕೊಳ್ಳಬೇಕು ?
ಕನ್ನಡಿಯಲ್ಲಿ ನಿನ್ನರೂಪ ನೀನೇಕೆ ನೋಡಿಕೊಳ್ಳಬೇಕು ?
ಅವರಿವರು ನಿನ್ನ ಬಗ್ಗೆ ಮಾಡಿದ ವಿಮರ್ಶೆಸಾಲದೆ ?
ನಾವೇನು ನಿನಗೆ ಕೇಡು ಬಯಸುತ್ತೇವೆಯೆ ?
ನೀನೇಕೆ ಹೀಗೆ ಒದರಿ ಸಭೆಯ ಗಾಂಭೀರ್ಯ ಮುರಿಯಬೇಕು ?
ರೈಲುಗಳ ನಿಲ್ಲಿಸಿ ಪ್ರಯಾಣಿಕರಿಗೆ ತೊಂದರೆ ಕೊಡಬೇಕು ?
ಬಸ್ಸುಗಳ ಅಡ್ಡಗಟ್ಟಬೇಕು ? ತಂತಿ ಬೇಲಿಗಳ ಕಿತ್ತೆಸೆಯಬೇಕು ?
ನಿನಗೇನು ಗೊತ್ತು ಮಹಾ ! ಈಗಿನ್ನೂ ಕಣ್ಣುಬಿಟ್ಟಿರುವ ಕೂಸು.
ನಾವಿಲ್ಲವೆ ಜ್ಞಾನಿಗಳು-ಅಜ್ಞಾನಿಗಳ ತಿದ್ದುವುದಕ್ಕೆ ?
ನಾವಿಲ್ಲವೆ ಪಿತೃ-ಪಿತಾಮಹರು–ಸ್ವರ್ಗದ ಬಾಗಿಲು ತೆರೆಸುವುದಕ್ಕೆ ?

ನೀನೇಕೆ ಚಿಂತಿಸಬೇಕು–ಬದುಕಿನ ಬಗ್ಗೆ ಇಷ್ಟು ಗಂಭೀರವಾಗಿ ?
ನೀನೇಕೆ ಅಲೆಯ ಬೇಕು–ಹೀಗೆ ಅಧೀರನಾಗಿ,
ಅನಾಥನಾಗಿ, ಅನಾಮಧೇಯನಾಗಿ ?
ಒಪ್ಪಿಕೊಂಡುಬಿಡು ನಮ್ಮ ತತ್ವಗಳ,
ಒಪ್ಪಿಸಿಕೊಂಡು ಬಿಡು-ನಮ್ಮ ತಲೆತಲಾಂತರದ ಆಸ್ತಿಗಳ ;
ತಪ್ಪದೇ ಪಾಲಿಸಿಬಿಡು–ಯಥಾಸ್ಥಿತಿಯ ಕರ್ಮಗಳ,
ನೀತಿ ನಿಯಮಗಳ–ಕಟ್ಟು ಕಟ್ಟಲೆಗಳ ;
ನೀನು ಯೋಚಿಸಿ ತಲೆ ಕೆಡಿಸಿಕೊಳ್ಳಬೇಕಿಲ್ಲ ;
ಹೊಸದಾಗಿ ನಿರ್ಮಿಸಬೇಕಿಲ್ಲ ಹಾದಿ,
ತಾತ–ಮುತ್ತಾತಂದಿರು ನಿರ್ಮಿಸಿದ ಹಾದಿ–ಇದು ಪವಿತ್ರ !
ನಿನಗೆ ಗೊತ್ತಿಲ್ಲ ಮಗು, ನೀನಿನ್ನೂ ಅಸುಳೆ !
ನಾವು ತೋರಿಸಿದ ಹೆಣ್ಣಿಗೆ ತಾಳಿಕಟ್ಟುವುದಕ್ಕೆ ನಿನ್ನದೇನು ತಕರಾರು ?
ನಾವು ತೋರಿಸುವ ದೇವರುಗಳ ಪೂಜಿಸುವುದಕ್ಕೆ,
ನಮ್ಮ ಧರ್ಮಗಳ ಶ್ರೇಷ್ಠತೆಯ ಒಪ್ಪಿಕೊಳ್ಳುವುದಕ್ಕೆ,
ನಿನಗೇನು ಅಡ್ಡಿ-ಆತಂಕ ?
ಕಣ್ಣುಮುಚ್ಚಿ ನಡೆದರೂ ಈ ಹಾದಿ ನೇರಸ್ವರ್ಗ ಮುಟ್ಟಿಸುತ್ತದೆ!
ತಕರಾರುಗಳ ಹೂಡಿ ನೀನು ಬೀದಿ ಬಿಕಾರಿಯಾಗಬೇಡ !
ಈ ಮಹಾಸ್ವಾಮಿಗಳ ಕಾಲಿಗೆ ಬೀಳು ; ಆಶೀರ್ವಾದ ಪಡೆದುಕೊ.
ನಾಳೆ ಹುಟ್ಟುವ ಮಕ್ಕಳಿಗೂ ಇದನ್ನೇ ಕಲಿಸು ;
ಇಲ್ಲದಿದ್ದರೆ ನಾವು ಸ್ವರ್ಗಸೇರುವುದಿಲ್ಲ !
ಅತಂತ್ರ ಪಿಶಾಚಿಗಳಾಗಿ ಇಲ್ಲೇ ಸುತ್ತಿ ಸುತ್ತಿ,
ನಿನ್ನ ಕೊರಳಿಗೆ ಕೈಹಾಕಬೇಕಾಗುತ್ತದೆ ಅಷ್ಟೆ !

"ಅವಿಷ್ಟಲಿಂಗ"

ಪ್ರೊ. ಗರ್ಗೇಶ್ವರಿ ವೆಂಕಟಸುಬ್ಬಯ್ಯ

ಶಬ್ದಮಣಿದರ್ಪಣದ ನಾಮಪ್ರಕರಣದಲ್ಲಿನ

> ಯುಗಳಾರ್ಥದ ಬಹುವಚನ ।
> ಕ್ಕೊಗೆತಂದಾವಿಷ್ಟಲಿಂಗದೆಡೆಗೇಕತ್ವಂ ॥
> ನೆಗಳ್ಗುಂ ಕ್ರಿಯಾವಿಶೇಷಣ ।
> ಮಗಲದೆ ನಿಂದೆಡೆಗಮುೞಿವರಿಂದೇಕತ್ವಂ ॥

ಎಂಬ ಸೂತ್ರದಲ್ಲಿಯೂ[1] ಅದರ ವೃತ್ತಿಯಲ್ಲಿಯೂ ಬರುವ "ಆವಿಷ್ಟಲಿಂಗ"ವೆಂಬ ಪದ ಆ ಗ್ರಂಥದಲ್ಲಿ ಮತ್ತೆಲ್ಲಿಯೂ ಕಂಡುಬರುವುದಿಲ್ಲ. ಕೇಶಿರಾಜನು ಆ ಪದಕ್ಕೆ ವಿವರಣೆಯನ್ನೂ ಕೊಟ್ಟಿಲ್ಲ. ಈ ವಿಷಯವನ್ನು ವಿದ್ವಾನ್ ಶ್ರೀ ಬಸವರಾಜು ಅವರು "ಶಬ್ದಮಣಿದರ್ಪಣ : ಸಮಸ್ಯೆಗಳು–೧ ಆವಿಷ್ಟಲಿಂಗ" ಎಂಬ ತಮ್ಮ ಲೇಖನದಲ್ಲಿ[2] ಪ್ರಸ್ತಾಪಿಸಿ, "ನಪುಂಸಕಲಿಂಗಾಂತ ಸಾಮೂಹಿಕೈಕವಚನವನ್ನೇ ಸದ್ಯಕ್ಕೆ ಆವಿಷ್ಟಲಿಂಗದ ಲಕ್ಷಣವನ್ನಾಗಿ ಗ್ರಹಿಸೋಣವೆ ?" ಎಂದೂ, "ವಿಶೇಷಣ ವಿಶೇಷ್ಯ ಪದಗಳ ಪೂರ್ವಪರಸ್ಥಾನವ್ಯತ್ಯಾಸವನ್ನೇ ಅವುಗಳೆರಡರ [ವಾಚ್ಯ ಮತ್ತು ಆವಿಷ್ಟ ಲಿಂಗಗಳ] ಭೇದ-ಲಕ್ಷಣಗಳೆಂಬುದಾಗಿ ಅಭ್ಯುಪಗಮಿಸಬಹುದೆ ?" ಎಂದೂ ಸಹ ಪ್ರಶ್ನಿಸಿದ್ದಾರೆ.

ಶ್ರೀಯುತರು ಲೇಖನದ ಆದಿಭಾಗದಲ್ಲಿಯೇ "ಆವಿಷ್ಟಲಿಂಗ"ಕ್ಕೆ ಕಿಟ್ಟೆಲ್ಲರ ಕೋಶದಲ್ಲಿ ಕೊಟ್ಟಿರುವ ಅರ್ಥವನ್ನೂ, "ಶಬ್ದಾನುಶಾಸನ ಪ್ರಕಾಶಿಕೆ"ಯಲ್ಲಿನ ಲಕ್ಷಣ ಮತ್ತು ಉದಾಹರಣೆಗಳನ್ನೂ[3] ಉಲ್ಲೇಖಿಸಿದ್ದರೂ, ಮುಂದೆ ಅವನ್ನು ಗಣನೆಗೆ ತೆಗೆದುಕೊಂಡಿಲ್ಲ. ಭಟ್ಟಾಕಲಂಕನು ಕೇಶಿರಾಜನಿಗಿಂತ ಈಚಿನವನೆಂಬುದೂ, ಭಟ್ಟಾಕಲಂಕನು ಕೊಟ್ಟಿರುವ ಲಕ್ಷಣ ಕೇಶಿರಾಜನು ಕೊಟ್ಟಿರುವ ಪ್ರಯೋಗಗಳಿಗೆ ಹೊಂದದೇ ಇರುವುದೂ ಇದಕ್ಕೆ ಕಾರಣಗಳಿರಬಹುದು. ಆದರೆ ಕೇಶಿರಾಜನು ಕೊಟ್ಟಿರುವ ಎರಡು ಪ್ರಯೋಗಗಳಿಂದಲೇ ಆವಿಷ್ಟಲಿಂಗದ ಲಕ್ಷಣವನ್ನು ನಿರ್ಧರಿಸುವುದು ಸಾಧುವೂ ಅಲ್ಲ ಸಾಧ್ಯವೂ ಅಲ್ಲ.

ಶಬ್ದಮಣಿದರ್ಪಣಕ್ಕಿಂತ ಪ್ರಾಚೀನವಾದ ಕನ್ನಡ ಲಕ್ಷಣಗ್ರಂಥಗಳಾದ ಕವಿರಾಜಮಾರ್ಗ, ಶಬ್ದಸ್ಮೃತಿ, ಭಾಷಾಭೂಷಣಗಳಲ್ಲಿ "ಆವಿಷ್ಟಲಿಂಗ" ಶಬ್ದ ಎಲ್ಲಿಯೂ

ಕಂಡುಬರುವುದಿಲ್ಲ. ಆದುದರಿಂದ ಈ ಪದದ ಲಕ್ಷಣವನ್ನು ಸಂಸ್ಕೃತ ವ್ಯಾಕರಣ ಗ್ರಂಥಗಳ ಆಧಾರದಿಂದಲೇ ನಿರ್ಣಯಿಸಬೇಕಾಗಿದೆ.

ಪಾಣಿನೀಯ ಅಷ್ಟಾಧ್ಯಾಯಿಯಲ್ಲಿ "ಅವಿಷ್ಟಲಿಂಗ" ಶಬ್ದ ಕಂಡುಬರುವುದಿಲ್ಲ. ಆದರೆ ಪತಂಜಲಿಯ ವ್ಯಾಕರಣ ಮಹಾಭಾಷ್ಯದಲ್ಲಿ "ವಿಶೇಷಣಾನಾಂ ಚಾಜಾತೇಃ" (ಪಾಣಿನಿ 1-2-52) ಎಂಬ ಸೂತ್ರದ ಭಾಷ್ಯದಲ್ಲಿ[4] "ಬದರೀ ಸೂಕ್ಷ್ಮಕಂಟಕಾ ಮಧುರಾ ವೃಕ್ಷಃ" ಎಂಬ ಪ್ರಯೋಗವೂ 'ಅವಿಷ್ಟಲಿಂಗಾ ಜಾತಿರ್ಯಲ್ಲಿಂಗ ಮುಪಾದಾಯ ಪ್ರವರ್ತತೇ,ಉತ್ಪತ್ತಿ ಪ್ರಭೃತ್ಯಾವಿನಾಶಾನ್ನ ತರ್ದ್‌ಲಿಂಗಂ ಜಹಾತಿ" ಎಂಬ ವಿವರಣೆಯೂ ಇದೆ. ಈ ಪ್ರಯೋಗದಲ್ಲಿ ವಿಶೇಷ್ಯವಾದ "ಬದರೀ" ಸ್ತ್ರೀಲಿಂಗ ಶಬ್ದವಾದರೂ ವಿಶೇಷಣವಾದ "ವೃಕ್ಷ" ಪುಲ್ಲಿಂಗ ಶಬ್ದ. ಕೈಯಟನು (ಕಾಲ ಕಿ. ಶ. 11 ನೆಯ ಶತಮಾನ) ತನ್ನ "ಭಾಷ್ಯಪ್ರದೀಪ"ದಲ್ಲಿ ಭಾಷ್ಯದಲ್ಲಿನ ಅವಿಷ್ಟಲಿಂಗ ಪದಕ್ಕೆ "ನಿಯತಲಿಂಗ'ವೆಂಬ ಅರ್ಥವನ್ನು ಹೇಳಿದ್ದಾನೆ.[5]

ಭರ್ತೃಹರಿಯ (ಕಾಲ ಕ್ರಿ. ಶ. 5ನೆಯ ಶತಮಾನ) "ವಾಕ್ಯಪದೀಯ"ದಲ್ಲಿ ಮೂರು ಶ್ಲೋಕಗಳಲ್ಲಿ[6] ಅವಿಷ್ಟಲಿಂಗ ಶಬ್ದವಿದೆ. ಇವುಗಳ ಪೈಕಿ ಮೊದಲಶ್ಲೋಕದ ವ್ಯಾಖ್ಯಾನದಲ್ಲಿ ಹೇಲಾರಾಜನು (ಕಾಲ ಕ್ರಿ. ಶ. 10ನೆಯ ಶತಮಾನ) ಅವಿಷ್ಟ ಲಿಂಗಕ್ಕೆ ನಿಯತಲಿಂಗವೆಂಬ ಅರ್ಥವನ್ನೇ ಕೊಟ್ಟಿದ್ದಾನೆ. ಉಳಿದ ಶ್ಲೋಕಗಳಲ್ಲೂ ಅದೇ ಅರ್ಥ ಸರಿಯಾಗುತ್ತದೆ.

ಸುಮಾರು ಕ್ರಿ. ಶ. 7ನೆಯ ಶತಮಾನದಲ್ಲಿ ರಚಿತವಾದ ಕೌಶಿಕಾವೃತ್ತಿಯಲ್ಲೂ ಅವಿಷ್ಟಲಿಂಗ ಶಬ್ದವು ನಿಯತಲಿಂಗವೆಂಬ ಅರ್ಥದಲ್ಲಿಯೇ ಪ್ರಯೋಗಿಸಲ್ಪಟ್ಟಿದೆ.[7] ಅಲ್ಲಿ ಉದಾಹೃತವಾದ ಗೋ ಪ್ರಕಾಂಡಂ, ಅಶ್ವ ಪ್ರಕಾಂಡಂ ಎಂಬ ಪದಗಳಲ್ಲಿ ವಿಶೇಷ್ಯಗಳಾದ ಗೋ ಮತ್ತು ಅಶ್ವ ಶಬ್ದಗಳು ಪುಲ್ಲಿಂಗ, ವಿಶೇಷಣವಾದ ಪ್ರಕಾಂಡ ಶಬ್ದ ನಪುಂಸಕಲಿಂಗ; ಗೋಮತಲ್ಲಿಕಾ, ಅಶ್ವಮತಲ್ಲಿಕಾ ಎಂಬ ಪದಗಳಲ್ಲಿನ ಮತಲ್ಲಿಕಾ ಸ್ತ್ರೀಲಿಂಗ ಶಬ್ದ.

ಭಟ್ಟಾಕಲಂಕನು ತನ್ನ ವ್ಯಾಖ್ಯಾನದಲ್ಲಿ ಅನೇಕಕಡೆ ಉದಾಹರಿಸಿರುವ ಜೈನೇಂದ್ರ ವ್ಯಾಕರಣ ಶಾಕಟಾಯನ ವ್ಯಾಕರಣಗಳಲ್ಲಿ ಅವಿಷ್ಟಲಿಂಗ ಶಬ್ದ ಕಂಡು ಬರುವುದಿಲ್ಲ. ಆದರೆ ಶಾಕಟಾಯನ ವ್ಯಾಕರಣಕಾರನು ತಾನೇ ರಚಿಸಿದ 'ಅಮೋಘ ವೃತ್ತಿ'ಯಲ್ಲಿ ಗೋಮತಲ್ಲಿಕಾ, ಅಶ್ವಮತಲ್ಲಿಕಾ ಎಂಬ ಪದಗಳನ್ನು ಕೊಟ್ಟು, ಮತಲ್ಲಿಕಾದಿ ಶಬ್ದಗಳು ಅವಿಷ್ಟಲಿಂಗಗಳೆಂದು ಹೇಳಿದ್ದಾನೆ.[8]

ಮೇಲಿನ ಗ್ರಂಥಗಳಲ್ಲೆಲ್ಲಾ ನಿಯತಲಿಂಗವುಳ್ಳ ಒಂದು ಶಬ್ದವು ಬೇರೆ ಲಿಂಗದ ಶಬ್ದಕ್ಕೆ ವಿಶೇಷಣವಾಗಿ ಬಂದ ಸಂದರ್ಭದಲ್ಲಿಯೇ ಅವಿಷ್ಟಲಿಂಗ ಶಬ್ದವು ಪ್ರಯೋಗಿಸಲ್ಪಟ್ಟಿದೆ. ಬಹುಶಃ ಈ ಕಾರಣದಿಂದ, ಕಾಲಕ್ರಮದಲ್ಲಿ, "ಬೇರೆ

ಲಿಂಗದ ಶಬ್ದಕ್ಕೆ ವಿಶೇಷಣವಾದ ನಿಯತಲಿಂಗ ಶಬ್ದ" ಎಂಬ ವಿಶಿಷ್ಟಾರ್ಥದಲ್ಲಿಯೂ ಅವಿಷ್ಟಲಿಂಗ ಶಬ್ದದ ಪ್ರಯೋಗರೂಢವಾದಂತೆ ತೋರುತ್ತದೆ.

ಭೋಜನು (ಕ್ರಿ.ಶ. 10ನೆಯ ಶತಮಾನದ ಅಂತ್ಯ/11ನೆಯ ಶತಮಾನದ ಆದಿ) ತನ್ನ 'ಶೃಂಗಾರ ಪ್ರಕಾಶ'ದಲ್ಲಿ[9] ಸಾಮಾನ್ಯ ವಿಶಿಷ್ಟಾರ್ಥಗಳೆರಡರಲ್ಲೂ ಈ ಶಬ್ದವನ್ನು ಪ್ರಯೋಗಿಸಿದ್ದಾನೆ. ಪ್ರಥಮ ಪ್ರಕಾಶದಲ್ಲಿ ನಾಮ, ಅವ್ಯಯ, ಅನುಕರಣ, ಕೃತ್, ತದ್ಧಿತ ಮತ್ತು ಸಮಾಸಗಳು ಪ್ರಾತಿಪದಿಕಗಳೆಂದು ಹೇಳಿ, ನಾಮಗಳನ್ನು ಅವಿಷ್ಟಲಿಂಗ ಮತ್ತು ಅನಾವಿಷ್ಟಲಿಂಗಗಳೆಂದು ಎರಡು ತೆರನಾಗಿ ವಿಭಜಿಸಿ, ಜಾತಿದ್ರವ್ಯ ಪರಿಮಾಣ ವಾಚಕಗಳು ಆವಿಷ್ಟಲಿಂಗಗಳು, ಗುಣವಾಚಕ, ಸಂಖ್ಯಾವಾಚಕ ಸರ್ವನಾಮಗಳು ಅನಾವಿಷ್ಟಲಿಂಗಗಳು ಎಂದು ನಿರೂಪಿಸಿದ್ದಾನೆ.[10] ದ್ವಿತೀಯ ಪ್ರಕಾಶದಲ್ಲಿ ಕೆಲವು ಶಬ್ದಗಳನ್ನು ಕೊಟ್ಟು, ಇವು ಆವಿಷ್ಟಲಿಂಗಗಳಾದುದರಿಂದ ಕ್ರಿಯಾವಿಶೇಷಣವಾಗಿ ಉಪಯುಕ್ತವಾದಾಗಲೂ ನಪುಂಸಕಲಿಂಗಗಳಲ್ಲವೆಂದೂ ಹೇಳಿದ್ದಾನೆ.[11] ಈ ಎರಡು ಕಡೆಗಳಲ್ಲೂ ಆವಿಷ್ಟಲಿಂಗ ಶಬ್ದವು ನಿಯತಲಿಂಗವೆಂಬರ್ಥದಲ್ಲಿ ಪ್ರಯುಕ್ತವಾಗಿದೆ.

ಪಂಚಮ ಪ್ರಕಾಶದಲ್ಲಿ, ಬೇರೆ ಲಿಂಗದ ಪದಕ್ಕೆ ವಿಶೇಷಣವಾದಾಗಲೂ ತನ್ನ ನಿಯತಲಿಂಗವನ್ನು ಬಿಡದಿರುವ ಶಬ್ದವನ್ನು ಆವಿಷ್ಟಲಿಂಗವೆಂದು ಕರೆದಿದ್ದಾನೆ. ಶೃಂಗಾರಪ್ರಕಾಶದ ಈ ಭಾಗವನ್ನು ಇದಕ್ಕೆ ಸಂವಾದಿಯಾದ ಭಟ್ಟಾಕಲಂಕನ ಮಂಜರೀಮಕರಂದದ ಭಾಗದೊಡನೆ ಹೋಲಿಸಬಹುದು.

ಶೃಂಗಾರಪ್ರಕಾಶದಲ್ಲಿ[12]	ಮಂಜರೀಮಕರಂದದಲ್ಲಿ[13]
ಲಿಂಗ ದ್ವಿಧಾ, ಶಬ್ದಲಿಂಗಮರ್ಥಲಿಂಗಂಚ	
ತದೇತಚ್ಛುದ್ಧಮಿಶ್ರಾದಿ ಭೇದಾತ್ ಷೋಢಾ ವಿಪ್ರಥತೇ । ಶುದ್ಧಂ, ಮಿಶ್ರಂ, ಸಂಕೀರ್ಣಂ, ಉಪಸರ್ಜನಂ, ಆವಿಷ್ಟಂ, ಅವ್ಯಕ್ತಂಚ ।	ತದೇತಲ್ಲಿಂಗಂ ಷೋಢಾ-ಶುದ್ಧಂ,ಮಿಶ್ರಂ, ಸಂಕೀರ್ಣಂ, ಉಪಸರ್ಜನಂ, ಆವಿಷ್ಟಂ, ಅವ್ಯಕ್ತಂಚೇತಿ.
ತೇಷ್ವೇಕ ಸಂಸ್ಕಾರ ಹೇತುಶ್ಶುದ್ಧಂ...	ತತ್ರ ನಿಯಶ್ಯೈಕ ಸಂಸ್ಕಾರೋಪಗ್ರಾಹಿ ಲಿಂಗಂ ಶುದ್ಧಂ...
ಸಂಸ್ಕಾರ ದ್ವಯೋಪಗ್ರಾಹಿ ಮಿಶ್ರಂ...	ಸಂಸ್ಕಾರದ್ವಯೋಪಗ್ರಾಹಿ ಮಿಶ್ರಂ...
ಸಂಸ್ಕಾರ ತ್ರಯ ಯೋಗಿ ಸಂಕೀರ್ಣಂ ..	ಸಂಸ್ಕಾರತ್ರಯೋಪಗ್ರಾಹಿ ಸಂಕೀರ್ಣಂ...
ವಿಶೇಷ್ಯಶಬ್ದನಿಯತ ವಿಶೇಷಣ ರೂಪಮುಪರ್ಜನಂ...	ವಿಶೇಷಣಂ ಸತ್ ವಿಶೇಷ್ಯಲಿಂಗಾಯತ್ತ ಸಂಸ್ಕಾರೋಪಗ್ರಾಹಿ ಉಪಸರ್ಜನಂ ..
ವಿಶೇಷಣತ್ವೇಪಿ ನಿಯತಶಬ್ದ ಸಂಸ್ಕಾರಾರ್ಹಮಾವಿಷ್ಟಂ ; ಪ್ರಕೃತಿಃ, ವಿಷಯಃ, ಪ್ರಧಾನಂ, ಭಾರ್ಯಾ, ದಾರಾಃ ಕಳತ್ರಮಿತಿ.	ವಿಶೇಷಣಂ ಸದಪಿ ವಿಶೇಷ್ಯ ಲಿಂಗಾನ-ಧೀನಂ ನಿಯತ ಸಂಸ್ಕಾರೋಪಗ್ರಾಹಿ ಆವಿಷ್ಟಂ...
ಲಿಂಗ ನಿಮಿತ್ತ ಶಬ್ದಸಂಸ್ಕಾರಾನರ್ಹ-ಮವ್ಯಕ್ತಂ.	ಲಿಂಗಾಯತ್ತ ಸಂಸ್ಕಾರಾನ-ಪಗ್ರಾಹಿ ಅವ್ಯಕ್ತಂ.

ಇವೆರಡರ ಹೋಲಿಕೆಯಿಂದ, ಭಟ್ಟಾಕಲಂಕನು ಭೋಜನಿಗೆ ಅಕ್ಷರಶಃ ಋಣಿ ಎಂದು ಸ್ಪಷ್ಟವಾಗುವುದು. ಭಟ್ಟಾಕಲಂಕನು "ಅನಾವಿಷ್ಟ" ಶಬ್ದವನ್ನೂ, ನಿಯತ ಲಿಂಗವೆಂಬ ಸಾಮಾನ್ಯಾರ್ಥದಲ್ಲಿ "ಅವಿಷ್ಟ ವಿಶೇಷಣ"ವೆಂಬ ಶಬ್ದವನ್ನೂ ತನ್ನ ವ್ಯಾಖ್ಯಾನದಲ್ಲಿ[14] ಪ್ರಯೋಗಿಸಿದ್ದಾನೆ.

ಇದುವರೆಗೆ ಸಂಸ್ಕೃತ ವೈಯಾಕರಣರು ಯಾವ ಅರ್ಥಗಳಲ್ಲಿ ಅವಿಷ್ಟಲಿಂಗ ಶಬ್ದವನ್ನು ಪ್ರಯೋಗ ಮಾಡಿದ್ದಾರೆಂದು ಪರಿಶೀಲಿಸಿಯಾಯಿತು. ಈಗ ಕೇಶಿ ರಾಜನ "ಯುಗಳಾರ್ಥದ..." ಸೂತ್ರವನ್ನೂ ಅದರ ವೃತ್ತಿ ಪ್ರಯೋಗಗಳನ್ನೂ ಪರಿಶೀಲಿಸಬಹುದು. ಸೂತ್ರದ ವೃತ್ತಿ ಪ್ರಯೋಗಗಳು[15] ಇಂತಿವೆ:

ವೃತ್ತಿ: ಯುಗಳಾರ್ಥದೊಳ್ ವರ್ತಿಸುವ ಬಹುವಚನಕ್ಕವಾವಿಷ್ಟಲಿಂಗಕ್ಕಂ ಕ್ರಿಯಾವಿಶೇಷಣಕ್ಕಂ ಬಲ್ಲರಿಂದೇಕವಚನಮುಕ್ಕುಂ.

ಪ್ರಯೋಗಂ: ಪದಯುಗಳಂಗಳ್ಗೆ—ಪದಯುಗಂ.

ಅವಿಷ್ಟಲಿಂಗಕ್ಕೆ: ವೇದಂಗಳ್ ಪ್ರಮಾಣಂ. ಪ್ರತಿಭೆಯುಮಭ್ಯಾಸಮುಂ ವಿದ್ವತ್ಸೇವೆಯುಂ ಕಾವ್ಯಪರಿಚಯಮುಂ ಕವಿತೆಗೆ ಕಾರಣಂ.

ಕ್ರಿಯಾವಿಶೇಷಣಕ್ಕೆ: ಏನೆಂಬ ಪೆಂಪೊ! (ಎಂದರೆ) ಎಂತಹವರ್ಗಳೆಂಬ ಪೆರ್ಮೆಯೊ! (ಎಂಬಲ್ಲಿ) 'ಎಂಬ' ಎಂಬೀ ಕ್ರಿಯೆಗೆ 'ಏನ್' ಎಂಬ ಕಾರಕಂ ವಿಶೇಷಣಮಾಗಿ ಬಹುವಚನಮಾಯ್ತು.

ಕಂ॥ ಏನೆಂಬ ಪೆಂಪೊ ಮನುವುಂ ।
ತಾನುಂ ಸಚ್ಚರಿತರಮರ ಕುಜಮುಂ ತಾನುಂ ॥
ದಾನಿಗಳಂಭೋನಿಧಿಯುಂ ।
ತಾನುಂ ಗಂಭೀರರೆನಿಪನುದಯಾದಿತ್ಯಂ ॥

ತಿಬ್ಬಂ ಮಾಡಿದಂ=ತಿಬ್ಬವೆಹಗಹುದಹಗೆ ಮಾಡಿದಂ.
ದೋಷ ರಹಿತಂ ಪೇಳ್ದಂ=ದೋಷರಹಿತವೆಹಗಹುದಹಗೆ ಪೇಳ್ದಂ.
ಇದೀಗ ಕ್ರಿಯಾ ವಿಶೇಷಣಂ.

ಸೂತ್ರ ವೃತ್ತಿಗಳಲ್ಲಿನ ಅವಿಷ್ಟಲಿಂಗ ಶಬ್ದವನ್ನು ನಿಯತಲಿಂಗವೆಂಬ ಸಾಮಾನ್ಯಾರ್ಥದಲ್ಲಿ ತೆಗೆದುಕೊಂಡರೆ, ನಿಯತಲಿಂಗ ಶಬ್ದಗಳನ್ನೆಲ್ಲ ಏಕವಚನದಲ್ಲಿ ಪ್ರಯೋಗಿಸಬೇಕೆಂದು ಹೇಳಿದಂತಾಗುವುದು. ಇದು ಸರಿಯಲ್ಲವೆಂಬುದು ಸುಸ್ಪಷ್ಟ. ಭಿನ್ನ ಲಿಂಗದ ಶಬ್ದಗಳಿಗೆ ವಿಶೇಷಣವಾದಾಗಲೂ ತನ್ನ ನಿಯತ ಲಿಂಗವನ್ನು ಬಿಡದಿರುವ ಶಬ್ದವೆಂಬ ವಿಶಿಷ್ಟಾರ್ಥದಲ್ಲಿ ತೆಗೆದುಕೊಂಡರೆ, "ವೇದಾಃ ಪ್ರಮಾಣಂ", "ಪ್ರತಿಭಾ ಅಭ್ಯಾಸಃ ವಿದ್ವತ್ಸೇವಾ ಕಾವ್ಯ ಪರಿಚಯಶ್ಚ ಕವಿತಾಯಾಃ ಕಾರಣಂ" ಎಂಬ ಸಂಸ್ಕೃತ

ಪ್ರಯೋಗಗಳಲ್ಲಿ ಪ್ರಮಾಣಂ, ಕಾರಣಂ ಈ ಶಬ್ದಗಳು ಅವಿಷ್ಟಲಿಂಗಗಳೆಂದು ಹೇಳಿದರೆ ಸರಿಯಾಗುವುದು. ಏಕೆಂದರೆ ಮೊದಲನೆಯ ಪ್ರಯೋಗದಲ್ಲಿ ವಿಶೇಷ್ಯವಾದ ವೇದ ಶಬ್ದ ಪುಲ್ಲಿಂಗ, ಪ್ರಮಾಣ ನಪುಂಸಕಲಿಂಗ; ಎರಡನೆಯ ಪ್ರಯೋಗದಲ್ಲಿ ಪ್ರತಿಭಾ ಮತ್ತು ವಿದ್ವತ್ಸೇವಾ ಇವು ಸ್ತ್ರೀಲಿಂಗ ಶಬ್ದಗಳು, ಅಭ್ಯಾಸ ಮತ್ತು ಕಾವ್ಯ ಪರಿಚಯ ಇವು ಪುಲ್ಲಿಂಗ ಶಬ್ದಗಳು, ವಿಶೇಷಣವಾದ ಕಾರಣ ಶಬ್ದ ನಪುಂಸಕಲಿಂಗ. ಆದರೆ ಕನ್ನಡ ಅನುವಾದ "ವೇದಂಗಳ್ ಪ್ರಮಾಣಂ" ಎಂಬಲ್ಲಿ ವಿಶೇಷ್ಯ ವಿಶೇಷಣಗಳೆರಡೂ ನಪುಂಸಕಲಿಂಗ ಶಬ್ದಗಳೇ. ಹೀಗೆಯೇ, "ಪ್ರತಿಭೆಯುಮಭ್ಯಾಸಮುಂ ವಿದ್ವತ್ಸೇವೆಯುಂ ಕಾವ್ಯಪರಿಚಯಮುಂ ಕವಿತೆಗೆ ಕಾರಣಂ" ಎಂಬ ಪ್ರಯೋಗದಲ್ಲಿಯೂ ವಿಶೇಷ್ಯ ವಿಶೇಷಣಗಳಾದ ಎಲ್ಲ ಶಬ್ದಗಳೂ ನಪುಂಸಕಲಿಂಗದಲ್ಲಿಯೇ ಇವೆ. ಆದುದರಿಂದ ಕನ್ನಡದಲ್ಲಿ ಈ ಪ್ರಯೋಗಗಳು ಅವಿಷ್ಟಲಿಂಗಕ್ಕೆ ಉದಾಹರಣೆಗಳಾಗಲಾರವು.

ಪ್ರಮಾಣ ಮತ್ತು ಕಾರಣ ಶಬ್ದಗಳನ್ನು ಏಕವಚನದಲ್ಲಿಯೇ ಉಪಯೋಗಿಸಬೇಕೆ ಎಂಬ ವಿಚಾರವನ್ನು ಈಗ ಪರ್ಯಾಲೋಚಿಸಬಹುದು.

ಶಬ್ದ ಕಲ್ಪದ್ರುಮಕಾರನು, ಪ್ರಮಾಣ ಶಬ್ದವು ನಿತ್ಯ ನಪುಂಸಕಲಿಂಗೈಕವಚನವೆಂದು ಮೊದಲು ಹೇಳಿದ್ದರೂ, ಬಹುವಚನದಲ್ಲೂ ಪ್ರಯೋಗವಿದೆ ಎಂದು ಅನಂತರ ಹೇಳಿದ್ದಾನೆ.[16] ವಾಚಸ್ಪತ್ಯದಲ್ಲಿ, "ವೇದಾಃ ಪ್ರಮಾಣಂ" ಎಂಬಲ್ಲಿ, ವೇದಗಳೆಲ್ಲ ಒಂದೇ ಜಾತಿಗೆ ಸೇರಿದುದರಿಂದ ಪ್ರಮಾಣ ಶಬ್ದ ಏಕವಚನದಲ್ಲಿದೆಯೆಂದೂ, "ಪ್ರತ್ಯಕ್ಷಾನುಮಾನೋಪಮಾನಾಗಮಾಃ ಪ್ರಮಾಣಾನಿ" ಎನ್ನುವಾಗ ಪ್ರತ್ಯಕ್ಷ, ಅನುಮಾನ ಮೊದಲಾದುವು ಬೇರೆ ಬೇರೆ ಜಾತಿಯಾದುದರಿಂದ ಪ್ರಮಾಣಾನಿ ಎಂದು ಬಹುವಚನ ಪ್ರಯೋಗ ಮಾಡಿದೆಯೆಂದೂ ಹೇಳುವ ಪ್ರಸಿದ್ಧ ನೈಯಾಯಿಕನಾದ ಗದಾಧರನ ಅಭಿಪ್ರಾಯದ ಉಲ್ಲೇಖವಿದೆ.[17] ಇಷ್ಟೇ ಅಲ್ಲದೆ, ಪ್ರಮಾಣ ಶಬ್ದ ಸಾಮಾನ್ಯವಾಗಿ ನಪುಂಸಕಲಿಂಗವಾದರೂ ಇದಕ್ಕೆ ಸ್ತ್ರೀಲಿಂಗವೂ ಉಂಟೆಂದು ಹೇಳಿ "ಸಿದ್ಧಾನ್ತ ಕೌಮುದಿ"ಯ ಭಾಗವನ್ನು[18] ವಾಚಸ್ಪತ್ಯಕಾರನು ಉದಾಹರಿಸಿದ್ದಾನೆ. ಆಪ್ಟೆಯವರ ಸಂಸ್ಕೃತ-ಇಂಗ್ಲಿಷ್ ಕೋಶದಲ್ಲಿ "ವೇದಾಃ ಪ್ರಮಾಣಾಃ" ಎಂದು ಪುಲ್ಲಿಂಗ ಬಹುವಚನ ಪ್ರಯೋಗವೂ ಉದಾಹರಿಸಲ್ಪಟ್ಟಿದೆ.[19] "ಸಿದ್ಧಾನ್ತ ಕೌಮುದೀ" ಮತ್ತು ಆಪ್ಟೆ ಕೋಶಗಳಲ್ಲಿರುವ ಪ್ರಯೋಗಗಳನ್ನು—ಕೇಶಿರಾಜನಿಗಿಂತ ಈಚಿನ ಗ್ರಂಥಗಳಲ್ಲಿವೆಯೆಂಬ ಕಾರಣದಿಂದ—ಗಣನೆಗೆ ತೆಗೆದುಕೊಳ್ಳದಿದ್ದರೂ, ಪ್ರಮಾಣ ಶಬ್ದ ನಿತ್ಯೈಕವಚನವಲ್ಲವೆಂಬುದು ನಿರ್ವಿವಾದ.

"ಕಾರಣ" ಶಬ್ದಕ್ಕೂ ಬಹುವಚನದಲ್ಲಿ ಪ್ರಯೋಗಗಳಿವೆ.[20]

ನೈಸರ್ಗಿಕೀ ಚ ಪ್ರತಿಭಾ । ಶ್ರುತಂ ಚ ಬಹುನಿರ್ಮಲಂ ॥
ಅಮಂದಶ್ಚಾಭಿಯೋಗೋಽಸ್ಯಾಃ । ಕಾರಣಂ ಕಾವ್ಯ ಸಂಪದಃ ॥

ಎಂಬ ದಂಡಿಯ "ಕಾವ್ಯಾದರ್ಶ" (I-103) ಶ್ಲೋಕದ ವ್ಯಾಖ್ಯಾನದಲ್ಲಿ, ಪ್ರತಿಭಾದಿಗಳು ಒಟ್ಟು ಸೇರಿ ಕಾವ್ಯ ಸಂಪತ್ತಿಗೆ ಕಾರಣ, ಪ್ರತ್ಯೇಕವಾಗಿ ಅಲ್ಲವೆಂದು ಸೂಚಿಸಲು ಏಕವಚನ ಪ್ರಯೋಗ ಮಾಡಿದೆಯೆಂದು, ಜೀವಾನಂದ ವಿದ್ಯಾಸಾಗರರು ಹೇಳಿದ್ದಾರೆ.[21]

ಪ್ರಮಾಣ, ಕಾರಣ ಮೊದಲಾದ ಶಬ್ದಗಳನ್ನು ಏಕವಚನದಲ್ಲಿ ಉಪಯೋಗಿಸುವುದಕ್ಕೂ ಅವಿಷ್ಟಲಿಂಗತ್ವಕ್ಕೂ ಯಾವ ಸಂಬಂಧವೂ ಇಲ್ಲವೆಂಬುದೂ, ಯಾವ ಯಾವ ಸಂದರ್ಭಗಳಲ್ಲಿ ಏಕವಚನ ಬಹುವಚನ ಪ್ರಯೋಗ ಮಾಡಬೇಕೆಂಬುದೂ ಮೇಲಿನ ಆಧಾರಗಳಿಂದ ಸ್ಪಷ್ಟವಾಗುತ್ತದೆ.

ಪ್ರಮಾಣ ಮೊದಲಾದ ಶಬ್ದಗಳನ್ನು, ಬಹುವಚನದಲ್ಲಿರುವ ಪದಕ್ಕೆ ವಿಶೇಷಣವಾದಾಗಲೂ ಏಕವಚನದಲ್ಲಿ ಉಪಯೋಗಿಸಬಹುದೆಂದು ಹೇಳುವುದೇ ಸೂತ್ರಕಾರನ ಉದ್ದೇಶವಾಗಿದ್ದರೆ, ಅದಕ್ಕೆ ಈ ಸೂತ್ರದ ಅವಶ್ಯಕತೆಯಿಲ್ಲ.

ಅಕ್ಕುಂ ಜಾತಿಯೊಳೇಕ ।
ತ್ವಕ್ಕೆ ಬಹುತ್ವಂ ಬಹುತ್ವದೆಡೆಗೇಕತ್ವಂ ॥
ಪೊಕ್ಕು ವಿಶೇಷಣಮಕ್ಕುಂ ।
ಮೊಕ್ಕಳಮಾ ಜಾತಿಯಲ್ಲದಲ್ಲಿಯುಮೆಂಬರ್ ॥

ಎಂಬ ಸೂತ್ರದ[22] ಉತ್ತರಾರ್ಧದಿಂದಲೂ, "ಭಾವದೇಕತೆ ಬಹುತಾಧೀನಂ" ಎಂಬ ಸೂತ್ರಭಾಗದಿಂದಲೂ [23] ಈ ಉದ್ದೇಶ ನೆರವೇರುವುದು. ಆ ಸೂತ್ರಗಳ ವೃತ್ತಿಯಲ್ಲಿ ಕೊಟ್ಟಿರುವ "ಮಹೇಂದ್ರ ಮಹೈಶ್ವರ್ಯಂಗಳಿವೆಲ್ಲ ಮಧ್ರುವಂ (ಇವೆಲ್ಲ ಮಧ್ರುವಂಗಳ್)" ಮತ್ತು "ಕಣ್ಗಳ ಕೂರ್ಪು, ಕಣ್ಗಳ ಕೂರ್ಪುಗಳ್" ಎಂಬ ಪ್ರಯೋಗಗಳನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

"ಯುಗ" ಎಂದರೆ "ಜೋಡಿ" ಎಂದು ಅರ್ಥವಾಗುವುದರಿಂದ, "ಪದಯುಗಂ" ಎಂಬುದು ಸಹಜವಾಗಿ ಏಕವಚನವೇ. ಆದುದರಿಂದ "ಯುಗಳಾರ್ಥದ ಬಹುವಚನಕ್ಕೆ ಏಕತ್ವಂ ಸೆಗಟ್ಗುಂ" ಎಂಬ ಸೂತ್ರಭಾಗವೂ ಅನಾವಶ್ಯಕ. ಹೀಗೆ ಈ ಸೂತ್ರದ ಪೂರ್ವಾರ್ಧದ ಅವಶ್ಯಕತೆಯಿಲ್ಲ.

ಕ್ರಿಯಾವಿಶೇಷಣಕ್ಕೆ ಏಕತ್ವವನ್ನು ಹೇಳುವ ಭಾಗ ಸರಿಯಾದರೂ, ವೃತ್ತಿಯಲ್ಲಿನ "ಎಂಬ ಎಂಬೀ ಕ್ರಿಯೆಗೆ ಏನ್ ಎಂಬ ಕಾರಕಂ ವಿಶೇಷಣಮಾಗಿ ಬಹುವಚನಮಾಯ್ತು" ಎಂಬ ವಿವರಣೆ ಅಪ್ರಸ್ತುತವಾಗಿ ತೋರುತ್ತದೆ. ಬಹುಶಃ ಇದನ್ನು ಗಮನಿಸಿಯೇ ಲಿಂಗಣಾರಾಧ್ಯನು ಪ್ರಯೋಗಗಳನ್ನು ಕೊಡುವಾಗ ಈ ವಿವರಣೆಯನ್ನು ಬಿಟ್ಟಿರುವಂತೆ ತೋರುತ್ತದೆ.[15]

ಸೂತ್ರವೃತ್ತಿಗಳಲ್ಲಿ ಕಂಡುಬರುವ ಮೇಲಿನ ನ್ಯೂನತೆಗಳನ್ನು ಗಮನಿಸಿದರೆ, ಈ " ಯುಗಳಾರ್ಥದ ಬಹುವಚನ ...... " ಸೂತ್ರ ಮತ್ತು ಅದರ ವೃತ್ತಿ ಪ್ರಕ್ಷಿಪ್ತಗಳಿರಬಹುದೇ ಎಂಬ ಸಂದೇಹವುಂಟಾಗುತ್ತದೆ. ಆದರೆ ಇದುವರೆಗೆ ಪ್ರಕಟವಾದ ಎಲ್ಲ ಆವೃತ್ತಿಗಳಲ್ಲೂ ಈ ಸೂತ್ರ ಕಂಡುಬರುತ್ತದೆ. ಈ ಸೂತ್ರ ಕೇಶಿರಾಜನದೇ ಆಗಿದ್ದರೆ,"ತ್ರಿಭುವನಮಂ ಪೇೞ್ದೆಡಂ ಕನ್ನಡದೊಳ್ ತ್ರಿಭುವನಂಗಳ್ ಎನಲಕ್ಕುಂ" ಎಂದು ಹಿಂದೆ_137ನೆಯ ಸೂತ್ರದ ಪ್ರಯೋಗ ಭಾಗದ ಕೊನೆಯಲ್ಲಿ–ಹೇಳಿರುವುದರಿಂದ ಆ ಪ್ರಯೋಗವನ್ನು ಹೋಲುವ " ಪದಯುಗಂಗಳ್ " " ಪದಯುಗಳಂಗಳ್ " ಎನ್ನುವ ಪ್ರಯೋಗಗಳು ಅಸಾಧುವೆಂದು ಹೇಳಲು " ಯುಗಳಾರ್ಥದ ಬಹುವಚನಕ್ಕೆ ಏಕತ್ವಂ ನೆಗೞ್ಗುಂ " ಎಂದು ಹೇಳಿದಾನೆಂದು ಸಮಾಧಾನ ಹೇಳಬಹುದು. ಆದರೆ, " ಆವಿಷ್ಟಲಿಂಗದೆಡೆಗೇಕತ್ವಂ " ಎನ್ನುವುದಕ್ಕೆ ಯಾವ ಸಮಾಧಾನವೂ ಕಾಣಬರುವುದಿಲ್ಲ. ಸಂಸ್ಕೃತ ವ್ಯಾಕರಣದ ಪ್ರಭಾವಕ್ಕೊಳಗಾಗಿ ಕನ್ನಡ ವ್ಯಾಕರಣಕ್ಕೆ ಅನುಪಯುಕ್ತವಾದ ಮತ್ತು ಮುಂದೆ ತಾನು ಎಲ್ಲಿಯೂ ಉಪಯೋಗಿಸಿಕೊಳ್ಳದ " ನಾಮಿ " ಸಂಜ್ಞೆಯನ್ನು[24] 9ನೆಯ ಸೂತ್ರದಲ್ಲಿ ಹೇಳಿರುವಂತೆ, " ವೇದಾಃ ಪ್ರಮಾಣಂ " ಎಂಬ ಪ್ರಯೋಗದಿಂದಲೂ ದಂಡಿ, ನಾಗವರ್ಮರ ಪ್ರಯೋಗಗಳಿಂದಲೂ[25] ಪ್ರಭಾವಿತನಾಗಿ, ಸಂಸ್ಕೃತ ಪ್ರಯೋಗಕ್ಕೆ ಮಾತ್ರ ಅನ್ವಯಿಸುವ ಆವಿಷ್ಟಲಿಂಗ ಸಂಜ್ಞೆಯನ್ನು, ಅನವಶ್ಯಕವಾಗಿ ಈ ಸೂತ್ರದಲ್ಲಿ ಸೇರಿಸಿದಾನೆಂದು ಹೇಳಲೇಬೇಕಾಗುತ್ತದೆ.

ಕೊನೆಯದಾಗಿ ಕೋಶಗಳಲ್ಲಿ " ಆವಿಷ್ಟಲಿಂಗ "ಕ್ಕೆ ಕೊಟ್ಟಿರುವ ಅರ್ಥದ ವಿಚಾರ. ಕಿಟ್ಟೆಲ್ಲರು[26] ಈ ಪದಕ್ಕೆ ಕೊಟ್ಟಿರುವ "a noun which possesses or has the force of all three genders" ಎಂಬ ವಿವರಣೆ ತಪ್ಪು. ಈ ವಿವರಣೆ " ವಾಚ್ಯಲಿಂಗಕ್ಕೆ " ಹೊಂದುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಆವಿಷ್ಟಲಿಂಗಕ್ಕೆ "ವಿಶೇಷಣಕ್ಕೆ ಅಧೀನವಾದ ಲಿಂಗ; ವಾಚ್ಯಲಿಂಗ " ಎಂದು ಅರ್ಥಕೊಟ್ಟು, ಶಬ್ದಮಣಿದರ್ಪಣದಲ್ಲಿನ ವೃತ್ತಿ ಪ್ರಯೋಗಗಳನ್ನು ಕೊಟ್ಟಿದ್ದಾರೆ.[27] "ವಿಶೇಷಣಕ್ಕೆ ಅಧೀನವಾದ ಲಿಂಗ" ಎಂದರೆ ವಿಶೇಷ್ಯದ ಲಿಂಗ ವಿಶೇಷಣಕ್ಕೆ ಅಧೀನವಾಗಿದೆಯೆಂದು ಹೇಳಿದಂತಾಗುವುದು. ವಾಚ್ಯಲಿಂಗ ಆವಿಷ್ಟಲಿಂಗಕ್ಕೆ ವಿರುದ್ಧವಾದುದು. ಆದುದರಿಂದ ಈ ನಿಘಂಟಿನಲ್ಲಿನ ಅರ್ಥಗಳೂ ತಪ್ಪು. ಬಹುಶಃ ಈ ತಪ್ಪು ಕಿಟ್ಟೆಲ್ಲರ ನಿಘಂಟಿನ ಪ್ರಭಾವದಿಂದ ಆಗಿರಬಹುದು. ಸರಿಯಾದ ಅರ್ಥ, " ನಿಯತಲಿಂಗ; ವಿಶೇಷ್ಯಕ್ಕೆ ಅಧೀನವಲ್ಲದ ಲಿಂಗ " ಎಂದಿದ್ದು, ಶಬ್ದಾನುಶಾಸನದಲ್ಲಿನ ಪ್ರಯೋಗಗಳನ್ನು ಕೊಡಬೇಕಾಗಿತ್ತು.

ಸಂಸ್ಕೃತ – ಇಂಗ್ಲಿಷ್ ನಿಘಂಟುಗಳಲ್ಲಿ " ಆವಿಷ್ಟಲಿಂಗ "ದ ಅರ್ಥವನ್ನು ಸರಿಯಾಗಿ ಕೊಟ್ಟಿರುತ್ತಾರೆ. ವಿವರಗಳು ಹೀಗಿವೆ :

1. ಅವಿಷ್ಟ-ಲಿಂಗ a (noun) which in every relationship preserves its own gender (ನಿಯತಲಿಂಗ) e.g. ಪ್ರಧಾನಮ್, ಅರ್ಥಃ, ಉಪಸರ್ಜನಮ್

   —Apte's the practical Sanskrit-English Dictionary, 1957 Revised Edition (Prasad Prakashan, Poona)

2. A – vishta – linga, mfn. 'having a fixed gender', (in Gr.) a word which does not change its gender.

   — A Sanskrit-English Dictionary, Monier Monier-Williams (New Edition 1899) Reprint 1963.

3. ಅವಿಷ್ಟಲಿಂಗ. having a fixed gender, as opposed to ಅನಾವಿಷ್ಟ ಲಿಂಗ possessed of all genders c. f. ಅವಿಷ್ಟಲಿಂಗಾ ಜಾತಿಃ । ಯಲ್ಲಿಂಗ ಮುಪಾದಾಯ ಪ್ರವರ್ತತೇ ನ ತಲ್ಲಿಂಗಂ ಜಹಾತಿ. M. Bh. on 1–2–52, e.g. the word ಪ್ರಮಾಣ in ಪ್ರಮಾಣಂ ವೇದಾಃ

   — A Dictionary of Sanskrit Grammar, K. V. Abhyankar (Oriental Institute, Baroda, 1961)

ಟಿಪ್ಪಣಿಗಳು

1. ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆವೃತ್ತಿ (ಬೆಂಗಳೂರು, 1920) ಯಲ್ಲಿ ೧೪೪ನೆಯ ಸೂತ್ರ. ಮುಂದೆಯೂ ಸೂತ್ರ ಸಂಖ್ಯೆಗಳನ್ನು ಈ ಆವೃತ್ತಿಯಲ್ಲಿರುವಂತೆ ಕೊಟ್ಟಿದೆ.
2. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ; ಸಂಪುಟ ೬೩, ಸಂಚಿಕೆ ೧ (ಜೂನ್ ೧೯೭೮). ಪುಟ ೬೫-೬೯.
3. ಶಬ್ದಾನುಶಾಸನ ಪ್ರಕಾಶಿಕೆಯಿಂದ ಉದ್ಧರಿಸಿಕೊಟ್ಟಿರುವ ಭಾಗದಲ್ಲಿ 'ಅನಧೀನವಾಗಿ' ಎಂಬುದಕ್ಕೆ ಬದಲು 'ಅಧೀನವಾಗಿ' ಎಂದು ತಪ್ಪುಬಿದ್ದಿದೆ. ಸರಿಯಾದ ಪಾಠ "ವಿಶೇಷಣವಾಗಿದ್ದರೂ ವಿಶೇಷ್ಯಲಿಂಗಕ್ಕೆ ಅನಧೀನವಾಗಿ ನಿಯುತ ಸಂಸ್ಕಾರೋಪಗ್ರಾಹಿಯಾದುದು ಅವಿಷ್ಟಲಿಂಗವೆಂಬುದು" ಎಂದಿರಬೇಕು.

   ಶಬ್ದಾನುಶಾಸನದ ಸ್ವೋಪಜ್ಞ ಮಂಜರೀ ಮಕರಂದ ವ್ಯಾಖ್ಯಾನದಲ್ಲೂ "ವಿಶೇಷ್ಯಲಿಂಗಾನಧೀನಂ" ಎಂದಿದೆ.

   —ಭಟ್ಟಾಕಲಂಕದೇವಕೃತ ಕರ್ಣಾಟಕ ಶಬ್ದಾನುಶಾಸನಂ ;
   ಸಂಪಾದಕ ಆರ್. ನರಸಿಂಹಾಚಾರ್ (ಬೆಂಗಳೂರು, 1923) ಪುಟ 139
4. ವ್ಯಾಕರಣ ಮಹಾಭಾಷ್ಯಂ (ಮೋತೀಲಾಲ್ ಬನಾರಸೀದಾಸ್, 1967) ದ್ವಿತೀಯ ಖಂಡಂ, ಪುಟ 64
5. ಅವಿಷ್ಟಂ ಲಿಂಗಂ ಯಯಾ ಸಾऽವಿಷ್ಟಲಿಂಗಾ ನಿಯತಲಿಂಗೇತ್ಯರ್ಥಃ ।
   ...ಜಾತೇರುತ್ಪತ್ತಿವಿನಾಶಾಯೋಗಾತ್ ಶಬ್ದವ್ಯವಹಾರಗತಾವುತ್ಪತ್ತಿ
   ವಿನಾಶೌ ಗೃಹ್ಯೇತೇ । ತೇನಾಸಂಸಾರಂ ಯಾವಚ್ಛಬ್ದೋ
   ವ್ಯವಹಾರಸ್ತಾವಜ್ಜಾತೇರ್ನಿಯತ ಲಿಂಗತ್ವಮಿತ್ಯರ್ಥಃ ।

   —ಮೇಲಿನ ಗ್ರಂಥದಲ್ಲಿ ಅದೇ ಪುಟದಲ್ಲಿ.

6. ವೃತ್ತಿ ಸಮುದ್ದೇಶದ 317, 319 ಮತ್ತು 32೫ನೆಯ ಶ್ಲೋಕಗಳು.
ಹೇಲಾರಾಜನ ವ್ಯಾಖ್ಯಾನ–ಅವಿಷ್ಟಂ ಲಿಂಗಂ ಯಯಾ ಸಾ ಅವಿಷ್ಟಲಿಂಗಾ ನಿಯತಲಿಂಗೇತ್ಯರ್ಥಃ।... ಜಾತಿ ಶಬ್ದಾನಾಂ ನಿಯತ ಲಿಂಗತಾ ಸ್ವಭಾವಾತ್ ।
—Vakyapadiya of Bhartrhari with Prakimaka Prakasa of Helaraja, Kanda III part ii ;
Editor K. A. Subramania Iyer (Deccan College, Poona: 1973)

7. "ಪ್ರಶಂಸಾವಚನೈಶ್ಚ" (ಪಾಣಿನಿ 2-1-66) ಎಂಬ ಸೂತ್ರದ ವೃತ್ತಿಯಲ್ಲಿ,
ರೂಢಿಶಬ್ದಾಃ ಪ್ರಶಂಸಾವಚನಾ ಗೃಹ್ಯಂತೇ ಮತಲ್ಲಿಕಾದಯಃ,
ತೇ ಚಾವಿಷ್ಟಲಿಂಗತ್ವಾದನ್ಯ ಲಿಂಗೇಽಪಿ ಜಾತಿಶಬ್ದೇ ಸ್ವಲಿಂಗೋಪಾದಾನಾ ಏವ ಸಮಾನಾಧಿಕರಣಾ ಭವಂತಿ । ಗೋ ಪ್ರಕಾಂಡಂ । ಅಶ್ವಪ್ರಕಾಂಡಂ ।
ಗೋಮತಲ್ಲಿಕಾ। ಅಶ್ವಮತಲ್ಲಿಕಾ ।
ಇದರ ಮೇಲೆ ಹರದತ್ತ (ಸು. ಕ್ರಿ. ಶ. 1100) ನ ಪದ ಮಂಜರೀ ವ್ಯಾಖ್ಯಾನದಲ್ಲಿ, ಅವಿಷ್ಟ ಲಿಂಗತ್ವಾದಿತಿ । ನಿಯತಲಿಂಗತ್ವಾದಿತ್ಯರ್ಥಃ ।
—ಕಾಶಿಕಾವೃತ್ತಿಃ (ವಾಮನ-ಜಯಾದಿತ್ಯ), ಸಂಪಾದಕ : ಸ್ವಾಮೀ ದ್ವಾರಿಕಾದಾಸಶಾಸ್ತ್ರೀ ಮತ್ತು ಕಾಶಿಕಾ ಪ್ರಸಾದ ಶುಕ್ಲ (ಪ್ರಾಚ್ಯ ಭಾರತೀ ಪ್ರಕಾಶನ, ವಾರಾಣಸೀ 1965)

8. ಪೋಟಾಯುವತಿ ಸ್ತೋಕ ಕತಿಪಯ ಗೃಷ್ಟಿಧೇನುವಶಾ ವೇಹದ್ ಬಷ್ಕಯಣೀ ಪ್ರವಕ್ತೃ ಶ್ರೋತ್ರಿಯಾಧ್ಯಾಪಕ ಧೂರ್ತ ಪ್ರಶಂಸಾ ರೂಢೈರ್ಜಾತಿಃ ।
(2-1-73) ಎಂಬ ಸೂತ್ರದ ವೃತ್ತಿಭಾಗದಲ್ಲಿ,
ಪ್ರಶಂಸಾರೂಢಾ ಮತಲ್ಲಿಕಾದಯ ಅವಿಷ್ಟಲಿಂಗಾಸ್ತೈಃ । ಗೌರ್ಮತಲ್ಲಿಕಾ ಗೋಮತಲ್ಲಿಕಾ । ಅಶ್ವಮತಲ್ಲಿಕಾ ।
—ಶಾಕಟಾಯನ ವ್ಯಾಕರಣಂ (ಅಮೋಘವೃತ್ತಿ ಸಮಲಂಕೃತಂ) ;
ಭಾರತೀಯ ಜ್ಞಾನಪೀಠ ಪ್ರಕಾಶನ, 1971 ; ಪುಟ 130

9. ಶೃಂಗಾರ ಪ್ರಕಾಶಃ – ಸಂಪಾದಕ G. R. ಜೋಸ್ಯರ್ (ಮೈಸೂರು, 1955) ಕಾವ್ಯ ಮೀಮಾಂಸಾ ವಿಷಯಕವಾದ ಈ ಬೃಹದ್ಗ್ರಂಥದಲ್ಲಿ 36 ಅಧ್ಯಾಯ (ಪ್ರಕಾಶ)ಗಳಿವೆ. ಮೊದಲ 8 ಪ್ರಕಾಶಗಳು ವ್ಯಾಕರಣ ಮೀಮಾಂಸೆಗೇ ಮೀಸಲಾದಂತಿವೆ.

10. ತತ್ರ ನಾಮಾವ್ಯಯಾನು ಕರಣಕೃತ್ತದ್ಧಿತಸಮಾಸಾಃ ಪ್ರಾತಿಪದಿಕಾನಿ ।
............ತತ್ರಾನಪೇಕ್ಷಿತ ಶಬ್ದವ್ಯುತ್ಪತ್ತೀನಿ ಸತ್ತ್ವಭೂತಾರ್ಥಾಭಿಧಾಯೀನಿ ಚ ನಾಮಾನಿ । ತಾನಿ ದ್ವಿಧಾ-ಆವಿಷ್ಟಲಿಂಗಾನಿ, ಅನಾವಿಷ್ಟಲಿಂಗಾನೀತಿ ।
ತೇಷು ಜಾತಿದ್ರವ್ಯ ಪರಿಮಾಣಾಭಿಧಾಯೀನ್ಯಾವಿಷ್ಟ ಲಿಂಗಾನಿ ।
............ಗುಣ ಸಂಖ್ಯಾವಚನ ಸರ್ವನಾಮಾನ್ಯನಾವಿಷ್ಟಲಿಂಗಾನಿ ।
—ಮೇಲಿನ ಗ್ರಂಥ : ಪುಟ 6, 7

11. ಉಷ್ಟ್ರಾಸಿ ಕಾಮಾರಾದೀನಾಂ ತು ನಿತ್ಯಮಾವಿಷ್ಟ ಲಿಂಗತ್ವಾ ದ್ವಿಶೇಷಾಂಶ ಪರಿಗ್ರಹಾತ್ ಕ್ರಿಯಾ ವಿಶೇಷಣತ್ವೇಽಪಿ ನ ನಪುಂಸಕ ಲಿಂಗತಾ ।
—ಅದೇ ಗ್ರಂಥ, ಪುಟ 41

12. ಅದೇ ಗ್ರಂಥ ; ಪುಟ 183-4

13. ಕರ್ಣಾಟಕ ಶಬ್ದಾನುಶಾಸನಂ (ವಿವರಕ್ಕೆ ಟಿಪ್ಪಣಿ 3 ನೋಡಿ), ಪುಟ 138–9

14. ತದುಕ್ತಂ ಬೌದ್ಧ ಕಾರಿಕಾಯಾಂ—
ಯಾ ವಿಶೇಷ್ಯೇಷು ದೃಶ್ಯಂತೇ ಲಿಂಗಸಂಖ್ಯಾ ವಿಭಕ್ತಯಃ ।
ಪ್ರಾಯಸ್ತಾ ಏವ ಕರ್ತವ್ಯಾಃ ಸಮಾನಾರ್ಥೇ ವಿಶೇಷಣೇ ॥ ಇತಿ
ಏತದಪಿ ಅನಾವಿಷ್ಟ ವಿಷಯಕಂ ಬೋದ್ಧವ್ಯಂ. ಯಥಾ ರಕ್ತಃ ಪಟಃ, ಶುಕ್ಲಾ ಶಾಟೀ ಇತ್ಯಾದ್ಯುಪಸರ್ಜನರೂಪಂ. ಆವಿಷ್ಟ ವಿಶೇಷಣಂತು ಸಮಾನಾಧಿಕರಣಮಪಿ ನಿಯತಲಿಂಗಮೇವ. ಯಥಾವೇದಾಃ ಪ್ರಮಾಣಂ, ಪ್ರಧಾನಂ ಭಾರ್ಯಾ ಇತ್ಯಾದಿ ಅತ ಏವ ಕಾರಿಕಾಯಾಂ ಪ್ರಾಯೋಗ್ರಹಣಂ.
—ಮೇಲಿನ ಗ್ರಂಥ, ಪುಟ 8

15. ಇಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆವೃತ್ತಿಯಲ್ಲಿರುವಂತೆ ವೃತ್ತಿ ಪ್ರಯೋಗಗಳನ್ನು ಕೊಟ್ಟಿದೆ. ಪ್ರೊ. ಡಿ. ಕೆ. ಭೀಮಸೇನರಾಯರಿಂದ ಸಂಪಾದಿತವಾದ ಆವೃತ್ತಿ (ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ–1977) ಯಲ್ಲಿಯೂ, ಕೆಲವು ಅಕ್ಷರ ಪದಗಳ ವ್ಯತ್ಯಾಸ ಹೊರತಾಗಿ, ವೃತ್ತಿ ಪ್ರಯೋಗಗಳು ಹೀಗೆಯೇ ಇವೆ. ಲಿಂಗಣಾರಾಧ್ಯ ವೃತ್ತಿಯಿಂದ ಕೂಡಿದ ಮದರಾಸು ಆವೃತ್ತಿ (1973ರ ಮುದ್ರಣ)ಯಲ್ಲಿ ಪ್ರಯೋಗಭಾಗದಲ್ಲಿ,
ಕ್ರಿಯಾವಿಶೇಷಣಕ್ಕೆ ''ಏನೆಂಬ ಪೆಂಪೊ..'' ಎಂಬ ಪದ್ಯವನ್ನು ಮಾತ್ರ ಕೊಟ್ಟಿದೆ ; ಅದರ ಮೇಲಿನ ''ಏನೆಂಬ ಪೆಂಪೊ......ವಿಶೇಷಣ ಮಾಗಿ ಬಹುವಚನ ಮಾಯ್ತು'' ಎಂಬ ಭಾಗವಿಲ್ಲ. ಪದ್ಯದ ಅನಂತರದ ಭಾಗಕ್ಕೆ ಬದಲು, ''ಕಬ್ಬಂ ? ಮಾಡಿದರ್, ದೋಷರಹಿತಂ ಪೇಳ್ದರ್ ; ಕಬ್ಬ ? ಮೆಂತಪ್ಪುದಂತೆ ಮಾಡಿದರ್, ದೋಷರಹಿತ ಮೆಂತಪ್ಪುದಂತೆ ಪೇಳ್ದರ್ ಎಂಬುದೀಗ ಕ್ರಿಯೆಗೆ ವಿಶೇಷಣಂ'' ಎಂದಿದೆ.

16. ಪ್ರಮಾಣಂ—(ಕ್ಲೀ) ನಿತ್ಯಕ್ಲೀಬೈಕತ್ವವಾನಯಂ ಶಬ್ದಃ । ಯಥಾ
ವೇದಾಃ ಪ್ರಮಾಣಂ, ಶ್ರುತಯಃ ಪ್ರಮಾಣಮಿತ್ಯಾದಿ ।......ನ್ಯಾಯೇತು
ಪ್ರತ್ಯಕ್ಷಾನು ಮನೋಪಮಾನ ಶಬ್ದಾಃ ಪ್ರಮಾಣಾನಿ । ಇತ್ಯತ್ರ
ಬಹುವಚನಾಂ ತೋಷಿ.
—ಶಬ್ದ ಕಲ್ಪದ್ರುಮಃ ರಾಧಾಕಾಂತದೇವ (ಚೌಖಂಬಾ ಸಂಸ್ಕೃತ ಸೀರೀಸ್ ಆಫೀಸ್, ವಾರಾಣಸೀ–1961) ತೃತೀಯ ಭಾಗ, ಪುಟ 285.

17. ಪ್ರಮಾಣ – (ನ) ಉದ್ದೇಶ್ಯ ವಿಧೇಯ ಭಾವೇನಾನ್ವಯ ಸ್ಥಲೇ ಪ್ರಮಾಣ ಶಬ್ದಸ್ಯ
ಪ್ರಮಾಕರಣ ಪರತ್ವೇ ಕ್ವಚಿದೇಕ ವಚನತಾ ಯಥಾ
''ವೇದಾಃ ಪ್ರಮಾಣಂ, ಸ್ಮೃತಯಃ ಪ್ರಮಾಣಂ" ಇತ್ಯಾದೌ । ಕ್ವಚಿತ್ತು
ಬಹುವಚನತಾ ಯಥಾ ''ಪ್ರತ್ಯಕ್ಷಾನು ಮನೋಪಮಾನಾಗಮಾಃ
ಪ್ರಮಾಣಾನಿ" (ಗೌತಮ ಸೂತ್ರ) । ತತ್ರ ಪೂರ್ವತ್ರ ಶಾಬ್ದ ಸ್ವರೂಪ
ಪ್ರಮಾತ್ವಜಾತೇರೇಕತ್ವಾತ್ ಏಕವಚನತ್ವಂ । ಉತ್ತರತ್ರ
ಪ್ರತ್ಯಕ್ಷತ್ವಾದಿ ಜಾತಿಚುತಷ್ಟಯ ಕರಣಾನಾಂ ಬಹುತ್ವಾತ್
ಬಹುವಚನತಾ ಇತಿ ಪ್ರಥಮಾವ್ಯುತ್ಪಾದೇ ಗದಾಧರೇಣ ಪ್ರಪಂಚಿತಂ

ತತ್ರ ದೃಶ್ಯಂ । ಸಾಮಾನ್ಯತ್ವಾತ್ ಕ್ಲೀಬತ್ವೈವಾಸ್ಯ | ಕ್ವಚಿತ್ತು
ವಿಶೇಷ ಪರತ್ವೇ ಸ್ತ್ರೀತ್ವಪರತಾ ಯಥಾ ಪ್ರಮಾಣೀ ।
—ವಾಚಸ್ಪತ್ಯಂ, ತಾರಾನಾಥ ತರ್ಕವಾಚಸ್ಪತಿ (ಚಾಖಂಬಾ ಸಂಸ್ಕೃತ ಸೀರೀಸ್ ಆಫೀಸ್, ವಾರಾಣಸೀ, 1970) ; ಷಷ್ಠೋ ಭಾಗಃ, ಪುಟ 4479.

18 "832 ಅಪ್ಪೂರಣೀ ಪ್ರಮಾಣ್ಯೋಃ" 5-4-116...ಸ್ತ್ರೀ ಪ್ರಮಾಣೀಯಸ್ಯ ಸಃ ಸ್ತ್ರೀಪ್ರಮಾಣಃ
—ಸಿದ್ಧಾನ್ತ ಕೌಮುದೀ (ಬಾಲಮನೋರಮಾವ್ಯಾಖ್ಯಾ ಸಹಿತ), (ತಿರುಚಿನಾಪಳ್ಳಿ, 1910), ಪೂರ್ವಾರ್ಧ ಪುಟ 558

19 ಪ್ರಮಾಣಂ...... 6. Authority, warrant ; one who judges or decides, one whose word is an authority ; ಶ್ರುತ್ವಾ ದೇವಃ ಪ್ರಮಾಣಂ......Some times in plural ; ವೇದಾಃ ಪ್ರಮಾಣಾಃ
– Apte's Practical Sanskrit English Dictionary (Prasad Prakashan, Poona 1958)

20 (i) ಬಹುಭಿಃ ಕಾರಣೈರ್ದೇವ ವಿಶ್ವಾಮಿತ್ರೋ ಮಹಾಮುನಿಃ ।
ಲೋಭಿತಃ ಕ್ರೋಧಿತಶ್ಚೈವ ತಪಸಾಚಾಭಿ ವರ್ಧತೇ ॥
—ಶ್ರೀಮದ್ವಾಲ್ಮೀಕಿ ರಾಮಾಯಣ, ಬಾಲಕಾಂಡ 65ನೆಯ ಸರ್ಗ ; 10–11 ಶ್ಲೋಕ
(M. L. J. Press, Madras 1958)

(ii) ಪಂಚೈತಾನಿ ಮಹಾಬಾಹೋ ಕಾರಣಾನಿ ನಿಬೋಧಮೇ ।
ಸಾಂಖ್ಯೇ ಕೃತಾಂತೇ ಪ್ರೋಕ್ತಾನಿ ಸಿದ್ಧಯೇ ಸರ್ವಕರ್ಮಣಾಂ ॥
—ಭಗವದ್ಗೀತಾ (Gita Press, Gorakhpur, 1975) 18-13

21. ಕಾರಣಮಿತಿ ಏಕವಚನ ನಿರ್ದೇಶೇನ ಸಮಸ್ತಸ್ಯೈವ ಕಾರಣತಾ ನತು ಪ್ರತ್ಯೇಕಸ್ಯ ಇತಿ ಸೂಚಿತಂ ।
—Kavyadarsa, Vavilla Ramaswami Sastrulau & Sons, Madras, 1964

ದಂಡಿಯು ಹೇಳಿರುವ ಮೂರು ಕಾರಣಗಳ ಜೊತೆಗೆ ವೃದ್ಧಸೇವಾನುರಾಗಂ ಎಂಬ ನಾಲ್ಕನೆಯ ಕಾರಣವನ್ನು ಸೇರಿಸಿ, ನಾಗವರ್ಮನು

ಪ್ರತಿಭಾನಂ ಕಾವ್ಯವಿದ್ಯಾ ಪ್ರಚಯ ಪರಿಚಯಂ ವೃದ್ಧಸೇವಾನುರಾಗಂ ।
ಸತತಾಭ್ಯಾಸ ಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಪೇೞ್ವೊಡಂ ತಾ ॥
ಪ್ರತಿಭಾನಂ ಶಕ್ತಿ ಲೋಕಾಗಮ ಸಕಲಕಲಾ ವೇದನಂ ವಿದ್ಯೆ ಶಾಸ್ತ್ರ ।
ಸ್ಥಿತನಪ್ಪಂ ವೃದ್ಧನಾಲಸ್ಯಮನುೞಿದೆಸಪ್ಪುದ್ಯೋಗಮಭ್ಯಾಸಕರ್ಮಂ ॥

ಎಂದು ಹೇಳಿದ್ದಾನೆ.

—ಕಾವ್ಯಾವಲೋಕನಂ, ಪದ್ಯ 424 (ಮೈಸೂರು ವಿಶ್ವವಿದ್ಯಾನಿಲಯ, 1967)

ನಾಗವರ್ಮನ ಶಬ್ದಸ್ಮೃತಿಯಲ್ಲಿನ ಸೂತ್ರಗಳ ಆಧಾರದ ಮೇಲೆ ತನ್ನ ವಿಪ್ಲೋ: ಸೂತ್ರಗಳನ್ನು ರಚಿಸಿರುವುದೇ ಅಲ್ಲದೆ,ಅವನು ಕೊಟ್ಟಿರುವ ಅನೇಕ ಪ್ರಯೋಗಗಳನ್ನು (ಇವುಗಳ ಸಂಖ್ಯೆ ಸುಮಾರು ಇನ್ನೂರಕ್ಕೂ ಹೆಚ್ಚೆಂದು ಶ್ರೀಮಾನ್ ಕೆ. ರಾಘವೇಂದ್ರ ರಾಯರು, ಮೈಸೂರು ವಿಶ್ವವಿದ್ಯಾನಿಲಯದ ಶಬ್ದಮಣಿದರ್ಪಣದ cxiv ಪುಟದಲ್ಲಿ ಹೇಳಿದ್ದಾರೆ) ತನ್ನ ಗ್ರಂಥದಲ್ಲಿ ಸೇರಿಸಿಕೊಂಡಿರುವ ಕೇಶಿರಾಜನು ಮೇಲಿನ ಕಾವ್ಯಾವ ಲೋಕನದ ಪದ್ಯದ ಭಾಗವನ್ನು ಮಾರ್ಪಡಿಸಿ "ಪ್ರತಿಭೆಯುಮಭ್ಯಾಸಮುಂ ವಿದ್ವತ್ಸೇವೆಯುಂ ಕಾವ್ಯಪರಿಚಯಮುಂ ಕವಿತೆಗೆ ಕಾರಣಂ"ಎಂಬ ಪ್ರಯೋಗವನ್ನು ರಚಿಸಿದಂತೆ ತೋರುತ್ತದೆ.

22. ಶಬ್ದಮಣಿದರ್ಪಣಂ, ಸೂತ್ರ 137

23. ಅದೇ, ಸೂತ್ರ 139

24. ವಿದ್ವಾನ್ ಬಸವರಾಜು ಅವರು ತಮ್ಮ ಲೇಖನದ 1ನೆಯ ಅಡಿಟಿಪ್ಪಣಿಯಲ್ಲಿ, "ನಾಮಿ" ಸಂಜ್ಞೆಯು ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಬರುವುದಿಲ್ಲ, ಆದರೆ ಅಲ್ಲಿ "ನಾಮಿ" ಎಂಬ ಸೂತ್ರವಿದೆ ಎಂದು ಹೇಳಿದ್ದಾರೆ. ಆದರೆ ಈ ಸೂತ್ರಕ್ಕೂ ನಾಮಿ ಸಂಜ್ಞೆಗೂ ಯಾವ ಸಂಬಂಧವೂ ಇಲ್ಲ. ಈ ಸೂತ್ರದಲ್ಲಿನ 'ನಾಮಿ', 'ನಾಮ್' ಎಂಬುದರ ಸಪ್ತಮೀ ಏಕವಚನ. ಹ್ರಸ್ವಸ್ವರಾಂತ ಶಬ್ದಗಳ ಷಷ್ಠೀ ಬಹುವಚನರೂಪವನ್ನು ಸಾಧಿಸಲು ಪ್ರಕೃತಿಗೆ 'ನಾಮ್' ಸೇರಿಸುವಾಗ ಪ್ರಕೃತಿಯ ಅಂತ್ಯಸ್ವರವು ದೀರ್ಘವಾಗುವುದೆಂದು ಈ ಸೂತ್ರ ಹೇಳುತ್ತದೆ.

ಉದಾ. – ಶಿವ + ನಾಂ → ಶಿವಾನಾಂ.

ಋಕ್ಪ್ರಾತಿಶಾಖ್ಯದಂತೆ ಇ, ಈ, ಉ, ಊ, ಋ, ೠ, ಏ, ಐ, ಓ ಮತ್ತು ಔ ಈ ಹತ್ತು ಸ್ವರಗಳು ನಾಮಿಗಳು. ಅ, ಆ ಹೊರತು ಉಳಿದ ಸ್ವರಗಳಿಗೆ ಸಂಸ್ಕೃತ ವ್ಯಾಕರಣದಲ್ಲಿ ನಾಮಿ ಸಂಜ್ಞೆಯಿದೆ. (ಸಕಾರಕ್ಕೆ ಷತ್ವವನ್ನು ವಿಧಿಸುವ ಸಂದರ್ಭದಲ್ಲಿ—ರಾಮೇಷು, ಅನುಷ್ಠಾನ, ಪ್ರತಿಷ್ಠಾ ಮೊದಲಾದ ಪದಗಳ ಪ್ರಕ್ರಿಯೆಯಲ್ಲಿ–ನಾಮಿ ಸಂಜ್ಞೆಯು ಉಪಯೋಗವಾಗುತ್ತದೆ.) ಕನ್ನಡ ವ್ಯಾಕರಣದಲ್ಲಿ ನಾಮಿ ಸಂಜ್ಞೆಗೆ ಏನೂ ಪ್ರಯೋಜನವಿಲ್ಲದಿದ್ದರೂ ನಾಗವರ್ಮನು, ಮೇಲಿನ ಹತ್ತು ಸ್ವರಗಳ ಜೊತೆಗೆ ಕನ್ನಡವಲ್ಲಿನ ಹ್ರಸ್ವ ಎ ಒ ಸ್ವರಗಳನ್ನೂ ಸೇರಿಸಿ, ಈ ಹನ್ನೆರಡು ಸ್ವರಗಳಿಗೆ ನಾಮಿ ಸಂಜ್ಞೆಯನ್ನು ಶಬ್ದಸ್ಮೃತಿಯಲ್ಲಿ ಹೇಳಿದ. ಆದರೆ ಮುಂದೆಲ್ಲಿಯೂ ಅದನ್ನು ಪ್ರಯೋಗಿಸಲಿಲ್ಲ. ಕೇಶಿರಾಜನೂ ಈ ವಿಷಯದಲ್ಲಿ ನಾಗವರ್ಮನನ್ನು ಅನುಸರಿಸಿದ್ದಾನೆ. ಭಾಷಾಭೂಷಣಕಾರನು ಈ ಅನವಶ್ಯಕ ಸಂಜ್ಞೆಯನ್ನು ಹೇಳಿಲ್ಲ.

25. ಹಿಂದೆ ಉದಾಹರಿಸಿರುವ "ನೈಸರ್ಗಿಕೀ ಚ ಪ್ರತಿಭಾ .." ಎಂಬ ಶ್ಲೋಕದಲ್ಲಿ ಮತ್ತು ಟಿಪ್ಪಣಿ 21ರಲ್ಲಿನ ನಾಗವರ್ಮನ ಪದ್ಯದಲ್ಲಿ "ಕಾರಣಂ" ಎಂಬ ಪ್ರಯೋಗ.

26. ಕಿಟ್ಟೆಲ್ಲರ ಕನ್ನಡ–ಇಂಗ್ಲಿಷ್ ನಿಘಂಟು, ಸಂಪುಟ 1, ಪುಟ 175.
(ಮದರಾಸು ಯೂನಿವರ್ಸಿಟಿ, 1968)

27. ಸಂಪುಟ 1, ಪುಟ 683

ಬಿಳಿಗೆಯ ಶಾಸನಗಳು

ಆರ್. ಎನ್. ಗುರುವ

2. ಭಟ್ಟಾಕಲಂಕನ ಎರಡನೆಯ ಶಾಸನ (ಕ್ರಿ.ಶ. 1581, 1587, 1592)

ಮೊದಲನೆಯ ಶಾಸನದ ಅಂತ್ಯದಲ್ಲಿ ಭಟ್ಟಾಕಲಂಕನು ಎರಡು ಶಾಸನಗಳನ್ನು ಬರೆಯಿಸಿದನೆಂದು ಹೇಳಲಾಗಿದೆ. ಅವುಗಳಲ್ಲಿ ಪ್ರಸ್ತುತ ಶಾಸನ ಎರಡನೆಯದು. ಈ ಶಾಸನವನ್ನೂ ಮೊದಲನೆಯ ಶಾಸನದ ಪಕ್ಕದಲ್ಲಿ ಬಿಳಿಗಿಯ ಶ್ರಿಕೂಟ ಬಸದಿಯ ಚಂದ್ರಶಾಲೆಯಲ್ಲಿ ಗೋಡೆಗೆ ಆನಿಸಿ ನಿಲ್ಲಿಸಲಾಗಿದೆ. ಶಾಸನವು ಪ್ರಾರಂಭದಿಂದ ಅಂತ್ಯದವರೆಗೆ ಒಳ್ಳೇ ಸ್ಥಿತಿಯಲ್ಲಿದೆ. ಶಾಸನದ ಭಾಷೆ ಸಂಸ್ಕೃತ ಮತ್ತು ಕನ್ನಡ. ಶೈಲಿಯು ಗದ್ಯಪದ್ಯ ರೂಪದಲ್ಲಿದೆ. ಲಿಪಿ ಸ್ಪಷ್ಟವಾಗಿದೆ. ಅದು ಮೊದಲನೆಯ ಶಾಸನದ ಲಿಪಿಗೆ ಹೋಲುತ್ತದೆ. ಅಕ್ಷರಗಳು ಆಳವಾಗಿ ಕಂಡರಿಸಲಾಗಿವೆ.

ಶಾಸನದ ವಿಷಯ

ಜಂಬೂದ್ವೀಪದಲ್ಲಿ ಮೇರು ಪರ್ವತ. ಮೇರು ಪರ್ವತದ ದಕ್ಷಿಣ ದಿಕ್ಕಿಗೆ ಆರ್ಯಖಂಡ (ಭರತ ಕ್ಷೇತ್ರ). ಆರ್ಯಖಂಡದಲ್ಲಿ ಕರ್ನಾಟಮಂಡಲ. ಕರ್ನಾಟ ಮಂಡಲದಲ್ಲಿ ಪೆನುಗುಂಡಿಪಟ್ಟಣ. ಆ ಪಟ್ಟಣದಿಂದ ಅನೇಕ ಕರ್ನಾಟ ಸಿಂಹಾಸನಾಧೀಶ್ವರರಾದ ಮಹಾರಾಜರು ರಾಜ್ಯವಾಳಿದರು. ಅವರಲ್ಲಿ ವೆಂಕಟಪತಿ ಮಹಾರಾಯನು ಶಾಸನಕಾಲದಲ್ಲಿ ಸದ್ಧರ್ಮದಿಂದ ತನ್ನ ಸಾಮ್ರಾಜ್ಯವನ್ನು ಪಾಲಿಸುತ್ತಿದ್ದನು (ಸಾ. 2-5)

ಮೂಲಸಂಘದ ದೇಶೀಗಣದಲ್ಲಿ ಚಾರುಕೀರ್ತಿಪಂಡಿತದೇವನೆಂಬ ಆಚಾರ್ಯನು ಬಲ್ಲಾಳರಾಯನ ಕಾಲದಲ್ಲಿ ಪ್ರಸಿದ್ಧಿಯನ್ನು ಪಡೆದನು. ಆತನ ಶಿಷ್ಯಪರಂಪರೆಯಲ್ಲಿ ಅನೇಕ ಆಚಾರ್ಯರಾದರು. ಅವರಲ್ಲಿ ವಿಜಯಕೀರ್ತಿ ಎಂಬ ಆಚಾರ್ಯನು ಪರಮಾಗಮ ಪಂಡಿತನಾಗಿದ್ದನು. ಅವನಿಗೆ ಅಕಲಂಕದೇವ ಮತ್ತು ಚಂದ್ರಪ್ರಭ ಎಂಬ ಇಬ್ಬರು ಶಿಷ್ಯರು. ಅಕಲಂಕದೇವನ ಶಿಷ್ಯ ವಿಜಯಕೀರ್ತಿಮುನೀಶ್ವರ. ವಿಜಯಕೀರ್ತಿಮುನೀಶ್ವರನ ಶಿಷ್ಯ ಅಕಲಂಕದೇವ. ಈ ಅಕಲಂಕದೇವನ ಶಿಷ್ಯ ಭಟ್ಟಾಕಲಂಕದೇವ. ಭಟ್ಟಾಕಲಂಕನು ತರ್ಕ, ವ್ಯಾಕರಣ, ಗಣಿತ, ಜೈನಾಗಮ, ಶಿಲ್ಪ, ವೈದ್ಯ, ಕಾವ್ಯ, ಪುರಾಣ, ಸಂಗೀತ, ಜ್ಯೋತಿಷ, ನಾಟ್ಯ, ಮಂತ್ರಾದ ಶಾಸ್ತ್ರ ಮತ್ತು ಕಲೆಗಳಲ್ಲಿ ನಿಪುಣನಾಗಿದ್ದನು. ಬಿಳಿಗೆಯ ಅರಸನಾದ ಘಂಟೇಂದ್ರನು ಆತನ ಪರಮ ಶಿಷ್ಯನಾಗಿದ್ದನು (ಸಾ.5-12).

ಕರ್ನಾಟಕ ಸಿಂಹಾಸನಕ್ಕೆ ಸಲುವ (ವಿಜಯನಗರ ಸಾಮ್ರಾಜ್ಯಕ್ಕೆಸಲುವ) ಮಲೆ ಮೂವತ್ತಾರು ಕಂಪಣಗಳಲ್ಲಿ ಹದಿನೆಂಟು ಕಂಪಣಕ್ಕೆ ಮುಖ್ಯವಾದ ಚಂದ್ರಗುತ್ತಿ ಮಹಾದುರ್ಗ. ಆ ದುರ್ಗದ ಪರಿಸರದಲ್ಲಿ ಐಸೂರ ಎಂಬ ಪಟ್ಟಣ.ಆ ಪಟ್ಟಣದಲ್ಲಿ ಜಿನಧರ್ಮಪ್ರಭಾವಕರು ಮತ್ತು ಸದ್ಧರ್ಮಪರಿಪಾಲಕರಾದ ಅನೇಕ ಅರಸರು ಆಗಿ ಹೋದರು. ಅವರಲ್ಲಿ ಅಮ್ಮಣ್ಣೊಡೆಯನೆಂಬ ಸಾಮಾಂತರವುಳ್ಳ ಘಂಟಣ್ಣೊಡೆಯ ನರಸಿಂಹನೆಂಬ ಮಹಾರಾಜನು ಶ್ವೇತಪುರ (ಬಿಳಿಗೆ) ಪಟ್ಟಣವನ್ನು ಅನೇಕ ವಿಧದಿಂದ ಶೋಭಾಯಮಾನವಾಗಿ ನಿರ್ಮಿಸಿ ರಾಜ್ಯವಾಳಿದನು. ಆತನಿಗೆ ಅಮ್ಮಭೂಪ ಹಾಗು ಭೂಪ ಎಂಬ ಇಬ್ಬರು ಮಕ್ಕಳು. ನರಸಿಂಹಭೂಪಾಲನ ಪುತ್ರ ವೀರೇಂದ್ರ. ವೀರೇಂದ್ರನ ರಾಣಿ ವೀರಾಂಬಿಕಾ. ಈ ದಂಪತಿಗಳಿಗೆ ರಂಗರಾಜನೆಂಬ ಮಗನು. ರಂಗರಾಜನ ಅರಸಿ ಚೆಲ್ವಾಂಬಾ. ಅವಳ ತಾಯಿತಂದೆ ವೀರೇಂದ್ರ ಹಾಗೂ ತಿಮ್ಮಾಂಬಿಕಾ. ಈ ರಂಗರಾಜ ಮತ್ತು ಚೆಲ್ವಾಂಬಾ ದಂಪತಿಗೆ ಘಂಟೇಂದ್ರನೆಂಬ ಪುತ್ರನಾದನು. ಆತನೇ ಭಟ್ಟಾಕಲಂಕದೇವನ ಪರಮ ಶಿಷ್ಯ. ಆತನು ಅಶ್ವಾರೋಹಣ ದಲ್ಲಿ ರೇವಂತನಂತೆ ಮತ್ತು ಗಜಾರೋಹಣದಲ್ಲಿ ಭಗದತ್ತನಂತೆ ಇದ್ದನು (ಸಾ. 13–23).

ಘಂಟೇಂದ್ರನು ಬಿಳಿಗೆಯಲ್ಲಿ ರತ್ನತ್ರಯ ಚೈತ್ಯಾಲಯವನ್ನು ಕಟ್ಟಿಸಿ ಅದರಲ್ಲಿ ಕ್ರಿ.ಶ. 1581ರ ಜನವರಿ ತಿಂಗಳ 9ನೆಯ ತಾರೀಖು ಸೋಮವಾರ ದಿವಸ ನೇಮಿನಾಥ, ಪಾರ್ಶ್ವನಾಥ ಮತ್ತು ವರ್ಧಮಾನ ತೀರ್ಥಂಕರರ ಪ್ರತಿಷ್ಠೆಯನ್ನು ಮಹೋತ್ಸವ ದಿಂದ ಮಾಡಿಸಿ, ದೇವರ ಶ್ರೀಪಾದಮೂಲದಲ್ಲಿ ನಡೆವ ನಿತ್ಯನೈಮಿತ್ತಿಕ ಮುಂತಾದ ಅಂಗರಂಗ ವೈಭವಂಗಳಿಗೆ ಸೋವಿನಕೊಪ್ಪ,ಹಾದರಿಮಾನಿ, ಮಳಿಗೆಕಯಿ, ಕೊರತಾರಿ, ನೇರಿಲಮಾನಿ, ಚಟ್ಟನಹಳ್ಳಿ, ಗೊರಟಿನಹಳ್ಳ, ಬಲುಗಣೆ ಮತ್ತು ಒಂದಾನೆ ಈ ಒಂಭತ್ತು ಗ್ರಾಮಗಳನ್ನು ದಾನ ಮಾಡಿ ಕ್ರಿ.ಶ. 1587 ರ ಮಾರ್ಚ ತಿಂಗಳ 1ನೆಯ ತಾರೀಖಿನ ಬುಧವಾರ ದಿವಸ ಪ್ರಸ್ತುತ ಧರ್ಮಶಾಸನವನ್ನು ಹೊರಡಿಸಿದನು. (ಸಾ. 23–38).

ಮೇಲೆ ಹೇಳಿದ ಒಂಬತ್ತು ಗ್ರಾಮಗಳಲ್ಲಿ ಹುಟ್ಟುವ ಸುವರ್ಣಾದಾಯದ ನಾನೂರ ನಾಲ್ವತ್ತಮೂರು ಗದ್ಯಾಣ ಒಂದು ಹಣ ಮೂರು ವೀಸ ಮತ್ತು ಧಾನ್ಯದಾದಾಯದ ಮೂನೂರು ಖಂಡುಗ ಭತ್ತ ಇವುಗಳ ತಪಶೀಲವಾರ ಆದಾಯ ಮತ್ತು ವಿನಿಯೋಗಗಳ ವಿವರಗಳನ್ನು ಶಾಸನದಲ್ಲಿ ಸಾಲು 40 ರಿಂದ 62 ರವರೆಗೆ ಸವಿಸ್ತರವಾಗಿ ಕೊಡಲಾಗಿದೆ. ಸೋವಿನಕೊಪ್ಪದಿಂದ ಬರುವ ಆದಾಯ ಗದ್ಯಾಣ 32 ; ಹಾದರಿಮಾನಿಯಿಂದ ಬರುವ ಆದಾಯ 32 ಗದ್ಯಾಣ ; ಮಳಿಗೆ ಕಯ್ಯಿಂದ ಬರುವ 43 ಗದ್ಯಾಣ 5 ; ಹಣ ಆದಾಯದಲ್ಲಿ ತಿಮ್ಮಾದೇವಿಯಮ್ಮನವರ ಬಸ್ತಿಗೆ ಪೂರ್ವದಲ್ಲಿ ಬಿಟ್ಟ 3 ಗದ್ಯಾಣಗಳನ್ನು ಕಳೆದು ಉಳಿದ ಆದಾಯ ಗದ್ಯಾಣ 40

ಹಣ 5 ; ಕೊರಟಾರಿಯಿಂದ ಬರುವ ಆದಾಯ ಗದ್ಯಾಣ 24 ; ನೇರಿಲಮಾನಿಯಿಂದ ಬರುವ ಆದಾಯ ಗದ್ಯಾಣ 171 ಹಣ 8 ಹಾಗ 2 ವೀಸ 2 ; ಚಟ್ಟನಹಳ್ಳಿಯಿಂದ ಬರುವ ಆದಾಯ ಗದ್ಯಾಣ 142 ಹಣ 7 ಹಾಗ 2 ; ಹೀಗೆ ಆರು ಗ್ರಾಮಗಳಿಂದ ಬರುವ ಸುವರ್ಣದ ಆದಾಯ ಗದ್ಯಾಣ 443 ಹಣ 1 ವೀಸ 3. ಒಂದಾನೆಯಿಂದ ಬರುವ ಭತ್ತ ಖಂಡುಗ 200 ; ಗೊರಟಿನ ಹಳ್ಳಿಯಿಂದ ಬರುವ ಭತ್ತ ಖಂಡುಗ 70; ಬಲುಗಣೆಯಿಂದ ಬರುವ ಭತ್ತ ಖಂಡುಗ 30 ; ಹೀಗೆ ಉಳಿದ ಮೂರು ಗ್ರಾಮಗಳಿಂದ ಬರುವ ಧಾನ್ಯದಾದಾಯ ಭತ್ತ ಖಂಡುಗ 300. ಸುವರ್ಣದ ಆದಾಯದಲ್ಲಿ ನೇಮೀಶ್ವರರಿಗೆ ಸೋವಿನಕೊಪ್ಪದ ಗದ್ಯಾಣ 32 ; ವರ್ಧಮಾನ ತೀರ್ಥಂಕರರಿಗೆ ಹಾದರಿಮಾಸಿಯ ಗದ್ಯಾಣ 32 ; ಮತ್ತು ಪಾರ್ಶ್ವ ತೀರ್ಥಂಕರರಿಗೆ ಮಳೆಸೆಕಯಿ ಹಾಗು ಕೊರಟಾರಿ ಗ್ರಾಮಗಳಿಂದ ಬರುವ ಗದ್ಯಾಣ 64 ಹಣ 5. ನೇರಿಲಮಾನಿ ಹಾಗು ಚಟ್ಟನಹಳ್ಳಿಯಿಂದ ಬರವ ಗದ್ಯಾಣ 314 ಹಣ 6 ವೀಸ 3 ಈ ಆದಾಯವನ್ನು ಮೂರೂ ದೇವರ ನಾನಾ ಕಾರ್ಯಗಳಿಗೆ ಮತ್ತು ದೇವರ ಪರಿಚಾರಕರು, ವಾದ್ಯದವರು, ಪಾತ್ರದವರು, ಸಂಗೀತದವರು, ಮೇಲ್ವಿಚಾರಕರು ಮುಂತಾದವರ ವೆಚ್ಚಕ್ಕಾಗಿ ನಿರ್ದಿಷ್ಟ ಮಾಡಲಾಯಿತು. ಅದೇ ಪ್ರಕಾರ, ಮುನ್ನೂರ ಖಂಡುಗ ಭತ್ತದ ವಿನಿಯೋಗದ ವಿವರಗಳನ್ನೂ ವಿಸ್ತಾರವಾಗಿ ಕೊಡಲಾಗಿದೆ.

ಶಾಸನದ ಸಾಲು 71 ರಿಂದ 76ರವರೆಗೆ ಘಂಟೊಡೆಯನು (ಘಂಟೇಂದ್ರನು) ತನ್ನ ರಾಣಿಯಾದ ಅರಸಪ್ಪ ನಾಯಕನ ಮಗಳು ರಾಮಾದೇವಿ ಇವಳು ಕಟ್ಟಿಸಿದ ಗಂಧಕುಟಿಯ ಬಸ್ತಿಯ ಶಾಂತೀಶ್ವರರಿಗೆ ಕುಂಬಾರಕುಳಿಯ ಗ್ರಾಮದಲ್ಲಿ ಹನ್ನೆರಡು ಗದ್ಯಾಣ ಆದಾಯದ ಗದ್ದೆಯನ್ನು ಉಕ್ತವಾದ ಮೂರನೆಯ ತಿಥಿಯಲ್ಲಿ (ತಾರೀಖು 9, ಶುಕ್ರವಾರ ಜೂನ್ 1592ನೆಯ ದಿವಸ) ದಾನಮಾಡಿಕೊಟ್ಟನೆಂದು ಹೇಳಲಾಗಿದೆ.

ಘಂಟೊಡೆಯನ ಅಪ್ಪಾಗೆ ರಂಗಪ್ಪೊಡೆಯನು ಬಸವಕ್ಕನವರ ಮಗ ನರಸಪ್ಪಣ್ಣನಿಗೆ ಉಂಬಳಿಯಾಗಿ ಕೊಟ್ಟ ಹಳೆ ಬಿಳಿಗೆಯಲ್ಲಿ ಹದಿನಾಲ್ಕು ಹಣ ಆದಾಯದ ಕೊಪ್ಪಲವನ್ನು ನೇಮೀಶ್ವರರಿಗೆ ನರಸಪ್ಪಣ್ಣನ ಹೆಸರಿನಲ್ಲಿ ನಿತ್ಯ ನಡೆಸುವ ಕ್ಷೀರಾಭಿಷೇಕಕ್ಕೆ ಘಂಟೊಡೆಯನು ಕೊಟ್ಟನೆಂದು ಶಾಸನದ ಕಡೆಯ ಭಾಗದಲ್ಲಿ ಹೇಳಲಾಗಿದೆ (ಸಾ-76-79).

ಪೆನುಗುಂಡೆಯಲ್ಲಿ ರಾಜ್ಯವಾಳುತ್ತಿರುವ ಕರ್ನಾಟಸಿಂಹಾಸನಾಧೀಶನಾದ **ವೆಂಕಟಪತಿ** ಮಹಾರಾಯನು ವಿಜಯನಗರ ಅರಸರ ಉತ್ತರಾಧಿಕಾರಿಯಾದ ಅರವೀಡು ಮನೆತನದ ಮೊದಲನೆಯ ತಿರುಮಲರಾಯನ ಕಡೆಯ ಮಗ. ಈತನು ಪಟ್ಟಕ್ಕೆ ಬರುವ ಮೊದಲು ಆತನ ಹಿರಿಯ ಅಣ್ಣ ಶ್ರೀರಂಗರಾಯನು

ಕ್ರಿ.ಶ. 157-ರಿಂದ 1586ರ ವರೆಗೆ ಪೆನುಗೊಂಡದಲ್ಲಿ ರಾಜ್ಯವಾಳಿದನು. ತರುವಾಯ ವೆಂಕಟಪತಿಯು ಕ್ರಿ.ಶ. 1586 ರಿಂದ 1614ರ ವರೆಗೆ ರಾಜ್ಯವಾಳಿದನು. ಮೊದಲನೆಯ ತಿರುಮಲರಾಯನು ಕ್ರಿ.ಶ. 1567ರಲ್ಲಿ ಪೆನುಗುಂಡಿ ಎಂದರೆ ಪೆನುಗೊಂಡದಲ್ಲಿ ತನ್ನ ರಾಜಧಾನಿಯನ್ನು ಸ್ಥಿರ ಮಾಡಿದ್ದನು.

ಶಾಸನದಲ್ಲಿ ಉಲ್ಲೇಖಿತವಾದ **ಬಲ್ಲಾಳರಾಯನು** ಕ್ರಿ.ಶ. 1177 ರಿಂದ 1220 ರ ವರೆಗೆ ಹಳೇಬೀಡಿನಲ್ಲಿ ರಾಜ್ಯವಾಳಿದ ಹೊಯ್ಸಳ ಮನೆತನದ ಎರಡನೆಯ ಬಲ್ಲಾಳರಾಯನಾಗಿರಬಹುದು.

ಘಂಟೇಂದ್ರನ ವಂಶಾವಳಿಯನ್ನು ಘಂಟಣ್ಣೊಡೆಯನಿಂದ ಕೊಡಲಾಗಿದೆ :

ಘಂಟಣ್ಣೊಡೆಯ
(ಅಮ್ಮಣ್ಣೊಡೆಯ)
|
ತಿಮ್ಮಭೂಪಾಲ — ನರಸಿಂಹಭೂಪಾಲ
|
ವೀರೇಂದ್ರ
ರಾಣಿ ವೀರಾಂಬಿಕಾ
|
ರಂಗರಾಜ
ರಾಣಿ ಚೆಲ್ವಾಂಬಾ
(ವೀರೇಂದ್ರ ಹಾಗು ತಿಮ್ಮಾಂಬಿಕಾ ಇವರ ಪುತ್ರಿ)
|
ಘಂಟೇಂದ್ರ
(ಘಂಟೊಡೆಯ)
ರಾಣಿ ರಾಮಾದೇವಿ
(ಅರಸಪ್ಪ ನಾಯಕನ ಮಗಳು)

ಭಟ್ಟಾಕಲಂಕನ ಗುರುಪರಂಪರೆಯನ್ನು ಚಾರುಕೀರ್ತಿಯಿಂದ ಕೊಡಲಾಗಿದೆ:

ಚಾರುಕೀರ್ತಿ
|
ಅನೇಕ ಆಚಾರ್ಯರು
|

ವಿಜಯಕೀರ್ತಿ

- ಅಕಲಂಕದೇವ
  - ವಿಜಯಕೀರ್ತಿ
    - ಅಕಲಂಕದೇವ
      - ಭಟ್ಟಾಕಲಂಕ
- ಚಂದ್ರಪ್ರಭ

ಗ್ರಾಮಗಳಲ್ಲಿ ಹುಟ್ಟುವ ಸುವರ್ಣಾದಾಯದ ವಿವರಗಳನ್ನು ಕೊಡುವಾಗ ಸಿದ್ಧಾಯ, ಬಿರಾಡ, ಕುಳಬಡ್ಡಿ, ಉಪೋತ್ತರ, ಕಡ್ಡಾಯದ ಭತ್ತಕ್ರಯ, ವರ್ತನೆ, ಕಟ್ಟುಗುತ್ತಗೆ, ಮುಂತಾದ **ಕರೋಪಕರಗಳ ಉಲ್ಲೇಖಗಳು** ಗಮನಾರ್ಹವಾಗಿವೆ.

ಗದ್ಯಾಣ (ವರಹ), ಹಣ, ಹಾಗ ಮತ್ತು ವೀಸ ಇವುಗಳನ್ನು **ಅಂಕಿರೇಖೆಗಳಲ್ಲಿ ಬರೆಯುವ ಪದ್ಧತಿ** ಆಗಿನ ಕಾಲದಲ್ಲಿ, ದುಡ್ಡಿನ ಎಲ್ಲ ವ್ಯವಹಾರಗಳಲ್ಲಿ ಪ್ರಚಲಿತವಿದ್ದಂತೆ ಕಾಣುತ್ತದೆ. ಈ ಪದ್ಧತಿಯನ್ನು ತಿಳಿದುಕೊಳ್ಳುವುದು ಕುತೂಹಲಕಾರಿಯಾಗಿವೆ. ಈ ನಾಣ್ಯಗಳ ಪರಸ್ಪರ ಸಂಬಂಧವನ್ನು ಮೊದಲು ನೋಡೋಣ: ಒಂದು ಗದ್ಯಾಣ (ವರಹ)ವೆಂದರೆ ಹತ್ತು ಪಣ ಇಲ್ಲವೆ ಹಣ; ಒಂದು ಹಣ (ಪಣ)ವೆಂದರೆ ನಾಲ್ಕು ಹಾಗ; ಒಂದು ಹಾಗವೆಂದರೆ ನಾಲ್ಕು ವೀಸ. ಇನ್ನು, ಇವುಗಳನ್ನು ಈ ಶಾಸನದಲ್ಲಿಯ ಬರೆದಿರುವ ಪದ್ಧತಿಯನ್ನು ವಿಚಾರಿಸೋಣ: ಈ ಅಂಕಿರೇಖೆಗಳಲ್ಲಿಯ ಮೊದಲನೆಯ ಪೂರ್ಣ ಅಂಕಿ ಗದ್ಯಾಣವನ್ನು ತೋರಿಸುತ್ತದೆ. ಅದರ ಮುಂದಿನ ಜೋಡು ಉದ್ದ (ಲಂಬ) ಗೆರೆಗಳು ಐದು ಹಣಗಳನ್ನು ತೋರಿಸುತ್ತವೆ. ಐದಕ್ಕಿಂತ ಕಡಿಮೆ ಹಣಗಳಿದ್ದರೆ ಅವುಗಳನ್ನು ಜೋಡು ರೇಖೆಗಳ ಸ್ಥಳದಲ್ಲಿ ಒಂದು ಅಳಿ (*F*) ಹಾಕಿ ಅದರ ಮುಂದೆ ಆ ಹಣಗಳ ಅಂಕಿಯನ್ನು ಬರೆಯಲಾಗುತ್ತದೆ. ಐದಕ್ಕಿಂತ ಹೆಚ್ಚು ಹಣಗಳಿದ್ದರೆ ಅವುಗಳನ್ನು ಜೋಡು ರೇಖೆಗಳ ಮುಂದೆ ಅಂಕಿ ಹಾಕಿ ತೋರಿಸಲಾಗುತ್ತದೆ. ಹೀಗೆ ಗ ೧೮*F*೧ ಎಂದರೆ ಹದಿನೆಂಟು ಗದ್ಯಾಣ ಒಂದು ಹಣ; ಗ ೧೭೧॥೩ ಎಂದರೆ ಒಂದು ನೂರಾ ಎಪ್ಪತ್ತೊಂದು ಗದ್ಯಾಣ ಎಂಟು ಹಣ (೫ + ೩) = ೮. ಈ ಎರಡನೆಯ ಪೂರ್ಣ ಅಂಕಿಯ ಮುಂದಿನ ಲಂಬ ರೇಖೆಗಳು ಹಾಗಗಳನ್ನು ತೋರಿಸುತ್ತವೆ. ಹೀಗೆ ಗ ೧೮*F*೧॥ ಎಂದರೆ ಹದಿನೆಂಟು ಗದ್ಯಾಣ, ಒಂದು ಹಣ ಮತ್ತು ಎರಡು ಹಾಗಗಳು; ಗ ೬*F*೩||| ಎಂದರೆ ಆರು ಗದ್ಯಾಣ, ಮೂರು ಹಣ ಮತ್ತು ಮೂರು ಹಾಗಗಳು, ಎರಡನೆಯ ಲಂಬರೇಖೆಗಳ ಮುಂದಿನ ಅಡ್ಡರೇಖೆಗಳು ವೀಸಗಳನ್ನು ತೋರಿಸುತ್ತವೆ. ಹೀಗೆ ಗ ೨೨|||,೨||| = ಎಂದರೆ

ಇಪ್ಪತ್ತೆರಡು ಗದ್ಯಾಣ, ಏಳು ಹಣ, ಮೂರು ಹಾಗ ಮತ್ತು ಎರಡು ವೀಸ; ಗ ೨೯F೧॥ = ಎಂದರೆ ಇಪ್ಪತ್ತೊಂಬತ್ತುಗದ್ಯಾಣ,ಒಂದು ಹಣ,ಎರಡು ಹಾಗ ಮತ್ತು ಎರಡು ವೀಸ. ಐದು ಹಣಗಳ ಮುಂದೆ ಹಾಗಗಳು ಬರುತ್ತಿದ್ದರೆ,ಅವುಗಳನ್ನು ತೋರಿಸುವ ಲಂಬ ರೇಖೆಗಳ ನಡುವೆ ಒಂದು ಬಿಂದುವನ್ನು ಕೊಡಲಾಗುತ್ತದೆ. ಹೀಗೆ ಗ ೩॥೦।-ಎಂದರೆ ಮೂರು ಗದ್ಯಾಣ, ಐದು ಹಣ, ಒಂದು ಹಾಗ ಮತ್ತು ಒಂದು ವೀಸ.

ಒಂದು ದೊಡ್ಡ ದೇವಸ್ಥಾನದಲ್ಲಿ ನಡೆಯುವ ನಾನಾ ಬಗೆಯ ಶ್ರೀ ಕಾರ್ಯಗಳನ್ನು ಈ ಶಾಸನದಲ್ಲಿ ಸವಿಸ್ತರವಾಗಿ ಕಾಣಬಹುದು. ಎರಡು ಹೊತ್ತಿನ ಕ್ಷೀರಾಭಿಷೇಕ, ಅಲಂಕಾರದೀಪ, ನಂದಾದೀಪ, ಕಾರ್ತಿಕದಿನೋತ್ಸವ, ಅಷ್ಟಾಹ್ನಿಕ, ನಿತ್ಯಪೂಜೆಯ ಅಡಕೆ ಎಲೆ, ಫಲವಸ್ತು, ಗಂಧಧೂಪ, ನಿತ್ಯಪಂಚಾಮೃತ, ತತ್ಕಾಲದೀಪ, ತೆಂಗಿನಕಾಯಿ ಅರ್ಚನೆ, ತ್ರಿಬಲಿಸಂಬಂಧ, ಪಂಚಕಲ್ಯಾಣ, ಯುಗಾದಿ, ಶ್ರುತಪಂಚಮಿ, ಜೀವದಯಾಷ್ಟಮಿ, ದೀಪಾವಳಿ ಮತ್ತು ಶಿವರಾತ್ರಿ ಈ ಪಂಚಪರ್ವದ ಪೂಜೆಗಳು, ಮೂರು ದಿನದ ಕಾರ್ತಿಕ ದೀಪಾರಾಧನೆ; ಕಡೆಯ ಅಭಿಷೇಕಸಹಿತ ಷೋಡಶಭಾವನೆ ಮುಂತಾದ ಕಾರ್ಯಗಳು ಈ ತ್ರಿಕೂಟಬಸದಿಯಲ್ಲಿ ನಡೆಯುತ್ತಿದ್ದುವು. ಅದಲ್ಲದೆ, ನಾಲ್ಕುಜನ ಪರಿಚಾರಕರು, ಆರು ಜನ ವಾದ್ಯದವರು, ಹತ್ತುಜನ ಭೋಗಪಾತ್ರದವರು, ಇಬ್ಬರು ಚವರದವರು, ಇಬ್ಬರು ದೋಳಿನವರು ಇಬ್ಬರು ನಾಗಸರದವರು, ಒಬ್ಬ ಪಳಗದವನು, ಒಬ್ಬ ತಾಳದವನು, ಒಬ್ಬ ನಟ್ಟವನು, ಒಬ್ಬ ತಾಳಧಾರಿ, ಇಬ್ಬರು ಮದ್ದಳೆಯವರು, ಒಬ್ಬ ಸಂಗೀತದವನು, ಒಬ್ಬ ಶ್ರುತಿಯವನು ಮತ್ತು ನಾಲ್ಕುಜನ ಪಾತ್ರದವರು, ಹೀಗೆ ನಾನಾ ತರದ ಸೇವಕರು ಆ ದೇವಸ್ಥಾನದಲ್ಲಿದ್ದರು. ಮತ್ತು ಎಲ್ಲ ಕಾರ್ಯಗಳನ್ನು ಸರಿಯಾಗಿ ನಡೆಯಿಸಿಕೊಂಡು ಹೋಗುವುದಕ್ಕಾಗಿ ಶಿಷ್ಯರ ಎರಡು ತಂಡಗಳನ್ನು ಅಧ್ಯಕ್ಷರಾಗಿ (superintendents) ನೇಮಿಸಲಾಗಿತ್ತು.

ಶಾಸನದ ತಿಥಿಗಳು

ಶಾಸನದ ಮೂರು ತಿಥಿಗಳು ಬರುತ್ತವೆ : (೧) ಮೊದಲನೆಯ ತಿಥಿಯನ್ನು ಸಾಲು ೨೫ರಲ್ಲಿ 'ಶಕವರುಷ ೧೫೧೦ನೆಯ ಸರ್ವಜಿತ್ಸಂವತ್ಸರದ ಚೈತ್ರ ಶು. ೧ ಲೂ' ಎಂದು ಹೇಳಲಾಗಿದೆ. ಶಕ ವರ್ಷ ೧೫೧೦ ಕ್ಕೆ ಸರ್ವಜಿತ್ಸಂವತ್ಸರವು ವರ್ತಮಾನ *(current)* ಸಂವತ್ಸರವಾಗಿದೆ. ಈ ಸಂವತ್ಸರದ ಚೈತ್ರ ಶುದ್ಧ ಪ್ರತಿಪದೆಯು ಕ್ರಿಸ್ತ ತಾರೀಖು ೧ ಬುಧವಾರ, ಮಾರ್ಚಿ ತಿಂಗಳ ೧೫೮೭ ಕ್ಕೆ ಸಮಾನವಾಗುತ್ತದೆ.

(೨) ಎರಡನೆಯ ತಿಥಿಯನ್ನು ಸಾಲು ೩೪–೩೫ ರಲ್ಲಿ 'ಶಕವರುಷ ೧೫೦೩ನೆಯ ವಿಕ್ರಮ ಸಂವತ್ಸರದ ಮಾಘ ಶು ೫ ಚಂದ್ರವಾರ......... ನಿತ್ಯ ನಕ್ಷತ್ರ ಪೂರ್ವಾಭಾದ್ರಪದೆ........' ಎಂದು ಕೊಡಲಾಗಿದೆ. ಶಕ ವರ್ಷ ೧೫೦೩ ಕ್ಕೆ

ವಿಕ್ರಮ ಸಂವತ್ಸರವು ವರ್ತಮಾನ ಸಂವತ್ಸರವಾಗಿದೆ. ಈ ಸಂವತ್ಸರದ ಮಾಘ ಶುದ್ಧ ಪಂಚಮಿ ಸರಿಯಾಗಿ ಸೋಮವಾರ ಬರುತ್ತದೆ. ಕಾರಣ ಪ್ರಸ್ತುತ ತಿಥಿಯು ಕ್ರಿಸ್ತ ತಾರೀಖು ೯ ಸೋಮವಾರ, ಜನವರಿ ೧೫೮೧ ಸಮಾನವಾಗುತ್ತದೆ. ಆ ದಿವಸ ಶಾಸನದಲ್ಲಿ ಹೇಳಿದಂತೆ ಪೂರ್ವಾಭಾದ್ರಪದೆ ನಕ್ಷತ್ರವೂ ಇತ್ತು.

(೩) ಮೂರನೆಯ ತಿಥಿಯನ್ನು ಸಾಲು ೭೧ ರಲ್ಲಿ 'ಶಕ ವರುಷ ೧೫೧೫ನೆಯ ನಂದನ ಸಂವತ್ಸರದ ಪ್ರಥಮಾಷಾಢ ಶು ೧೦ ಶುಕ್ರವಾರದಲೂ' ಎಂದು ಹೇಳಲಾಗಿದೆ. ಈ ಸಂವತ್ಸರವೂ ಶಕ ವರ್ಷ ೧೫೧೫ ಕ್ಕೆ ವರ್ತಮಾನ ಸಂವತ್ಸರವಾಗಿದೆ. ಅದರಲ್ಲಿ ಆಷಾಢ ಮಾಸವು ಅಧಿಕ ಮತ್ತು ನಿಜ ಹೀಗೆ ಎರಡಾಗಿ ಬರುತ್ತದೆ. ಈ ವರ್ಷದ ಪ್ರಥಮಾಷಾಢವೆಂದರೆ ಅಧಿಕ ಆಷಾಢದ ಶುದ್ಧ ದಶಮಿ ಶಾಸನದಲ್ಲಿ ಹೇಳಿದಂತೆ ಸರಿಯಾಗಿ ಶುಕ್ರವಾರ ದಿವಸ ಬರುತ್ತದೆ. ಕಾರಣ ಉಕ್ತವಾದ ತಿಥಿ ಕ್ರಿಸ್ತ ತಾರೀಖು ೯ ಶುಕ್ರವಾರ, ಜೂನ್ ೧೫೯೨ ಕ್ಕೆ ಸಮಾನವಾಗುತ್ತದೆ.

ಶಾಸನದಲ್ಲಿ ನಿರ್ದಿಷ್ಟವಾದ ಸ್ಥಳಗಳು

(೧) ಜಂಬೂದ್ವೀಪ (ಸಾ.೨); (೨) ಮೇರು (ಸಾ.೨); (೩) ಆರ್ಯಾಖಂಡ (ಸಾ.೨); (೪) ಕರ್ನಾಟಕಮಂಡಲ (ಸಾ.೨); (೫) ಪೆನುಂಗುಂಡಿ (ಸಾ. ೨-೩) ಪೆನುಗುಂಡಿ (ಸಾ. ೨೬) (೬) ಶ್ವೇತಪುರ (ಸಾ. ೧೩, ೧೫, ೧೬, ೨೩), ಬಿಳಿಗೆ (ಸಾ. ೨೯), ಹಳೆಯ ಬಿಳಿಗೆ (ಸಾ. ೭೭); (೭) ಮಲೆಮೂವತ್ತಾರು ಕಂಪಣ (ಸಾ.೧೩); (೮) ಪದಿನೆಂಟು ಕಂಪಣ (ಸಾ.೧೩); (೯) ಚಂದ್ರಗುತ್ತಿ ಮಹಾದುರ್ಗ (ಸಾ. ೧೩-೧೪); (೧೦) ಆಯಿಸೂರ ಪಟ್ಟಣ (ಸಾ. ೧೪); (೧೧) ಪನ್ಯದೇಶ (ಸಾ.೧೬); (೧೨) ಆಯಿವತ್ತಳಿಗೆಯ ನಾಡು (ಸಾ. ೩೮); (೧೩) ಚಿಕ್ಕಮಾಳಿಗೆಯ ನಾಡು (೩೮); (೧೪) ಸೋವಿನಕೊಪ್ಪ (ಸಾ.೩೮); (೧೫) ಹಾದರಿಮಾನಿ (ಸಾ.೩೮); (೧೬) ಮಳಿಗೆ ಕಯಿ (ಸಾ.೩೮); (೧೭) ಕೊಱತಾರಿ (ಸಾ.೩೮); (೧೮) ನೇಜಿಲಮಾನಿ (ಸಾ.೩೮); (೧೯) ಚಟ್ಟನ ಹಳ್ಳಿ (ಸಾ.೩೯); (೨೦) ಗೊರಟಿನ ಹಳ್ಳ (ಸಾ.೩೯); (೨೧) ಬಲುಕಣಿ (ಸಾ.೩೯) (೨೨) ಒಂದಾನೆ (ಸಾ.೩೯); (೨೩) ಉಜ್ಜಂತಗಿರಿ (ಸಾ. ೬೭-೬೮); (೨೪) ಸಂಮೇದಗಿರಿ (ಸಾ.೬೮); (೨೫) ಬೆಳುಗುಳ (ಸಾ. ೬೮); (೨೬) ಕಾಶಿ (ಸಾ ೬೯); (೨೭) ರಾಮೇಶ್ವರ (ಸಾ. ೬೯); (೨೮) ಗೋಕರ್ಣ (ಸಾ ೬೯); (೨೯) ತಿರುಪತಿ (ಸಾ.೬೯); (೩೦) ಶ್ರೀಪರ್ವತ (ಸಾ. ೬೯); (೩೧) ಚಿಕ್ಕ ಆಯಿವತ್ತಳಿಗೆಯ ನಾಡು (ಸಾ ೭೩); (೩೨) ಕುಂಬಾಱಕುಳಿ (ಸಾ.೭೪)

(೧), (೨), (೩), (೬), (೧೦), (೧೧), (೧೪ ರಿಂದ ೨೨) ಈ ಸ್ಥಳಗಳು ಭಟ್ಟಾಕಲಂಕನ ಮೊದಲನೆಯ ಶಾಸನದಲ್ಲಿ ಬಂದಿವೆ. (೪) ಕರ್ನಾಟ ಮಂಡಲ ; ಕರ್ನಾಟದೇಶ. (೫) ಪೆನುಂಗುಂಡಿ, ಪೆನುಗುಂಡಿ : ಅನಂತಪೂರ ಜಿಲ್ಲೆಯಲ್ಲಿಯ ಪ್ರಸಿದ್ಧ ದುರ್ಗ ಮತ್ತು ರಾಜಧಾನಿ ಪಟ್ಟಣ ಪೆನುಗೊಂಡ–ಅನಂತಪೂರದಿಂದ ದಕ್ಷಿಣಕ್ಕೆ ಸುಮಾರು ನಾಲ್ವತ್ತು ಮೈಲು ಅಂತರದಲ್ಲಿದೆ. ವೆಂಕಟಪತಿ ಮಹಾ ರಾಯನ ತಂದೆಯಾದ ತಿರುಮಲರಾಯನು ಕ್ರಿ. ಶ. ೧೫೬೭ರಲ್ಲಿ ತನ್ನ ರಾಜಧಾನಿ ಯನ್ನು ವಿಜಯನಗರದಿಂದ ಬದಲಾಯಿಸಿ ಪೆನುಗೊಂಡದಲ್ಲಿ ಮಾಡಿದನು. (೬) ಹಳೆಯ ಬಿಳಿಗೆ : ಅಮ್ಮಣ್ಣೊಡೆಯನೆಂಬ ನಾಮಾಂತರವುಳ್ಳ ಘಂಟಣ್ಣೊಡೆಯನು ಬಿಳಿಗೆ ಪಟ್ಟಣವನ್ನು ನಿರ್ಮಿಸಿದನೆಂದು ಶಾಸನದಲ್ಲಿ ಹೇಳಲಾಗಿದೆ. ಆದರೆ, ಬಿಳಿಗೆ ಎಂಬ ಗ್ರಾಮ ಮೊದಲಿನಿಂದಲೂ ಇತ್ತೆಂಬುದು 'ಹಳೆಯ ಬಿಳಿಗೆಯ' ಉಲ್ಲೇಖ ದಿಂದ ವಿದಿತವಾಗುತ್ತದೆ. (೯) ಚಂದ್ರಗುತ್ತಿ, ಮಹಾದುರ್ಗ : ಸೊರಬ ತಾಲೂಕಿನ ಪಶ್ಚಿಮ ಭಾಗದಲ್ಲಿರುವ ಚಂದ್ರಗುತ್ತಿ ಗಿರಿಯ ಉಪಕಂಠದಲ್ಲಿಯ ಇತಿಹಾಸ ಪ್ರಸಿದ್ಧ ಕೋಟೆ ಮತ್ತು ಪಟ್ಟಣ. (೨೩) ಊರ್ಜ್ಜಂತಗಿರಿ; ಗುಜರಾತದಲ್ಲಿಯ ಗಿರನಾರ ಕ್ಷೇತ್ರ ನೇಮಿನಾಥ ತೀರ್ಥಂಕರರು ನಿರ್ವಾಣಗೊಂಡ ಸ್ಥಳ. (೨೪) ಸಂಮೇದಗಿರಿ ; ಇದಕ್ಕೆ ಪಾರ್ಶ್ವನಾಥ ಪರ್ವತವೆಂದೂ ಹೆಸರು. ಬಿಹಾರ ಪ್ರಾಂತದ ಹಜಾರಿಬಾಗ ಜಿಲ್ಲೆಯಲ್ಲಿ ಇದೆ. ಪಾರ್ಶ್ವನಾಥ ತೀರ್ಥಂಕರರು ಮುಖ್ಯವಾಗಿ ಇಪ್ಪತ್ತು ತೀರ್ಥಂಕರರು ಇಲ್ಲಿ ಮೋಕ್ಷಕ್ಕೆ ಹೋದದ್ದರಿಂದ ಇದಕ್ಕೆ ತೀರ್ಥಕ್ಷೇತ್ರ ರಾಜವೆಂದು ಕೀರ್ತಿ ಇದೆ. (೨೫) ಬೆಳುಗುಳ ; ಜಗತ್ಪ್ರಸಿದ್ಧ ಗೊಮ್ಮಟೇಶ್ವರ ಮೂರ್ತಿಯಿಂದ ಅಮರವಾದ ಶ್ರವಣಬೆಳಗೊಳ, ಹಾಸನ ಜಿಲ್ಲೆಯಲ್ಲಿ ಇದೆ. (೨೬) ಕಾಶಿ (೨೭) ರಾಮೇಶ್ವರ (೨೮) ಗೋಕರ್ಣ (೨೯) ತಿರುಪತಿ (೩೦) ಶ್ರೀಪರ್ವತ (ಶ್ರೀಶೈಲ) ಇವು ಎಲ್ಲರಿಗೆ ವಿದಿತವಾಗಿರುವ ಪವಿತ್ರ ಕ್ಷೇತ್ರಗಳು.

ಇನ್ನುಳಿದ ಸ್ಥಳಗಳನ್ನು ಸದ್ಯಕ್ಕೆ ಗುರುತಿಸಲು ಸಾಧ್ಯವಾಗಿಲ್ಲ.

ಶಾಸನಪಾಠ[1]

[ವೃತ್ತಗಳು : ಅನುಷ್ಟುಭ್ 1–5, 8–11, 17–20, 23, 26, 29-32 ; ಶಾರ್ದೂಲವಿಕ್ರೀಡಿತ 6, 14, 15, 25, 27 ; ಉಪಜಾತಿ 7, 21, 22, 28 ; ಇಂದ್ರವಂಶಾ 12 ; ಸ್ರಗ್ಧರಾ 13, 24 ; ವಸಂತತಿಲಕಾ 16]

---

1 ಬಿಳಿಗೆ ಗ್ರಾಮಕ್ಕೆ 1974ರ ಜೂನ ತಿಂಗಳ 23ನೆಯ ದಿನಾಂಕದಂದು ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗವಿಸ್ತರಣ ವಿಭಾಗದ ಉಪನ್ಯಾಸ ಮಾಲೆಯಲ್ಲಿ 'ಕಾರವಾರ ಜಿಲ್ಲೆಯ ಶಾಸನಗಳು' ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಲು ನಾನು ಹೋದ ಸಮಯದಲ್ಲಿ ತೆಗೆದುಕೊಂಡ ಬಿಳಿಗೆಯ ಬಸದಿಯಲ್ಲಿರುವ ಶಾಸನದ ಪಡಿಯಚ್ಚುಗಳಿಂದ.

1 ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ [೧*]
ಜೀಯಾತ್ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥ [೧*]
ಜಯತ್ಯಜಯ್ಯ ಮಾಹಾತ್ಮ್ಯಂ ವಿಶಾಸಿತಕುಶಾಸನಂ । ಶಾಸನಂ ಜೈ-

2 ನಮುದ್ಭಾಸಿ ಮುಕ್ತಿಲಕ್ಷ್ಮ್ಯೈಕಶಾಸನಂ ॥ [೨*] ಅಥಾಸ್ತಿ ಜಂಬೂ
ದ್ವೀಪೇಸ್ಮಿನ್ಮೇರೋರ್ದ್ದಕ್ಷಿಣತೋ ದಿಶಿ । ಆರ್ಯ್ಯಖಂಡಾಂಗನಾ
ವಕ್ತ್ರಮಿವ ಕರ್ನ್ನಾಟಮಂಡಲಂ ॥ [೩*] ತನ್ನಾಸಾಮಣಿವದ್ಭಾತಿ
ಪೆನು-

3 ಂಗುಂಡೀತಿ ಪತ್ತನಂ । ಯತ್ರ ಕರ್ನಾಟಸಿಂಹಾಸನಾಧೀಶಾ ಬಹವೋ
ಭವನ್ ॥ [೪*] ತತ್ರಾಸ್ತಿ ವಿನಮದ್ರಾಜ ರಾಜಿರಾಜಿತ್ತ (ತ)
ವಿಕ್ರಮಃ । ಶ್ರೀ ವೆಂಕಟಪತಿನ್ನಾಗಮ್ನಾ ಮಹಾರಾಜೋ ಮಹೋ
ದಯಃ [೫*] ಶ್ರೀ ಕರ್ನ್ನಾಟಮಹಾ-

4 ಮಹೀಶಕಮಲಾನೀಕಂ ಸಮುಲ್ಲಾಸಯನ್ ಪ್ರತ್ಯರ್ತ್ಥಿಕ್ಷಿತಿಪಾಲಕೈರವ
ಕ.ಲಂ ಸಂಕೋಚಯನ್ ಸತತಂ [1*] ನಾನಾ ನೀತಿ ಪರಾಕ್ರಮ
ಕ್ರಮಕರಾನ್ವಿಸ್ತಾರಯನ್ಭೂತಲೇ ಶ್ರೀಮದ್ವೆಂಕಟದೇವರಾಯತರ-

5 ಣಿಸ್ತೀವ್ರಂ ಸಮುಜ್ಜೃಂಭತೇ ॥ [೬*] ತಸ್ಮಿನ್ ವೆಂಕಟಪತಿದೇವ
ಮಹಾರಾಯೇ ಸದ್ಧರ್ಮ್ಮಪರಿಪಾಲನೇನ ಸಮಸ್ತಪೃಥ್ವೀಂ ಪ್ರತಿಪಾಲ
ಯತಿ ಸತಿ ॥ ದೇಶೀಗಣಾಗ್ರೇಸರಚಾರುಕೀರ್ತಿ [ಃ*] ಶ್ರೀಪಂಡಿತಾ
ಯ್ಯೊರ್ಯ್ಯೀ ಜನಿ ಮೂಲ-

6 ಸಂಘೇ । ಬಲ್ಲಾಳರಾಯಾವನಜಾತಪೂತಯಶೋನ್ವಿತಶ್ರೀ ಬಿರುದಾಭಿ
ರಾಮಃ ॥ [೭*] ತತ್ಸಂತಾನಕ್ರಮೇ ಯಾತೇಷು [..........] ।
ಧೀಮಾನ್ವಿಜಯಕೀರ್ತ್ಯಾರ್ಯ್ಯಃ ಪರಮಾಗಮಪಂಡಿತಃ ॥ [೮*]
ತಸ್ಯ ಶಿಷ್ಯಾ-

7 ವುಭೌ ಜಾತಾವಕಲಂಕಮುನಿಃ ಪರಃ । ಚಂದ್ರಪ್ರಭಯತೀತ್ಯೇತೌ ।
ಪುಷ್ಪದಂತಾವಿವಾಪಗೌ (ರಃ) ॥ [೯*] ತತ್ರಾಕಲಂಕಯೋಗೀಂದ್ರ
ಶಿಷ್ಯೋ ವಿಜಯಕೀರ್ತಿರ್ವಾಕ್ । ವಿಶಿಷ್ಟೇ ಜಯಕೀರ್ತಿರ್ದ್ವೇ
ಯಮೋವಾಲಂಬ್ಯತೇಜ-

8 ತಃ ॥ [೧೦*] ಸುವೃತ್ತಶಾಲಿನಸ್ತಸ್ಯ ಶಿಷ್ಯೋ ವಿಧ್ವಸ್ತದೋಷಕಃ ।
ಅಕಲಂಕೋ ಯತಿರ್ಭಾತಿ ಭಾನೋರ್ಭಾನುರಿವಾಪಗೌ(ರಃ) ॥
[೧೧*] ಶೇಷೋಪ್ಯಶಕ್ತೋಪ್ಯಕಲಂಕಯೋಗಿನೋ ಗುಣಾನ್
ಪ್ರವಕ್ತುಂ ದ್ವಿಸಹಸ್ರಜಿಹ್ವಕಃ । ಭೂ-

9 ಭಾರದಂಭೋದ್ಗತವಾಸಧೋಜಗತ್ತ್ರದೇಕಜಿಹ್ವೋ ಮನುಜಃ ಕಥಂ ಪುನಃ ॥ [೧೨*] ತಚ್ಛಿಷ್ಯಃ [ಸಾ]ಮಭಾಷ್ಯಃ ಪ್ರವಚನಜಲಧೇಃ ಪಾರಗೋ ನೀತಿವೇದೀ ಷಟ್ತರ್ಕ್ಕೀ ವಾಪ್ಯಶಸ್ತ್ರಾಂಸಮುದಮನುವದದ್ವಾದಿನಾಂ ಕ್ಷೇಪಕೌರೀ । ಸಮ್ಯಗ್ದ–

10 ರ್ಮ್ಮಪ್ರಭಾವಪ್ರಕಟನಪಟುವಾಗ್ಧ್ವಸ್ತಮೋಹಾಂಧಕಾರಃ ಶ್ರೀಮದ್ಘಂಟೇಂದ್ರಸಂಪೂಜಿತಪದಕಮಲೋ ಭಾತಿ ಭಟ್ಟಾಕಲಂಕಃ ॥ [೧೩*] ತರ್ಕ್ಕೇ ಕರ್ಕ್ಕಶಯುಕ್ತಿಜಾಲಭರಿತೇ ಶಬ್ದೇಬ್ಧಿಗಂಭೀರಕೇ ಸಂಖ್ಯಾಕೋವಿದ–

11 ಗರ್ವ್ವಪರ್ವ್ವತಪವಿಪ್ರಾಯೋ ಚ ಜೈನಾಗಮೇ । ಅನ್ಯಸ್ಮಿನ್ ಜಿನಸಂಹಿತಾದಿ ಸುಕಲಾಶಾಸ್ತ್ರೇ ಚ ಯೋ ಗರ್ವ್ವಿತಾಸ್ತಾನ್ ಸರ್ವ್ವಾನ್ ಪ್ರವಿಜಿತ್ಯ ಪೇಲತಿತರಾಂ ಭಟ್ಟಾಕಲಂಕೋ ಯತಿಃ ॥ [೧೪*] ಶಿಲ್ಪೇನಲ್ಪತರೇ ಸಮಂತ್ರವಚನೇ ವೈ–

12 ದ್ಯೇನವದ್ಯೇ ಶುಭೇ ಕಾವ್ಯೇ ನವ್ಯರಸಾತ್ಮಕೇ ಸುಗಣಿತೇ ಪುಣ್ಯೇ ಪುರಾಣೇಖಿಲೇ । ಸಂಗೀತೇ ಸರಸೇ ಚ ನೀತಿಸಮಯೇ ಛಂದೋಗಣೇ ಜ್ಯೋತಿಷೇ ನಾಟ್ಯಾಲಂಕರಣಾದಿಕೇ ಚ ನಿಪುಣೋ ಭಟ್ಟಾಕಲಂಕೋ ಬಭೌ ॥ [೧೫*] ಅಥ ತತ್ಪ–

13 ರಮ ಶಿಷ್ಯಸ್ಯ ಶ್ವೇತಪುರಾಧೀಶ್ವರಸ್ಯ ಘಂಟೇಂದ್ರಸ್ಯ ವಂಶಾವಲಿಃ ಕಥ್ಯತೇ ॥ ಅದೆಂತೆಂದೊಡೆ । ಕರ್ನಾಟಸಿಂಹಾಸನ[1]ಕ್ಕೆ ಸಲುವ ಮಲೆಮೂವತ್ತಾಱು ಕಂಪಣದೊಳ್ಪದಿನೆಂಟು ಕಂಪಣಕ್ಕೆ ಮುಖ್ಯವಾದ ಚಂದ್ರಗುತ್ತಿಯಿಂ–

14 ಂಬಮಹಾದುರ್ಗ್ಗೋಪಕಂಠದೊಳನೇಕಜನತಾಸಂಪತ್ಸಮೃದ್ಧಮಾದ । ಅಯಿನೂರೆಂಬ ಪಟ್ಟದೊಳ್ಧರ್ಮ್ಮವಿಜಯಿಗಳಾಗಿ ಜಿನಮಾರ್ಗ್ಗ ಪ್ರಭಾವಕರಾದ ಪಲಂಬರರಸುಗಳು ಸದ್ಧರ್ಮ್ಮಪರಿಪಾಲನದಿಂ ರಾಜ್ಯಮನನುಭವಿಸಿದರಾ

15 ಸಂತಾನದೊ[2]ಳಂಮಂಣೊಡೆಯರೆಂಬ ನಾಮಾಂತರಮನುಳ್ಳ ಘಂಟಂಣೊಡೆಯರೆಂಬ ಮಹಾರಾಜಂ ಶ್ವೇತಪುರಮೆಂಬ ಪಟ್ಟಣಮನನೇಕಶೋಭಾಕರಮಾಗಿ ನಿರ್ಮ್ಮಿಸಿಯದಱ[3]ೊಳ್ತ್ರಿವರ್ಗಸಮಾರಾಧನಾಪರಿಣ[3]ತಾಂತಃ–

---

1 'ನ' ಅಕ್ಷರವನ್ನು ಸಾಲಿನ ಮೇಲ್ಭಾಗದಲ್ಲಿ ಚಿಕ್ಕದಾಗಿ ಬರೆಯಲಾಗಿದೆ.

2 'ದೊ' ಅಕ್ಷರವನ್ನು ಸಾಲಿನ ಮೇಲ್ಭಾಗದಲ್ಲಿ ಚಿಕ್ಕದಾಗಿ ಬರೆಯಲಾಗಿದೆ.

3 'ಣ' ಅಕ್ಷರವನ್ನು ಸಾಲಿನ ಮೇಲ್ಭಾಗದಲ್ಲಿ ಚಿಕ್ಕದಾಗಿ ಬರೆಯಲಾಗಿದೆ.

16 ಕರಣನಾಗಿ ರಾಜ್ಯಂಗೆಯ್ದುನದೆಂತೆನೆ । ಶ್ರೀಮತ್ಸಮಸ್ತವಿಷಯಾಧಿಕ ವನ್ಯದೇಶೇ ಶ್ವೇತಾಭಿಧಾನನಗರಂ ಸರಸೀವ ಪದ್ಮಂ । ತತ್ರಾನತಾರಿ ವನಿತಾಳಕಭೃಂಗಭಾಸೇ ಪಾದಾಂಬುಜೋ ಜಯತಿ ಘಂಟಣಭೂಪಿ ಪಾಲಃ ॥ [೧೬*]

17 ತಸ್ಯ ಪುತ್ರಾ ಮಹಾನ್ತೌ ದ್ವೌ ತಿಂಮಭೂಪನೃಸಿಂಹಕೌ । ಜಾತೌ ದಶರಥಸ್ಯೇವ ರಾಮಲಕ್ಷ್ಮೀಧರಾವಿಮೌ ॥ [೧೭*] ತಯೋರ್ನ್ನೃಸಿಂಹ ಸಂಜ್ಞಸ್ಯ ವೀರೇಂದ್ರಾಖ್ಯಃ ಸುತೋಜನಿ । ಸರೋಷವಿದ್ವಿಷದ್ಯೋಷಾ ವೈಧವ್ಯವಿಧಿಕೃದ್ಗುರುಃ ॥ [೧೮*] ತಸ್ಯ ವೀರಾಂಬಿ–

18 ಕಾ ರಾಜ್ಞೀ [ಸುವ್ರತಾ] ಸದ್ಗುಣಾಶ್ರಯಾ । ಮುಕ್ತಾಮಯ್ಯಭವ ದ್ಧಾರಯಷ್ಟಿರ್ವ್ವಾ ಕಂಧರಾಸ್ಪದಂ ॥ [೧೯*] ತಯೋ ರಂಗಪ ನಾಮಾಸೀತ್ಪುತ್ರೋ ರೂಪ ವಿಲಾಸವಾನ್ । ಶ್ರೀವಿಷ್ಣೋರಿವ ಕಂದರ್ಪ್ಪೋ ಜಯಂತೋ ವಾ ಶಚೀಂದ್ರಯೋಃ ॥ [೨೦*] ಶ್ರೀರಂಗ

19 ರಾಜೋ ಜಯತಾದ್ಧರಿತ್ರ್ಯಾಂ ಗುಣಾಭಿರಾಮಾಂ ಸುಮನಃ ಪ್ರಶಸ್ತಾಂ। ಆಜ್ಞಾಂ ಯದೀಯಾಂ ಶಿರಸಾ ವಹಂತಿ ಸತ್ಪುಷ್ಪ ಮಾಲಾಮಿವ ಭೂಮಿಪಾಲಾಃ ॥ [೨೧*] ತಸ್ಯ ಪ್ರಿಯಾಸೀದಥ ಚೆಲ್ವಮಾಂಬಾ ವೀರೇಂದ್ರತಿಂಮಾಂಬಿಕ-

20 ಯೋಃ ಕುಮಾರೀ। ಯಯಾ ಜಿತಾ ರೂಪಸುಶೀಲಬೋಧೈ ರತಿಶ್ಚ ಸೀತಾ ಚ ಸರಸ್ವತೀ ಚ ॥[೨೨*] ತಚ್ಚೆಲ್ವಾಂಬಾರಂಗರಾಜ ದಂಪತ್ಯೋ ರ್ಗ್ಗರ್ಬ್ಭವಾರಿಧೌ। ಜಾತೋ ಘಂಟೇಂದ್ರಚಂದ್ರೋಸೌ ಶುಚಿಃ ಕುವಲಯಪ್ರಿಯಃ ॥ [೨೩*] ಶ್ರೀಮಾನ್ಸಮ್ಯ–

21 ಕ್ತ್ವದೀಪಃ ಶರಣಗತನೃಪಾಲ ಪ್ರತಿಷ್ಠಾಪನಾರ್ಯ್ಯಃ ಸತ್ಯತ್ಯಾಗ- ಪ್ರತಾಪಾದ್ಯಖಿಲಗುಣಸಿಧಿರ್ವ್ವೈರಿಮತ್ತೇಭಸಿಂಹಃ । ಶ್ರೀಮದ್ಭಟ್ಟಾಕಲಂಕವ್ರತಿಪತಿ ಚರಣದ್ವಂದ್ವ ನೀರೇಜಭೃಂಗೋ ಧೀರಃ ಶ್ರೀ ಜೈನ ಮಾರ್ಗ್ಗಾಂಬರಗಗ–

22 ನಮಣಿರ್ಬ್ಭಾತಿ ಘಂಟೇಂದ್ರಚಂದ್ರಃ ॥ [೨೪*] ಕೀರ್ತ್ತಿರ್ಕ್ಷಾಮಮು- ಪೇಯುಷೀ ನಿಜಮಹಃಕಾಶ್ಮೀರಲೇಪಾಂಚಿತಾ ಭೂಭೃದ್ದುರ್ಗ್ಗಪ ಯೋಧರಾತಿ ಲಲಿತಾಭೂಯಃ ಪ್ರಜಾಲಂಕೃತಾ [೧*] ಸರ್ವ್ವಾಂಗೇಷು ಸಮುಜ್ವಲಾ ಸಮಧಿಕಂಸಂ–

23 ಭೋಗಲೀಲೋಚಿತಾ ರಾಜ್ಯಶ್ರೀರಮಣೀವ ರಾಜತಿತರಾಂ ಘಂಟೇಂದ್ರ
ಭೂಮೀಪತೇಃ ॥ [೨೫*] ವಾಹಾರೋಹಣರೇವಂತಃ ಸಂಗ್ರಾಮಜಿತ
ಪಾರ್ತ್ಥಿವಃ । ಭಗದತ್ತೋ ಗಜಾರೋಹೇ ಘಂಟೇಂದ್ರೋ ಭಾತಿ
ಭೂತಲೇ॥ [೨೬*) ಶ್ರೀಮಚ್ಛ್ವೇತಪುರೇ ಸಮ–[1]

24 ಸಮಸ್ತ ಜನತಾಸಂಪತ್ಸಮೃದ್ಧೇ ಶುಭೇ ಶ್ರೀರತ್ನತ್ರಯಚೈತ್ಯವಾಸ-
ಮತುಲಂ ನಿರ್ಮ್ಮಾಪ್ಯ ಸಾಧ್ವಶ್ಮನಾ । ಶ್ರೀನೇಮೀಶ್ವರಪಾರ್ಶ್ವ
ಸನ್ಮತಿಜಿನಾಸ್ಸಂಸ್ಥಾಪ್ಯ ತತ್ಪೂಜನೇ ಶ್ರೀಘಂಟೇಂದ್ರಮಹಾ
ಪ್ರಭುರ್ನ್ನವಮಹಾಗ್ರಾಮಾನದಾತ್ಸಾದರಂ ॥ [೨೭*]

25 ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ 1510ನೆಯ
ಸರ್ವ್ವಜಿತ್ಸಂವತ್ಸರದ ಚೈತ್ರ ಶು 1 ಲೂ ಶ್ರೀಮದ್ರಾಜಾಧಿರಾಜ
ರಾಜಪರಮೇಶ್ವರ ಶ್ರೀವೀರಪ್ರತಾಪ ಶ್ರೀ ವೀರ ವೆಂಕಟಪತಿದೇವಮ–

26 ಹಾರಾಯರು ಪೆನುಗುಂಡಿ ಸಿಂಹಾಸನದಲ್ಲಿ ಸದ್ಧರ್ಮ್ಮಪ್ರತಿಪಾಲನದಿಂ
ಸ್ಥಿರಸಾಮ್ರಾಜ್ಯಮನನುಭವಿಸುತ್ತಂ ಇರಲು ॥ ನಿಜಗಾಂಭೀರ್ಯ್ಯಾದ್ಯ
ನೇಕಗುಣಸಂಜಾತಭೋಜರಾಜಸಂಘಾಲಂಘನಜಂಘಾಲ

27 ವಿವೇಕವಿತರಣ ಕಲಾಪಾಂಡಿತ್ಯಾದ್ಯನೇಕ ಗುಣನಿರ್ಜ್ಜಿತಕಲ್ಪವೃಕ್ಷ
ಮಲಯಮಲಿ ಮಾರ್ಕ್ಕೊಲಬಿರುದೋದ್ದಂಡ ಯೆಂಟುದಂಡಿಗೆಯ
ಮನ್ನೆಯರ ಗಂಡಗಡಿಯಂಕಸಿಂಹ ಮೂರ್ಮ್ಮಡಿರಾವುತ್ತರಾಯದುರ್ಗ
ವಿಭಾಡ

28 ಶ್ರೀಮನ್ಮಹಾಪ್ರಭು ಬಿಳಿಗೆಯ ವೀರಪ್ಪೊಡೆಯರ ಕುಮಾರರಾದ
ರಂಗಪ್ಪರಾಜೊಡೆಯರ ಕುಮಾರರು ಘಂಟೊಡೆಯರು ಸಮಗಭ್ಯು
ದಯ ನಿಶ್ರೇಯಸಸುಖಪ್ರಾಪ್ತಿನಿಮಿತ್ತವಾಗಿ ಸಮರ್ಪ್ಪಿಸಿ ಬಿಟ್ಟ
ಧರ್ಮ್ಮಶಾಸ–

29 ನದ ಭಾಷಾಕ್ರಮವೆಂತೆಂದರೆ[2] [೧೧*] ಮೊದಲು ನಂಮ ಅಪ್ಪಾಜಿ
ರಂಗಪ್ಪರಾಜೊಡೆಯರು ನಮಗಭ್ಯುದಯ ನಿಶ್ರೇಯಸಸುಖಪ್ರಾಪ್ತಿ
ನಿಮಿತ್ತವಾಗಿ ಬಿಳಿಗೆಯಲ್ಲಿ ನೂತನವಾಗಿ ಶಿಲಾಮಯವಾಗಿ ಕಟ್ಟಿಸಿದ
ರತ್ನತ್ರ–

---

1 'ಸಮ' ಅಕ್ಷರಗಳು ಅಧಿಕವಾಗಿವೆ.

2 'ರೆ' ಅಕ್ಷರವನ್ನು ಸಾಲಿನ ಮೇಲ್ಭಾಗದಲ್ಲಿ ಚಿಕ್ಕದಾಗಿ ಬರೆಯಲಾಗಿದೆ

30. ಯದ ಚೈತ್ಯಾಲಯಕ್ಕೆ ನಾವು ನಮ್ಮ ವಂಶಪರಂಪರೆಯ ಪರಮ
ಗುರುಗಳಾದ ಸ್ವಸ್ತಿ ಶ್ರೀಮದ್ರಾಯರಾಜಗುರು ಮಂಡಲಾಚಾರ್ಯ್ಯ
ಮಹಾವಾದವಾದೀಶ್ವರರಾಯವಾದಿಪಿತಾಮಹ ಸಕಲವಿದ್ವ-

31. ಜ್ಜನ ಚಕ್ರವರ್ತ್ತಿಗಳುಂ ಬಲ್ಲಾಳರಾಯಜೀವರಕ್ಷಾಪಾಲಕರುಂ ದೇಶೀ-
ಗಣಾಗ್ರಗಣ್ಯರುಮಪ್ಪ ಶ್ರೀಮದ್ಭಟ್ಟಾಕಲಂಕದೇವರುಗಳ ಉಪದೇಶ
ದಿಂದ ರಂಗಮಂಡಪ ಮುನಿವಾಸ ಚಂದ್ರಶಾಲೆಪ್ರಾಕಾರ ಮೊದ-

32. ಲಾದ ಕೆಲಸಗಳನು ಶಿಲಾಮಯವಾಗಿ ಗೆಯಿಸಿ ಸಂಪೂರ್ಣ್ಣವ ಮಾಡಿ
ಆ ಚೈತ್ಯಾಲಯದ ಮೊದಲ ಬಾಗಿಲಲ್ಲಿ ನಂಮ ಅ[ಜ್ಜೊಡೆ]ಯರಾದ
ವೀರಪ್ಪೊಡೆಯರಿಗೆ ಸ್ವರ್ಗ್ಗಾಪವರ್ಗಸುಖಪ್ರಾಪ್ತಿ ನಿಮಿತ್ತವಾಗಿ ಶ್ರೀ
ನೇಮಿತೀರ್ತ್ಥ-

33. ಕರ ಪ್ರತಿಮೆಯನು ಸ್ಥಾಪಿಸಿ ಆ ನಡುವಣ ಬಾಗಿಲಲ್ಲಿ ನಂಮ ಅಪ್ಪಾಜಿ
ರಂಗಪ್ಪರಾಜೊಡೆಯರಿಗೆ ಸ್ವರ್ಗ್ಗಾಪವರ್ಗಸುಖಪ್ರಾಪ್ತಿ ನಿಮಿತ್ತವಾಗಿ
ಶ್ರೀ ಪಾರ್ಶ್ವತೀರ್ತ್ಥಕರ ಪ್ರತಿಮೆಯನು ಸ್ಥಾಪಿಸಿ ಆ ಕಡೆಯ

34. ಬಾಗಿಲಲ್ಲಿ ನಂಮ ಅಂಮಾಜಿ ಚೆಲುವಂಮನವರಿಗೆ ಸ್ವರ್ಗ್ಗಾಪವರ್ಗ್ಗ
ಸುಖಪ್ರಾಪ್ತಿ ನಿಮಿತ್ತವಾಗಿ ಶ್ರೀ ವರ್ದ್ಧಮಾನ ತೀರ್ತ್ಥಕರ ಪ್ರತಿಮೆ
ಯನು ಸ್ಥಾಪಿಸಿ | ಶಕ ವರುಷ 1503ನೆಯ ವಿಕ್ರಮ ಸಂವತ್ಸರದ
ಮಾಘ ಶು 5

35. ಚಂದ್ರವಾರ ಘಳಿಗೆ 47 ॥। ಮಹಾನಕ್ಷತ್ರ ಶ್ರವಣ 7 ॥। ನಿತ್ಯ
ನಕ್ಷತ್ರ ಪೂರ್ವ್ವಾಭಾದ್ರಪದೆ 7 ॥। ಪರಿಘ ಯೋಗ ॥ ಉಪರಿಶಿವ-
ಯೋಗ 53 ಬವಕರಣ 19 ವಿಷ 30 ॥ ಅಮೃತ 53 ಏವಂ
ಪಂಚಾಂಗ-

36. ಶುದ್ಧಿಯುಳ್ಳ ದಿವಸದಲ್ಲಿ ಸೂರ್ಯ್ಯೋದಯವಾದ ಘಳಿಗೆ 8 ॥ ಸಂದ
ಮೀನಲಗ್ನ ಚಂದ್ರೋದಯದಲ್ಲಿ ಚತುಃಸಂಘ ಸಮಕ್ಷದಲ್ಲಿ ಮಹೋ-
ತ್ಸವದಿಂದ ಪ್ರತಿಷ್ಠೆಯನು ಮಾಡಿಸಿ ನಮಗೆ ಸಕಲಾಭ್ಯುದಯನಿಶ್ರೇ-

37. ಯಸಸುಖಪ್ರಾಪ್ತಿನಿಮಿತ್ತವಾಗಿ ಶ್ರೀ ನೇಮೀಶ್ವರ ಪಾರ್ಶ್ವನಾಥ
ವರ್ದ್ಧಮಾನತೀರ್ತ್ಥಂಕರರ ಶ್ರೀಪಾದಮೂಲದಲ್ಲಿ ನಡೆವ ನಿತ್ಯ
ನೈಮಿತ್ತಿಕ ಮುಂತಾದ ಅಂಗರಂಗವೈಭವಂಗಳಿಗೆ ಸಮರ್ಪ್ಪಿಸಿ ಬಿಟ್ಟು
ಕೊಟ್ಟ

38. ಧರ್ಮ್ಮಸ್ಥಲಂಗಳ ವಿವರ । ನಮಗೆ ದಾನಮೂಲವಾಗಿ ಸಲುವ ಆಯಿವತ್ತಳಿಗೆಯ ನಾಡು ಚಿಕ್ಕಮಾಳಿಗೆಯ ನಾಡುಗಳಿಗೆ ಸಲುವ । ಸೋವಿನಕೊಪ್ಪ | ಹಾದರಿಮಾನಿ । ಮಳಿಗೆಕಯಿ । ಕೊಱತಾರಿ । ನೇಱಿಲಮಾನಿ

39. ಜಟ್ಟನಹಳ್ಳಿ । ಗೊರಟಿನಹಳ್ಳ । ಬಲುಗಣಿ । ಒಂದಾನೆ । ಯೀ ಪೊಂಭತ್ತು ಗ್ರಾಮಂಗಳನೂ ಪೂರ್ವ್ವ ಚತುಸ್ಸೀಮೆಯಿಂದೊಳಗಾದ ಸರ್ವ್ವಾಂಗೋಡು ಸಹವಾದ ಭೂಮಿಗಳಿಗೆ ಚತುರ್ಗ್ಗಡಿಯಲ್ಲಿ ಮುಕೊಡ್ಡೆಯ

40. ಕಲ್ಲ ನೆಡಿಸಿ ಸಹಿ ರಣ್ಯೋದಕದಾನಧಾರಾಪೂರ್ವ್ವಕವಾಗಿ ಧಾರೆಯ ನೆಱದು ಕೊಟ್ಟೆವಾಗಿ ಆ ಧರ್ಮ್ಮಸ್ಥಲಂಗಳಲ್ಲಿ ಹುಟ್ಟುವ ಆದಾಯದ ವಿವರ । ಸೋವಿನಕೊಪ್ಪದಿಂದ ಸಿದ್ಧಾಯ ಗ 14 F1 । ಬಿರಾಡ ಗ 9॥ 4

41. ಕುಳಬಡ್ಡಿ ಗ 1 ॥ 1 ಚಿಲುವಾನ ಉಪೋತ್ತರ ಗ 6 F 3 ॥। ಅಂತು ಗ 32 ಹಾದರಿಮಾನಿಯಿಂದ ಸಿದ್ಧಾಯ ಗ 9 ಬಿರಾಡ ಗ 6 F 3 ಕುಳಬಡ್ಡಿ ಗ 9 ಚಿಲುವ್ಹಾನ ಉಪೋತ್ತರ ಕಡ್ಡಾಯದ ಭತ್ತ ಕ್ರಯ ಸಹ ಗ 7 ॥ 2 ಅಂ–

42 ತು ಗ 32 ಮಳಿಗೆಕಯ್ಯಿಂದ ಸಿದ್ಧಾಯ ಗ 22॥2॥। = ಬಿರಾಡ ಗ 15॥4॥। ಉಪೋತ್ತರ ಗ 2॥3। ವರ್ತ್ತನೆ ಗ 1॥4 = ಅಂತು 43॥0ಕ್ಕೆ ತಿಂಮಾದೇವಿಯುಂಮುಸವರ ಬಸ್ತಿಗೆ ಪೂರ್ವ್ವದಲ್ಲಿ ಬಿಟ್ಟ ಧರ್ಮಕ್ಕೆ ಗ3

43 ನುಳಿದು [ದು] ಗ 40 ।।0 ಕೊಱತಾರಿಯಿಂದ ಕಟ್ಟುಗುತ್ತಿಗೆ ಗ24 ನೇಱಿಲಮಾನಿಯಿಂದ ಸಿದ್ಧಾಯ ಗ 81॥1 ≡ ಬಿರಾಡ ಗ 57 F॥ ≡ಉಪೋತ್ತರ ಗ 11॥4 = ಕುಳಬಡ್ಡಿ ಗ 3॥೦ 1– ವರ್ತನೆ ಗ 17॥2। –

44 ಅಂತು ಗ 171 ॥3॥ ≡ ಜಟ್ಟನಹಳ್ಳಿಯಿಂದ ಸಿದ್ಧಾಯ ಗ 90॥3॥।–ಕಟ್ಟು ಗುತ್ತಿಗೆ 29F1॥ = ಬಿರಾಡ ಗ 18F1॥– ವರ್ತ್ತನೆ ಗ 4 ॥0॥ ಅಂತು ಗ 142 ॥2॥ ಅಂತು ಗ್ರಾಮ 6ಕ್ಕೆ ಸುವರ್ಣ್ಣದಾಯ

45 ಗ 443 F1 ≡ ಪೊಂದಾನೆಯಿಂದ ಭತ್ತ ಖ 200 ಗೊರಟಿನ ಹಳ್ಳ ದಿಂದ ಭತ್ತ ಖ 70 ಬಲುಗಣೆಯಿಂದ ಭತ್ತ ಖ 30 ಅಂತು ಗ್ರಾಮ 3ಕ್ಕೆ ಭತ್ತ ಖ 300 ಉಭಯಂ ಗ್ರಾಮ 9ಕ್ಕೆ ಗ 443 F1 ≡ ಭತ್ತ ಖ

46 300 ಕ್ಕೆ ನಡೆಸುವ ಧರ್ಮ್ಮದ ವಿವರ । ಮೊದಲ ಬಾಗಿಲ ನೇಮೀಶ್ವರರಿಗೆ ಸೋವಿನಕೊಪ್ಪದ ಗ 32ಕ್ಕೆ ವಿನಿಯೋಗ ಅಮೃತ ಪಡಿಗೆ ಗ 12 ಯೆರಡು ಹೊತ್ತಿನ ಕ್ಷೀರಾಭಿಷೇಕಕ್ಕೆ ಗ 6 ಅಲಂಕಾರ ದೀಪ್ತಿ 6 ಕ್ಕೆ ಯೆಂಣೆಗೆ

47 ಗ 6 ನಂದಾದೀಪ್ತಿ 1ಕ್ಕೆ ಗ 3 ಕಾರ್ತ್ತಿಕದಿನ 3ಕ್ಕೆ ಗ 0॥4 ಅಷ್ಟಾಹ್ನಿಕ 3 ಕ್ಕೆ ಗ 1F2 ಅಡಕೆಲೆಗೆ ಗ 1F2 ಫಲವಸ್ತು ಗ 1F2 ಗಂಧ ಧೂಪಕ್ಕೆ ಗ 0॥0 ಅಂತು ಗ 32 ಕಡೆಯ ಬಾಗಿಲ ವರ್ದ್ಧಮಾನ ತೀರ್ತ್ಥಂಕರರಿಗೆ

48 ಹಾದರಿವಾನಿಯ ಗ 32 ಕ್ಕೆ[1] ನಡೆಸುವ ವಿವರ। ಅಮೃತಪಡಿಗೆ ಗ 12ಯೆರಡು ಹೊತ್ತಿನ ಕ್ಷೀರಾಭಿಷೇಕಕ್ಕೆ ಗ 6 ಅಲಂಕಾರದೀಪ್ತಿ 6ಕ್ಕೆ ಗ 6 ನಂದಾದೀಪ್ತಿಗೆ 1ಕ್ಕೆ ಗ 3 ಕಾರ್ತ್ತಿಕದಿನ 3ಕ್ಕೆ ಗ 0 ॥ 4 ಅಷ್ಟಾಹ್ನಿಕ 3 ಕ್ಕೆ ಗ

49 [೧] F2 ಫಲವಸ್ತು ಗ 1F2 ಅಡಕೆಲೆಗೆ ಗ 1F2 ಗಂಧಧೂಪಕ್ಕೆ ಗ ೦॥೦ ಅಂತು ಗ 32 ನಡುವಣ ಬಾಗಿಲ ಪಾರ್ಶ್ವತೀರ್ತ್ಥಂಕರರಿಗೆ। ಮಳಿಗೆಕಯಿ ಕೊಟಿತಾರಿ ಗ್ರಾಮ 2 ಱಿಂದ ಗ 64 ।।೦ ಕ್ಕೆ ನಡಸುವ ವಿವರ।

50 ನಿತ್ಯ ಪಂಚಾಮೃತಕ್ಕೆ ಗ 12 ರಾತ್ರಿಯ ಕ್ಷೀರಾಭಿಷೇಕಕ್ಕೆ ಗ 3 ಅಲಂಕಾರದೀಪ್ತಿ 12 ಕ್ಕೆ ಗ 12 ನಂದಾದೀಪ್ತಿ 2 ಕ್ಕೆ ಗ 6 ತತ್ಕಾಲ–ದೀಪ್ತಿಗೆ ಗ 2 ಅರ್ಚ್ಚನೆಗೆ ವರುಷ 1 ಕ್ಕೆ ತೆಂಗಿನಕಾಯಿ 360 ಕ್ಕೆ ಗ 3 ಅಡಕೆಗೆ ಗ 1॥೦

51 ಯೆಲೆಗೆ ಗ 1 ಫಲವಸ್ತು ಗ 1 ।।೦ ಗಂಧಧೂಪಕ್ಕೆ ಗ 1।।1 ತ್ರಿಬಲಿ ಸಂಬಂಧಕ್ಕೆ ಗ 12 ಪಂಚಕಲ್ಯಾಣಕ್ಕೆ ಗ 2।।೦ ಯುಗಾದಿಯ ಪೂಜೆಗೆ ಗ ೦।।೦ ಶ್ರುತ-ಪಂಚಮಿಯ ಪೂಜೆಗೆ ಗ ೦|।೦ ಜೀವದ–

52 ಯಾಷ್ಟಮಿಯ ಪೂಜೆಗೆ ಗ ೦॥೦ ದೀಪಾವಲಿಯ ಪೂಜೆಗೆ ಗ ೦॥೦ ಶಿವರಾತ್ರಿ ಪೂಜೆಗೆ ಗ ೦॥೦ ಕಾರ್ತ್ತಿಕದೀಪಾರಾಧನೆಗೆ ದಿನ 3 ಕ್ಕೆ ಗ 1।।೦ ಅಷ್ಟಾಹ್ನಿಕ 3ಕ್ಕೆ ಗ 2F4 ಅಂತು ಗ 64।। ಮತ್ತಂ

1. 'ಕ' ಅಕ್ಷರವನ್ನು ಸಾಲಿನ ಮೇಲ್ಭಾಗದಲ್ಲಿ ಸಣ್ಣದಾಗಿ ಕಂಡರಿಸಲಾಗಿದೆ.

53 ನೇಜಿಲವಾನಿ ಜಟ್ಟನಹಳ್ಳಿ ಗ್ರಾಮ 2ಕ್ಕೆ ಗ 314॥1 ≡ ಕ್ಕೆ ವೆಚ್ಚದ ವಿವರ ಮೊದಲ ಬಾಗಿಲ ನೇಮೀಶ್ವರರಿಗೆ ಪಂಚಕಲ್ಯಾಣಕ್ಕೆ ಗ 2॥೦ ಪಂಚಪರ್ವ್ವಕ್ಕೆ ಗ 1॥೦ ಕಡೆಯ ಬಾಗಿಲ ವರ್ಧ್ದಮಾನ ತೀರ್ತ್ಥಂಕರ–

54 ರ ಪಂಚಕಲ್ಯಾಣಕ್ಕೆ ಗ 2॥೦ ಪಂಚಪರ್ವ್ವಕ್ಕೆ ಗ 1॥೦ ನಡುವಣ ಬಾಗಿಲ ಪಾರ್ಶ್ವತೀರ್ಥಂಕರರ ಶ್ರೀಪಾದಮೂಲದಲ್ಲಿ ನಡೆಸುವ ಷೋಡಶಭಾವನೆಗೆ ದಿನ 1ಕ್ಕೆ ಗ 1॥೦ ಲೆಕ್ಕದಲ್ಲಿ ದಿನ 32ಕ್ಕೆ ಗ 48 ಕಡೆಯ

55 ಅಭಿಷೇಕಕೆ (ಕ್ಕೆ) ಗ 2 ಉಭಯಂ ಷೋಡಶಭಾವನೆಗೆ ಗ 50 ಪರಿಚಾರಕರ ಜನ 4 ಕ್ಕೆ ಗ 26 ವಾದ್ಯದವರ ಜನ 6ಕ್ಕೆ ಗ 42 ಭೋಗಪಾತ್ರದ ಜನ 10 ಕ್ಕೆ ಗ 150 ಚವರದವರ ಜನ 2 ಕ್ಕೆ ಗ 12 ಭಂಡಾರಿಗಳ

56 ಭೋಗಪಾತ್ರದವರ ಜನ ವಿವರ। ಡೊಳ್ಳಿನವರ ಜನ 2 ನಾಗಸರದ ಜನ 2 ಪಟಗದ ಜನ 1 ತಾಳದ ಜನ 1 ಅಂತು ಜನ 6। ನಟ್ಟುವನ ಜನ 1 ತಾಳಧಾರಿ ಜನ 1 ಮದ್ದಳೆಯ ಜನ 2 ಸಂಗೀತದ ಜನ 1 ಶ್ರುತಿಯ

57 ಜನ 1 ಪಾತ್ರದ ಜನ 4 ಅಂತು ಜನ 10 ಉಭಯಂ ಜನ 16 [1*] ಯೀ ಧರ್ಮ್ಮಗಳನು ಅಧ್ಯಕ್ಷವಾಗಿ ವಿಚಾರಿಸುವ ಶ್ರೀಮದ್ಭಟ್ಟಾಕಲಂಕ-ದೇವರುಗಳ ಶಿಷ್ಯಪರಂಪರಂಪರೆಯಾದ ಸಮುದಾಯದ ತಂ-

58 ಡ 2 ಱ ಆಹಾರದಾನಕ್ಕೆ ಗ 24 ಆ ತಂಡ 2 ಱ ಶೀತನಿವಾರಣದ ಹೆಚ್ಚಡ 2 ಕ್ಕೆ ಗ 2॥1≡ ಅಂತು ಗ 314॥1≡ ಅಂತು ನಾನಾ ವೆಚ್ಚ ಗ 443 F1≡ ಭತ್ತ ಖ 200 ಕ್ಕೆ ವೆಚ್ಚದ ವಿವರ [1*] ಗೊರಟಿನ ಹಳ್ಳದಿಂದ

59 ಖ 70 ಬಲಿಗಣೆಯಿಂದ ಖ 30 ಉಭಯಂ ಭತ್ತ 100 ಕ್ಕೆ ನಡುವಣ ಬಾಗಿಲ ಪಾರ್ಶ್ವತೀರ್ತ್ಥಂಕರರ ಅಮೃತಪಡಿಗೆ ಖ 60 ಶ್ರೀಬಲಿ ಸಂಬಂಧಕ್ಕೆ ಖ 40 ಉಭಯಂ ಖ 100 ಬಂದಾನೆಯ

60 ಭತ್ತ ಖ 200 ಕ್ಕೆ ವೆಚ್ಚವಿವರ ಪರಿಚಾರಕರ ಜನ 4 ಕ್ಕೆ ಖ 80 ಭಂಡಾರಿಗಳ ಜನ 6 ಕ್ಕೆ ಭತ್ತ ಖ 120 ಉಭಯಂ ಖ 200 ಅಂತು ನಾನಾ ವೆಚ್ಚಕ್ಕೆ ಭತ್ತ ಖ 300 ಅಂತು ಮೊದಲ ಬಾಗಿಲ ನೇಮೀಶ್ವರರಿಗೆ

61 ಗ 36 ಕಡೆಯ ಬಾಗಿಲ ವರ್ಧಮಾನ ತೀರ್ಥಂ (ರ್ತ್ಥಂ)ಕರರಿಗೆ ಗ 36 ನಡುವಣ ಬಾಗಿಲ ಪಾರ್ಶ್ವತೀರ್ತ್ಥಂಕರರಿಗೆ ಗ 371Fl ≡ ಭತ್ತ ಖ 300 ಅಂತು ನಾನಾ ವಿನಿಯೋಗಕ್ಕೆ ಗ 443 Fl ≡ ಭತ್ತ ಖ 300 ನಾನೂ–

62 ಱ ನಾಲ್ವತ್ತುಮೂಱು ವರಹನೂ ವೊಂದು ಹಣವು ಮೂಱು ವೀಸ। ಮೂನೂಱು ಖಂಡುಗ ಭತ್ತದ ಕ್ಷೇತ್ರಂಗಳನೂ ಬಿಳಿಗೆಯ ವೀರ ಪ್ರೊಡೆಯರ ಕುಮಾರರಾದ ರಂಗಪ್ಪರಾಜೊಡೆಯರ ಕುಮಾರ–

63 ರು ಶ್ರೀಮನ್ಮಹಾಪ್ರಭು ಘಂಟೊಡೆಯರು ನಮಗೆ ಸಕಲಾಭ್ಯುದಯ ನಿಶ್ರೇಯಸ ಸುಖಪ್ರಾಪ್ತಿ ನಿಮಿತ್ತವಾಗಿ ನಾವು ನಂಮ ಸ್ತ್ರೀಪುತ್ರ ಜ್ಞಾತಿದಾಯಾದ ಸಾಮಂತಾದ್ಯನುಮತಿಯಿಂದ ಸರ್ವ್ವಮಾನ್ಯ—

64 ವಾಗಿ ಸರ್ವ್ವಬಾಧಾ ಪರಿಹಾರವಾಗಿ ದಾನಾದಿ ವಿನಿಮಯ ವಿಕ್ರಯ ಯೋಗ್ಯವಾಗಿ ಕುಳಖಂಡಿತವ ಮಾಡಿ ಸಹಿರಣ್ಯೋದಕದಾನಧಾರಾ ಪೂರ್ವ್ವಕವಾಗಿ ಧಾರೆಯನೆಱದು ಸಮರ್ಪ್ಪಿಸಿ ಬಿಟ್ಟುಕೊ-

65 ಟ್ಟ ಧರ್ಮ್ಮಶಾಸನಕ್ಕೆ ಸಾಕ್ಷಿಗಳು। ಆದಿತ್ಯ ಚಂದ್ರಾವನಿಲೋಯ ಮಶ್ಚ[1] ದ್ಯೌರ್ಬ್ಭೂರ್ಮಿರಾಪೋ ಹೃದಯಂ ಯಮಶ್ಚ। ಅಹಶ್ಚ ರಾತ್ರಿಶ್ಚ ಉಭೇಚ ಸಂಧ್ಯೇ ಧರ್ಮ್ಮಶ್ಚ ಜಾನಾತಿ ನರಸ್ಯ ನೃ (ವೃ) ತ್ತಂ॥ [೨೮*]

66 ದಾನಪಾಲನಯೋರ್ಮ್ಮಧ್ಯೇ ದಾನಾಚ್ಛ್ರೇಯೋನುಪಾಲನಂ [1*] ದಾನಾತ್ಸ್ವರ್ಗ್ಗಮ ವಾಪ್ನೋತಿ ಪಾಲನಾದಚ್ಯುತಂ ಪದಂ॥ [೨೯*] ಸ್ವದತ್ತಾ ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಾತ್। ಪರದತ್ತಾಪ ಹಾರೇಣ ಸ್ವ–

67 ದತ್ತಂ ನಿಷ್ಫಲಂ ಭವೇತ್॥ [೩೦*] ಸ್ವದತ್ತಾಂ ಪರದತ್ತಾಂ ವಾ ಯೋ ಹರೇಜ್ಜ ವಸುಂಧರಾಂ। ಷಷ್ಟಿರ್ವ್ವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ॥ [೩೧*] ಯೀ ಧರ್ಮ್ಮಕ್ಕೆ ಆರೊಬ್ಬರು ತಪ್ಪಿದವರು ಜೈನರಾದರೆ ಉ-

1 'ಯಮ' ಅಕ್ಷರಗಳ ಮೇಲ್ಭಾಗದಲ್ಲಿ 'ನಲ' ಅಕ್ಷರಗಳನ್ನು ಬರೆಯಲಾಗಿದೆ. ನಿಜವಾಗಿ 'ನಲ' ಪಾಠವೇ ಸರಿಯಾದ ಪಾಠ. '(ಅ) ನಲ' ಎಂದರೆ ಅಗ್ನಿದೇವತೆ. ಸಂಧಿಯಾಗಿ 'ಅ' ಅಕ್ಷರ ಲೋಪವಾಗುತ್ತದೆ.

68 ಜ್ಜಂತಗಿರಿ ಸಂಮೇದಗಿರಿ ಬೆಳುಗುಳ ಮೊದಲಾದ ಮಹಾಸ್ಥಾನಂಗಳಲ್ಲಿ ಸಹಸ್ರ ಜಿನಬಿಂಬಗಳ ಭಿನ್ನವ ಮಾಡಿ ಸಹಸ್ರ ರುಷಿಯರ ವಧಿಸಿದ ಪಾತಕಕ್ಕೆ ಹೋಹರು। ಶೈವ ವೈಷ್ಣವರಾದರೆ

69 ಕಾಶೀ ರಾಮೇಶ್ವರ ಗೋಕರ್ಣ್ಣ ತಿರುಪತಿ ಶ್ರೀಪರ್ವ್ವತ ಮುಂತಾದ ಪುಣ್ಯಕ್ಷೇತ್ರಂಗಳಲ್ಲಿ ಸಹಸ್ರ ಗೋಬ್ರಾಹ್ಮಣ ವಧೆಯ ಮಾಡಿದ ಪಾತಕಕ್ಕೆ ಹೋಹರು। ಯೀ ಧರ್ಮ್ಮವನು ಪ್ರತಿಪಾಲಿಸಿದ ಸತ್ಪು-

70 ರುಷರು ಅಭ್ಯುದಯ ನಿಶ್ರೇಯಸ ಸುಖಪ್ರಾಪ್ತಿಯಂನೆಯ್ದುವರು। ಮಂಗಲ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ। ಲ॥ ಶ್ರೀ ಪಾರ್ಶ್ವನಾಥ ಪಾದಾಬ್ಜ ಪೂಜಾದ್ರವ್ಯ ಕ್ರಮಾಂಚಿತಂ। ಸ್ಥೇಯಾದಾಚಂದ್ರ ತಾ-

71 ರಾರ್ಕ್ಕಂ ನವಗ್ರಾಮಾನುಶಾಸನಂ [೩೨*] ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ 1515ನೆಯ ನಂದನ ಸಂವತ್ಸರದ ಪ್ರಥಮಾಷಾಢ ಶು 10 ಶುಕ್ರವಾರದಲೂ ಶ್ರೀಮನ್ಮಹಾಪ್ರ—

72 [ಭು] ಬಳಿಗೆಯ [ವೀ] ರಪ್ಪೊಡೆಯರ ಕುಮಾರರಾದ ರಂಗಪ್ಪ ರಾಜೊಡೆಯರ ಕುಮಾರರು ಘಂಟೊಡೆಯರು ನಮಗೆ ಅಭ್ಯುದಯ ನಿಶ್ರೇಯಸ ಸುಖ ಪ್ರಾಪ್ತಿನಿಮಿತ್ತವಾಗಿ ನಂಮ ರಾ-

73 ಣಿವಾಸ ಅರಸಪ್ಪನಾಯಕರ ಮಗಳು ರಾಮಾದೇವಿ ಕಟ್ಟಿಸಿದ ಗಂಧಕುಟಿಯ ಬಸ್ತಿಯ ಶಾಂತೀಶ್ವರರ ನಿತ್ಯನೈಮಿತ್ತಿಕ ಮುಂತಾದ ಶ್ರೀಕಾರ್ಯ್ಯಕೆ ಚಿಕ್ಕ ಅಯಿವತ್ತಳಿಗೆಯ ನಾಡಿಗೆ ಸಲುವ

74 ಕುಂಬಾಣಿಕುಳಿಯ ಗ್ರಾಮದೊಳಗೆ ಮಾಗದಬಯಲ ಸರುವಿನಲ್ಲಿ ಸರ್ವ್ವಾದಾಯ ಗ 12 ಹಂನೆರಡು ವರಹನ ಗದ್ದೆಯನು ಆ ಗದ್ದೆಗೆ ಬಂಡ ಸರ್ವ್ವಾಂಗೋಡು ಸಹಿತವಾದ ಭೂಮಿ ಸಹಜತು

75 ಸ್ಸೀಮೆಯಲ್ಲಿ ಮುಕ್ಕೊಡೆಯ ಕಲ್ಲ ನೆಡಿಸಿ ಸರ್ವ್ವಮಾನ್ಯವಾಗಿ ಸಹಿರಣ್ಯೋದಕ ದಾನಧಾರಾ ಪೂರ್ವ್ವಕವಾಗಿ ಧಾರೆಯಂನೆರದು ಕುಳಖಂಡಿತವ ಮಾಡಿ ಸಮರ್ಪ್ಪಿಸಿ ಬಿಟ್ಟು ಕೊಟ್ಟೆವು ಯೆಂ—

76 ದು ಕೊಟ್ಟ ಧರ್ಮ್ಮಶಾಸನಕ್ಕೆ ಮಂಗಲ ಮಹಾಶ್ರೀ ಶ್ರೀ ಶ್ರೀ ಶ್ರೀ ಶ್ರೀ॥ ತಥಾ ತಿಥಿಯಲ್ಲೂ ಘಂಟೊಡೆಯರು ಕೊಟ್ಟ ಧರ್ಮ್ಮಶಾಸನದ ಕ್ರಮವೆಂತೆಂದರೆ [।*] ನಂಮ ಅಪ್ಪಾಜಿ ರಂಗಪ್ಪರಾಜೊಡೆಯರು ಬಸ—

77 ವ [ಕ್ಕನ] ವರ ಮಗ ನರ [ಸಪ್ಪ] ಂಣಗೆ ವುಂಬಳಿಯಾಗಿ ನಡಸಿ ಬರು
ತಿದ್ದ ಹಳೆಯ ಬಿಳಿಗೆಯ ಕೆಱೆಯ ಕೆಳಗೆ ಸುತ್ತಯೆತ್ತಿದ ಅಗಳಿಂದೊಳ
ಗಾದ ಕೊಪ್ಪಲ ಸಿದ್ಧಾಯ ಗ 1ғ4 ಹದಿನಾಲ್ಕು ಹಣ

78 ಸಿದ್ಧಾಯುದ ಕೊಪ್ಪಲನು ವೊದಲ ಬಾಗಿಲ ನೇಮೀಶ್ವರ ಪಾದ
ಮೂಲದಲ್ಲಿ ಆ ನರಸಪ್ಪಂಣನ ಹೆಸರಲ್ಲಿ ನಿತ್ಯದಲ್ಲಿ ನಡಸುವ ಕ್ಷೀರಾಭಿ
ಷೇಕಕ್ಕೆ ಸಹಿರಣ್ಯೋದಕ ದಾನಧಾರಾಪೂರ್ವ್ವಕವಾಗಿ ಧಾ—

79 ರೆಯನೆಱೆದು ಕೊಟ್ಟೆವುಯೆಂದು ಕೊಟ್ಟ ಧರ್ಮ್ಮಶಾಸನಕ್ಕೆ ಮಂಗಲ
ಮಹಾಶ್ರೀ ಶ್ರೀ ಶ್ರೀ ಶ್ರೀ ಶ್ರೀ [11*]

ರಾಘವಾಂಕನಿಂದ ಪ್ರಭಾವಿತನಾದ ತೆಲುಗು ಕವಿ ಗೌರನ

ಬಿ.ಎಸ್. ಸುಬ್ಬರಾವ್, ಎನ್. ಭಕ್ತವತ್ಸಲರೆಡ್ಡಿ

ಕನ್ನಡ ಸಾಹಿತ್ಯದಲ್ಲಿ ರಾಘವಾಂಕನಿಗೆ ತನ್ನದೇ ಆದ ಸ್ಥಾನವಿದೆ. ಆತನ 'ಹರಿಶ್ಚಂದ್ರ ಕಾವ್ಯ' ಕನ್ನಡ ಸಾಹಿತ್ಯಕ್ಕೆ ಅಪೂರ್ವವಾಗಿರಲು ಅದರ ನಾಟಕೀಯ ಗುಣವೇ ಮುಖ್ಯ ಕಾರಣ. 'ಹರನೆಂಬುದೇ ಸತ್ಯ, ಸತ್ಯವೆಂಬುದೇ ಹರನು' ಎನ್ನುವ ತನ್ನ ದರ್ಶನವನ್ನು ಪ್ರತಿಪಾದಿಸಲು ಹರಿಶ್ಚಂದ್ರ ಕಾವ್ಯ ರಚಿಸಿ, 'ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯಮಂ' ರಚಿಸಿದನೆಂದು ಹರಿಹರನ ದೂಷಣೆಗೆ ಗುರಿಯಾದರೂ ನಾಟಕೀಯತೆ, ವರ್ಣನೆ, ಅಪೂರ್ವ ಪಾತ್ರಸೃಷ್ಟಿಗಳಿಂದ ಹರಿಶ್ಚಂದ್ರ ಕಾವ್ಯ ಜನಪ್ರಿಯವಾಗಿದೆ. ಮುಂದಿನ ಕನ್ನಡ ಕವಿಗಳ ಮೇಲೆ ಮಾತ್ರವಲ್ಲದೆ ಇತರ ಭಾಷಾಕವಿಗಳ ಮೇಲೂ ತನ್ನ ಪ್ರಭಾವ ಮುದ್ರೆ ಒತ್ತಿರುವುದು ರಾಘವಾಂಕನ ಪ್ರತಿಭೆಗೆ ಸಾಕ್ಷಿ. ಈ ರೀತಿ ಪ್ರಭಾವಿತರಾದ ಕವಿಗಳಲ್ಲಿ 15 ನೇ ಶತಮಾನದ ತೆಲುಗು ಕವಿ 'ಗೌರನ' ಒಬ್ಬ.

ರಾಘವಾಂಕನ ಕಾಲ ನಿರ್ಣಯದಲ್ಲಿ ಒಮ್ಮತವಿಲ್ಲದಿರುವಂತೆ ಗೌರನನ ಕಾಲ ವಿಚಾರದಲ್ಲೂ ಭಿನ್ನಾಭಿಪ್ರಾಯಗಳಿವೆ. ಆದರೂ ಇತ್ತೀಚಿನ ತೀರ್ಮಾನಗಳಂತೆ ಆತನ ಕಾಲ ಕ್ರಿ. ಶ. 1380–1455.[1] ಈತನ ತಂದೆ ಅಯ್ಯಲು ಮಂತ್ರಿ ; ದೊಡ್ಡಪ್ಪ ಪೋತನ್ನ. ಪೋತನ್ನ, 'ದೇವರ ಕೊಂಡ'ವನ್ನು ಕ್ರಿ. ಶ. 1361 ರಿಂದ 1384 ರ ವರೆಗೆ ಆಳಿದ ಮಾದಾನಾಯಕನಲ್ಲಿ ಪ್ರಸಿದ್ಧ ಅಮಾತ್ಯ.[2] ಮಂತ್ರಿಯ ಮಗನಾಗಿ ರಾಜಕೀಯಕ್ಕಿಂತ ಸಾಹಿತ್ಯದಲ್ಲಿ ತನಗೆ ಆಸಕ್ತಿಯೆಂದು ಹೇಳಿಕೊಂಡಿದ್ದಾನೆ. ತನ್ನನ್ನು 'ಕವಿತ್ವ ಸುಮಹಿತ ಸಾಮ್ರಾಜ್ಯ ಸುಖ ಪರಾಯಣು'[3] –ಎಂದು ಕರೆದುಕೊಂಡಿದ್ದಾನೆ. ಈತನಿಗೆ "ಚತುರ ಸಾಹಿತ್ಯ ಲಕ್ಷಣ ಚಕ್ರವರ್ತಿ", "ಪ್ರತಿವಾದಿ ಮದಗಜ ಪಂಚಾನು" ಎನ್ನುವ ಬಿರುದುಗಳಿದ್ದವು. ಈತನು ರಚಿಸಿದ ಕೃತಿಗಳು ಮೂರು–1) ಲಕ್ಷಣ ದೀಪಿಕ, 2) ನವನಾಥ ಚಾರಿತ್ರ, 3) ಹರಿಶ್ಚಂದ್ರೋಪಾಖ್ಯಾನಮು. ಲಕ್ಷಣ ದೀಪಿಕ ಲಕ್ಷಣ ಗ್ರಂಥ. ಹರಿಶ್ಚಂದ್ರೋಪಾಖ್ಯಾನಮು ಮತ್ತು ನವನಾಥ ಚರಿತ್ರ– ಇವು ದೇಶೀಯ ಛಂದಸ್ಸಾದ ದ್ವಿಪದಿಯಲ್ಲಿ ರಚಿತವಾಗಿವೆ. ಹರಿಶ್ಚಂದ್ರಕತೆಯನ್ನು ತೆಗೆದುಕೊಂಡು ತೆಲುಗಿನಲ್ಲಿ ಕಾವ್ಯರಚಿಸಿದವರಲ್ಲಿ ಗೌರನ ಮೊದಲಿಗ.

---

1. ಹರಿಶ್ಚಂದ್ರೋಪಾಖ್ಯಾನಮು. ಪುಟ. 7
2. ಸಮಗ್ರ ಆಂಧ್ರ ಸಾಹಿತ್ಯ. ಪುಟ 58.
3. ಹರಿಶ್ಚಂದ್ರೋಪಾಖ್ಯಾನಮು. ಉತ್ತರ ಭಾಗಮು. 2911 ಸಾಲು.

ಹರಿಶ್ಚಂದ್ರ ಕತೆಯನ್ನು ಪುರಾಣ ಮುಂತಾದ ಆಕರಗಳಿಂದ ಸ್ವೀಕರಿಸಿ ಕಾವ್ಯವೊಂದನ್ನು ಅತಿ ಆಕರ್ಷಣೀಯವಾಗಿ ರಚಿಸಿದ ಗೌರವ ಕನ್ನಡದ ರಾಘವಾಂಕನಿಗೆ ಸಲ್ಲುತ್ತದೆ. ಇವನ ಕಾವ್ಯ ಮಾರ್ಗ ಅನುಸರಿಸಿ ದ್ರಾವಿಡ ಭಾಷೆಗಳಲ್ಲಿ ಇತರರು ಕಾವ್ಯ ರಚನೆ ಮಾಡಿ ಹರಿಶ್ಚಂದ್ರನ ಕತೆ ಜನಪ್ರಿಯವಾಗುವಂತೆ ಆಗಲು ಕಾರಣಕರ್ತರಾಗಿದ್ದಾರೆ. ಸ್ಕಾಂದ ಪುರಾಣ, ಮಾರ್ಕಂಡೇಯ ಪುರಾಣ, ಚಂಡ ಕೌಶಿಕ ನಾಟಕ, ದೇವೀ ಭಾಗವತಗಳಲ್ಲಿ ಬರುವ ಹರಿಶ್ಚಂದ್ರ ಕತೆಯನ್ನಾಧರಿಸಿ ಕಾವ್ಯವಾಗಿ ರಾಘವಾಂಕ ಬರೆದ. ತೆಲುಗು, ತಮಿಳು ಭಾಷೆಗಳಲ್ಲಿ ಬರೆಯಲಾಗಿರುವ ಹರಿಶ್ಚಂದ್ರ ಕಾವ್ಯಗಳು ರಾಘವಾಂಕನ ಪ್ರಭಾವಕ್ಕೆ ಒಳಗಾಗಿರುವುದು, ಅವರು ಅನುಸರಿಸಿರುವ ಕಥಾ ನಿರೂಪಣಾ ವಿಧಾನ, ವರ್ಣನೆಗಳ ಯಥಾ ನಿರೂಪಣೆ, ಪಾತ್ರಗಳ ಸೃಷ್ಟಿ (ಉದಾ : ನಕ್ಷತ್ರಿಕ) ಗಳಲ್ಲಿ ಕಂಡು ಬರುವ ಸಾಮ್ಯಗಳ ಆಧಾರದ ಮೇಲೆ ಹೇಳಬಹುದು. ರಾಘವಾಂಕನ ಪ್ರಭಾವ ತೆಲುಗಿನ ಮೇಲಾಗಿರುವುದನ್ನು ಪ್ರಸ್ತಾಪಿಸುತ್ತ ಡಾ।। ತಿಮ್ಮಾವಝ್ಝಲ ಕೋದಂಡರಾಮಯ್ಯನವರು- "ತೆಲುಗಿನಲ್ಲಿ ಮಾತ್ರವಲ್ಲ, ತಮಿಳಿನಲ್ಲಿಯೂ ಕೂಡ ಕನ್ನಡ ಕಾವ್ಯವನ್ನೇ (ರಾಘವಾಂಕ ಕೃತ ಹರಿಶ್ಚಂದ್ರ ಕಾವ್ಯ) ಅನುಸರಿಸಲಾಗಿದೆ."[4] ಎಂದಿದ್ದಾರೆ. ಅಲ್ಲದೆ ನಕ್ಷತ್ರಿಕನ ಪಾತ್ರಸೃಷ್ಟಿ ರಾಘವಾಂಕನ ಸ್ವಂತ ಕಲ್ಪನೆ ಎಂದು ಕೂಡ ಹೇಳಿದ್ದಾರೆ. ಇದೇ ಅಭಿಪ್ರಾಯವನ್ನು ಪ್ರೊ. ಟಿ. ಪಿ. ಮೀನಾಕ್ಷಿಸುಂದರಂರವರು ಕೊಡುತ್ತಾ – "The Harischandra puranam in Tamil of a later date should have followed the Kannada story. There is an earlier work called Harischandra Venpā in Tamil and though the author of Hariscantira Puranam in Tamil refers to this Venpā (ವೆಣ್ಬಾ), unfortunately the whole of this Venpā is not available. It is possible that it also for the first time was influenced by Raghavanka at the time of Hoysala intervention in Tamil history."[5]– ಎಂದಿದ್ದಾರೆ. ತಮಿಳಿನಲ್ಲಿ ಕಂಡುಬರುವ ಮೊದಲ 'ಅರಿಚ್ಚಂದಿರ ಪುರಾಣಂ' ಎನ್ನುವುದು 16ನೇ ಶತಮಾನದ 'ವೀರ ಕವಿರಾಯರ್' ಕವಿಯಿಂದ ರಚಿತವಾಗಿರುವುದು. ಮಲೆಯಾಳಂ ಸಾಹಿತ್ಯ ಆರಂಭವಾದುದೇ ಈ ಕಾಲದಲ್ಲಿ. ಮಲೆಯಾಳಂನಲ್ಲಿ ಮೊದಲು 'ಆಟ್ಟುಕಥೈ' ಮುಂತಾದ ನಾಟಕ ರೂಪಗಳಲ್ಲಿ ಹರಿಶ್ಚಂದ್ರ ಕತೆ ಬಂದರೂ ಕಾವ್ಯರೂಪದಲ್ಲಿ ರಚಿತವಾಗಿರುವುದು ಅನಂತರವೇ.

4. ತೆಲುಗುಲೋ ಹರಿಶ್ಚಂದ್ರ ಕಥ - ಪು. 74.

5. Tamil and other Cultures. P. 144.

ಆದ್ದರಿಂದ ಹರಿಶ್ಚಂದ್ರ ಕತೆಯನ್ನು ದ್ರಾವಿಡ ಭಾಷೆಗಳಲ್ಲಿ ಕಾವ್ಯವಾಗಿ ರಚಿಸಿದವನು ರಾಘವಾಂಕನೇ.

'ರಾಘವಾಂಕ ತೆಲುಗು ದೇಶದ ಓರುಗಲ್‌ಗೆ ಬಂದು ಕಾಕತೀಯ ವಂಶದ ಪ್ರತಾಪರುದ್ರನ ಆಸ್ಥಾನದಲ್ಲಿ 'ವಿಾಸಲುಗವಿತೆ' ರಚಿಸಿ, ಏಕ, ದ್ವಿ ಮತ್ತು ತ್ರಿ-ದಂಡಿಗಳನ್ನು ಸೋಲಿಸಿದ'[6] ಎನ್ನುವ ಮಾತನ್ನು ಆಧರಿಸಿ ಹೇಳುವುದಾದರೆ ರಾಘವಾಂಕನ ವ್ಯಕ್ತಿ ಮತ್ತು ಕೃತಿಗಳ ಪರಿಚಯ ತೆಲುಗರಿಗಿತ್ತು ಎಂದು ಅರ್ಥವಾಗುತ್ತದೆ.

ರಾಘವಾಂಕ ಕನ್ನಡ ದೇಶೀಯ ಛಂದಸ್ಸಾದ ಷಟ್ಪದಿಯನ್ನು ಕಾವ್ಯ ರಚನಾ ಮಾಧ್ಯಮವಾಗಿ ಬಳಸಿದ ಪ್ರಥಮ ಕವಿ. ಹಾಗೆಯೇ ಗೌರನ ದೇಶೀಯ ಛಂದಸ್ಸಾದ ದ್ವಿಪದಿಯನ್ನು ಸಮರ್ಥವಾಗಿ ಬಳಸಿ ಜನ ಸಾಮಾನ್ಯರಿಗೂ ಕಾವ್ಯ ತಲುಪಿದ ಕವಿ. ದ್ವಿಪದ ಕಾವ್ಯಗಳಲ್ಲಿ ಈತನ ಕೃತಿಗೆ ಮಿಗಿಲಾದ ಗೌರವವಿದೆ. ಆತನ ಶೈಲಿಯನ್ನು ಕುರಿತು ಡಾ॥ ಜಿ. ನಾಗಯ್ಯ– "ಗೌರನನ ಶೈಲಿಯಲ್ಲಿ ಮುಖ್ಯವಾದ ವಿಶೇಷವೊಂದಿದೆ. ಆತ ಉಪಯೋಗಿಸುವ ಪದಜಾಲ ಭಾವಾನುಸಾರವಾಗಿದ್ದು ಕೇವಲ ಶಬ್ದಧ್ವನಿಗಳ ಮುಖಾಂತರವೇ ಆಯಾ ಭಾವನೆಗಳನ್ನು ಸ್ಫುರಿಸುವ ಶಿಲ್ಪದೊಂದಿಗೆ ಕೂಡಿರುತ್ತದೆ"[7] ಎಂದು ಹೇಳಿದ್ದಾರೆ.

ಗೌರನ ಶೈವ ಕವಿಯಾದ್ದರಿಂದ ಶಿವ ಮಾಹಾತ್ಮ್ಯವನ್ನು ಎತ್ತಿ ಹಿಡಿಯುವ ಹರಿಶ್ಚಂದ್ರೋಪಾಖ್ಯಾನವನ್ನು ರಚಿಸಿರಬೇಕು.

ಕಥಾರಂಭ ರಾಘವಾಂಕ-ಗೌರನರಲ್ಲಿ ಒಂದೇ ರೀತಿಯಿದೆ. ರಾಘವಾಂಕ ದೇವತಾಸ್ತುತಿ, ಸ್ವಸಾಮರ್ಥ್ಯ ವರ್ಣನೆ, ಕುಕವಿನಿಂದನೆಯಾನಂತರ ನೇರವಾಗಿ ವಿಶ್ವಾಮಿತ್ರ–ವಶಿಷ್ಠರು ಇಂದ್ರ ಸಭೆಯಲ್ಲಿ ವಾಗ್ವಾದ ನಡೆಸುವ ಸಂದರ್ಭದೊಂದಿಗೆ ಕತೆ ಆರಂಭಿಸುತ್ತಾನೆ. 'ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು' ಎಂದು ರಾಘವಾಂಕ ಹರಿಶ್ಚಂದ್ರನ ಅಸಹಾಯ ಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಶಬ್ದದಲ್ಲಿ ಹಿಡಿದಿದ್ದಾನೆ. ಇಂದ್ರ ಸಭೆಯಲ್ಲಿ ವಶಿಷ್ಠ–"ಹರಿಶ್ಚಂದ್ರ ಅಸತ್ಯವಾಡಿದಲ್ಲಿ ಶ್ರುತಮತ ಕುಲಾಚಾರ, ಧರ್ಮಮಾರ್ಗ, ಮಹಾವ್ರತಾನುಷ್ಠಾನಗಳನ್ನು ಬಿಟ್ಟು ದಿಗಂಬರನಾಗಿ, ನರಕಪಾಲದಲ್ಲಿ ಹೆಂಡ ಕುಡಿಯುತ್ತಾ ದಕ್ಷಿಣಾಭಿಮುಖವಾಗಿ ಹೋಗುವೆನು"[8] ಎಂದು ಪ್ರತಿಜ್ಞೆ ಮಾಡುವನು.

---

6. ಕವಿ ಚರಿತೆ. I. P. 235, 236.
7. ದ್ವಿಪದ ವಾಙ್ಮಯಮು, ಪುಟ 401
8. ಹರಿಶ್ಚಂದ್ರ ಕಾವ್ಯ. ದ್ವಿತೀಯ ಸ್ಥಲ ಪದ್ಯ. 22

ಗೌರನ ಕಾವ್ಯ ಪ್ರಾರಂಭದಲ್ಲಿ ಸಾಂಪ್ರದಾಯಿಕ ದೇವತಾಸ್ತುತಿ, ಸ್ವಪ್ರಶಂಸೆ, ಕುಕವಿನಿಂದೆಗಳಾದ ಮೇಲೆ ಹರಿಶ್ಚಂದ್ರನ ಗುಣ, ಪುರ, ರಾಜ್ಯಭಾರ ವಿವರಣೆಗಳ ಸವಿವರವಾದ ಪರಿಚಯ ಮಾಡಿಕೊಟ್ಟನಂತರ ಇಂದ್ರಸಭೆಯಿಂದ ಕಥಾರಂಭ ಮಾಡು ವನು. ಇಂದ್ರಸಭೆಯಲ್ಲಿ ವಶಿಷ್ಠ-"ಬ್ರಾಹ್ಮಣ್ಯ ಬಿಟ್ಟು, ತಪವನ್ನು ವೇದಶಾಸ್ತ್ರ ಗಳನ್ನು ಮರೆತು, ಜಪಸಂಧ್ಯಾದಿ ಸತ್ಕ್ರಿಯೆಗಳು ಕ್ಷೀಣಿಸಿ, ವ್ಯಸನಾಸಕ್ತನಾಗಿ ಆಧ್ಯಾತ್ಮ ವಾಸನೆಬಿಟ್ಟು ಕತ್ತೆಯನ್ನೇರಿ ಕಪಾಲದಲ್ಲಿ ಮದ್ಯ ಕುಡಿಯುತ್ತ ದಕ್ಷಿಣಾಭಿ ಮುಖವಾಗಿ ಹೋಗುತ್ತೇನೆ, ಹರಿಶ್ಚಂದ್ರ ಅಸತ್ಯವಾಡಿದಲ್ಲಿ"[9] ಎನ್ನುವನು.

ಬೇಟೆಗೆ ಹೊರಟ ಹರಿಶ್ಚಂದ್ರನನ್ನು ವಶಿಷ್ಠ ಭೇಟಿ ಮಾಡಿದ ವಿಷಯ ಪುರಾಣಗಳಿಗಿಂತ ಭಿನ್ನವಾಗಿ ರಾಘವಾಂಕ ಗೌರನರಲ್ಲಿ ಮೊದಲ ಬಾರಿಗೆ ಕಾಣಿಸಿ ಕೊಳ್ಳುತ್ತದೆ. ಹರಿಶ್ಚಂದ್ರನನ್ನು ವಿಶ್ವಾಮಿತ್ರ ಯಾಗಧನ ಕೇಳುವ ಪ್ರಸಂಗ ಪುರಾಣಗಳಲ್ಲಿ ಬರುತ್ತದೆ. ಆದರೆ ಯಾಗಧನ ಕೇಳುವುದಕ್ಕೂ ರಾಜ್ಯದಾನ ಪರಿಗ್ರಹಿಸುವುದಕ್ಕೂ ಮಧ್ಯೆ ಕಾಲಾವಕಾಶವಿಲ್ಲ. ರಾಘವಾಂಕ ಚಾರಿತ್ರ್ಯದಲ್ಲಿ ವಿಶ್ವಾಮಿತ್ರ ತನ್ನ ಜತೆಯಲ್ಲಿದ್ದ ಮುನಿಗಳನ್ನು, ಹರಿಶ್ಚಂದ್ರ ಸುವರ್ಣಯಾಗ ಮಾಡಿ ಬ್ರಾಹ್ಮಣರು ಕೇಳಿದ ದಕ್ಷಿಣೆ ಕೊಡುವಂತೆ ಕೇಳಲು ಪ್ರೇರೇಪಿಸುತ್ತಾನೆ. ಅವನ ಕಪಟವರಿಯದ ಮುನಿಗಳು ಅದರಂತೆಯೇ ಮಾಡುತ್ತಾರೆ. ಅನಂತರ ವಿಶ್ವಾ ಮಿತ್ರ ಬಂದು ತನ್ನ ಕೋರಿಕೆಯಾದ-''ಪಿರಿಯ ಕರಿಯಂ ಪೆಟ್ಟಿ ಕವಡೆಯಂ ಮಿಡಿ ದಡೆನಿತುದ್ದಂ ಪೋಪುದದರ ಸರಿಯೆನಿಸುವಷ್ಟು ಹೊಸ ಹೊನ್ನರಾಸಿಯನೀವುದು"- ಎನ್ನುವುದನ್ನು ಹರಿಶ್ಚಂದ್ರನ ಮುಂದಿಡುತ್ತಾನೆ. ಗೌರನನು ಹರಿಶ್ಚಂದ್ರ ಮುನಿ ಗಳಿಂದ ಪ್ರೇರಿತನಾಗಿ ಯಾಗ ಮಾಡಿ, ಸ್ವಯಂಬುದ್ಧಿಯಿಂದ ಭೂರಿದಕ್ಷಿಣೆಯನ್ನು ಕೊಡುವುದು ಕೇಳಿ-ಆನೆಯ ಮೇಲೆ ನಿಂತು ಕವಡೆ ಎಸೆದರೆ ಅದು ಹೋಗುವಷ್ಟು ಎತ್ತರದ ಚಿನ್ನದ ರಾಸಿ ಕೊಡು' ಎಂದು ಕೇಳುತ್ತಾನೆ.

ಸುವರ್ಣಯಾಗದ ನಂತರ ಬರುವ ವನವಿಹಾರವೂ ರಾಘವಾಂಕನ ಸ್ವಕಲ್ಪನೆ. ಕಥಾದೃಷ್ಟಿಯಿಂದ ಈ ಭಾಗ ಮುಖ್ಯವಲ್ಲದಿದ್ದರೂ ರಾಘವಾಂಕನ ಶೃಂಗಾರ ವರ್ಣನೆಗಾಗಿ ಮತ್ತು ವಿಶ್ವಾಮಿತ್ರನ ಹಠ ಪ್ರತಿಪಾದನೆಗಾಗಿ ಉತ್ತಮ ಅವಕಾಶ. ಇಲ್ಲಿ ಬರುವ ಬೇಟೆಯ ವರ್ಣನೆ ಸಹಜ ಸುಂದರವಾಗಿದೆ. ಮುಂದೆ ಬರುವ ಹೊಲತಿಯರು-ಹರಿಶ್ಚಂದ್ರನ ಸಂಭಾಷಣೆ ನಾಟಕದ ಅಂಕದಂತಿದೆ. ರಾಘವಾಂಕನ ಸಾಮಾಜಿಕ ಪ್ರಜ್ಞೆ ಹೊಲತಿಯರ ಬಾಯಲ್ಲಿ ಮೂಡಿಬಂದಿದೆ. 'ಮುನಿಗೆ ಹೊಲೆ ಯಾವುದು? ಅತಿಕೋಪ, ಬದ್ಧ ದ್ವೇಷ, ಅನಿಮಿತ್ತ ವೈರ; ಆದರಿಂದ ಹುಟ್ಟಿದ ಸ್ತ್ರೀಯರನ್ನು ಕವಿಯು ಹೊಲತಿಯರು ಅನಾವಿಕರು ಎಂದು ಕರೆಯುತ್ತಾನೆ'.[10]

---

9 ಹರಿಶ್ಚಂದ್ರೋಪಾಖ್ಯಾನಮು ಪಂಕ್ತಿ 276-286

10. ಮಹಾಕವಿ ರಾಘವಾಂಕ ಪುಟ. 182

ಹರಿಶ್ಚಂದ್ರನ ಸುಯುವುಚಿತ್ತತೆ, ತರ್ಕಸಾಮರ್ಥ್ಯ ಗಮನಾರ್ಹ. "ತರ್ಕ ಹೆಚ್ಚಾದಾಗ ಕಾವ್ಯಾಂಶ ಕಡಿಮೆಯಾಗುವುದು ಎಂತಹ ದೊಡ್ಡಕವಿಯ ಕಾವ್ಯದಲ್ಲಿಯೂ ಸಹ ಕಂಡ ಮಾತಾಗಿದೆ. ಆದರೆ ಹರಿಶ್ಚಂದ್ರ–ಹೊಲತಿಯರ ಸನ್ನಿವೇಶ ಈ ಸಾಮಾನ್ಯ ನಿಯಮಕ್ಕೆ ಅಪವಾದವಾಗಿದೆ. ಇಲ್ಲಿ ಕಾವ್ಯಕ್ಕೆ ಕೊರತೆಯಿಲ್ಲ; ತರ್ಕಕ್ಕೆ ಮಿತಿಯಿಲ್ಲ; ವಿಚಾರಕ್ಕೆ ಕೊನೆಯಿಲ್ಲ, ಎಲ್ಲವೂ ಪರಾಕಾಷ್ಠೆ ಮುಟ್ಟಿವೆ."[11] ಆದರೆ ಗೌರನ ಏಕೋ ಏನೋ ಈ ಪ್ರಸಂಗ ಬಳಸುವಲ್ಲಿ ಹೆಚ್ಚಿನ ಆಸಕ್ತಿ ತೋರಿಸಿಲ್ಲ.

ಲೋಕದಲ್ಲಿ ಅಸತ್ಯ, ಅನೀತಿ, ನೀಚವೃತ್ತಿ, ನಿರ್ದಾಕ್ಷಿಣ್ಯ, ನಿಷ್ಕರುಣೆ ಈ ಗುಣಗಳಿಗೆ ಹೆಸರುವಾಸಿಯಾದವನು ನಕ್ಷತ್ರಿಕ. ಎಡೆಬಿಡದೆ ಹಿಂಬಾಲಿಸಿ ಪೀಡಿಸುವ ವ್ಯಕ್ತಿಯನ್ನು ನಕ್ಷತ್ರಿಕನೆನ್ನುವಷ್ಟರಮಟ್ಟಿಗೆ ಆ ಪಾತ್ರದ ಪರಿಚಯ ಜನಗಳಿಗಿದೆ. ಇಂಥ ಪಾತ್ರದ ಸೃಷ್ಟಿಕರ್ತ ರಾಘವಾಂಕ. ಪುರಾಣಗಳಲ್ಲಿ ಹರಿಶ್ಚಂದ್ರ ರಾಜ್ಯದಾನ ಮಾಡಿ, ಸಾಲತೀರಿಸುವ ಗಡುವಿಗಿಂತ ಮೊದಲೇ ಕಾಶಿಗೆ ಬಂದಂತಿದೆ. ಅವುಗಳ ಆರಣ್ಯ ಪ್ರಯಾಣ, ನಕ್ಷತ್ರಕನ ಕಾಟವಾಗಲಿ, ದಾವಾಗ್ನಿ ಪ್ರಕರಣವಾಗಲಿ ಇಲ್ಲ. ಇದು ರಾಘವಾಂಕ–ಗೌರನರಲ್ಲಿ ಪ್ರಮುಖ ಭಾಗ. ಗೌರನ ಕೂಡ ನಕ್ಷತ್ರಕನ ಪಾತ್ರವನ್ನು ಕುಟಿಲತೆ, ಅನೀತಿ, ಕ್ರೂರತೆ ಮೂರ್ತೀಭವಿಸಿದ ವ್ಯಕ್ತಿಯನ್ನಾಗಿ, ಮಾರ್ದವತೆ ತಿಳಿಯದ ಮೂರ್ಖನನ್ನಾಗಿ ಚಿತ್ರಿಸಿದ್ದಾನೆ. ರಾಘವಾಂಕನಲ್ಲಿಯ ನಕ್ಷತ್ರಕನಿಗಿಂತ ಮಿಗಿಲಾಗಿ ಚಂದ್ರಮತಿ, ಹರಿಶ್ಚಂದ್ರನಿಗೆ ತೊಂದರೆ ಕೊಡುತ್ತಾನೆ. ಒಬ್ಬ ವ್ಯಕ್ತಿ ಇನ್ನೊಬ್ಬನನ್ನು ಎಷ್ಟರಮಟ್ಟಿಗೆ ಪೀಡಿಸಬಹುದು, ತೊಂದರೆಗೆ ಸಿಲುಕಿಸಬಹುದು ಎನ್ನುವುದನ್ನು ಗೌರನ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

ಚಂದ್ರಮತಿ, ಲೋಹಿತಾಶ್ವರನ್ನು ಮಾರಿ ಬಂದ ದುಡ್ಡನ್ನು ಹರಿಶ್ಚಂದ್ರ ವಿಶ್ವಾಮಿತ್ರನಿಗೆ ಯಾಗದಕ್ಷಿಣೆಯಾಗಿ ಸಮರ್ಪಿಸಲು ಅದು ಸಾಲದೆಂದು ವಿಶ್ವಾಮಿತ್ರ ಕೋಪಿಸಿಕೊಂಡಾಗ ಹರಿಶ್ಚಂದ್ರ ತನ್ನನ್ನೇ ಮಾರಿಕೊಂಡಂತೆ ದೇವೀ ಭಾಗವತ, ಮಾರ್ಕಂಡೇಯ ಪುರಾಣಗಳಲ್ಲಿ ಬಂದಿದೆ. ಆದರೆ ರಾಘವಾಂಕ ಮಾರ್ಪಾಡು ಮಾಡಿಕೊಂಡು ವಿಶ್ವಾಮಿತ್ರ ದಕ್ಷಿಣೆ ಅಲ್ಪವೆಂದು ಹೇಳುವುದು ಉಚಿತವಲ್ಲವೆಂದೋ ಏನೋ ಹಣವನ್ನು ನಕ್ಷತ್ರಕನಿಗೆ ಕೊಟ್ಟಂತೆ, ಅದನ್ನು ಅವನು ತಾನು ಇದುವರೆವಿಗೂ ಅವರೊಡನೆ ಇದ್ದುದಕ್ಕೆ ತನ್ನ ಭತ್ಯೆಯಾಯಿತೆಂದು ಹೇಳಿದಂತೆ ಇದೆ. ನಕ್ಷತ್ರಿಕ ಹರಿಶ್ಚಂದ್ರನನ್ನು ಇಕ್ಕಟ್ಟಿನಲ್ಲಿ ಸಿಲುಕಿಸಲು ನಯವಾದ ಮಾತುಗಳಲ್ಲಿಯೇ ಪ್ರಯತ್ನಿಸುವನು. ಅವನ ಮಾತು ಹರಿಶ್ಚಂದ್ರನ ನಿಲುವಿಗೇ ಒಡ್ಡಿದ ಸವಾಲು.

---

11. ಮಹಾಕವಿ ರಾಘವಾಂಕ ಪು. 188

ಒಡೆಯನ ಹಣಕ್ಕೇ ಒತ್ತಾಯಮಾಡುವುದಿಲ್ಲ. ಅವನು–'ಏನ್ನೊಡೆಯಂಗೆ ಕೊಡಬೇಕಾದ ಹೊಸ ಹೊನ್ನರಾಸಿ ತಂದೀಗ ಕೊಡುವುದು, ಕೊಡದಡಿಲ್ಲವೆನ್ನು ಪೋಗಬೇಕು' ಎಂದು ಜಗಳವಾಡದೆ ಹರಿಶ್ಚಂದ್ರ ತನ್ನ ಮಾತು ಉಳಿಸಿಕೊಳ್ಳಲು ಸಾಧ್ಯವಾಗದಂತೆ ಹೇಳಲು ಪ್ರಯತ್ನಿಸುತ್ತಾನೆ.

ಗೌರನ ಈ ಪ್ರಸಂಗವನ್ನು ಬಳಸಿಕೊಂಡೂ ಕೆಲವು ಮಾರ್ಪಾಡು ಮಾಡಿಕೊಂಡಿದ್ದಾನೆ. ಚಂದ್ರಮತಿ, ಲೋಹಿತಾಶ್ವರನ್ನು ಕೊಂಡುಕೊಳ್ಳುವ ಬ್ರಾಹ್ಮಣ ರಾಘವಾಂಕನ ಕಾವ್ಯದಂತೆ ವಿಶ್ವಾಮಿತ್ರನ ಪ್ರೇರಣೆಯಿಂದ ಬಂದ ಮಾರುವೇಷದ ಅನಲಸಖ ಅಗ್ನಿ;[12] ಗೌರನನ ಪ್ರಕಾರ ಕಲಿ. ಅವನ ಹೆಸರು ಕಾಲಕೌಶಿಕ, ಆತನ ಪತ್ನಿ ಕಲಹಕಂಠಿ, ಆತನ ಶಿಷ್ಯ ಕರ್ಕೋಟಕ.[13] ಗೌರನ ತನ್ನ ಕಾಲದ ಕಾವ್ಯಸಂಪ್ರದಾಯವನ್ನು ಬಿಡಲಾರದೆಯೋ ಅಥವಾ ಹಾಸ್ಯ ಪ್ರಸಂಗವನ್ನು ತರಲೇಬೇಕೆಂಬ ತುಡಿತವನ್ನು ಹತ್ತಿಕ್ಕಲಾರದೆಯೋ ಈ ಪ್ರಸಂಗವನ್ನು 5–6 ಪುಟಗಳಷ್ಟು ವಿಸ್ತರಿಸಿದ್ದಾನೆ. ರಾಘವಾಂಕ ಕೇವಲ ಒಂದೇ ಒಂದು ಷಟ್ಪದಿಯಲ್ಲಿ (ದ್ವಾದಶಸ್ಥಲ, ಪದ್ಯ 3) ಬ್ರಾಹ್ಮಣ ಮತ್ತು ಅವನ ಮನೆಯವರ ಗುಣ ಸ್ವಭಾವವನ್ನು ಹೇಳಿ ಮುಗಿಸಿದ್ದರೆ, ಗೌರನ ಅವರ ಹೀನ ಗುಣಗಳನ್ನು ವಿಸ್ತರಿಸಿ ವಿಸ್ತರಿಸಿ ಬರೆದಿದ್ದಾನೆ. (ಹರಿಶ್ಚಂದ್ರೋಪಾಖ್ಯಾನಮು. ಪುಟ : 145, 146, 151) ಅಷ್ಟೇ ಅಲ್ಲದೆ ಹರಿಶ್ಚಂದ್ರನ ಪಾತ್ರದ ಘನತೆಗೆ ಕುಂದು ತಂದಿದ್ದಾನೆ. ಚಂದ್ರಮತಿ ಮತ್ತು ಲೋಹಿತರ ಮಾರಾಟವಾದಾಗ ಹರಿಶ್ಚಂದ್ರ ಸರಿಯಾದ ಬೆಲೆ ಕೊಡಲಿಲ್ಲವೆಂದು ಕೋಪಿಸಿ, ಆ ಬ್ರಾಹ್ಮಣನನ್ನು ದೂಷಿಸಿ ವ್ಯಾಪಾರೀ ಮನೋವೃತ್ತಿಯಿಂದ 'ಚೌಕಾಸಿ'ಮಾಡಿದಂತೆ ಗೌರನ ಚಿತ್ರಿಸಿದ್ದಾನೆ. ಹರಿಶ್ಚಂದ್ರ ಉದಾತ್ತ ವ್ಯಕ್ತಿ. ಯಾವ ತಪ್ಪನ್ನೂ ಮಾಡದ ಹೆಂಡತಿ ಮಗನನ್ನು ಕಷ್ಟ ಕಾರ್ಪಣ್ಯಗಳಿಗೆ ಗುರಿ ಮಾಡಿದ ಬಗ್ಗೆ ತನ್ನ ಮೇಲೆಯೇ ಅಸಹ್ಯ. ಅವರನ್ನು ಮಾರಿ ತನ್ನ ಮಾತನ್ನು ಉಳಿಸಿಕೊಳ್ಳಬೇಕಾಯಿತಲ್ಲ ಎನ್ನುವ ತನ್ನ ಅಸಹಾಯಕ ಸ್ಥಿತಿಯ ಬಗ್ಗೆ ರೋಷ; ರೋಷವಿದ್ದರೂ ಇವೆಲ್ಲಕ್ಕೂ ಕಾರಣನಾದ ವಿಶ್ವಾಮಿತ್ರನನ್ನು ದೂಷಿಸದಿರುವಂಥ ಹರಿಶ್ಚಂದ್ರ ಈ ರೀತಿ ವರ್ತಿಸಲು ಸಾಧ್ಯವೆ ? ಇಲ್ಲಿ ಬ್ರಾಹ್ಮಣನನ್ನು ಹರಿಶ್ಚಂದ್ರ— "ಬಡ್ಡಿ ತಿನ್ನುವವನೆಂದು" ಬೈದು ಆತನ ವಂಶಾವಳಿಯನ್ನೆಲ್ಲಾ ಜಾಲಾಡುತ್ತಾನೆ. ಅದಕ್ಕೆ ಉತ್ತರವಾಗಿ ಕಾಲಕೌಶಿಕ ಹಣ ಸಂಪಾದಿಸುವುದರ ಬಗ್ಗೆ. ಕೂಡಿಡುವುದರ ಬಗ್ಗೆ ಉದ್ದುದ್ದ ಭಾಷಣ ಮಾಡುತ್ತಾನೆ. ಆ ಬ್ರಾಹ್ಮಣನ ಶಿಷ್ಯ ಕುಟಿಲನಾದ ಕರ್ಕೋಟಕ. ಗುರುವಿಗೂ, ಗುರುಪತ್ನಿಗೂ ಇಲ್ಲದ ಜಗಳ ಹುಟ್ಟಿಸಲು ಗುರುವಿಗಿಂತ ಮೊದಲೇ

---

12. ಹರಿಶ್ಚಂದ್ರ ಕಾವ್ಯ, ಪುಟ 156 (ಏಕಾದಶ ಸ್ಥಲ, ಪದ್ಯ 6)
13. ಹರಿಶ್ಚಂದ್ರೋಪಾಖ್ಯಾನಮು, ದ್ವಿತೀಯಭಾಗಮು, ಪಂಕ್ತಿ 469–72

ಮನೆಗೆ ಬಂದು-'ನಿನ್ನನ್ನು ಒಲ್ಲದ ಪತಿ ನಿನಗೊಬ್ಬ ಸವತಿ ತರುತ್ತಿದ್ದಾನೆ'-ಎಂದು ಕಲಹವೆಬ್ಬಿಸುತ್ತಾನೆ. ಚಂದ್ರಮತಿಯಂಥ ರಾಣಿಯನ್ನು ತೊತ್ತಿನ ಕೆಲಸಕ್ಕೆ ಕೊಂಡು ಕೊಂಡದ್ದಕ್ಕೆ ಕೋಪಿಸಿಕೊಂಡ ಊರಜನ ಕಾಲಕೌಶಿಕನನ್ನು ಹೊಡೆಯುತ್ತಾರೆ. ಮನೆಗೆ ಬಂದಾಗ ಹೆಂಡತಿಯ ಕೈಯಲ್ಲಿ ಪೂಜೆ. ಜತೆಗೆ ಸಹಸ್ರನಾಮಾರ್ಚನೆ! ಆಗ ಚಂದ್ರಮತಿಯೇ ಎಲ್ಲರನ್ನೂ ಸಮಾಧಾನಗೊಳಿಸುತ್ತಾಳೆ. ಹೀಗೆ ಗೌರನ, ಇಡೀ ಪ್ರಸಂಗವನ್ನು ಕತೆಯಿಂದ ಬೇರ್ಪಡಿಸಿದರೂ ನಷ್ಟವಿಲ್ಲದ ವರ್ಣನೆಗಳನ್ನು ಮಾಡಿದ್ದಾನೆ; ಪಾತ್ರ ಗಾಂಭೀರ್ಯಕ್ಕೆ ಕುಂದು ತಂದಿದ್ದಾನೆ. ಆದರೆ ಬಿಡಿಯಾಗಿ ಈ ಪ್ರಸಂಗವನ್ನು ನೋಡಿದ್ದೇ ಆದರೆ ಇದೊಂದು ಅತ್ಯುತ್ತಮ ಹಾಸ್ಯದ ರಸಗಟ್ಟಿ. 'ಆಂಧ್ರ ಕಾವ್ಯದಲ್ಲಿ ಹಾಸ್ಯರಸ ಪೋಷಣೆ ಬಹಳ ಕಡಮೆ...ಹರಿಶ್ಚಂದ್ರೋಪಾಖ್ಯಾನದ ಕಾಲಕೌಶಿಕ, ಕಲಹಕಂಠಿ ವೃತ್ತಾಂತಗಳಲ್ಲಿ ಗೌರನ ಚೆನ್ನಾದ ಹಾಸ್ಯವನ್ನು ಪೋಷಿಸಿದ್ದಾನೆ. ತೆಲುಗು ಕವಿಗಳಲ್ಲಿ ಗೌರನನಷ್ಟು ಹಾಸ್ಯ ರಸಾಭಿನಿವೇಶ ಕೌಶಲ ಪ್ರದರ್ಶಿಸಿದವನು ಇಲ್ಲವೆಂದೇ ಹೇಳಬಹುದು'.[14]

ಹರಿಶ್ಚಂದ್ರನನ್ನು ವೀರಬಾಹು ಕೊಂಡುಕೊಳ್ಳುವುದು, ಸತ್ಯವಾಕ್ಯ ಪರಿಪಾಲನೆಗಾಗಿ. ಹರಿಶ್ಚಂದ್ರ ಸ್ಮಶಾನ ಕಾಯಬೇಕಾದುದು-ರಾಘವಾಂಕ ಗೌರನರಲ್ಲಿ ಒಂದೇ ತೆರನಾಗಿದೆ. ಸ್ಮಶಾನದಲ್ಲಿ ಹರಿಶ್ಚಂದ್ರ-ಚಂದ್ರಮತಿಯರ ಭೇಟಿ, ಅಲ್ಲಿ ಪರಸ್ಪರರು ಸಂಬಂಧ ತಿಳಿದುಕೊಳ್ಳುವುದು ಪುರಾಣಗಳಲಿಲ್ಲ. ರಾಘವಾಂಕ ಇದನ್ನು ಕರುಣರಸದ ಮಡುವನ್ನಾಗಿ ತುಂಬಾ ನಾಟಕೀಯವಾಗಿ ಬರೆದಿದ್ದಾನೆ. ಸ್ಮಶಾನ ಸುಂಕ ಕೊಡದೆ ಮಗುವನ್ನು ಸುಡಲು ಪ್ರಯತ್ನಿಸಿದಾಗ, ಮಗುವಿನ ಕಾಲುಹಿಡಿದು ಎಸೆಯುತ್ತಾನೆ-ಹರಿಶ್ಚಂದ್ರ. ಆಗ ಚಂದ್ರಮತಿ ಹೇಳುವ 'ಬಿಸುಡದಿರು ಬೇಡ ಬೇಡ ಕಟಕಟ। ಹಸುಳೆನೊಂದಪನು' ಎನ್ನುವಲ್ಲಿ ಅವಳ ಮಾತೃಪ್ರೇಮ, ಹಾಗೆಯೇ-"ಕುಲವ ನೋಡದೆ ಬೇಡಿಕೊಂಬೆನಿವನೆನ್ನ ಮಗನಲ್ಲ ನಿನ್ನ। ಶಿಶುವಿನೋಪಾದಿ ಸುಡಲನುಮತವಿತ್ತು ಕರುಣಿಸು'-ಎನ್ನುವ 'ಧ್ವನಿ'ಪೂರ್ಣಮಾತುಗಳು ಸಾಹಿತ್ಯದಲ್ಲಿ ಅಜರಾಮರ. ಗೌರನನಲ್ಲಿ ಅವಳ ಕೊರಳ ತಾಳಿ ಹರಿಶ್ಚಂದ್ರನ ಕಣ್ಣಿಗೆ ಬಿದ್ದ ಕೂಡಲೆ ಅವಳು, ಇವನು ತನ್ನ ಪತಿಯೇ ಇರಬೇಕೆಂದು ನಿಶ್ಚಯಿಸಿ, ನಿಜ ವಿಷಯ ತಿಳಿಯಲು ಎಲ್ಲಿಯೋ ಇರಬಹುದಾದ ಹರಿಶ್ಚಂದ್ರನ ಗುಣವಿಶೇಷಗಳನ್ನು ಹೊಗಳಿ ತನ್ನ ಮಗುವನ್ನು ಕಾಪಾಡೆಂದು ಕೇಳಿಕೊಳ್ಳುತ್ತಾಳೆ. ಮುಂದೆ ಅವರಿಬ್ಬರ ಸಂಭಾಷಣೆಯಲ್ಲಿ ಕತೆ ಮುಂದುವರೆಯುತ್ತದೆ. ರಾಘವಾಂಕನಲ್ಲಿಯಂತೆ, ಹರಿಶ್ಚಂದ್ರ ಇದೊಂದು ಮತ್ತೆ ವಿಶ್ವಾಮಿತ್ರನ ನಾಟಕವಾಗದಿರಲೆಂದು ದೇವರನ್ನು ಪ್ರಾರ್ಥಿಸುವುದು, ತನ್ನ ಅಸಹಾಯಸ್ಥಿತಿಗೆ ತನ್ನನ್ನೇ ಹೀಯಾಳಿಸಿಕೊಳ್ಳುವ ಚಿತ್ರವಿಲ್ಲ.

---

14. ಆಂಧ್ರವಾಙ್ಮಯಮು, ಪುಟ 406

ಪುರಾಣಗಳಲ್ಲಿ ಹರಿಶ್ಚಂದ್ರನು ಮತ್ತು ಶೈಬ್ಯೆ (ಚಂದ್ರಮತಿ) ಪುತ್ರಶೋಕ ತಾಳಲಾರದೆ ಕೊನೆಯಲ್ಲಿ ಆತ್ಮಹತ್ಯೆಗಾಗಿ ಮಗನ ಚಿತೆಯಲ್ಲಿಯೇ ಬಿದ್ದಂತೆ, ಆಗ ದೇವತೆಗಳು ಬಂದು ಕಾಪಾಡಿ ಸ್ವರ್ಗಕ್ಕೆ ಕರೆದೊಯ್ದಂತೆ ಇದೆ. ರಾಘವಾಂಕ ಇದನ್ನು ಮಾರ್ಪಡಿಸಿ, ಕಾಶೀರಾಜಪುತ್ರನ ಹತ್ಯಾರೋಪಣೆ ಚಂದ್ರಮತಿಯ ಮೇಲೆ ಬರುವಂತೆ ಮಾಡಿ, ಮತ್ತೊಮ್ಮೆ ಹರಿಶ್ಚಂದ್ರನ ಮನಃಸ್ಥೈರ್ಯ ಪರೀಕ್ಷೆ ಏರ್ಪಡಿಸಿದ್ದಾನೆ. ಆಗಲೂ ಧೈರ್ಯಗುಂದದೆ, ಅಸತ್ಯವಾಡದೆ ಆಡಿದಂತೆ ನುಡಿದ, ನುಡಿದಂತೆ ನಡೆದ ಹರಿಶ್ಚಂದ್ರನ ಸತ್ಯನಿಷ್ಠೆಗೆ ವಿಶ್ವಾಮಿತ್ರನೇ ನಮಸ್ಕರಿಸಿ ತನ್ನ ಪ್ರತಿಜ್ಞೆಯಂತೆ ನಡೆದುಕೊಳ್ಳುತ್ತಾನೆ. ಚಂದ್ರಮತಿಯು ಕತ್ತು ಕತ್ತರಿಸಲು ಕತ್ತಿ ಎತ್ತಿದಾಗ ಪಂಪಾ ವಿರೂಪಾಕ್ಷಾದಿಗಳು ಪ್ರತ್ಯಕ್ಷವಾಗಿ ಲೋಹಿತಾಶ್ವನನ್ನು ಬದುಕಿಸಿ ಪುನಃ ಹರಿಶ್ಚಂದ್ರನ ರಾಜ್ಯ ಅವನಿಗೇ ಕರುಣಿಸುತ್ತಾರೆ. ಇದೇ ರೀತಿ ಗೌರನ ಸಹ ಚಿತ್ರಿಸಿದ್ದಾನೆ.

ಹೀಗೆ ಗೌರನ ರಾಘವಾಂಕನನ್ನು ಪೂರ್ಣವಾಗಿ ಅನುಸರಿಸಿ, ತನ್ನ ಪರಿಸರಕ್ಕೆ ಹೊಂದುವಂತೆ, ಅಲ್ಲಲ್ಲಿ ಕೆಲವು ಬದಲಾವಣೆ ಮಾಡಿ ಕನ್ನಡ, ತೆಲುಗು ಸಾಹಿತ್ಯಗಳ ಪರಸ್ಪರ ವಿನಿಮಯ ಆಗಲು ಕಾರಣನಾಗಿದ್ದಾನೆ. ಇವರಿಬ್ಬರ ಕಾವ್ಯದಲ್ಲಿನ ಸಾಮ್ಯ–ವೈಷಮ್ಯಗಳ ಆಳವಾದ ತುಲನಾತ್ಮಕ ಅಭ್ಯಾಸ ಸ್ವಾಗತಾರ್ಹವಾದುದು.

ಸಹಾಯಕ ಗ್ರಂಥ/ಲೇಖನಗಳು

ಕನ್ನಡ :

1) ಹರಿಶ್ಚಂದ್ರ ಕಾವ್ಯಂ—ಸಂಪಾದಕರು ಎನ್. ಬಸವಾರಾಧ್ಯ ಮತ್ತು ಪಂಡಿತ ಎಸ್. ಬಸಪ್ಪ, ಪ್ರಾಚ್ಯಕಾವ್ಯ ಪ್ರಕಾಶ ಮಂದಿರ, ಮೈಸೂರು, 1955.
2) ಮಹಾಕವಿ ರಾಘವಾಂಕ (ದ್ವಿತೀಯ ಮುದ್ರಣ)—ಆರ್. ಸಿ. ಹಿರೇಮಠ್, ಎಂ.ಎ., ಪಿಎಚ್.ಡಿ. ಶಾರದಾ ಮಂದಿರ, ಮೈಸೂರು. 1968.
3) ಕವಿಚರಿತೆ ಭಾಗ I (ದ್ವಿತೀಯ ಮುದ್ರಣ)—ಆರ್. ನರಸಿಂಹಾಚಾರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-18; 1972.

ತೆಲುಗು :

1) ಹರಿಶ್ಚಂದ್ರೋಪಾಖ್ಯಾನಮು—ಸಂಪಾದಕರು : ಡಾ॥ ಯಶೋದಾರೆಡ್ಡಿ ಪಿ. ತೆಲುಗು ಸಾಹಿತ್ಯ ಅಕಾಡಮಿ—ಹೈದರಾಬಾದ್. 1967.
2) ಸಮಗ್ರಾಂಧ್ರ ವಾಙ್ಮಯ ಸಾಹಿತ್ಯಮು—ಆರುದ್ರ. ಎಂ. ಶೇಷಾಚಲಂ ಅಂಡ್ ಕಂಪನಿ. ಮದ್ರಾಸ್. 1965.
3) ದ್ವಿಪದವಾಙ್ಮಯಮು—ಡಾ॥ ಜಿ. ನಾಗಯ್ಯ. ಶ್ರೀವೆಂಕಟೇಶ್ವರ ವಿಶ್ವವಿದ್ಯಾನಿಲಯ, ತಿರುಪತಿ. 1967.

4) ತೆಲುಗುಲೋ ಹರಿಶ್ಚಂದ್ರ ಕಥ—(The Treatment of the story of Harischandra by Telugu poets).

—ಎ. ವಿ. ಪದ್ಮಾಕರರೆಡ್ಡಿ, ಎಂ.ಎ.

(ಅಪ್ರಕಟಿತ ಕೃತಿ)

ಇಂಗ್ಲೀಷ್ :

1) Tamil and other Cultures—Prof. T. P. Meenakshi Sundaram, Extension Lectures delivered in Paris. Published by Madurai University.

ಅಗೆದು ಅಂಗಡಿ ಇಡು ಬಾ

ಹ. ನಂ. ವಿಜಯಕುಮಾರ್

ಬಾ ಸಂಶೋಧಕ ಬಾ
ಕಳೆದ ಗತಕಾಲದ ಯೌವನದ ದಿನಗಳ ರಾಗ ಹಚ್ಚಿ ಹಾಡು ಬಾ
ತುಟಿಗೆ ತುಟಿ ಹಚ್ಚಿ ಸವಿದ
ಜೇನ ಹನಿಗಳ ಮೆಲುಕಾಡು ಬಾ
ಒಡಲ ಕಂದಮ್ಮಗಳ ಹೆತ್ತು
ಲಾಲಿ ಆಡಿದ್ದು ನಕ್ಕು ನಗಿಸಿದ್ದು
ನೆನಪು ಕಹಿಯಲ್ಲ ಹಾಡುಬಾ

ಮಹಲಿತ್ತು ಮಹಡಿಯಿತ್ತು
ಅಂಬಾರಿ ಗುಡಿಗೋಪುರಗಳ ಆನೆಸಾಲು ಸಾಲಿತ್ತು
ರಾಜಬೀದಿಗಳಲ್ಲಿ ಗುಟುರು ಹಾಕುವ
ಪುರೋಹಿತ ಹೋರಿಗಳು ಕುದುರೆ ರಾಜರುಗಳು
ಗತ ವೈಭವದ ದಿನಗಳ ಹೆಕ್ಕಿಸೋಸಿ
ಮರುಗಿ, ನಿಟ್ಟುಸಿರಿಟ್ಟು ಹೊಸ ಅರ್ಥ ಹಚ್ಚು ಬಾ.

ಇದ್ದ ವಾಸ್ತವದ ಜೀವನವ
ಬಯಲಿಗೆಳೆದು ಅಂಗಡಿ ಇಡುಬಾ
ಮುರಿದ ಕೋಟೆ ಗುಡಿಗೋಪುರಗಳು
ಮಡಿಕೆ, ಕುಡಿಕೆ, ಲೋಹ ತುಣುಕುಗಳ
ಗುಡ್ಡೆ ಹಾಕಿ ಸಂಸ್ಕೃತಿಯ ಕಟ್ಟು ಬಾ

ಸುಖದ ನೋವುಗಳ, ಗತಯೌವ್ವನವ
ಮತ್ತೆ ಬರೆ ಹಾಡು ಇತ್ತುಗಳ ಕಥೆಕಟ್ಟು
ಇಲ್ಲದುದಕ್ಕೆ ವಿರಾಮ ಹಾಕು ಬಾ

ವಿದ್ಯಾಭ್ಯಾಸ, ವಿಜ್ಞಾನ ಮತ್ತು ಬುದ್ಧಿಪಲಾಯನ

ಮ. ರಾಜೀವ

ಜಗತ್ತಿನಾದ್ಯಂತ ವಿದ್ಯಾರ್ಥಿಗಳು, ಉಪಾಧ್ಯಾಯರು ವಿದ್ಯಾರ್ಥಿಗಳ ಮಾತಾ ಪಿತೃಗಳು ಮತ್ತು ವಿಚಾರವಾದಿಗಳು ಇಂದಿನ ವಿದ್ಯಾಭ್ಯಾಸ ಪದ್ಧತಿಯ ನ್ಯೂನತೆಗಳನ್ನು ಎತ್ತಿತೋರಿಸುತ್ತಿದ್ದಾರೆ. ಅದರ ಬಗ್ಗೆ ತೀಕ್ಷ್ಣವಾದ ಟೀಕೆಯನ್ನು ಮಾಡುತ್ತಿದ್ದಾರೆ. ಕ್ಲಾಸುಗಳಲ್ಲಿ ಕಲಾಶಾಲೆ ಮತ್ತು ವಿಶ್ವವಿದ್ಯಾಲಯಗಳ ಆವರಣಗಳಲ್ಲಿ ಉಂಟಾಗುವ ವಿಲಕ್ಷಣವಾದ, ಕೆಲವೊಮ್ಮೆ ವಿರಾಮವಾದ ವರ್ತನೆಗಳು ಜಾಗತಿಕ ಶಿಕ್ಷಣ ಪದ್ಧತಿಯ ಅನಾರೋಗ್ಯದ ಲಕ್ಷಣವಾಗಿದೆ. ವಿದ್ಯಾರ್ಥಿಗಳ ಅತೃಪ್ತಿ ಕೇವಲ ಹಿಂದುಳಿದ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿಷಯವಲ್ಲ. ಅದು ಮುಂದುವರಿದ ಕೈಗಾರಿಕಾ ದೇಶಗಳ ಕ್ಲಾಸುಗಳಿಗೂ ಅಲ್ಲಿ ಕಲಿಯುವ ವಿದ್ಯಾರ್ಥಿಗಳಿಗೂ ಸಂಬಂಧಿಸಿದುವ ವಿಷಯವಾಗಿದೆ.

ಆಧುನಿಕ ಜಗತ್ತಿನ ಪ್ರತಿಯೊಂದು ದೇಶದ ಜನತೆಯಲ್ಲೂ ಅದರ ನಾನಾ ಸಮಸ್ಯೆಗಳಿಗೆ ಪರಿಹಾರ ನೀಡುವ ಮಾಧ್ಯಮಗಳಲ್ಲಿ ಶಿಕ್ಷಣ ಪದ್ಧತಿಯು ಪ್ರಧಾನ ಪಾತ್ರವನ್ನು ನಿರ್ವಹಿಸುತ್ತದೆ. ಜಗತ್ತಿನ ಸಮಸ್ಯೆಗಳು ಕೇವಲ ಇಂದೇ ಪ್ರಾರಂಭವಾಗಿರುವ ಸಮಸ್ಯೆಗಳಲ್ಲ ; ಅವು ಅನೇಕ ವರ್ಷಗಳಿಂದ ಉಂಟಾಗಿರುವ ಸಮಸ್ಯೆಗಳಾಗಿರುವುವು.

ಆಯಾ ಸಮಾಜದ ಪ್ರಜೆಯಾಗಲು ವ್ಯಕ್ತಿಯನ್ನು ತರಬೇತಿಗೊಳಿಸುವುದೇ ವಿದ್ಯಾಭ್ಯಾಸದ ಅಂತಿಮಗುರಿಯೆಂದು ಅನೇಕ ಮಂದಿ ನಂಬಿದ್ದಾರೆ. ಸಂಸ್ಕೃತಿಯನ್ನು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿನ ಜನರಿಗೆ ತಿಳಿಸುವುದು ಶಿಕ್ಷಣದ ತಿರುಳು ಆಗಿದೆ ಎಂದು ಅಭಿಪ್ರಾಯಪಡುವವರೂ ಇದ್ದಾರೆ. ವ್ಯಕ್ತಿತ್ವದ ಪೂರ್ಣ ವಿಕಾಸವೇ ವಿದ್ಯಾಭ್ಯಾಸದ ಆದರ್ಶವೆಂದು ಸಾರುವವರೂ ಇದ್ದಾರೆ. ಇವೆಲ್ಲಾ ವಿದ್ಯಾಭ್ಯಾಸದ ಸಾಂಪ್ರದಾಯಿಕ ಉದ್ದೇಶಗಳಾಗಿವೆ. ಹಿಂದಿನ ಹಾಗೂ ಇಂದಿನ ಪರಿಸ್ಥಿತಿ ಹಾಗೂ ಪರಿಸರಕ್ಕೆ ಹೊಂದಿಕೊಳ್ಳಲು ವ್ಯಕ್ತಿಗೆ ತರಬೇತಿಯನ್ನೀಯುವುದೇ ಶಿಕ್ಷಣದ ಪ್ರಧಾನ ಗುರಿಯಾಗಬೇಕೆಂದು ಆಧುನಿಕ ಶಿಕ್ಷಣ ತಜ್ಞರು ವಾದಿಸುತ್ತಾರೆ. ಇದು ಹೆಚ್ಚು ಸಮಂಜಸವಾದ ಮತ್ತು ಅರ್ಥವತ್ತಾದ ಶಿಕ್ಷಣದ ಗುರಿಯಾಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಜಗತ್ತಿನಾದ್ಯಂತ ಆರ್ಥಿಕಾಭಿವೃದ್ಧಿಯ ಕಾರ್ಯದಲ್ಲಿ ಶಿಕ್ಷಣವು ಸಹಾಯಕವಾದ ಅಂಗವಾಗಿದೆ. ಪ್ರಕೃತ ಸಮಾಜದ ಉದ್ದೇಶಗಳನ್ನು ಈಡೇರಿಸುವುದು ಹಿಂದಿನಕಾಲದ ಶಿಕ್ಷಣಪದ್ಧತಿಯ ಗುರಿಯಾಗಿದ್ದಿತು. ಇಂದು

ಹಾಗಲ್ಲ. ಇಂದು ಇಲ್ಲದಿರುವ ಆದರೂ ಮುಂಬರಲಿರುವ ಸಮಾಜಕ್ಕಾಗಿ ಶಿಕ್ಷಣವು ರೂಪುಗೊಳ್ಳಬೇಕಾಗಿದೆ. ಜಗತ್ತಿನ ಚರಿತ್ರೆಯಲ್ಲಿ ಮೊದಲಬಾರಿಗೆ ಈ ತೆರನಾದ ಮಾರ್ಪಾಟು ನಡೆಯುತ್ತಿದೆ. ಪ್ರಪಂಚದಾದ್ಯಂತ ಉಂಟಾಗುತ್ತಿರುವ ಶೈಕ್ಷಣಿಕ ಮಾರ್ಪಾಟುಗಳ ಮತ್ತೊಂದು ಮುಖ್ಯ ಸಂಗತಿಯೆಂದರೆ ಶಿಕ್ಷಣದ ಉತ್ಪಾದನೆ ಹಾಗೂ ಫಲಿತಾಂಶಗಳು ಮತ್ತು ಸಮಾಜದ ಅವಶ್ಯಕತೆಗಳು ಇವುಗಳ ನಡುವಿನ ವಿಪರ್ಯಾಸಗಳಾಗಿವೆ. ಅವುಗಳೊಳಗೆ ಸಾಮರಸ್ಯವಿಲ್ಲವಾಗಿದೆ. ಜಗತ್ತಿನ ಶಿಕ್ಷಣ ಸಮಸ್ಯೆಗಳು ಚಾರಿತ್ರಿಕ ಸಂಘರ್ಷಣೆಯಿಂದ ಉತ್ಪನ್ನವಾಗಿವೆ. ವಿದ್ಯಾರ್ಥಿಗಳ ಸಂಖ್ಯೆಯ ಹೆಚ್ಚಳ, ಸಂಪನ್ಮೂಲಗಳ ಅತೀವ ಅಭಾವ, ನಾಗಾಲೋಟದಿಂದ ನೆಗೆಯುವ ವೆಚ್ಚಗಳು, ಪ್ರತಿಫಲಗಳನ್ನು ಅಳವಡಿಸುವ ಅಸಮರ್ಥತೆ, ಆಲಸ್ಯ ಮತ್ತು ನಿಷ್ಪ್ರಯೋಜಕತೆ—ಇವುಗಳು ಈ ಸಮಸ್ಯೆಯ ನಾನಾಮುಖಗಳಾಗಿವೆ. ಶಿಕ್ಷಣ ಪದ್ಧತಿಯು ಈ ಸಮಸ್ಯೆಗಳನ್ನು ಅಲ್ಲಗಳೆಯುವಂತಿಲ್ಲ.

ನಾನಾ ರಾಷ್ಟ್ರಗಳ ಮತ್ತು ಸಂಸ್ಕೃತಿಗಳ, ರಾಜಕೀಯ ಪದ್ಧತಿ ಮತ್ತು ಆರ್ಥಿಕ ಬೆಳವಣಿಗೆ ಮಟ್ಟಗಳ ಅಂತರವಿರುವಾಗಲೂ ಇಂದು ಜಗತ್ತಿನಲ್ಲಿ ಒಂದು ಅಂತರ ರಾಷ್ಟ್ರೀಯ ಸಮಾಜವು ಸ್ಥಾಪನೆಗೊಂಡಿದೆ. ಒಂದೇ ಗುರಿಯತ್ತ ಸಾಗುತ್ತಿರುವ ಒಂದೇ ತೆರನಾದ ಆಶೋತ್ತರಗಳು ಸಮಸ್ಯೆಗಳು ಮತ್ತು ಚಳುವಳಿಗಳು ಈ ಸತ್ಯ ಸಂಗತಿಯ ಸಾಕ್ಷ್ಯಗಳಾಗಿವೆ. ಶಿಕ್ಷಣವು ಒಂದು ವಿಮೋಚನೆಯೆಂದು ಇದೀಗ ಭಾವಿಸಲಾಗಿದೆ. ಇದಕ್ಕೆ ಅನೇಕ ಉದಾಹರಣೆಗಳಿವೆ. ಸ್ವಿಜರ್‌ಲ್ಯಾಂಡ್ ದೇಶದ ವಿ. ಫೆರೀರ್‌ರವರ 'ಸಕ್ರಿಯಾ ಶಾಲೆ,' ಇಟಲಿಯ ಮೊಂಟೆಸೋರಿಯವರ 'ಸ್ವಯಂ ಶಿಕ್ಷಣ ಸಂಸ್ಥೆ'ಗಳು, ಸಂಯುಕ್ತ ಅಮೇರಿಕಾದ ಜಾನ್ ಡ್ಯೂಯಿಯವರ "ಸಾಂಘಿಕಕಾರ್ಯ"ದ ಸಂಸ್ಥೆಗಳು, ಸೋವಿಯತ್ ರಷ್ಯಾದ ಪಾವೆಲ್ ಪೆಟ್ರೊವಿಟ್ ಬ್ಲೊಸ್ಕಿಯವರ "ಕಾರ್ಯನಿರತ ಶಾಲೆ," ಬೆಲ್ಜಿಯಂ ದೇಶದ ಓಡಿತ್ರೋಲಿಯವರ "ಸಕ್ರಿಯಾ ವಿಧಾನ"ವನ್ನು ಅನುಸರಿಸುವ ಶಾಲೆಗಳು, ಸೆಲೆಸ್ಟಿನ್ ಫ್ರೀನೇರವರ "ನವ ಶಾಲೆ"ಯ ಚಳುವಳಿ, ಜರ್ಮನಿಯಲ್ಲಿ ಕಾರ್ಯರೂಪಕ್ಕೆ ಬಂದಿರುವ ಪಿಟರ್ಸನ್‌ರವರ 'ಜೆಮೈನ್ ಶಾಫ್ಟ್ಸ್ ಶೂಲೆನ್"—ಇವುಗಳೆಲ್ಲಾ ಆಧುನಿಕ ಸಮಾಜದಲ್ಲಿ ಪ್ರತಿಯೊಬ್ಬ ಪ್ರಜೆಯೂ ತನ್ನ ವಿಮೋಚನೆಯನ್ನು ಪಡೆಯಲು ನೆರವಾಗಲು ಉಂಟಾಗಿರುವ ಪ್ರಯೋಗಗಳಾಗಿವೆ.

ಆಧುನಿಕ ಸಮಾಜಗಳು ಇಂತಹ ಅನೇಕ ಪ್ರಯೋಗಗಳಲ್ಲಿ ನಿರತವಾಗಿವೆ. ಅದರ ಕಾರಣವಿಷ್ಟೇ. ಮಾನವನು ಪರಿಪೂರ್ಣನಲ್ಲ. ಆತನ ಅಪೂರ್ಣತೆ. ಅಪಕ್ವ ಬುದ್ಧಿ ಅಪ್ರಬುದ್ಧ ಪರಿಸ್ಥಿತಿ ಇದಕ್ಕೆಲ್ಲಾ ದಾರಿಮಾಡಿಕೊಟ್ಟಿದೆ. ಓರ್ವ ಸಮಕಾಲೀನ ಮನಃಶಾಸ್ತ್ರಜ್ಞನು ಹೇಳುವಂತೆ ಮನುಷ್ಯನು ತನ್ನ ಕಾಲಕ್ಕಿಂತ ಮೊದಲೇ ಜನನ ತಾಳಿದ್ದಾನೆ! ಪೂರ್ಣವಾಗಿ ತನ್ನ ಗುರಿಯೆಡೆಗೆ ಕೊಂಡೊಯ್ಯಲು ಸಾಧ್ಯ

ವಾಗದಿರುವ ಸಾಮರ್ಥ್ಯಗಳನ್ನು ಅಥವಾ ಕೆಲವೊಮ್ಮೆ ಸರಿಯಾದ ಅವಕಾಶಗಳನ್ನು ಪಡೆಯದ ಸಾಮರ್ಥ್ಯಗಳನ್ನೂ ಆತನು ಹೊಂದಿದ್ದಾನೆ. ಮೂಲತಃ ಆತನನ್ನು ಕಲಿಯುವಂತೆ ಮಾಡಲು ಸಾಧ್ಯತೆಯಿದೆ. ನಿಜ ಹೇಳುವುದಾದರೆ ಮನುಷ್ಯನಿಗೆ ಯಾವಾಗಲೂ ಕಲಿಸಲು ಸಾಧ್ಯವಿದೆ. ಜೀವನದುದ್ದಕೂ ಕಲಿಕೆಯ ಕಾರ್ಯವು ಕೊನೆಗೊಳ್ಳುವುದೆಂದಿಲ್ಲ. ಮಾನವನು ಯಾವಾಗಲೂ ಪೂರ್ಣತೆ ಹೊಂದದಿರುವ ಪರಿಸ್ಥಿತಿಯಲ್ಲೇ ಇರುವನು. (ಜಾರ್ಜ್ ಲಾಪ್ಸಾಡೆ: 'ಮಾನವನ ಕುರಿತಾದ ಲೇಖನಗಳು')

ಇಂದಿನ ಪ್ರಪಂಚದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಹಿಂದೆಂದೂ ತೋರಿಸದಷ್ಟು ಪ್ರಗತಿಯನ್ನು — ಅವುಗಳ ಶಕ್ತಿ ಮತ್ತು ಸಾಧ್ಯತೆಗಳನ್ನು — ಇದೀಗ ತೋರಿಸಿವೆ. ಇಪ್ಪತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿ ಜ್ಞಾನ ಅತಿ ದೀರ್ಘವಾದ ಹೆಜ್ಜೆಗಳನ್ನು ಹಾಕಿದೆ. ಈ ಮುನ್ನೆಗತವು ಮಹತ್ಸಾಧನೆಯೇ ಆಗಿದೆ. ಸಂಶೋಧನೆ ಮತ್ತು ಪರಿವರ್ತನೆಗಳು ಸಂಸ್ಥೆಗಳ ಮೂಲಕ ವ್ಯವಸ್ಥೆ ಗೊಳಿಸಲ್ಪಟ್ಟಿವೆ. ಸಮಾಜದಲ್ಲಾಗುವ ಪರಿವರ್ತನೆಯೂ ವಿಪರೀತ ಮಟ್ಟವನ್ನು ಮುಟ್ಟಿದೆ. ಮಾನವ ಜ್ಞಾನದ ಬಂಡವಾಳವೂ ಬಹಳವಾಗಿ ಅಧಿಕಗೊಂಡಿದೆ. ವಿಜ್ಞಾನದ ತೊಡಕು ತೊಂದರೆಗಳೂ ಹೆಚ್ಚಾಗಿವೆ. ಆದರೆ ಹಿಂದೆಂದೂ ಆಗದ ಪ್ರಗತಿಯನ್ನು ವಿಜ್ಞಾನ ಇದೀಗ ಸಾಧಿಸಿದೆ ಎಂಬುದಕ್ಕೆ ಸಂದೇಹವಿಲ್ಲ. ಮಾನವ ಸಮಾಜದಲ್ಲಿದ್ದ ಒಟ್ಟು ವಿಜ್ಞಾನಿ ಹಾಗೂ ಸಂಶೋಧಕರಲ್ಲಿ ತೊಂಭತ್ತರಷ್ಟು ಮಂದಿ ನಮ್ಮ ಕಾಲದಲ್ಲಿದ್ದಾರೆ. ಅದರೊಂದಿಗೇನೇ ವೈಜ್ಞಾನಿಕ ಸಂಶೋಧನೆಗೂ ಅದರ ವ್ಯಾಪಕವಾದ ಉಪಯೋಗಕ್ಕೂ ಇರುವ ಅಂತರವು ಕ್ರಮಶಃ ಕಡಿಮೆ ಯಾಗುತ್ತಿದೆ. ಛಾಯಾಚಿತ್ರದ ತತ್ವಕ್ಕೂ ಅದರ ಪ್ರಾಯೋಗಿಕ ಉಪಯೋಗ ಗಳಿಗೂ 112 ವರ್ಷಗಳು ತಗಲಿದುವು. ವಿದ್ಯುತ್ ಮೋಟಾರಿನ ತತ್ವಕ್ಕೂ ಅದರ ಪ್ರಾಯೋಗಿಕ ಪ್ರಯೋಜನ, ಬಳಕೆಗೂ 65 ವರ್ಷಗಳು ತಗಲಿದುವು. ರಾಡಾರಿನ ಸಂಶೋಧನೆಗೂ ಅದರ ತತ್ವದ ಪ್ರಾಯೋಗಿಕ ಬಳಕೆಗೂ 15 ವರ್ಷಗಳು ತಗುಲಿ ದುವು. ಇತ್ತೀಚಿಗಿನ ಸೋಲಾರ್ ಬ್ಯಾಟರಿಯ ತತ್ವಗಳಿಗೂ ಅದರ ಸಾರ್ವತ್ರಿಕ ಉಪಯೋಗಕ್ಕೂ ಕೇವಲ ಎರಡು ವರ್ಷಗಳು ತಗಲಿದುವು. ಈ ತೀವ್ರಗತಿಯ ಅತ್ಯಂತ ವೇಗವಾಗಿರುವ ವಿಜ್ಞಾನದ ಮುನ್ನಡೆಯು ನಮ್ಮ ಕಾಲದ ಒಂದು ಮುಖ್ಯ ಲಕ್ಷಣವಾಗಿದೆ. ಇದು ವಿದ್ಯಾಭ್ಯಾಸದ ಪದ್ಧತಿಯಮೇಲೆ ಪ್ರಭಾವ ಬೀರದೆ ಉಳಿದಿರುವುದೇ ?

ಪ್ರಕೃತ ಪರಿಸ್ಥಿತಿಯು ಪ್ರಪಂಚದಲ್ಲಿ ಒಂದು ದೊಡ್ಡ ಅಂತರವನ್ನುಂಟು ಮಾಡಿದೆ. ಈ ಅಂತರವನ್ನು ಅಭಿವೃದ್ಧಿಹೊಂದುತ್ತಿರುವ ಔದ್ಯೋಗಿಕ ರಾಷ್ಟ್ರ ಗಳಲ್ಲಿ ಕಾಣಬಹುದು. ಈ ಅಂತರಕ್ಕೆ ಸಂಸ್ಕೃತಿ ಮೌಲ್ಯಗಳು, ವಸ್ತುಗಳು ಮತ್ತು

ಆ ದೇಶಗಳು ಅನುಸರಿಸುತ್ತಿರುವ ಮಾರ್ಗಗಳ ವ್ಯತ್ಯಾಸಗಳೂ ಕಾರಣವಾಗಿವೆ. ಇದಕ್ಕೆ ಒಂದು ಉದಾಹರಣೆ ಸಾಕು : ಸೋವಿಯತ್ ರಷ್ಯಾ ಮತ್ತು ಯುರೋಪಿನಲ್ಲಿ ಪ್ರತಿ ಇಪ್ಪತ್ತೈದು ಮಂದಿ ವಿದ್ಯಾರ್ಥಿಗಳಿಗೊಬ್ಬ ಉಪಾಧ್ಯಾಯರಿದ್ದಾರೆ. ಉತ್ತರ ಅಮೇರಿಕಾದಲ್ಲಿ ಇಪ್ಪತ್ತಾರು ಮಂದಿಗೊಬ್ಬ ಉಪಾಧ್ಯಾಯರಿದ್ದಾರೆ. ಲ್ಯಾಟಿನ್ ಅಮೇರಿಕಾದಲ್ಲಿ ಐವತ್ತೆರಡು ಮಂದಿಗೊಬ್ಬ ಉಪಾಧ್ಯಾಯರಿದ್ದಾರೆ. ಆಫ್ರಿಕಾದಲ್ಲಿ ನಲ್ವತ್ತು ಮಂದಿಗೊಬ್ಬ ಉಪಾಧ್ಯಾಯರಿದ್ದಾರೆ. ಅರಬ್ ರಾಷ್ಟ್ರಗಳಲ್ಲಿ ಐವತ್ತೆಂಟು ಮಂದಿಗೊಬ್ಬ ಉಪಾಧ್ಯಾಯರಿದ್ದಾರೆ. ಏಷ್ಯಾದ ರಾಷ್ಟ್ರಗಳಲ್ಲಿ ಐವತ್ತಾರುಮಂದಿಗೊಬ್ಬ ಉಪಾಧ್ಯಾಯರಿದ್ದಾರೆ. ಉತ್ತರ ಅಮೇರಿಕಾ, ಯುರೋಪ್ ಮತ್ತು ಲ್ಯಾಟಿನ್ ಅಮೇರಿಕಾದ ರಾಜ್ಯಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಟ್ಟಗಳಲ್ಲಿ ಶಾಲೆಗೆ ಸೇರುವ ಹುಡುಗ ಹುಡುಗಿಯರ ಸಂಖ್ಯೆಯು ಸರಿ ಸಮಾನವಾಗಿರುತ್ತದೆ. ಆದರೆ ಹಿಂದುಳಿದ ಆಫ್ರಿಕಾ, ಏಷ್ಯಾ ಮತ್ತು ಅರಬ್ ರಾಷ್ಟ್ರಗಳಲ್ಲಿ ಪ್ರಾಥಮಿಕ ಮಟ್ಟದಲ್ಲಿ ಹುಡುಗಿಯರಿಗಿಂತ ಶೇಕಡಾ ಐವತ್ತರಷ್ಟು ಮಂದಿ ಹುಡುಗರು ಹೆಚ್ಚಾಗಿರುತ್ತಾರೆ. ಪ್ರೌಢಶಾಲಾ ಮಟ್ಟದಲ್ಲಿ ಶೇಕಡ ನೂರರಷ್ಟು ಹುಡುಗರು ಹೆಚ್ಚಾಗಿ ಸೇರುತ್ತಾರೆ. ಜಗತ್ತಿನ ನಿರಕ್ಷರಿಗಳಲ್ಲಿ ನಲವತ್ತರಷ್ಟು ಮಂದಿ ಮಹಿಳೆಯರು. ಪುರುಷರ ಜನಸಂಖ್ಯೆಯಲ್ಲಿ ಶೇಕಡಾ ಇಪ್ಪತ್ತೆಂಟು ಮಂದಿ ನಿರಕ್ಷರರಾಗಿರುವರು. ಈ ಪರಿಸ್ಥಿತಿಗೆ ರಾಜಕೀಯ, ಸಾಂಸ್ಕೃತಿಕ ಹಾಗೂ ಆರ್ಥಿಕ ಬೆಳವಣಿಗೆಯ ಪದ್ಧತಿಗಳು ಪ್ರಧಾನಕಾರಣವಾಗಿವೆ.

ಜಗತ್ತಿನ ಶೈಕ್ಷಣಿಕ ಸಮಸ್ಯೆಗಳು ನಾನಾ ಕಾರಣಗಳಿಂದ ಉತ್ಪನ್ನವಾಗಿವೆ. ಚಾರಿತ್ರಿಕ ಕಾರಣಗಳಿಂದ ಅವುಗಳು ಕ್ಲಿಷ್ಟಗೊಂಡಿವೆ. ಈ ಶೈಕ್ಷಣಿಕ ಸಮಸ್ಯೆಗಳು ಒಂದು ಪ್ರಕ್ಷುಬ್ಧ ಪರಿಸ್ಥಿತಿಯನ್ನೇ ಸೃಷ್ಟಿಸಿರುವುವು. ಎಲ್ಲಾ ರಾಷ್ಟ್ರಗಳಲ್ಲಿ ಶಾಲೆಗೆ ಸೇರುವವರ ಸಂಖ್ಯೆ ಮಿತಿಮೀರಿದೆ. ಎಲ್ಲಾ ದೇಶಗಳಲ್ಲಿಯೂ ಸಂಪನ್ಮೂಲಗಳ ತೀವ್ರವಾದ ಕೊರತೆಯು ಕಾಣುತ್ತಿದೆ. ಪರಿಸ್ಥಿತಿಗೆ ಹೊಂದಿಕೊಳ್ಳುವುದು ದಿನೇ ದಿನೇ ತೀರಾ ದುರ್ಧರ ಪ್ರಸಂಗವಾಗುತ್ತಿದೆ. ಅಸಮಾಧಾನ ಮತ್ತು ಅಸಮರ್ಥತೆ ಎಲ್ಲೆಲ್ಲೂ ಸಾರ್ವತ್ರಿಕವಾಗಿವೆ. (ಫಿಲಿಪ್ ಕೂಂಬ್ಸ್ : 'ಜಾಗತಿಕ ಶೈಕ್ಷಣಿಕ ಗೊಂದಲ')

ಸಾವಿರಾರು ಶತಮಾನಗಳವರೆಗೆ ಮಾನವನು ನಡೆಯುವ ವೇಗದಲ್ಲಿ ಸಾಗಿದನು. ಹತ್ತೊಂಭತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಚಕ್ರ ಬಳಕೆಗೆ ಬಂದಿತು. ಆ ಬಳಿಕ ಕಂಬಸ್ಟ್ಚಿಯನ್ ಯಂತ್ರದ ಸಂಶೋಧನೆಯು ನಡೆಯಿತು. ಒಂದು ಗಂಟೆಗೆ ಮಾನವನು ನೂರನಲ್ವತ್ತು ಕಿಲೋಮಿಟರ್ ವೇಗವನ್ನು ಮುಟ್ಟುವಂತಾಯಿತು. 1945ರಲ್ಲಿ ಆ ವೇಗದ ಹತ್ತು ಪಟ್ಟು ವೇಗದಲ್ಲಿ ಪ್ರಯಾಣ ಮಾಡಲು ಸಾಧ್ಯವಾಯಿತು. ಇಂದು ಗಗನಯಾತ್ರಿಗಳು ಬಾಹ್ಯಾಕಾಶದಲ್ಲಿ ನಲ್ವತ್ತು

ಸಾವಿರ ಕಿಲೋಮೀಟರ್‌ಗಳ ವೇಗದಲ್ಲಿ ಯಾನ ನಡೆಸಲು ಸಾಧ್ಯವಾಗಿದೆ. ಮಾನವನ ಚಲನೆಗಳು — ಹಳ್ಳಿಯಿಂದ ನಗರಗಳಿಗೆ, ದೇಶದಿಂದ ದೇಶಕ್ಕೆ, ಒಂದು ಖಂಡದಿಂದ ಮತ್ತೊಂದು ಖಂಡಕ್ಕೆ ಭೂಮಿಯಿಂದ ಉಪಗ್ರಹಗಳಿಗೆ — ಹೆಚ್ಚುತ್ತಾಹೋಗಿವೆ. ಇವುಗಳ ಒಟ್ಟು ಪರಿಣಾಮ ಶಿಕ್ಷಣಕ್ಷೇತ್ರದಮೇಲೆ ಆದ ಮಹತ್ವದ ಪ್ರಭಾವ.

ಪ್ರಪಂಚಾದ್ಯಂತ ಕಂಡುಬರುವ ಇನ್ನೊಂದು ಸಾಮಾನ್ಯ ಸಂಗತಿಯೆಂದರೆ ಪರಿಸರದ ಪರಿವರ್ತನೆಯಾಗಿದೆ. ಮಾನವನು ತನ್ನ ಸುತ್ತುಮುತ್ತಲಿನ ಪರಿಸರ ವನ್ನು ಬದಲು ಮಾಡುತ್ತಾ ಬಂದಿದ್ದಾನೆ. ಇದರಿಂದ ಪ್ರಯೋಜನವಾಗಿದೆ, ಪ್ರಗತಿಯಾಗಿದೆ. ಅದರಂತೆಯೇ ಅವರಿಂದ ಹಾನಿಯೂ ಆಗಿದೆ. ತಾಂತ್ರಿಕ ಬೆಳವಣಿಗೆಯು ಮಾನವನಿಗೆ ಆತನ ಅನೇಕ ಸಮಸ್ಯೆಗಳನ್ನು ಬಗೆಹರಿಸಲು ಸಹಾಯಕ ವಾಗಿವೆ. ಆದರೆ ವರ್ತಮಾನ ಕಾಲದ ಜೀವನದ ಅನೇಕ ಅಂಗಗಳ ಮೇಲೆ ಅವರಿಂದ ದುಷ್ಪರಿಣಾಮವೂ ಆಗಿದೆ. ಅದು ಪ್ರಪಂಚಾದ್ಯಂತ ಪರಿಸರದ ಪರಿಸ್ಥಿತಿಯ ಅಧಃ ಪತನಕ್ಕೂ ಕಾರಣವಾಗಿದೆ. ಪರಿಸರದ ಅಧಃಪತನ ನಮ್ಮ ಸುತ್ತುಮುತ್ತಲಿನ ಪ್ರದೇಶಗಳ ಮಾಲಿನ್ಯ ನಿನ್ನೆ ಮೊನ್ನೆಯ ಕಾರ್ಯಗಳಲ್ಲ. ಅವುಗಳು ಬಹು ಕಾಲ ದಿಂದ ಬೆಳೆದು ಬಂದ ಕಾರ್ಯಗಳ ಪರಿಣಾಮಗಳು. ಲಿಖಿತ ಇತಿಹಾಸವಿರುವ ಕಳೆದ ಏಳು ಸಾವಿರ ವರ್ಷಗಳಿಂದ ಮಾನವನು ತನ್ನ ಪರಿಸರವನ್ನು ಪರಿವರ್ತಿಸುತ್ತಾ ಬಂದಿದ್ದಾನೆ. ಆತನು ಪ್ರಕೃತಿಯನ್ನು ನಿಯಂತ್ರಿಸುತ್ತಾ ಬಂದಿರುತ್ತಾನೆ. ಆದರೆ ಅಜಾಗರೂಕತೆಯಿಂದ ಅಥವಾ ಅಜ್ಞಾನದಿಂದ ಮಾನವನು ತನ್ನ ಪರಿಸರವನ್ನು ಮಲಿನಗೊಳಿಸಿದ್ದಾನೆ. ಪರಿಸರದ ಸಂಪತ್ತನ್ನು ನಾಶಮಾಡಿದ್ದಾನೆ. ಹತ್ತೊಂಬತ್ತ ನೆಯ ಶತಮಾನದಲ್ಲಂತೂ ಔದ್ಯೋಗಿಕರಣ ಹಾಗೂ ಜನಸಂಖ್ಯೆಯ ಹೆಚ್ಚಳದಿಂದಾಗಿ ಈ ಕಾರ್ಯವು ಮತ್ತಷ್ಟು ಉಲ್ಬಣಾವಸ್ಥೆಯನ್ನು ಹೊಂದಿತು. ಈ ಉಲ್ಬಣಾ ವಸ್ಥೆಯೂ ಕೂಡಾ ಶಿಕ್ಷಣ ಕ್ಷೇತ್ರದಲ್ಲಿ ಅಲ್ಲೋಲ ಕಲ್ಲೋಲವನ್ನುಂಟುಮಾಡಿದೆ.

ಆಧುನಿಕ ಜಗತ್ತಿನ ಶಿಕ್ಷಣದ ಗೊಂದಲ ಪರಿಸ್ಥಿತಿಗಳಲ್ಲಿ ಬುದ್ಧಿ ಪಲಾಯನದ ಪ್ರಶ್ನೆಯೂ ಒಂದಾಗಿದೆ. ಮುಂದುವರಿದ ದೇಶಗಳು ಹಿಂದುಳಿದ ರಾಜ್ಯಗಳಿಗೆ ನೆರವು ನೀಡುವುದು ಸಹಜ. ಹಿಂದುಳಿದ ರಾಜ್ಯಗಳಿಗೆ ತಾಂತ್ರಿಕ ಸಹಾಯ ತಜ್ಞರ ನೆರವನ್ನು ನೀಡುವುದೂ ಸರಿ. ಇಂತಹ ಪರಸ್ಪರ ಸಹಾಯ ಮೈತ್ರಿಗಳಿಗೆ ಅನೇಕ ನಿದರ್ಶನ ಗಳಿವೆ. ಉದ್ಯೋಗಗಳ ತರಬೇತಿಯ ತಾಂತ್ರಿಕ ಸಹಾಯವನ್ನು ನಾವು ಅನೇಕ ರಾಜ್ಯಗಳಲ್ಲಿ ಕಾಣಬಹುದು. ಇದು ಆಧುನಿಕ ಜಗತ್ತು ಬೆಳೆದು ಬಂದ ದಾರಿಯಾಗಿದೆ. ಇಂತಹ ಸಹಾಯ ನೀಡುವ ರಾಷ್ಟ್ರವು ಈ ತೆರನಾದ ಯೋಜನೆಯನ್ನು ತನ್ನ ಸ್ವಾರ್ಥಕ್ಕಾಗಿಯೂ ನೆರವು ಪಡೆಯುವ ರಾಷ್ಟ್ರದ ಸುಲಿಗೆಗಾಗಿಯೂ ಉಪಯೋಗಿ ಸಿದುದರ ಉದಾಹರಣೆಗಳೂ ಇವೆ. ವಿದೇಶಗಳ ಶಿಕ್ಷಣವು ಇದಕ್ಕೆ ಉದಾಹರಣೆ ಯಾಗಿದೆ. ವಿದೇಶಗಳಲ್ಲಿ ವಿದ್ಯಾಭ್ಯಾಸ ತರಬೇತಿ ಪೂರ್ತಿಗೊಳಿಸಿದ ಬಳಿಕ ಆ

ವಿದ್ಯಾರ್ಥಿಗಳು ತಾವು ಬಂದಿರುವ ತಮ್ಮ ತಾಯ್ನಾಡುಗಳಿಗೆ ಮರಳಿ ಹೋಗದಿದ್ದಲ್ಲಿ ಅವರು ಪಡೆಯುವ ವಿದ್ಯಾಭ್ಯಾಸದ ಉದ್ದೇಶಗಳಿಗೂ ತಮ್ಮ ಮಾತೃಭೂಮಿಯ ಆವಶ್ಯಕತೆಗಳಿಗೂ ಯಾವ ಸಮರ್ಪಕವಾದ ಸಂಬಂಧವಿಲ್ಲದಿದ್ದಲ್ಲಿ ವಿದ್ಯಾಭ್ಯಾಸ ಕೊಡುವ ದೇಶವು ತಾನು ನೀಡುವ ಶಿಕ್ಷಣ ತರಬೇತಿಗಳು ತಾಯ್ನಾಡುಗಳ ಸಂಬಂಧ ವನ್ನು ಕಡಿಯುವಂತಹ ಮಾದರಿಯ ಶಿಕ್ಷಣವಾಗಿದ್ದಲ್ಲಿ, ಅದು ತೀರಾ ಹಾನಿಕರವಾದ ಶಿಕ್ಷಣವಾಗುವುದು. ಬುದ್ಧಿ ಪಲಾಯನವೆಂಬ ಪರಿಸ್ಥಿತಿಯು ಬೌದ್ಧಿಕ ಸಹಕಾರ ಕ್ಷೇತ್ರದಲ್ಲಿ ಅತಿ ದೊಡ್ಡ ಕಪಟ ನಾಟಕವಾಗಿದೆ. ಹಿಂದುಳಿದ ಬಡದೇಶಗಳಿಂದ ಮುಂದುವರಿದ ಶ್ರೀಮಂತ ರಾಷ್ಟ್ರಗಳಿಗೆ ತಜ್ಞರು ತಾಂತ್ರಿಕ ವಿಜ್ಞಾನಿಗಳೂ, ವಿದ್ವಾಂಸರೂ ಹೋಗುವುದು ; ಇದು ಬುದ್ಧಿ ಪಲಾಯನದ ಪ್ರಥಮ ಸ್ವರೂಪ. ಮುಂದುವರಿದ ದೇಶಗಳಿಂದ ತರಬೇತಿ ಹಾಗೂ ಶಿಕ್ಷಣ ಮುಕ್ತಾಯವಾದ ಬಳಿಕ ವಿದ್ಯಾರ್ಥಿಗಳು ಮರಳಿ ತಮ್ಮ ದೇಶಗಳಿಗೆ ವಾಪಸು ಬರದಿರುವುದು ಈ ಸಮಸ್ಯೆಯ ಮತ್ತೊಂದು ಕರಾಳ ಮುಖವಾಗಿದೆ. ಕೆನಡಕ್ಕೆ ಹೋಗುವ ವಿಜ್ಞಾನಿಗಳಲ್ಲಿ ಮುಕ್ಕಾಲು ಪಾಲು ಮಂದಿ ಹಾಗೂ ಅಮೇರಿಕಾದ ಸಂಯುಕ್ತ ರಾಷ್ಟ್ರಕ್ಕೆ ಬರುವ ವಿಜ್ಞಾನಿ ಇಂಜಿನಿಯರುಗಳಲ್ಲಿ ಅರ್ಧಪಾಲು ಮಂದಿ ಈ ತೆರನಾದವರು ಆಗಿರುತ್ತಾರೆ. ವಿದ್ಯಾಭ್ಯಾಸ ತಾಂತ್ರಿಕ ತರಬೇತಿಯ ಪರಿಣಾಮ ಬುದ್ಧಿ ಪಲಾಯನ! ಅಭಿವೃದ್ಧಿ ಹೊಂದುತ್ತಿರುವ, ಆರ್ಥಿಕ ಬೆಳವಣಿಗೆಗಾಗಿ ಪ್ರಯತ್ನಿಸುವ ಅನೇಕ ಹಿಂದುಳಿದ ರಾಷ್ಟ್ರ ಗಳ ಶಿಕ್ಷಣ ಪದ್ಧತಿಯು ಈ ಬುದ್ಧಿ ಪಲಾಯನದ ಪ್ರಶ್ನೆಯನ್ನು ಉತ್ತರಿಸಲು ಅಸಮರ್ಥವಾಗಿದೆ. ಇದು ಕೂಡಾ ಆಧುನಿಕ ರಾಷ್ಟ್ರಗಳ ಅತಿ ಮುಖ್ಯ ಶಿಕ್ಷಣ ಸಮಸ್ಯೆಗಳಲ್ಲಿ ಒಂದು ಗಂಭೀರ ಸಮಸ್ಯೆಯಾಗಿದೆ.

ಶಿಕ್ಷಣ ಪದ್ಧತಿಗಳಲ್ಲಿ, ಪ್ರಪಂಚದ ಅನೇಕ ರಾಜ್ಯಗಳಲ್ಲಿ ಈ ತೆರನಾದ ಗೊಂದಲಮಯ ಪರಿಸ್ಥಿತಿ ಉಂಟಾಗಿದೆ. ಇದೊಂದು ಸಾರ್ವತ್ರಿಕ ಸಮಸ್ಯೆ. ಆದರೂ ಗಂಭೀರವಾದ ಸಾರ್ವಜನಿಕ ಹಾಗೂ ಮಾನವ ಸಮಸ್ಯೆಯೆಂಬುದನ್ನು ಎಲ್ಲಾ ದೇಶಗಳ ವಿಚಾರವಂತರು ಮನವರಿಕೆ ಮಾಡಿಕೊಳ್ಳುವುದು ಆಗತ್ಯ.

ಕಲ್ಲಕೆರೆ ಮುಳುಕಟ್ಟೆಮ್ಮನ ಹಬ್ಬ

ಕೆ. ಸಿ. ಶಿವಲಿಂಗಸ್ವಾಮಿ

ಸಂಸ್ಕೃತಿಯಲ್ಲಿ ಮುಖ್ಯವಾದ ಒಂದು ಅಂಗವೆಂದರೆ ಜಾನಪದ. ಅದರ ಸಂಗ್ರಹ, ಅಧ್ಯಯನ, ವಿವೇಚನೆ ಮಹತ್ವಪೂರ್ಣವಾದವು. ಇಂತಹ ಸಂಗ್ರಹ ಆಗಬೇಕಾಗಿರುವುದು ಜಾನಪದಗಣಿಯಾಗಿರುವ ಪ್ರತಿಯೊಂದು ಹಳ್ಳಿಯಿಂದ. ಒಂದು ಹಳ್ಳಿ ಎಂದಾಗ, ಆ ಹಳ್ಳಿಯ ಜನಪದರಲ್ಲಿ ಕಾಣುವುದು ಅಲೌಕಿಕ ಶಕ್ತಿಯ ಬಗ್ಗೆ ಇರುವ ನಂಬಿಕೆ, ಸಂಪ್ರದಾಯ. ಈ ಜನಪದರು ಅದನ್ನು ಉಳಿಸಿಕೊಂಡು ಅದರಲ್ಲಿಯೇ ತಾವೂ ಒಂದಾಗಿ ಜೀವಿಸುತ್ತಿದ್ದಾರೆ. ಈ ಜನಪದ ನಂಬಿಕೆಗಳು,ಆಚರಣೆಗಳು ಮತ್ತು ಸಂಪ್ರದಾಯಗಳು ಅವರ ಬದುಕಿನ ಮತ್ತು ನಡವಳಿಕೆಯ ವಿವಿಧ ಮುಖಗಳನ್ನು ಚಿತ್ರಿಸುತ್ತವೆ. ಅವರ ಬಾಳು ಹಸನಾಗುವುದಕ್ಕೆ, ಸ್ಥಿರವಾಗಿರುವುದಕ್ಕೆ, ಸಮೃದ್ಧಿಯಿಂದ ಇರುವುದಕ್ಕೆ ಕೆಲವು ಆಚರಣೆ, ಸಂಪ್ರದಾಯಗಳಲ್ಲಿಟ್ಟಿರುವ ನಂಬಿಕೆಗಳು ಬಹಳಮಟ್ಟಿಗೆ ಕಾರಣವಾಗಿವೆ. ಇಂತಹ ನಂಬಿಕೆಗಳಿಂದ ಅನೇಕ ಪದ್ಧತಿಗಳು, ಆಚರಣೆಗಳು ಮತ್ತು ಸಂಪ್ರದಾಯಗಳು ಹುಟ್ಟಿಕೊಂಡು ಬದಲಾಗಿ ಬೇರೂರಿವೆ. ಇಂತಹ ಸಂಸ್ಕೃತಿಯು ಜನಪದರ (ಹಳ್ಳಿಯವರ) ಬದುಕನ್ನು ರೂಪಿಸುತ್ತವೆ. "Traditionally accepted concept, often of a cause and effect relationship, past, present or future accepted as a result of repeated and collective observation or perhaps finally of faith"[1] ಭಾವ ಪ್ರಧಾನವಾದ ಕಾರ್ಯಕಾರಣ ಸಂಬಂಧವಾದ ಭೂತ, ವರ್ತಮಾನ ಅಥವಾ ಭವಿಷ್ಯತ್ ಕಾಲದ ಒಪ್ಪಿತ ಫಲಿತಾಂಶಗಳಾದ ಇವು ಪರಂಪರಾನುಗತವಾದ ಶ್ರದ್ಧಾ ಮೂಲವಾದ ಸಾಮೂಹಿಕ ಸಮೀಕ್ಷೆಯಿಂದ ಪುನರಾವರ್ತಿತವಾಗಿರಬೇಕು. ಇಂತಹ ಒಪ್ಪಿತ ಫಲಿತಾಂಶವನ್ನು ಸೂಚಿಸುವ ಕಲ್ಪನೆ – ಜನಪದ ನಂಬಿಕೆಗಳು, ಆಚರಣೆ ಮತ್ತು ಪದ್ಧತಿಗಳು. ಹೀಗೆ ನಂಬಿಕೆಗಳನ್ನು ಉಳಿಸಿಕೊಂಡು ಆಚರಿಸುತ್ತಿರುವ ಸಂಪ್ರದಾಯಗಳಿಗೆ ಮುಖ್ಯ ಕಾರಣ ದೇವರು ಅಥವಾ ಯಾವುದೋ ಒಂದು ಅಲೌಕಿಕ ಶಕ್ತಿ ಎನ್ನಬಹುದು. ದೇವರು ಎಂದಾಗ ಒಂದು ಹಬ್ಬವಾಗಬಹುದು, ಒಂದು ಕುಲದೇವತೆಯ ಆರಾಧನೆಯಾಗಬಹುದು ಅಥವಾ ಒಂದು ಬಲಿಯಾಗಬಹುದು. ಇಂತಹ ಒಂದು ಹಬ್ಬದ

---

1. The Standard Dictionary of Folklore, Mythology and Legend, Vol. II.

ಬಗ್ಗೆ ಇರುವ ಸತ್ಯ ಕಥೆ, ಆಚರಣೆ, ನಡವಳಿಕೆ ಸಂಪ್ರದಾಯ ಮುಂತಾದವುಗಳನ್ನು ಪರಿಚಯ ಮಾಡಿಕೊಡುವುದೇ ಈ ಪ್ರಬಂಧದ ಉದ್ದೇಶ.

ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೋಕಿಗೆ ಸೇರಿದ್ದು, ಅಲ್ಲಿಂದ ಎರಡೂವರೆ ಮೈಲಿ ದೂರವಲ್ಲಿರುವ ಕಲ್ಲಕೆರೆ ಎಂಬುದು ಸಾಮಾನ್ಯ ಗ್ರಾಮ ಸುಮಾರು ಒಂದು ನೂರು ಮನೆಗಳನ್ನು ಹೊಂದಿರುವ ಈ ಗ್ರಾಮದಲ್ಲಿ ಒಕ್ಕಲಿಗರು,ಕುರುಬರು, ವಡ್ಡರು, ದಾಸವಸಿಗೆಯುವರು, ಆಚಾರರು ಮತ್ತು ಹರಿಜನ ಜಾತಿಯವರಿದ್ದಾರೆ. ಈ ಊರಿನಲ್ಲಿ ಮುಳುಕಟ್ಟಮ್ಮ ಎಂಬ ದೇವರು ಇದೆ. (ಇದನ್ನು ಹುಚ್ಚಮ್ಮ ಎಂದು ಸಹ ಕರೆಯುತ್ತಾರೆ). ಈ ದೇವರು ಇಡೀ ಗ್ರಾಮಕ್ಕೆ 'ಗ್ರಾಮ ದೇವತೆಯಾಗಿದೆ'. ಈ ದೇವರ ಬಗ್ಗೆ ಇರುವ ನಂಬಿಕೆ, ಸಂಪ್ರದಾಯ, ಈ ದೇವರ ಹಬ್ಬದ ಆಚರಣೆ ವಿಶಿಷ್ಟವಾದ ಹಾಗೂ ಕುತೂಹಲಕಾರಿಯಾಗಿವೆ. ಹಾಗೂ ಈ ದೇವರ ಇತಿಹಾಸದ ಬಗ್ಗೆ ಹೇಳುವ ಕಥೆ ಸ್ವಾರಸ್ಯಪೂರ್ಣವಾಗಿದೆ.

ಇತಿಹಾಸ: ಈ ದೇವರು ಈ ಊರಿನಲ್ಲಿ ಹೇಗೆ ನೆಲಸಿತು ಎಂಬುದರ ಬಗ್ಗೆ ಈ ರೀತಿ ಕಥೆ ಹೇಳುತ್ತಾರೆ. ಇದು ನಿಜವಾಗಿ ನಡೆದದ್ದು ಎಂದು ಹೇಳುತ್ತಾರೆ.–ಈ ದೇವರಿಗೆ ಸುಮಾರು ಮೂರು ನೂರು ವರ್ಷಗಳ ಹೆಚ್ಚು ಪ್ರಾಚೀನತೆ ಇದೆ. ಈ ಊರಿಗೆ ಬಹಳ ಹಿಂದಿನಿಂದ ಗ್ರಾಮದೇವತೆ ಇರಲಿಲ್ಲವಂತೆ. ಸುಮಾರು ಮೂರು ನೂರು ವರ್ಷಗಳ ಹಿಂದೆ ಒಂದು ದಿವಸ, ಈಗಿನ ಪೂಜಾರಿ ಹನುಮಯ್ಯನ ತಂದೆ ಮೂಡ್ಲಿಗಿರಿಯಪ್ಪ, ಇವರ ತಂದೆ ಹುಚ್ಚಣ್ಣ, ಇವರ ತಂದೆ ಕಣಿಯಪ್ಪ ಹಾಗೂ ಮನೆಯವರು ತಮ್ಮ ಮನೆ ದೇವರಾದ 'ದೊಡ್ಡ ಮುಳುಕಟ್ಟಮ್ಮನ' ದೇವಸ್ಥಾನಕ್ಕೆ ಪೂಜೆಗೆ ಹೋಗಿದ್ದರಂತೆ. ಈ ದೊಡ್ಡ 'ಮುಳುಕಟ್ಟಮ್ಮನ' ದೇವಸ್ಥಾನವಿರುವುದು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೋಕಿನ ದೊಡ್ಡ ಮುಳಕಟ್ಟೆ ಎಂಬ ಗ್ರಾಮದಲ್ಲಿ. ಪೂಜೆಗೆ ಹಣ್ಣು, ಕಾಯಿಯನ್ನು ಕೊಟ್ಟು ವಾಪಸ್ಸು ಪಡೆದಾಗ ಹೂವಿನ ಜೊತೆಯಲ್ಲಿ ಒಂದು 'ತಾಳಿ' ಇದ್ದಂತೆ. ಈ ತಾಳಿ ಹೇಗೆ ಬಂತು ಎಂಬುದು ಸಹ ಪೂಜಾರಿಗೆ ಗೊತ್ತಿರಲಿಲ್ಲವಂತೆ. ಆ ತಾಳಿಯನ್ನು ನೋಡಿದ ಕಣಿಯಪ್ಪನ ಮನೆಯವರು ಅದನ್ನು ವಾಪಸ್ಸು ದೇವಸ್ಥಾನಕ್ಕೆ ಕೊಟ್ಟರಂತೆ. ಮತ್ತೊಂದು ದಿವಸ ಪೂಜೆಗೆ ಹೋದಾಗ ಅದೇ ರೀತಿ ಹೂವಿನ ಜೊತೆಯಲ್ಲಿ ಮತ್ತೆ 'ತಾಳಿ' ಬಂತಂತೆ. ಹೀಗೆ ಆಗುತ್ತಿರುವುದು ಆ ದೇವಸ್ಥಾನದ ಪೂಜಾರಿಗೆ ಸಹ ತಿಳಿಯುತ್ತಿರಲಿಲ್ಲವಂತೆ. ಈ ಘಟನೆ ಜನರಲ್ಲಿ ಕುತೂಹಲ ಮತ್ತು ಆಶ್ಚರ್ಯವನ್ನು ಉಂಟುಮಾಡಿತು. ಕಣಿಯಪ್ಪನ ಮನೆಯವರು ಬೇರೆ ಕಡೆ ಶಾಸ್ತ್ರ ಕೇಳಿದಾಗ, ಶಾಸ್ತ್ರದವನು ಆ ತಾಳಿಯನ್ನು ನಿಮ್ಮ ಹತ್ತಿರವೇ ಇಟ್ಟುಕೊಳ್ಳಬೇಕು ಎಂದು ಹೇಳಿದನಂತೆ. ಅನಂತರ ಅವರು ಆ ತಾಳಿಯನ್ನು ತಂದು ಮನೆಯಲ್ಲಿ ಇಟ್ಟುಕೊಂಡರಂತೆ. ಸ್ವಲ್ಪ ದಿವಸಗಳ

ಅನಂತರ ದೇವರು ಅವರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ನಾನು ಇದೇ ಊರಿನಲ್ಲಿ ಒಡಮೂಡುತ್ತೇನೆ ಎಂದು ಹೇಳಿತಂತೆ. ಸ್ವಲ್ಪ ದಿವಸಗಳನಂತರ ಊರಿನ ಪಕ್ಕದಲ್ಲಿ ಎರಡು ಕಲ್ಲುಗಳು ಕಾಣಿಸಿಕೊಂಡವು. ಆ ಕಲ್ಲುಗಳು ಭೂಮಿಯಿಂದ ಮೇಲಕ್ಕೆ ಸುಮಾರು 6–8 ಅಂಗುಲ ಮೇಲೆ ಇವೆ. ಹೀಗೆ ಒಡಮೂಡಿದ (ಉತ್ಪತ್ತಿಯಾದ) ಕಲ್ಲುಗಳಿಗೆ ಒಂದು ಚಿಕ್ಕ ಕಟ್ಟಡವನ್ನು ಕಟ್ಟಿ ಅವುಗಳನ್ನು ರಕ್ಷಿಸಿದರು ಎಂದು ಹೇಳುತ್ತಾರೆ. ಇದನ್ನು ಗರ್ಭಗುಡಿ ಎಂದು ಕರೆಯುತ್ತಾರೆ. ಅವರಿಗೆ ಸಿಕ್ಕಿದ ತಾಳಿ ಹಿಂದಿನಿಂದ ಪರಂಪರಾನುಗತವಾಗಿ ಉಳಿದುಕೊಂಡು ಬಂದು ಇಂದಿಗೂ ಇಂದಿನ ಪೂಜಾರಿ ಹನುಮಯ್ಯನ ಮನೆಯಲ್ಲಿ ಇದೆ. ಹೀಗೆ ಅಂದಿನಿಂದ ಈ ದೇವರು ಕಲ್ಲಕೆರೆಗೆ ಗ್ರಾಮದೇವತೆಯಾಗಿ ನೆಲಸಿತು ಎಂದು ಹೇಳುತ್ತಾರೆ. ಮೇಲಿನ ಈ ಘಟನೆಗಳು ನಿಜವಾಗಿ ನಡೆದದ್ದು ಎಂದು ಈ ಊರಿನ ಹಿರಿಯರು ಹೇಳುತ್ತಾರೆ.

ಈ ದೇವರಿಗೆ ಸಂಬಂಧಪಟ್ಟ ಮತ್ತೆ ಕೆಲವು ಪೂರ್ಣವಾದ ಅಂಶಗಳೂ ಇವೆ. ಈ ದೇವರು ಊರಿನ ಎಲ್ಲ ಜಾತಿಯವರಿಗೂ ಸಂಬಂಧಪಟ್ಟದ್ದು ಹಾಗೂ ಗ್ರಾಮದೇವತೆ. ಈ ದೇವರ ಪೂಜೆಯನ್ನು ಮಾಡುವವರು ಹರಿಜನ ಜಾತಿಗೆ ಸೇರಿರುವ ಪೂಜಾರಿ ಹನುಮಯ್ಯ ಮತ್ತು ಅವರ ಮನೆಯವರು. ಬೇರೆ ಮನೆತನದವರು ಪೂಜೆ ಮಾಡುವಂತಿಲ್ಲ. ಇದು ಹಿಂದಿನಿಂದಲೂ ಉಳಿದುಕೊಂಡು ಬಂದಿರುವ ಸಂಪ್ರದಾಯ. ಈ ದೇವರು ಆ ಜಾತಿಯವರ ಪೂಜಾರಿಯನ್ನೇ ಹಾಗೂ ಮನೆತನದವರೇ ಪೂಜೆ ಮಾಡಬೇಕೆಂದು ಹೇಳಿತು ಎಂದು ಹೇಳುತ್ತಾರೆ. ಆ ದೇವರು ಇಲ್ಲಿ ಒಡಮೂಡಲು ಕಾರಣವೇದರೆ ಊರಿಗೆ ಶಾಂತಿ, ಒಳ್ಳೇದು ಆಗಲೆಂದು ಎನ್ನುತ್ತಾರೆ. ಈ ದೇವರಿಗೆ ಸಂಬಂಧಪಟ್ಟಂತೆ ಎರಡು ದೇವಸ್ಥಾನಗಳು ಇವೆ. ಒಂದು ಗರ್ಭಗುಡಿ ಮತ್ತೊಂದು 'ಮೆರೆ ದೇವರ' ದೇವಸ್ಥಾನ.

ಆಚರಣೆ: ಈ ದೇವರ ಹಬ್ಬವನ್ನು ವಿಜೃಂಭಣೆಯಿಂದ ಮಂಗಳವಾರ, ಬುಧವಾರ ಮತ್ತು ಗುರುವಾರ ಆಚರಿಸುತ್ತಾರೆ. ಮಂಗಳವಾರ ದೇವರಿಗೆ ಪಕ್ಷಿವಾಹನದ ಉತ್ಸವ. ಮಂಗಳವಾರ ದೇವರನ್ನು ಹೊಳೆಗೆ ಕೊಂಡೊಯ್ಯುತ್ತಾರೆ; ಅಂದರೆ ಊರಪಕ್ಕದಲ್ಲಿರುವ ದೊಡ್ಡ ಹಳ್ಳಕ್ಕೆ ಕೊಂಡೊಯ್ದು, ಅಲ್ಲಿ ಜೋಯಿಸರಿಂದ ಮಾತ್ರ ಪೂಜೆ ಸಲ್ಲಿಸುತ್ತಾರೆ. ಅನಂತರ ಸಂಜೆ ದೇವರಿಗೆ ಶೃಂಗಾರ ಮಾಡಿ ಅಲಂಕರಿಸಿದ ದೇವರನ್ನು ಸುಂದರವಾದ ಪಕ್ಷಿವಾಹನದಲ್ಲಿ ಇಟ್ಟು, ಪ್ರತಿಯೊಂದು ಬೀದಿಯಲ್ಲೂ ಮೆರವಣಿಗೆ ಮಾಡುತ್ತಾರೆ. ಮಡೆ ಆರತಿ ಹೆಣ್ಣುಮಕ್ಕಳು, ಬಾಯಿಬೀಗ ಇರುವ ಹೆಣ್ಣುಮಕ್ಕಳು* ಎಲ್ಲರೂ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ.

---

* ಹರಕೆಯನ್ನು ಹೊತ್ತ ಹೆಣ್ಣುಮಕ್ಕಳಿಗೆ ಈ ಹಬ್ಬದ ದಿವಸ ಬಾಯಿಗೆ ಉದ್ದವಾದ ಸೂಜಿಯನ್ನು ಚುಚ್ಚಿರುತ್ತಾರೆ. ಇವರು ಅಂದು ಉಪವಾಸ ಇರಬೇಕು. ಸೂಜಿಯನ್ನು ಚುಚ್ಚಿದಾಗ ಮಾತನಾಡಲು ಸಾಧ್ಯವಿಲ್ಲ. ಇದಕ್ಕೆ ಬಾಯಿ ಬೀಗ ಎಂದು ಕರೆಯುತ್ತಾರೆ.

ಅನಂತರ ದೇವರನ್ನು ಗರ್ಭಗುಡಿಗೆ ತಂದು ಇರಿಸುತ್ತಾರೆ. ಮಂಗಳವಾರದ ದೇವರ 'ಎಡೆ ಬಿಡಾರ'ಕ್ಕೆ ಪ್ರತಿಯೊಂದು ಮನೆಯಿಲ್ಲೂ ಒಂದು ಪಾವು ಅಕ್ಕಿ, ಒಂದು ಪಾವು ಎಣ್ಣೆ ಹಾಗೂ ಬೆಲ್ಲವನ್ನು ಸಂಗ್ರಹಿಸುತ್ತಾರೆ.

ಬುಧವಾರವೇ ಹೆಚ್ಚಿನ ಕಾರ್ಯಕ್ರಮವಿರುತ್ತದೆ. ಹಿಂದೆ ಗರ್ಭಗುಡಿಯ ಮುಂದೆ ದೇವರಿಗೆ ಬಲಿಯಾಗಿ ಕೋಣವನ್ನು ಕಡಿಯುತ್ತಿದ್ದರು. ಆದರೆ ಈಗ ಅದರ ಬದಲಾಗಿ ಹೋತ ಅಥವಾ ಟಗರನ್ನು ಬಲಿಕೊಡುತ್ತಾರೆ. ಅಂದು ಎಲ್ಲರ ಮನೆಯಲ್ಲೂ ಮಾಂಸದ ಊಟ. ಎಲ್ಲರ ಮನೆಗೂ ನೆಂಟರಿಷ್ಟರು ಕಿಕ್ಕಿರಿದು ಸೇರುತ್ತಾರೆ. ರಾತ್ರಿ ಊಟವಾದ ಅನಂತರ 11–12 ಗಂಟೆಗೆ ದೇವರ ಉತ್ಸವ ಪ್ರಾರಂಭವಾಗಿ ಬೆಳಗಿನ ತನಕ ನಡೆಯುತ್ತದೆ. ಅಂದು ದೇವರನ್ನು ಹೂವಿನ ಚಪ್ಪರದಲ್ಲಿಟ್ಟು ಮೆರವಣಿಗೆ ಮಾಡುತ್ತಾರೆ. ಈ ಉತ್ಸವದಲ್ಲಿ ನೆಂಟರಿಷ್ಟರೂ ಹೆಚ್ಚು ಭಾಗವಹಿಸುತ್ತಾರೆ. ಮೆರವಣಿಗೆಯಲ್ಲಿ ವಾಲಗ, ದೋಣು, ಅತಿ ಮುಂತಾದ ವಾದ್ಯಗಳನ್ನು ಬಳಸುತ್ತಾರೆ. ಇವುಗಳನ್ನು ಬಾರಿಸುವವರು ಅದೇ ಊರಿನ ಹರಿಜನರು. ಮೆರವಣಿಗೆ ಬರುವಾಗ ಪ್ರತಿಯೊಬ್ಬರ ಮನೆಯಲ್ಲೂ 'ಮಡ್ಲಕ್ಕಿ'† ಕೊಟ್ಟು ಪೂಜೆ ಮಾಡಿಸುತ್ತಾರೆ. ಉತ್ಸವ ಮುಗಿದನಂತರ ಮತ್ತೆ ದೇವರನ್ನು ಗರ್ಭಗುಡಿಗೆ ತಂದು ಇರಿಸುತ್ತಾರೆ.

ಗುರುವಾರದ ಕಾರ್ಯಕ್ರಮವು ಸಾಮಾನ್ಯವಾಗಿರುತ್ತದೆ. ಅಂದು ದೇವರನ್ನು ಊರಿಗೆ ಎರಡೂವರೆ ಫರ್ಲಾಂಗ್ ದೂರದಲ್ಲಿರುವ 'ಕಣಯ್ಯನ ಕಲ್ಲುಗುಡ್ಡೆ' ಹತ್ತಿರಕ್ಕೆ ಕೊಂಡೊಯ್ದು ಪೂಜೆಮಾಡಿಕೊಂಡು ಬರುತ್ತಾರೆ. ಈ ಕಣಯ್ಯನ ಕಲ್ಲುಗುಡ್ಡೆಯ ಬಗ್ಗೆ ಒಂದು ಐತಿಹ್ಯವನ್ನು ಹೇಳುತ್ತಾರೆ. ಬಹಳ ವರ್ಷಗಳ ಹಿಂದೆ ಕಣಯ್ಯ ಎಂಬ ಈ ದೇವರ ಪೂಜಾರಿ ಇದ್ದನು. ಅವನು ಕಣಿ ಹೇಳುತ್ತಿದ್ದನಂತೆ. ಕಣಿ ಹೇಳುವುದು ಅವನ ಒಂದು ವೃತ್ತಿಯಾಗಿತ್ತಂತೆ. (ಈಗಲೂ ಈ ಊರನ್ನು ಖಣಿ ಕಲ್ಲಕೆರೆ ಎಂದು ಕರೆಯುತ್ತಾರೆ.) ದೇವರು ಇವನ ಮೈಮೇಲೆ ಬರುತ್ತಿತ್ತಂತೆ. ಇವನು ನಿಧನ ಹೊಂದಿದಾಗ, ಈತನನ್ನು ಗುಂಡಿ ತೆಗೆದು ಮಣ್ಣಿನೊಳಕ್ಕೆ ಹೂಳದೆ, ನೆಲದ ಮೇಲೆ ಅವನ ಶವನನ್ನು ಇಟ್ಟು ಕಲ್ಲಿನಿಂದ ಮುಚ್ಚಿದರಂತೆ. ಅಂದಿನಿಂದ ಇದನ್ನು ಕಣಯ್ಯನ ಕಲ್ಲುಗುಡ್ಡೆ ಎಂದು ಕರೆಯುತ್ತಾರೆ. ಪ್ರತಿ ಹಬ್ಬದಲ್ಲೂ ದೇವರನ್ನು ಅಲ್ಲಿಗೆ ಕೊಂಡೊಯ್ದು ಪೂಜೆಮಾಡಿಕೊಂಡು ಬರುತ್ತಾರೆ. ಹೀಗೆ ಹೋದಾಗ ಆ ಗುಡ್ಡೆಗೆ ಪ್ರತಿಯೊಬ್ಬರು ಒಂದರಡು ಕಲ್ಲುಗಳನ್ನು ಹಾಕುತ್ತಾರೆ.

---

† ಮಡ್ಲಕ್ಕಿ : ಅಂದರೆ ದೇವರು ಮೆರವಣಿಗೆಯಲ್ಲಿ ಬರುವಾಗ ಪ್ರತಿಯೊಂದು ಮನೆಯವರು ಪೂಜೆ ಮಾಡಿಸುವಾಗ ಬಾಳೆಹಣ್ಣು, ತೆಂಗಿನಕಾಯಿ, ಕರ್ಪೂರ, ಎಲೇಅಡಕೆ ಮತ್ತು ಸ್ವಲ್ಪ ಅಕ್ಕಿಯನ್ನು ಕೊಡುತ್ತಾರೆ. ಇದಕ್ಕೆ 'ಮಡ್ಲಕ್ಕಿ' ಎಂದು ಕರೆಯುತ್ತಾರೆ.

ಕ್ರಮೇಣ ಇದು ದೊಡ್ಡ ಗುಡ್ಡೆ ಆಯಿತು. ಇಂದಿಗೂ ಸಹ ಕಣಯ್ಯನ ಕಲ್ಲುಗುಡ್ಡೆ ಇದೆ.

ಗಾವು : ಬಹಳ ವರ್ಷಗಳ ಹಿಂದೆ ಗುರುವಾರ ಸಂಜೆ ಗರ್ಭಗುಡಿಯ ಮುಂದೆ ಗಾವು ಸಿಗಿಯುತ್ತಿದ್ದರು. ಗಾವು ಸಿಗಿಯುವುದು ಪೂಜಾರಿ. ಎರಡು ಅಥವಾ ಮೂರು ಮರಿಗಳನ್ನು ಸಿಗಿದು ರಕ್ತ ಹೀರುತ್ತಿದ್ದನು. ಹೀಗೆ ಮಾಡುವಾಗ ದೇವರು ಅವನ ಮೈಮೇಲೆ ಬರುತ್ತಿತ್ತಂತೆ. ಗಾವು ಸಿಗಿಯುವಾಗ ಆತ ರೌದ್ರಾವತಾರ ತಾಳಿದವನಂತೆ ಕಾಣುತ್ತಾನೆ. ಆದರೆ ಇಂದು ಗಾವು ಸಿಗಿಯುವ ಕ್ರಮವಿಲ್ಲ.

ಸ್ವಾಮಗಳು (ಸೋಮಗಳು) : ದೊಡ್ಡ ಮುಖಗಳ ಆಕೃತಿಯನ್ನು ಹೊಂದಿರುವ ಎರಡು ಗೊಂಬೆಗಳು ಇವೆ. ಇವುಗಳ ಮುಖ ನೋಡಲು ಸ್ವಲ್ಪ ಭಯಂಕರವಾಗಿ ಕಾಣುತ್ತದೆ. ಸಣ್ಣಮಕ್ಕಳು ಥಕ್ಕನೆ ನೋಡಿದರೆ ಹೆದರುವ ರೀತಿ ಇರುತ್ತವೆ. ಇವುಗಳನ್ನು ದೂತರಾಯ ಮತ್ತು ಕೆಂಚರಾಯ ಎಂದು ಕರೆಯುತ್ತಾರೆ. ಈ ಸ್ವಾಮುಗಳನ್ನು ಬಟ್ಟೆಯಿಂದ ಅಲಂಕರಿಸಿ, ಮನುಷ್ಯರು ಧರಿಸಿಕೊಂಡು ಕುಣಿಯುತ್ತಾರೆ. ಕುಣಿಯುವವರು ಪೂಜಾರಯ್ಯನ ಮನೆತನಕ್ಕೆ ಸಂಬಂಧಪಟ್ಟವರು ಮಾತ್ರ. ಪ್ರತಿ ದಿವಸದ ಉತ್ಸವದಲ್ಲೂ ಇವು ಇದ್ದೇ ಇರಬೇಕು. ಇವು ಇಲ್ಲದೆ ಉತ್ಸವ ನಡೆಯುವುದಿಲ್ಲ. ಇವು ಪ್ರಧಾನವಾದ ಅಂಗಗಳು.

ಈ ದೇವರ ಹಾಗೂ ಹಬ್ಬದ ಬಗ್ಗೆ ಎಲ್ಲರ ಗಮನ ಸೆಳೆಯುವ ಅಂಶಗಳು : ಈ ದೇವರ ಪೂಜಾರರು ಹರಿಜನರಿಗೆ ಸಂಬಂಧಪಟ್ಟವರು. ಪೂಜೆಯನ್ನು ಒಂದೇ ಮನೆತನದವರು ನಡೆಸಿಕೊಂಡು ಬರುತ್ತಿದ್ದಾರೆ. ಬೇರೆ ಮನೆತದವರೂ ನಡೆಸುವಂತಿಲ್ಲ. ಈ ಹಬ್ಬವನ್ನು ಆಚರಿಸದಿದ್ದರೆ ಊರಿಗೆ ಕೆಡುಕಾಗುತ್ತದೆ, ಮಳೆ ಬೆಳೆ ಆಗುವುದಿಲ್ಲ, ದೇವರ ಬಗ್ಗೆ ಯಾರಾದರೂ ಹೀನವಾಗಿ ಕಂಡರೆ ಅವರಿಗೆ ಕೆಡುಕು ಕಟ್ಟಿಟ್ಟ ಬುತ್ತಿ ಎಂಬಂಥ ಹಲವಾರು ನಂಬಿಕೆಗಳು ಎಲ್ಲರಲ್ಲೂ ಇವೆ. ಇಂತಹ ನಂಬಿಕೆಗಳು ಎಲ್ಲರ ಬಾಳನ್ನು ನಿಯಂತ್ರಿಸಿ ಊರಿನಲ್ಲಿ ನೆಮ್ಮದಿಯ ಜೀವನಕ್ಕೆ ಕಾರಣವಾಗಿದೆ ಎನ್ನುತ್ತಾರೆ.

ಈ ದೇವರ ಮೂರು ದಿವಸದ ಉತ್ಸವದ ಮೆರವಣಿಗೆಯಲ್ಲಿ ವಾದ್ಯಗಳ ತಾಳಕ್ಕೆ ತಕ್ಕಂತೆ ನೂರಾರು ಪದಗಳನ್ನು ದೇವರಿಗೆ ಸಂಬಂಧಪಟ್ಟಂತೆ ಹಾಡುತ್ತಾರೆ. ಅವುಗಳಲ್ಲಿ ಕೆಲವನ್ನು ಸಂಗ್ರಹಿಸಿ ಉದಾಹರಣೆಗೆ ಕೆಲವನ್ನು ಇಲ್ಲಿ ಕೊಟ್ಟಿರುತ್ತೇನೆ :

ಹೇಳಿದವರು : ಶ್ರೀ ಗಂಗಪ್ಪ, ವಯಸ್ಸು ಸುಮಾರು 21, ಅನಕ್ಷರಸ್ಥ.
ಜಾತಿ : ಹರಿಜನ.

1. ಹಬ್ಬ ಬಂತ್ರೆಂದು ಹೆಬ್ಬಾವಿನಂಗೆ
ಹೆಬ್ಬಾಕಲಲ್ಲಿ ಮಲಗ್ಯಾವಳೆ, ಊರಗೌಡಗಳಿರs
ನೀವು ಹಬ್ಬಾಕೆ ಸಾರು ಕೊಡಿರಯ್ಯ ।

2. ಬಾಣತಿ ಹುಚ್ಚವ್ವ* ಬಾಳೆ ಎಲೆಯಲಿ ಉಂಡು
ದೇವನೂರು ಕೆರೆ ಹೊಳೆ ಮೆಟ್ಟಿ,
ಹೊಳೆ ಮೆಟ್ಟಿ ಬರುವಾಗ ದೇವಮಾನ್ಯರು ಹಸಿದವ್ರೆs ।

3. ಹೊಳೆಗೆ ಹೋಗುವಾಗ ಹೊಂಬಾಳೆ ಜಲ್ಲೆಂದು
ಹೊಳೆಗೆ ಹೋಗಿ ಗುಡಿಗೆ ಬರುವಾಗ
ನೀನಾಡಿದ ಮಡ್ಲಕ್ಕಿ ಚೆಲ್ಲಿ ಫಲವೇನು ।

4. ಆರು ಕೋಳಿ ಕೂದು ಮೂರು ಮಾಳಿಯು ನಾಕಿ ಹಾಡಿದರೆ
ನಾನು ಹಗೆಯಾನು ದೂತಣ್ಣ
ಓಡಿಬಾರೋ ಮಡಕೆ ತಡಕಾನ ।

5. ದೂತರಾಯ ಕೆಂಚರಾಯ ಇಬ್ಬರೂ ಒಬ್ಬ ತಾಯಿ ಮಕ್ಕಳು
ಕಣಿವೆ ಇಳಿವಾಗ ದೂತರಾಯ
ಹಾವು ಮೆಟ್ಟಿ ಹುಲಿಯ ಹೊಡೆದಾನು ।

6. ಸೂಳೇರ ಕೇರಿಗೆ ಹೋಗದಿರು ದೂತಣ್ಣ
ಹಾಡು ಕಟ್ಟವರೆ ನೀನ ಮೇಲೆ ದೂತಣ್ಣs
ಹೋಳು ಕಟ್ಟವರೆ ನಿನ ಸೆರಗಿಗೆss ।

7. ಆಗೋಯ್ತು ಹಾಗಲವಾಡಿ, ಕೋಳೋಯ್ತು ಕೊಲ್ಲಾಪುರ
ತನ್ನಟ್ಟಿಗೆ (ತನ್ನಪ್ಪಗೆ) ತಾನೇ ಹೋಯಿತು ಹೊನ್ನವಳ್ಳಿ
ಹೆಗ್ಗಡದೇವನಕೋಟೆಯ ಸೂರೆ ಕೊಟ್ಟವಳು ಇವಳೇಯs !

8. ಅಕ್ಕಕ್ಕ ತಂಗಿಯರು ಗಂಧಾವ ಇಡುವಲ್ಲಿ
ಚೆಂದಕ ಜೋತುರುವ ಉಡುಬಲ್ಲಿ ಹುಚ್ಚವ್ವನ
ಅಡ್ಡಗೆ ಹೆಗಲು ಕೊಡುಬಲ್ಲಿs ।

[ಕೃತಜ್ಞತೆಗಳು : ಈ ದೇವರ ಹಬ್ಬದ ಬಗ್ಗೆ ಹಾಗೂ ಇತಿಹಾಸದ ಬಗ್ಗೆ ಅನೇಕ ವಿಚಾರಗಳನ್ನು ತಿಳಿಸಿ ನನ್ನ ಕ್ಷೇತ್ರ ಕಾರ್ಯಕ್ಕೆ ನೆರವಾದ ಸೋದರಮಾವನವರಾದ ಶ್ರೀ ಹುಚ್ಚೇಗೌಡರಿಗೆ, ಶ್ರೀ ಕೆ. ಹೆಚ್. ದಾಸೇಗೌಡರಿಗೆ; ಹಾಗೂ ಶ್ರೀ ಪೂಜಾರಿಹನುಮಯ್ಯ, ಶ್ರೀ ಬಿ. ಪುಟ್ಟಶ್ಯಾಮಯ್ಯ, ಶ್ರೀಮತಿ ಅಕ್ಕನಿಂಗಮ್ಮ, ಶ್ರೀಮತಿ ಕೆಂಪಮ್ಮ ಮತ್ತು ಶ್ರೀ ಗಂಗಯ್ಯ ಹಾಗೂ ನೆರವಾದ ಇತರೆಯವರಿಗೂ ನನ್ನ ಹೃತ್ಪೂರ್ವಕ ವಂದನೆಗಳು].

* ಈ ಮುಳುಕಟ್ಟಮ್ಮನನ್ನು ಹುಚ್ಚಮ್ಮ ಎಂದು ಸಹ ಕರೆಯುತ್ತಾರೆ.

"ಏಕಣ್ಣೆ ಕಣ್ಣುಕಟ್ಟುಗಳ ನಡುವೆ*"

ಸುಮತೀಂದ್ರ ನಾಡಿಗ

ಬೇಂದ್ರೆಯವರ 'ಹಕ್ಕಿ ಹಾರುತಿದೆ ನೋಡಿದಿರಾ' ಎನ್ನುವ 'ಗರಿ' ಸಂಕಲನದಲ್ಲಿರುವ ಕವನದ ಬಗ್ಗೆ, ಮಾಸ್ತಿ ವೆಂಕಟೇಶ ಅಯ್ಯಂಗಾರರು, 'ನಾದಲೀಲೆ' ಸಂಗ್ರಹದ ಮುನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ :

> "...ಇವರನ್ನು ಬೆಳಗಾವಿಯ ಸಾಹಿತ್ಯ ಸಮ್ಮೇಳನದಲ್ಲಿ ಮತ್ತೆ ಕಂಡೆನು. ಆ ಸಮ್ಮೇಳನದಲ್ಲಿ ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ತಮ್ಮ ಕವನವನ್ನು ಓದಿದರು. ಅದನ್ನು ಕೇಳಿದ ಜನ ಎಂಥ ಆನಂದವನ್ನು ಅನುಭವಿಸಿದರೆಂದು ಈಗ ಹೇಳುವುದು ಸಾಧ್ಯವಿಲ್ಲ. ಆ ಕವಿತೆಯ ಎಲ್ಲ ಅರ್ಥವನ್ನೂ ಅರಿಯುವುದಕ್ಕೆ ಆ ಒಂದು ಓದು ಸಾಕಲ್ಲವೇ ಅಲ್ಲ; ಆದರೆ ಆ ಒಂದು ಓದಿನಿಂದ ಕಂಡಷ್ಟು ಕಾವ್ಯ ಗುಣದಿಂದಲೇ ಸಾವಿರ ಜನರ ಸಭೆ ಚಕಿತವಾಯಿತು. ಕಾವ್ಯ ಪ್ರಪಂಚದಲ್ಲಿ ಬಳಕೆಯುಳ್ಳವರು ಈ ಕವಿಯ ಶಕ್ತಿ ಇವನದೇ ಆದ ಒಂದು ಹೊಸ ಶಕ್ತಿ ಎಂದು ಮನಗಂಡರು."

ಈ ಕವನವನ್ನು ಕುರಿತು ಅದೇ ಮುನ್ನುಡಿಯಲ್ಲಿ ಇನ್ನೊಂದು ಕಡೆ "ಬುದ್ಧಿಯ ಅಥವ ಆತ್ಮದ ಅರಿವಿಗೆ ಮಾತನ್ನು ಕೊಡುವ ಗೀತ"ವೆಂದು ಮಾಸ್ತಿಯವರೇ ಹೇಳಿದ್ದಾರೆ. ಇನ್ನೂ ಸ್ವಲ್ಪ ಮುಂದೆ "ಇವರು ಪದ್ಯಗಳನ್ನೋದುವಾಗ ಕೇಳುತ್ತ ನಾನು ಅವುಗಳ ಸೊಗಸಿಗೆ ಮರುಳಾಗಿದೇನೆ. ಮರುಳು ಎಂದರೆ ಜನರು ಸರಿಯಾಗಿ ಅರ್ಥಮಾಡಿಕೊಳ್ಳುವರೋ ಇಲ್ಲವೋ ನನಗೆ ಸಂದೇಹ. ಆದರೆ ಆ ಸಂದರ್ಭದಲ್ಲಿ ನನ್ನಂತೆ ಅನೇಕರಿಗೆ ಒದಗುವ ಸ್ಥಿತಿ ಆನಂದದಿಂದ ಉಂಟಾಗುವ ಮರುಳು ಎಂದೇ ಹೇಳಬೇಕು. ಬೇಂದ್ರೆಯವರು ಬೆಳಗಾವಿಯಲ್ಲಿ 'ಹಕ್ಕಿ ಹಾರುತಿದೆ ನೋಡಿದಿರಾ'ಎಂಬ ಪದ್ಯವನ್ನು ಓದುವಾಗ ತಲೆಗೆ ಹಿಂದುಸ್ಥಾನದ ಪಗಡಿಯೊಂದನ್ನು ಸುತ್ತಿ ನಿಂತಿದ್ದರು. ಇವರ ಆಗಿನ ನಿಲುವು ನನ್ನ ಕಣ್ಣಿಗೆ ಗಾರುಡಿಗನೊಬ್ಬನ ನಿಲುವಂತೆ ಕಂಡಿತು. ಈಗಲೂ ನನಗೆ ಬೇಂದ್ರೆಯವರ ಸಹಜವಾದ ನಿಲುವು ಆ ಗಾರುಡಿಗನ ನಿಲುವೆಂದು ಕಾಣುತ್ತದೆ. ಅವರನ್ನು ಕುರಿತು ನಾನು ಬರೆದ ಒಂದು ಅಪ್ಪಟಪಟ್ಟದಿಯಲ್ಲಿ ಈ

*ಈ ವಿಮರ್ಶೆಗೆ ಪ್ರತಿಕ್ರಿಯೆಗಳನ್ನು ಸ್ವಾಗತಿಸಲಾಗುವುದು :-ಸಂಪಾದಕರು.

ಅಭಿಪ್ರಾಯಕ್ಕೆ ರೂಪುಕೊಟ್ಟೆನು. ಮರುಳುಮಾಡು, ಗಾರುಡಿಗ ಎಂಬ ಮಾತುಗಳಲ್ಲಿ ಈಗ ನಮಗೆ ಅಲ್ಪ ಕಲ್ಪನೆಗಳು ಕಾಣುತ್ತವೆ. ಅವುಗಳ ಮೂಲ ಅರ್ಥದಲ್ಲಿ ಶಕ್ತಿ, ಕಾಂತಿ, ಓಜಸ್ಸು ಮಾತ್ರ ಸೂಚಿತವಾಗುತ್ತದೆ. ಅಷ್ಟನ್ನು ಮಾತ್ರ ನಾನು ಇಲ್ಲಿ ಉದ್ದೇಶಿಸಿದ್ದೇನೆ" ಎಂದು ಹೇಳಿದ್ದಾರೆ. ಸುಮಾರು ಐವತ್ತು ವರ್ಷಗಳಿಂದ ಇದೊಂದು ಅತ್ಯುತ್ತಮ ಕವನ ಎನ್ನುವ ಅಭಿಪ್ರಾಯ ಉಳಿದು ಬಂದಿದೆ.

ಇರುಳಿರುಳಳಿದು ದಿನದಿನ ಬೆಳಗೆ
ಸುತ್ತಮುತ್ತಲೂ ಮೇಲಕೆ ಕೆಳಗೆ
ಗಾವುದ ಗಾವುದ ಗಾವುದ ಮುಂದೆ
ಎವೆತೆರೆದಿಕ್ಕುವ ಹೊತ್ತಿನ ಒಳಗೆ
ಹಕ್ಕಿ ಹಾರುತಿದೆ ನೋಡಿದಿರಾ ?

ರಾತ್ರಿಯಾದಮೇಲೆ ರಾತ್ರಿ ಕಳೆದಹಾಗೆ,ದಿನವಾದ ಮೇಲೆ ದಿನ ಬೆಳಕಾದಹಾಗೆ ಸುತ್ತಮುತ್ತಲೂ, ಮೇಲೆ ಕೆಳಗೆ ಕೂಡ, ಕಣ್ಣು ಮಿಟುಕಿಸುವಷ್ಟರಲ್ಲಿ, ಈ ಹಕ್ಕಿ ಗಾವುದಗಟ್ಟಲೆ ಹಾರಿರುತ್ತದೆ. ಇದು ತಾತ್ಪರ್ಯ.

ರಾತ್ರಿಯಾದಮೇಲೆ ಹಗಲೆನ್ನುವ ಬದಲು, ರಾತ್ರಿಯಾದಮೇಲೆ ರಾತ್ರಿ ಎನ್ನುವುದಕ್ಕೆ ವಿಶೇಷ ಅರ್ಥವೇನಾದರೂ ಇದೆಯೆ ?

ಈ ಹಕ್ಕಿ ನಮ್ಮ ಸುತ್ತಮುತ್ತಲೂ ಸುತ್ತಬಹುದೇ ಹೊರತು, ಮುಂದೆ ಮುಂದೆ ಹೋಗುವುದು ಹೇಗೆ ? ಸುತ್ತಮುತ್ತಲೂ ಹೋಗುತ್ತಿರುವಾಗ ಮೇಲೆ ಮತ್ತು ಕೆಳಗೆ ಹಾರುವುದು ಹೇಗೆ ?

ಇರುಳು, ಹಗಲು, ಎವೆತೆರೆದಿಕ್ಕುವುದು ಕಾಲದ ಅಂಶಗಳಾಗಿರುವಾಗ,ಈ ಕಾಲ ಪಕ್ಷಿ 'ಸುತ್ತಮುತ್ತಲೂ ಮೇಲಕೆ ಕೆಳಗೆ ಗಾವುದ ಗಾವುದ ಗಾವುದ ಮುಂದೆ' ಎನ್ನುವ ದೇಶದ ಪರಿಮಿತಿಯಲ್ಲಿ ಕಾಲದ ಅಂಶದಲ್ಲೇ ಹಾರುವುದು ಎಂದರೇನು ?

ಕರಿನರೆ ಬಣ್ಣದ ಪುಚ್ಚಗಳುಂಟು
ಬಿಳಿ-ಹೊಳೆ ಬಣ್ಣ ಗರಿ-ಗರಿಯುಂಟು
ಕೆನ್ನನ ಹೊನ್ನನ ಬಣ್ಣ-ಬಣ್ಣಗಳ
ರೆಕ್ಕೆಗಳೆರಡೂ ಪಕ್ಕದಲುಂಟು
ಹಕ್ಕಿ ಹಾರುತಿದೆ ನೋಡಿದಿರಾ !

ಈ ಕಾಲಪಕ್ಷಿಯ ಪುಚ್ಚಗಳು ಕಪ್ಪು ಮತ್ತು ಬಿಳಿ ಬಣ್ಣದವು. ಇದರ ಗರಿಗಳು ಬಿಳಿ-ಹೊಳೆ ಬಣ್ಣದವು. ಇದರ ರೆಕ್ಕೆಗಳ ಬಣ್ಣ ಕೆಂಪು ಮತ್ತು ಬಂಗಾರದ ಬಣ್ಣ. ಇಂಥ ಹಕ್ಕಿ ಹಾರುತ್ತಿದೆ—ಎನ್ನುವುದು ತಾತ್ಪರ್ಯ.

ಪುಚ್ಚ ಎಂದರೆ ಬಾಲ ಅಥವ ಹಿಂಬದಿ. ಈ ಹಕ್ಕಿಗೆ ಎಷ್ಟು ಪುಚ್ಚಗಳಿವೆ ಅಥವ ಹಿಂಬದಿಗಳಿವೆ ?

ಇದರ ಗರಿಗಳ ಬಣ್ಣ ಬಿಳಿ-ಹೊಳೆ ಅಂದರೆ ಹೊಳೆಯುವ ಬಿಳಿಬಣ್ಣವಾದರೆ ಇದರ ರೆಕ್ಕೆಗಳು ಕೆಂಪು ಮತ್ತು ಬಂಗಾರದ ಬಣ್ಣದಿಂದಿರುವುದು ಹೇಗೆ ಸಾಧ್ಯ ?

ನೀಲಮೇಘಮಂಡಲ-ಸಮ ಬಣ್ಣ !
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ !
ಚಿಕ್ಕೆಯಮಾಲೆಯು ಸಿಕ್ಕಿಸಿಕೊಂಡು
ಸೂರ್ಯ-ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ ?

ಇದರ ಬಣ್ಣ ಅಂದರೆ ಈ ಹಕ್ಕಿಯ ಬಣ್ಣ ನೀಲಮೇಘದ ಸಮೂಹದ ಬಣ್ಣ. ಇದನ್ನು ನೋಡಿದರೆ ಆಕಾಶಕ್ಕೆ ರೆಕ್ಕೆಗಳು ಮೂಡಿದ ಹಾಗೆ ಕಾಣುತ್ತದೆ. ಈ ಹಕ್ಕಿ ನಕ್ಷತ್ರಗಳ ಮಾಲೆಯನ್ನು ಹಾಕಿಕೊಂಡು, ಸೂರ್ಯ ಮತ್ತು ಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಂಡಿದೆ. ಇಂಥ ಹಕ್ಕಿ ಹಾರುತ್ತಿದೆ-ಇದು ಈ ಚರಣದ ತಾತ್ಪರ್ಯ.

ಹಕ್ಕಿಯ ಮೈಬಣ್ಣ ನೀಲಮೇಘಗಳ ಬಣ್ಣ ಎಂದು ಒಪ್ಪಿಕೊಳ್ಳೋಣ. ಈ ಹಕ್ಕಿ ಎಷ್ಟು ದೊಡ್ಡದೆಂದರೆ ಇದರ ದೇಹ ಆಕಾಶದಷ್ಟು ದೊಡ್ಡದು ಎಂದೂ ಇಟ್ಟುಕೊಳ್ಳೋಣ. ಇದು ನಕ್ಷತ್ರಗಳ ಮಾಲೆಯನ್ನು ಹಾಕಿಕೊಂಡಿದೆ ಎಂದೂ ಊಹಿಸಿಕೊಳ್ಳೋಣ. ಆದರೆ ಇದು ಸೂರ್ಯಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಳ್ಳುವುದು ಹೇಗೆ ? ಒಂದುವೇಳೆ ಸೂರ್ಯಚಂದ್ರರೆ ಇದರ ಕಣ್ಣುಗಳು ಎಂದಿಟ್ಟುಕೊಂಡರೂ ಇದರ ಒಂದು ಕಣ್ಣು ಪ್ರಕಾಶಮಾನವಾಗಿದೆ ಇನ್ನೊಂದು ಕಣ್ಣು ಕುರುಡು ಎಂದು ಚಿತ್ರಿಸಿಕೊಳ್ಳಬೇಕೆ ? ಇದು ಆಕಾಶದಷ್ಟು ದೊಡ್ಡ ಹಕ್ಕಿಯಾದದ್ದೆ ಆದರೆ ಇದು ಗಾವುದ ಗಾವುದ ಮುಂದೆ ಹಾರಿದ್ದನ್ನು ನೋಡುವುದು ಹೇಗೆ ? ಅದು ನಿಜವಾಗಿಯೂ ಗಾವುದ ಗಾವುದ ಹಾರುತ್ತಿದೆಯೆ?

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಡಲ-ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ-ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ ?

ಈ ಪಕ್ಷಿ ರಾಜ್ಯಗಳ ಮತ್ತು ಸಾಮ್ರಾಜ್ಯಗಳ ತೆನೆಗಳನ್ನು ಒಕ್ಕಲುಮಾಡುತ್ತದೆ. ಮಂಡಲಗಳನ್ನು ಖಂಡಿತವಾಗಿಯೂ (ಅಥವಾ ಗಬಗಬನೆ) ನುಂಗುತ್ತದೆ. ಖಂಡಗಳನ್ನು ತೇಲಿಸುತ್ತದೆ ಮುಳುಗಿಸುತ್ತದೆ. ಸಾರ್ವಭೌಮರ ನೆತ್ತಿಯನ್ನು ಕುಕ್ಕುತ್ತದೆ. ಇಂಥ ಹಕ್ಕಿ ಹಾರುತ್ತಿದೆ--ಇದು ತಾತ್ಪರ್ಯ.

ಈ ಹಕ್ಕಿ ತೆನೆಗಳನ್ನು ತಾನೇ ತುಳಿಯುತ್ತದೆಯೆ? ಯಾವಾಗಲೂ ಹಾರುತ್ತಿರುವ ಈ ಹಕ್ಕಿ ಅದನ್ನು ಹೇಗೆ ಬೆಳೆಯಿತು ? ಕೊನೆಯ ಚರಣದಲ್ಲಿ ಇದು

ದಿಗ್ಮಂಡಲಗಳಿಗಿಂತ ದೊಡ್ಡದಾದ ಹಕ್ಕಿ ಎಂಬ ವರ್ಣನೆಯಿದೆ. ಇದು ಆಕಾಶಕ್ಕಿಂತ ದೊಡ್ಡದಾಗಿದೆ ಅನ್ನುವ ಮಾತು ಮುಂಚೆಯೇ ಬಂದಿದೆ. ಇಂಥ ಹಕ್ಕಿ ಒಕ್ಕಲು ಮಾಡುವ ಚಿತ್ರವನ್ನು ಕಲ್ಪಿಸಿಕೊಳ್ಳುವುದು ಹೇಗೆ ? ಮಂಡಲ ಎಂದರೆ ಗೋಳ, ಪ್ರಭಾವಲಯ, ಭೂಪ್ರದೇಶ, ಸಾಮ್ರಾಜ್ಯ, 48 ದಿವಸ, ಮಂಡಲದ ಹಾವು ಎಂದೆಲ್ಲ ಆಗುತ್ತದೆ. ಸಾಮ್ರಾಜ್ಯದ ತೆನೆಗಳನ್ನು ಒಕ್ಕುವುದು ಇದು ತಾನು ತಿನ್ನುವುದಕ್ಕಾಗಿಯೆ ? ಮಂಡಲಗಳೇ (ಭೂ ಪ್ರದೇಶಗಳೇ) ಕಾಳುಗಳೇ ? ಖಂಡ ಎಂದರೂ ಒಂದು ಭೂಭಾಗ (ಅಥವ ದೇಹದ ಭಾಗ) ಎನ್ನುವ ಅರ್ಥವಿದೆ. ಖಂಡಗಳನ್ನು ತಿನ್ನುವುದೇ ಅಲ್ಲದೆ ಮುಳುಗಿಸುವುದು ಏಕೆ? ಮಂಡಲಗಳನ್ನು ತಿಂದಾಗ ಅಥವ ಖಂಡಗಳನ್ನೂ ಮುಳುಗಿಸಿದಾಗ ಸಾರ್ವಭೌಮರು ಹಕ್ಕಿಯ ಹೊಟ್ಟೆಯನ್ನು ಸೇರುತ್ತಾರೆ ಅಥವ ನೀರಿನಲ್ಲಿ ಮುಳುಗಿಹೋಗುತ್ತಾರೆ. ಹಾಗಿದ್ದಾಗ ಈ ಹಕ್ಕಿ ಸಾರ್ವಭೌಮರ ನೆತ್ತಿಯನ್ನು ಕುಕ್ಕುವುದು ಹೇಗೆ? ಆಕಾಶಕ್ಕಿಂತ ದೊಡ್ಡದಾದ ಈ ಹಕ್ಕಿಗೆ ಸಾರ್ವಭೌಮರ ತಲೆಗಳು ಅಣುವಿಗಿಂತ ಚಿಕ್ಕದಾಗಿ ಕಾಣಿಸದೆ ಹೋಗುವುದರಿಂದ, ಈ ಹಕ್ಕಿ ಅವರ ತಲೆಗಳನ್ನು ಕುಕ್ಕುವ ಬಗೆ ಹೇಗೆ? ಹಾಗೆ ಕುಕ್ಕಬೇಕಾದಾಗ ಈ ಹಕ್ಕಿ ತನ್ನ ಭಾರೀ ದೇಹವನ್ನು ಕುಗ್ಗಿಸಿಕೊಂಡು ಬರುತ್ತದೆಯೇ? [ಈ ವಿವರವನ್ನು ಕವಿ ಕೊಟ್ಟಿಲ್ಲ]

'ಒಕ್ಕಿ' ಎನ್ನುವುದಕ್ಕೆ 'ಮುಕ್ಕಿ' ಮತ್ತು 'ಕುಕ್ಕಿ' ಕೇವಲ ಪ್ರಾಸಕ್ಕಾಗಿ ಬಂದಿಲ್ಲವೇ ?

ಯುಗ-ಯುಗಗಳ ಹಣೆ ಬರಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ ?

ಈ ಹಕ್ಕಿ ಯುಗಗಳ ಹಣೆಬರಹವನ್ನು ಅಳಿಸಿ ಹಾಕುತ್ತದೆ ; ಮನ್ವಂತರಗಳ ಭಾಗ್ಯವನ್ನು ತೆರೆಸುತ್ತದೆ. ತನ್ನ ರೆಕ್ಕೆಯನ್ನು ಪ್ರೀತಿಯಿಂದ ಬೀಸುತ್ತ ಮನ್ವಂತರಗಳಿಗೆ ಚೈತನ್ಯವನ್ನು ತುಂಬುತ್ತದೆ. ಹೊಸಕಾಲದ ಎಳೆಮಕ್ಕಳನ್ನು ಹರಸುತ್ತದೆ. ಇಂಥ ಹಕ್ಕಿ ಹಾರುತ್ತಿದೆ–ಇದು ತಾತ್ಪರ್ಯ.

ಯುಗಗಳ ಹಣೆಬರಹವನ್ನು ಹೇಗೆ ಒರಸುತ್ತದೆ ? ತನ್ನ ಕಾಲುಗಳಿಂದಲೆ ? ರೆಕ್ಕೆಗಳಿಂದಲೇ ? ಕೊಕ್ಕಿನಿಂದಲೆ ? ಮನ್ವಂತರ ಭಾಗ್ಯಗಳನ್ನು ತೆರೆಸುವ ವಿಧಾನ ಯಾವುದು ? ಅವುಗಳನ್ನು ಅಥವ ಹಸುಮಕ್ಕಳನ್ನೂ ಚೇತನಗೊಳಿಸುವುದಕ್ಕೆ ಇದಕ್ಕೆ ಪೋಷಕರ ಹೊಣೆಯನ್ನೂ ಹೊರುತ್ತದೆಯೆ ? ಇಷ್ಟು ದೊಡ್ಡ ಹಕ್ಕಿ ರೆಕ್ಕೆ ಬೀಸಿದರೆ ಹಸುಮಕ್ಕಳು ಹಾರಿ ಹೋಗುವುದಿಲ್ಲವೆ? ಯುಗಗಳ ಹಣೆಬರಹವನ್ನು ಅಳಿಸಿ

ಹಾಕಿದಾಗ ಮನ್ವಂತರ ಭಾಗ್ಯಗಳಿಗೂ ಅದರ ಪರಿಣಾಮ ಬೀಳುವುದಿಲ್ಲವೆ? ಒಂದು ಮನ್ವಂತರವೆಂದರೆ 4,320,000 ಮನುಷ್ಯನ ವರ್ಷಗಳು ಅಥವ 71 ಯುಗಗಳು. ಮನ್ವಂತರಗಳ ಭಾಗ್ಯವನ್ನು ತೆರೆಸಿದಾಗ ಯುಗಗಳ ಭಾಗ್ಯವನ್ನೂ ತೆರೆಸಿದಂತಾಗ ಲಿಲ್ಲವೆ? ಈ ಹಕ್ಕಿ ಇನ್ನೂ ಕೆಲವು ಅದ್ಭುತಗಳನ್ನು ಮಾಡುತ್ತದೆ:

ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ?

ಈ ಹಕ್ಕಿ ಬೆಳ್ಳಿಯ ಹಳ್ಳಿಯುನ್ನು ಗಡಿಯನ್ನು ದಾಟಿಹೋಗಿ, ತಿಂಗಳಿನೂರಿನ (ಚಂದ್ರಲೋಕದ) ನೀರನ್ನು ಕುಡಿದು, ಆಟವಾಡುವುದಕ್ಕಾಗಿ, ಹಾಡುವುದಕ್ಕಾಗಿ ಮತ್ತು ಹಾರಾಡುವುದಕ್ಕಾಗಿ ಮಂಗಳಲೋಕದ ಅಂಗಳವನ್ನು ಸೇರುತ್ತದೆ. ಇಂಥ ಹಕ್ಕಿ ಹಾರುತ್ತಿದೆ–ಇದು ತಾತ್ಪರ್ಯ.

ಬೆಳ್ಳಿ ಅಂದರೆ ಲೋಹ ಮತ್ತು ಶುಕ್ರಗ್ರಹ ಎರಡೂ ಅರ್ಥವಿದೆ. ಬೆಳ್ಳಿಯ ಹಳ್ಳಿ ಎಂದರೆ ಬೆಳ್ಳಿಗಿರುವ ಹಳ್ಳಿ. ಇದನ್ನು ಶುಕ್ರಗ್ರಹವೇ ಎಂದಿಟ್ಟುಕೊಳ್ಳೋಣ, ಶುಕ್ರಗ್ರಹದ ಗಡಿಯನ್ನು ದಾಟಿಹೋದರೆ, ಚಂದ್ರನ ನೀರನ್ನು ಕುಡಿಯುವುದು ಹೇಗೆ? ಚಂದ್ರಗ್ರಹದ ಆಚೆಗೆ ಶುಕ್ರಗ್ರಹವಿದೆಯೆನ್ನುವುದು ಕವಿಗೆ ಗೊತ್ತಿಲ್ಲವೆ? ಹೋಗಲಿ, ಮೊದಲೇ ತಿಂಗಳೂರಿನ ನೀರನ್ನು ಕುಡಿಯಿತು ಎಂದಿಟ್ಟುಕೊಳ್ಳೋಣ ಆದರೆ ಚಂದ್ರ ಈ ಹಕ್ಕಿಯ ಒಂದು ಕಣ್ಣು ಎಂದು ಈ ಮುಂಚೆಯೇ ಕವಿ ಹೇಳಿದ್ದಾರೆ. ಆದ್ದರಿಂದ ಈ ಹಕ್ಕಿ ತನ್ನ ಕಣ್ಣೀರನ್ನೇ ಕುಡಿಯುತ್ತದೆ ಎಂದುಕೊಳ್ಳಬೇಕೆ? ಚಂದ್ರ ಈ ಹಕ್ಕಿಯ ಕಣ್ಣಾಗುವುದಾದರೆ, ಅದು ಊರೂ ಹೇಗೆ ಆಗುತ್ತದೆ? ಶುಕ್ರಗ್ರಹ ಚಂದ್ರನಿಗಿಂತ ದೊಡ್ಡದು. ಆದ್ದರಿಂದ ಶುಕ್ರಗ್ರಹ ಹಳ್ಳಿಯಾಗಿ, ಚಂದ್ರಗ್ರಹ ಊರಾಗುವುದು ಹೇಗೆ? ಕವಿಗೆ ಪ್ರಮಾಣಗಳ ಜ್ಞಾನವಿಲ್ಲವೆ? ಇನ್ನು ಮಂಗಳ ಲೋಕದ ಅಂಗಳಕ್ಕೆ ಏರುವ ಮಾತು. ಮಂಗಳ ಗ್ರಹ ಭೂಮಿಯ ಅರ್ಧದಷ್ಟು ಗಾತ್ರದ್ದಿರುವಾಗ, ಇಷ್ಟು ದೊಡ್ಡ ಹಕ್ಕಿ ಮಂಗಳಲೋಕದ ಅಂಗಳದಲ್ಲಿ ಆಡುವುದಕ್ಕೆ, ಹಾರಾಡುವುದಕ್ಕೆ ಹೋಗುವುದು ಹುಚ್ಚು ಪ್ರಯತ್ನವಾಗುವುದಿಲ್ಲವೆ? ಅಲ್ಲದೆ ಈ ಹಕ್ಕಿ ಭೂಮಿಗಿಂತ ದೊಡ್ಡದು ಬೇರೆ. ರೆಕ್ಕೆಯನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಆಕಾಶಕ್ಕಿಂತ ದೊಡ್ಡದು. ಎಷ್ಟು ದೊಡ್ಡದೆಂದರೆ:

ಮುಟ್ಟಿದೆ ದಿಗ್ಮಂಡಲಗಳ ಅಂಚ
ಆಚೆಗೆ ಚಾಚಿದೆ ತನ್ನಯ ಚುಂಚ
ಬ್ರಹ್ಮಾಂಡಗಳನು ಒಡೆಯಲು ಎಂದು
ಬಲ್ಲರು ಯಾರಾ ಹಾಕಿದ ಹೊಂಚ
ಹಕ್ಕಿ ಹಾರುತಿದೆ ನೋಡಿದಿರಾ?

ಈ ಪಕ್ಕಿಯು ಗಾತ್ರ ದಿಗ್ಮಂಡಲಗಳ ತುದಿಯನ್ನು ಮುಟ್ಟಿದೆ. ಅದರ ಆಚೆಗೆ ಅದರ ಕೊಕ್ಕಿದೆ. ಇದು ಬಹುಶಃ ಬ್ರಹ್ಮಾಂಡಗಳನ್ನು ಒಡೆಯಲಿಕ್ಕೆ ಹೊಂಚು ಹಾಕಿದೆಯೋ ಏನೋ ! ಇಂಥ ಹಕ್ಕಿ ಹಾರುತ್ತಿದೆ—ಇದು ತಾತ್ಪರ್ಯ.

ಇದರ ದೇಹ ದಿಗ್ಮಂಡಲಗಳ ಅಂಚನ್ನು ಮುಟ್ಟಿದೆ ಎಂದಾಗ ಸೃಷ್ಟಿಯ ಪ್ರತಿಯೊಂದು ವಸ್ತುವು ಚಂದ್ರ ಸೂರ್ಯ ನಕ್ಷತ್ರಗಳು–ಎಲ್ಲವೂ ಇದರ ದೇಹದ ಅಂಗವಾಗಿರಬೇಕು. ಅಂದರೆ ಬ್ರಹ್ಮಾಂಡವೇ ಇದರ ಶರೀರವಾಗಿರಬೇಕು. ಬ್ರಹ್ಮಾಂಡವೇ ಇದರ ಶರೀರವಾಗಿರುವಾಗ ಇದು ಖಂಡಗಳನ್ನು ಮುಳುಗಿಸುತ್ತದೆ ಅಂದರೆ ತನ್ನ ಮಾಂಸಖಂಡಗಳನ್ನೇ ಮುಳುಗಿಸುತ್ತದೆಯೆ ? ತನ್ನೊಳಗೆ ತಾನೇ ಒಪ್ಪಿಕೊಳ್ಳುವುದಾದರೂ ಹೇಗೆ ಬ್ರಹ್ಮಾಂಡವೇ ಅದರ ಶರೀರವಾದಾಗ ಅದರ ಪುಚ್ಛಗಳು (?) ಗರಿಗಳು ಮತ್ತು ರೆಕ್ಕೆಗಳು ಕಾಣುವುದಾದರೂ ಹೇಗೆ ? ಕಾಲದೇಶವೇ ಇದಾಗಿದೆಯೋ ಅಥವಾ ಇದು 'ದೇಶ'ದಿಂದ ಬೇರೆಯಾಗಿದೆಯೋ ? ಇಷ್ಟು ದೊಡ್ಡ ಗಾತ್ರದ ಹಕ್ಕಿ ಬೆಳ್ಳಿಯ ಹಳ್ಳಿಯಲ್ಲಾಗಲೀ, ತಿಂಗಳೂರಿನಲ್ಲಾಗಲೀ ಅಥವ ಮಂಗಳಲೋಕದ ಅಂಗಳದಲ್ಲಾಗಲಿ ಇರುವುದು ಹೇಗೆ ಸಾಧ್ಯ ? ದಿಗ್ಮಂಡಲಗಳ ಆಚೆಗೆ ಇದರ ಕೊಕ್ಕಿರುವಾಗ ದಿಗ್ಮಂಡಲಗಳ ಒಳಗೇ ಇರುವ ಸೂರ್ಯಚಂದ್ರರು ಇದಕ್ಕೆ ಕಣ್ಣುಗಳಾಗುವುದು ಹೇಗೆ ಸಾಧ್ಯ ?

ಇಷ್ಟೆಲ್ಲ ಅಸಾಧ್ಯತೆಗಳಿರುವುದರಿಂದಲೇ ಕವಿಗಳು "ಹಕ್ಕಿ ಹಾರುತಿದೆ ನೋಡಿದಿರಾ ?" ಎಂದು ಪ್ರಶ್ನಿಸುತ್ತಾರೆ. ಕಾವ್ಯದಲ್ಲಿ ಪದಗಳನ್ನು ಮೀರಿಹೋಗುವ ಅರ್ಥಗಳಿರುತ್ತವೆ ; ಆದರೆ ಕಾವ್ಯವಲ್ಲದ್ದರಲ್ಲಿ ಅರ್ಥಗಳನ್ನು ಮೀರಿಹೋಗುವ ಪದಗಳಿರುತ್ತವೆ. ಈ ಕಾಲಪಕ್ಷಿ ಅರ್ಥಗಳನ್ನು ಮೀರಿ ಹೋಗುವ ಪದಗಳಲ್ಲಿದೆ. ಇದನ್ನು ಒಂದೇ ಬಾರಿಗೆ ಓದಿದಾಗ ಅಸ್ಪಷ್ಟ ಸೂಚನೆಯೊಂದರ ಜೊತೆಗೆ ಅಸ್ಪಷ್ಟ ಸೂಚನೆಯೊಂದು, ಅದಾದ ಮೇಲೆ ಇನ್ನೊಂದು ಮತ್ತೊಂದು–ಹೀಗೆ ಸರಮಾಲೆಯಾಗುತ್ತ. ಬುಡುಬುಡಿಕೆಯವನ ಮಾತಿನ ಯಾಂತ್ರಿಕ-ಮಾಂತ್ರಿಕ ಲಯವನ್ನು ಮುಗ್ಧರಾಗಿ ಕೇಳುತ್ತ ನಿಂತ ಹಾಗೆ ನಾವು ನಿಂತುಬಿಡುತ್ತೇವೆ. ಬೀದಿಯಲ್ಲಿ ಕಣ್ಕಟ್ಟು ಮಾಡುವವರ ಮಾತಿನ ಮೋಡಿಗೆ ಸಿಕ್ಕು ಏನೇನೋ ಕಾಣುತ್ತದೆನ್ನುವ ಆಸೆಯಲ್ಲಿ ನಾವು ಮರುಳಾಗಿ ನಿಂತುಬಿಡುವಂತೆ, ಈ ಕವನವನ್ನು ಕೇಳುತ್ತ ನಿಂತುಬಿಡುತ್ತೇವೆ. ಈ ಕವನದಲ್ಲಿ ಪುನರಾವರ್ತನೆಯಿಂದ ಕಿವಿಗೆ ತಾಗುವ ಶಬ್ದಗಳ ಒಂದು ಸಂವಿಧಾನ : aa ba ರೀತಿಯ ಪ್ರಾಸಕ್ರಮ, ಹಕ್ಕಿ ಹಾರುತಿದೆ ನೋಡಿದಿರಾ ಎನ್ನುವ ಪಲ್ಲವಿ, 4+4+4+3 ಮಾತ್ರೆಯ ಹೆಚ್ಚು ವೈವಿಧ್ಯವಿಲ್ಲದ ಲಯ, ಅನುಪ್ರಾಸ ಮತ್ತು ಅಂತರಿಕ ಪ್ರಾಸ, ನಾಲಗೆಯನ್ನು ತಡೆಯುವ ಶಬ್ದಗಳ ಸಮೂಹ, ಇವೆಲ್ಲವೂ ಈ ಪದ್ಯವನ್ನು ಒಂದು ಯಶಸ್ವಿಯಾದ 'ಕಣ್ಕಟ್ಟಾ'ಗುವುದಕ್ಕೆ ಸಹಾಯ ಮಾಡುತ್ತವೆ.

ಪಂಪ, ಬಸವಣ್ಣ, ಅಕ್ಕಮಹಾದೇವಿ, ಅಲ್ಲಮ, ಕುಮಾರವ್ಯಾಸ ಮತ್ತು ಬೇಂದ್ರೆಯವರೇ ತಮ್ಮ ಸಾರ್ಥಕ ಕವನಗಳಲ್ಲಿ ಈ ರೀತಿಯ ಪದಗಳನ್ನು ಉಪಯೋಗಿಸಿಲ್ಲವೆನ್ನುವುದನ್ನು ಗಮನಿಸಿದಾಗ, ಈ ಕವಿತೆಯನ್ನು ಬರೆದಾಗ ಬೇಂದ್ರೆಯವರು ಶಬ್ದಗಳನ್ನು ನಿಯಂತ್ರಿಸುವುದರ ಬದಲು, ಶಬ್ದಗಳ ಒಂದು ಬಾಹ್ಯ ಸ್ವರೂಪಕ್ಕೆ, ಅದರಲ್ಲೂ ನಾದದ ಒಂದು ಕ್ರಮಕ್ಕೆ ಕಟ್ಟುಬಿದ್ದು, ಅರ್ಥಪೂರ್ಣತೆಯನ್ನು ಸಾಧಿಸುವ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದರು ಎನಿಸುತ್ತದೆ.

ನನಗೆ ಈ ಪದ್ಯವನ್ನು ಈಗಲೂ ಕೇಳಿದಾಗ ಒಂದು ರೀತಿಯ ಮನಃಸ್ಥಿತಿಯುಂಟಾಗುತ್ತದೆ. ಆದರೆ ಆ ಮನಸ್ಥಿತಿ, ರಸಸ್ಥಿತಿಯಲ್ಲಿ ಅಷ್ಟೆ. ಈ ಪದ್ಯದಲ್ಲಿ ಪದಪದಗಳಿಗೆ ಮತ್ತು ಸಾಲುಸಾಲುಗಳಿಗೆ ಕ್ರಿಯಾಶೀಲವಾದ ಸಂಬಂಧಗಳಿಲ್ಲ. ಇಲ್ಲಿರುವ ಸಂಬಂಧ ಹಕ್ಕಿ–ಪುಚ್ಚ-ಗರಿ-ರೆಕ್ಕೆ-ಹಾರು-ಚುಂಚ-ಕಣ್ಣು ಎನ್ನುವ ಪಕ್ಕಿಗೆ ಅನ್ವಯಿಸುವ ಸಂಬಂಧವಷ್ಟೇ ಹೊರತು ಕಾಲವನ್ನು ಪಕ್ಷಿಯನ್ನಾಗಿ ಮಾರ್ಪಾಟು ಮಾಡುವಂತಹ ರಸೋದ್ಯೋಗ ಸಂಬಂಧವಲ್ಲ.

But at my back I always hear
Time's winged chariot hurrying near

ಎನ್ನುವ ಆ್ಯಂಡ್ರೂ ಮಾರ್ವೆಲ್ಲನ ಸಾಲುಗಳಿರುವ ಉದ್ದೀಪಕ ಶಕ್ತಿ ಈ ಸಾಲುಗಳಿಗಿಲ್ಲ. ಇಲ್ಲಿ ನಾದಮಾಧುರ್ಯಕ್ಕೆ ಕವಿ ಮರುಳಾಗಿದ್ದಾರೆ; ಆ ನಾದಮಾಧುರ್ಯಕ್ಕೆ ಈ ಕವಿತೆಯನ್ನು ಕೇಳಿದವರು ಮರುಳಾಗಿದ್ದಾರೆ. ಅವರ ಮಾತುಗಳನ್ನು ಕೇಳಿಕೊಂಡು ಇನ್ನಷ್ಟು ಜನ ಇದಕ್ಕೆ ಮರುಳಾಗಿದ್ದಾರೆ. ಶಬ್ದ-ಪ್ರತಿಮೆ-ಪದ ಈ ಮೂರರ ಸಮ್ಮಿಳನದಿಂದ ಕಾಣ್ಕೆಯಾಗುವ ಶಿಲ್ಪ ಮಾತ್ರ ಇಲ್ಲಿಲ್ಲವೆಂದೇ ಇದನ್ನು ಕಣ್ಕಟ್ಟು ಎನ್ನುವಂತಾಗಿದೆ. ಯಾಂತ್ರಿಕತೆಗೆ ಹತ್ತಿರವಾದ ಮಾಂತ್ರಿಕಲಯ ಒಂದುರೀತಿಯ ಮಾಯೆಯ ಮಂಕನ್ನು ಸೃಷ್ಟಿಸುತ್ತದೆ. ಕಾಲಪಕ್ಷಿಯನ್ನು ಈ ಕವಿತೆಯ ಪ್ರತಿಭೆಯ ಕಣ್ಣು ಕಂಡಿಲ್ಲ, ಅದು ಕಾಣುವಷ್ಟರಲ್ಲೇ ಶಬ್ದಗಳ ಜಾಲದಲ್ಲಿ ಪ್ರತಿಭೆ ದಿಕ್ಕೆಟ್ಟು ಹೋಗಿದೆ. ಆದ್ದರಿಂದಲೆ ಸಾವಿರಾರು ಜನರಿರುವ ಸಭೆಯಲ್ಲಿ ಈ ಕವಿತೆ ಈಗಲೂ ಜನರನ್ನು ಮರಳು ಮಾಡುವ ಶಕ್ತಿಯುಳ್ಳದ್ದಾಗಿದೆ.

ಬ್ರಾಹ್ಮಣೇತರ ಚಳವಳಿ ಮತ್ತು ದಿವಾನ್ ಪದವಿಯಿಂದ ವಿಶ್ವೇಶ್ವರಯ್ಯನವರ ನಿರ್ಗಮನ

ಇಂಗ್ಲಿಷ್ ಮೂಲ : ಎಸ್. ಚಂದ್ರಶೇಖರ್

1909 ರಲ್ಲಿ ಮೈಸೂರು ಸಂಸ್ಥಾನದ ಸರ್ಕಾರದವರಿಂದ ವಿಶ್ವೇಶ್ವರಯ್ಯನವರನ್ನು ಮುಖ್ಯ ಇಂಜಿನಿಯರ್‌ರನ್ನಾಗಿ ನೇಮಿಸಲಾಯಿತು. 1912 ರಲ್ಲೇ ಅವರನ್ನು ದಿವಾನ ಪದವಿಗೆ ಏರಿಸಲಾಯಿತು. 1918 ರವರೆಗೆ ವಿಶ್ವೇಶ್ವರಯ್ಯನವರು ದಿವಾನರಾಗಿದ್ದರು. ಆಗ ಬಿಸಿಯೇರುತ್ತಿದ್ದ–ಬ್ರಾಹ್ಮಣೇತರ ಚಳವಳಿ–ವಿಶ್ವೇಶ್ವರಯ್ಯನವರ ರಾಜೀನಾಮೆಗೆ ಎಷ್ಟರಮಟ್ಟಿಗೆ ಕಾರಣವಾಯಿತು ಎಂಬುದರ ಬಗ್ಗೆ ಚರ್ಚೆಯೊಂದನ್ನು ಇಲ್ಲಿ ಮಾಡಲಾಗಿದೆ.

ಮೈಸೂರಿನ ಮಹಾರಾಜರು ವಿಶ್ವೇಶ್ವರಯ್ಯನವರ ಆಡಳಿತ ವಿಧಾನದ ಬಗ್ಗೆ ಮೊದಲು ಪ್ರಸನ್ನರಾಗಿಯೇ ಇದ್ದರು. ಇದಕ್ಕೆ ಮುಖ್ಯ ಕಾರಣ : ರಾಜ್ಯದ ಆರ್ಥಿಕ ಸ್ಥಿತಿಯಲ್ಲಿ ಆಗುತ್ತಿದ್ದ ಬೆಳವಣಿಗೆಯಲ್ಲಿ ವಿಶ್ವೇಶ್ವರಯ್ಯನವರ ಪಾಲು ಪ್ರಮುಖವಾದದ್ದಾಗಿತ್ತು. ಇವರ ದಿವಾನಗಿರಿಯ ಕಾಲದಲ್ಲೇ 1913ರಲ್ಲಿ ಆದ ಮೈಸೂರು ಒಪ್ಪಂದದ ಮೂಲಕ ಮಹಾರಾಜರೂ ತಮ್ಮ ರಾಜಕೀಯ ಶಕ್ತಿಯನ್ನು ಬೆಳಸಿಕೊಂಡರು[1]. ರಾಜನೇ ಸ್ವತಃ ಈ ವಿಷಯವನ್ನು ಒಪ್ಪಿಕೊಂಡಿದ್ದೂ ಉಂಟು[2] : ರಾಜ್ಯದ ಆರ್ಥಿಕ ಯೋಜನೆಗಳನ್ನು ಪ್ರೋತ್ಸಾಹಿಸುವುದರಲ್ಲಿ ಮತ್ತು ಅವುಗಳಿಗೆ ಒಪ್ಪಿಗೆ ಕೊಡುವುದರಲ್ಲಿ ಮಹಾರಾಜರು ಉತ್ಸಾಹ ತೋರಿಸಿದರು. ಬ್ರಿಟಿಷರು ಸಂಸ್ಥಾನದ ಹಣವನ್ನು ಅವರ ಯುದ್ಧ ಯೋಜನೆಗಳಿಗೆ ಕೊಡುವಂತೆ ಒತ್ತಾಯಿಸಿ ಪ್ರಗತಿಪರ ಯೋಜನೆಗಳನ್ನು ತಡೆಯುವ ಪ್ರಯತ್ನ ಮಾಡಿದರು.[3] ಬ್ರಿಟಿಷರು ತಮ್ಮ ರೆಸಿಡೆಂಟನ ಮೂಲಕ[4] ವಿಶ್ವೇಶ್ವರಯ್ಯನವರನ್ನು ಕಬ್ಬಿಣದ ಕಾರ್ಖಾನೆ, ಮೈಸೂರಿನಿಂದ ಅರಸೀಕೆರೆಯವರೆಗಿನ ರೈಲುಮಾರ್ಗ, ಮುಂತಾದ ಕೆಲವು ಯೋಜನೆಗಳನ್ನು ಕೈಗೊಳ್ಳದಂತೆ ತಡೆಯುವ ಪ್ರಯತ್ನ ಮಾಡಿದರು.[5] ಆದರೆ ದಿವಾನ ವಿಶ್ವೇಶ್ವರಯ್ಯನವರಿಗೆ ಮಹಾರಾಜರ ಸಂಪೂರ್ಣ ಸಹಕಾರವಿದ್ದುದರಿಂದ ಈ ಎಲ್ಲ ಯೋಜನೆಗಳನ್ನು ಕೈಗೊಳ್ಳಲಾಯಿತು.

ಈ ಲೇಖನದಲ್ಲಿ ವಿಶ್ವೇಶ್ವರಯ್ಯನವರ ರಾಜೀನಾಮೆಗೆ ಕಾರಣ ಬ್ರಿಟಿಷರಿಗೆ ವಿಶ್ವೇಶ್ವರಯ್ಯನವರ ಈ ಪಾತ್ರದ ಬಗೆಗಿದ್ದ ಅಸಮಾಧಾನಕ್ಕಿಂತಲೂ ಮೈಸೂರು ಸಂಸ್ಥಾನದ ಬ್ರಾಹ್ಮಣೇತರ ಚಳವಳಿಯೇ ಎನ್ನುವುದನ್ನು ವಿವರಿಸಲು ಯತ್ನಿಸಿದ್ದೇನೆ.

ಬ್ರಾಹ್ಮಣೇತರ ವರ್ಗ–ವಿಶ್ವೇಶ್ವರಯ್ಯನವರು ರಾಜ್ಯದ ಪ್ರಗತಿಗೆ ಹಾಕಿಕೊಂಡ ಔದ್ಯಮೀಕರಣ ಮತ್ತು ಯಂತ್ರೀಕರಣದ–ನೀತಿಗಳನ್ನು ವಿರೋಧಿಸಿತು. ಇದಕ್ಕೆ ಮುಖ್ಯ ಕಾರಣ–ಹಳ್ಳಿಯ ರೈತಾಪಿ ಕೆಲಸಗಳಿಗೆ ಸರ್ಕಾರೀ ಹಣದ ಈ ರೀತಿಯ ವಿನಿಯೋಗದಿಂದ, ಸಧ್ಯದ ಯಾವುದೇ ರೀತಿಯ ಪ್ರಯೋಜನವೂ ಆಗುವುದಿಲ್ಲ ವೆನ್ನುವುದು ; ಹಾಗೂ ಇದರಿಂದ ಉಂಟಾಗುವ ಸಧ್ಯದ ಪ್ರಯೋಜನ ಪಟ್ಟಣಕ್ಕೆ ಮಾತ್ರ ಸೀಮಿತವಾಗುತ್ತದೆನ್ನುವುದೂ ಇವರ ವಾದವಾಗಿತ್ತು. ಈ ವರ್ಗದ ಅಸಮಾಧಾನಕ್ಕೆ ಇನ್ನೊಂದು ಪ್ರಬಲವಾದ ಕಾರಣ–ಮೈಸೂರು ಸಂಸ್ಥಾನದಲ್ಲಿ 1881 ರಿಂದ ರಾಜ್ಯಸೇವೆಯಲ್ಲಿ ನೇಮಕವಾದವರಲ್ಲಿ ಬಹುಪಾಲು ಬ್ರಾಹ್ಮಣ ವರ್ಗಕ್ಕೆ ಸೇರಿದವರಾಗಿದ್ದರು, ಮತ್ತು ದಿವಾನಗಿರಿಗೆ ನೇಮಕವಾದವರಲ್ಲಿ ವಿಶ್ವೇಶ್ವರಯ್ಯನವರೂ ಸೇರಿದಂತೆ ಎಲ್ಲರೂ ಬ್ರಾಹ್ಮಣ ಕೋಮಿಗೆ ಸೇರಿದವರಾಗಿದ್ದರು. ಮದ್ರಾಸಿನಲ್ಲಿ ಸ್ಥಾಪಿತವಾದ ಬ್ರಾಹ್ಮಣೇತರ 'ಜಸ್ಟೀಸ್ ಪಾರ್ಟಿ'ಯ ಆಧಾರದ ಮೇಲೆಯೇ ಮೈಸೂರಿನಲ್ಲೂ 'ಪ್ರಜಾಮಿತ್ರ ಮಂಡಲಿ' ಎಂಬ ರಾಜಕೀಯ ಪಾರ್ಟಿಯೊಂದು 1971ರಲ್ಲಿ ಪ್ರಾರಂಭವಾಯಿತು. ಈ ಪಾರ್ಟಿಗೆ ರಾಜಮನೆತನದವರಿಂದ ರಹಸ್ಯವಾದ ಬೆಂಬಲವೂ ಇತ್ತು.[6] ಪ್ರಜಾಮಿತ್ರ ಮಂಡಲಿಯ ಮುಖ್ಯಸ್ಥರು ಮೈಸೂರು ಸಂಸ್ಥಾನದ ಆಡಳಿತದ ಮೇಲೆ ತಮ್ಮ ಅನೇಕ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ಅವರ ಬೇಡಿಕೆಗಳಲ್ಲಿ ಮುಖ್ಯವಾದವುಗಳು : ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ಸ್ಕೂಲಿನ ಫೀಜು ರಿಯಾಯಿತಿ ; ಸಿವಿಲ್ ಸರ್ವಿಸಿನಲ್ಲಿ ಇವರಿಗಾಗಿ ಸ್ಥಳ ಕಾಯಿರಿಸುವಿಕೆ ; ಮತ್ತು ಸ್ಕಾಲರ್‌ಶಿಪ್ಪುಗಳನ್ನು ಕೊಡುವುದು. ಆದರೆ ದಿವಾನ ವಿಶ್ವೇಶ್ವರಯ್ಯನವರು ಜಾತಿಯ ಆಧಾರದ ಮೇಲೆ ಮಾಡಿದ ಬೇಡಿಕೆಗಳೆಂದು ಇವುಗಳನ್ನು ಒಪ್ಪದೆ, ವಿದ್ಯಾರ್ಹತೆಯ ಮೇಲೆ ಕೊಡಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದರು. ತಮ್ಮ ಸಹೋದರನನ್ನೇ ಈ ಕಾರಣಕ್ಕಾಗಿ ಇವರು ಆಪ್ತ ಕಾರ್ಯದರ್ಶಿ ಸ್ಥಾನಕ್ಕೆ ನೇಮಿಸಲಿಲ್ಲ[7]. ಅಲ್ಲದೆ ಗುಮಾಸ್ತರಾದ ತಮ್ಮ ಚಿಕ್ಕಪ್ಪ ಸೂಪರಿಂಟೆಂಡೆಂಟ್ ಸ್ಥಾನಕ್ಕೆ ಮಾಡಿಕೊಂಡ ಮನವಿಯನ್ನು– ಅದು ಸರಿ ತೋರದ ರೀತಿಯಲ್ಲಿ ಇದ್ದ ಕಾರಣ–ತಿರಸ್ಕರಿಸಿದರು.

ಇದೇ ಕಾಲದಲ್ಲಿ ವಿಶ್ವೇಶ್ವರಯ್ಯನವರು ಅರ್ಹತೆಯನ್ನೇ ಆಧಾರವಾಗಿಟ್ಟುಕೊಂಡು ಆರು ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಸ್ಥಾನಕ್ಕೆ ಒಂದೇ ಜಾತಿಗೆ ಸೇರಿದ (ಬ್ರಾಹ್ಮಣ) ಅಭ್ಯರ್ಥಿಗಳ ಆಯ್ಕೆಗೆ ಶಿಫಾರಸ್ಸು ಮಾಡಿದರು. ಮಹಾರಾಜರಿಗೆ ಈ ಆಯ್ಕೆ ಒಪ್ಪಿಗೆಯಾಗದೆ ಅರ್ಹತೆಯೊಂದೇ ಆಧಾರವಾಗದೆ ಕೆಳಜಾತಿಗಳ ಸಾಮಾಜಿಕ ಸ್ಥಿತಿಯನ್ನೂ ಕೂಡ ಗಮನಿಸಬೇಕೆಂದು ಅಭಿಪ್ರಾಯಪಟ್ಟು ಬ್ರಾಹ್ಮಣೇತರರಿಗೂ ಸ್ಥಾನ ಕೊಡಬೇಕೆಂದು ಇಚ್ಛಿಸಿದರು. ಮೇಲೆ ವಿವರಿಸಿದಂತೆ ಈ ರಾಜಮನೆತನ ಬ್ರಾಹ್ಮಣೇತರ ವರ್ಗಗಳ ಕಷ್ಟಗಳ ಪರಿಹಾರಕ್ಕೆ ತಮ್ಮ ಸಹ

ಕಾರವನ್ನು ಕೊಟ್ಟಿದ್ದು ಮತ್ತು ಈ ಚಳವಳಿ ಸಂಸ್ಥಾನದ ರಾಜಕೀಯ ವಾತಾವರಣವನ್ನೇ ಬದಲು ಮಾಡಿಬಿಟ್ಟಿದ್ದು ಗಮನಾರ್ಹವಾಗಿದೆ.[8] ಮಹಾರಾಜನಿಗೆ ಸಂಸ್ಥಾನದಲ್ಲಿ ತನ್ನ ಅಧಿಕಾರವನ್ನು ಗಟ್ಟಿಗೊಳಿಸಿಕೊಳ್ಳುವುದೂ ಕೂಡ ಅಗತ್ಯವಾಗಿತ್ತು. ಬ್ರಾಹ್ಮಣೇತರ ವರ್ಗ ರಾಜ್ಯದ ಜನಸಂಖ್ಯೆಯಲ್ಲಿ 96 ಭಾಗ ಇದ್ದುದರಿಂದ ಮಹಾರಾಜರು ಸಹಜವಾಗಿಯೇ ಅವರ ವಿರೋಧವನ್ನು ಕಟ್ಟಿಕೊಳ್ಳಬಯಸಲಿಲ್ಲ. ಬದಲು ಗುಪ್ತವಾಗಿ ಅವರಿಗೆ ಸಹಕಾರವನ್ನೇ ಕೊಟ್ಟರು. ಈ ಕಾರಣದಿಂದಲೇ ದಿವಾನ ವಿಶ್ವೇಶ್ವರಯ್ಯನವರ ಶಿಫಾರಸ್ಸನ್ನು ಮಹಾರಾಜರು ವಾಪಸ್ಸು ಕಳುಹಿಸಿಬಿಟ್ಟರು. ಬ್ರಾಹ್ಮಣೇತರರು ಇದೇ ಸಮಯದಲ್ಲಿ ರಾಜಮನೆತನದ ವ್ಯಕ್ತಿಗಳ ಮೂಲಕ ವಿಶ್ವೇಶ್ವರಯ್ಯನವರಿಗೂ, ಮಹಾರಾಜರಿಗೂ ಭೇದ ಹುಟ್ಟುವಂತೆ ಮಾಡುವಲ್ಲಿ ಯಶಸ್ವಿಯಾದರು. ಮಹಾರಾಜರು ಸ್ವತಃ ಮೂರು ಜನರನ್ನು ಆಯ್ಕೆಮಾಡಿ ವಿಶ್ವೇಶ್ವರಯ್ಯನವರ ಆಯ್ಕೆಯಲ್ಲಿ ಮೂರು ಜನರನ್ನು ಮಾತ್ರ ಒಪ್ಪಿಕೊಂಡರು. ಮಹಾರಾಜರ ಈ ಆಜ್ಞೆಯು ಜಾರಿಗೆ ಬಂದಿತಾದರೂ ವಿಶ್ವೇಶ್ವರಯ್ಯನವರಲ್ಲಿ ಅಸಮಾಧಾನವು ಉಳಿಯಲು ಕಾರಣವಾದೀತು. ಇಬ್ಬರಲ್ಲಿ ಉಂಟಾದ ಈ ಅಭಿಪ್ರಾಯಭೇದ ಮೈಸೂರು ವಿಶ್ವವಿದ್ಯಾಲಯದ ಸೆನೆಟ್‌ಗೆ ನಡೆದ ನೇಮಕಾತಿಯ ಸಂದರ್ಭದಲ್ಲಿ ಇನ್ನೂ ವ್ಯಾಪಕವಾಯಿತು. ದಿವಾನರು ಸೂಚಿಸಿದ ಹೆಸರನ್ನು[9] ಒಪ್ಪದೆ ಮಹಾರಾಜರು ತಮ್ಮ ಆಯ್ಕೆಯ ಅಭ್ಯರ್ಥಿಗಳನ್ನು ಸೆನೆಟ್‌ಗೆ ನೇಮಕ ಮಾಡಿದರು.[10] ಈ ನೇಮಕಾತಿಯಲ್ಲಿ - ವಿಶ್ವೇಶ್ವರಯ್ಯನವರ ಆರ್ಥಿಕ ನೀತಿಗಳನ್ನು ಪ್ರಬಲವಾಗಿ ವಿರೋಧಿಸಿದ ಬ್ರಾಹ್ಮಣೇತರ ಮುಖ್ಯಸ್ಥರೊಬ್ಬರೂ ಸಹ ಸೇರಿಕೊಂಡಿದ್ದರು. 'ಜಾಣ ನಿರಂಕುಶ ಅಧಿಕಾರಿ' ('enlightened autocrat') ವಿಶ್ವೇಶ್ವರಯ್ಯನವರಿಗೆ[11] ಈ ಬೆಳವಣಿಗೆಗಳು ನುಂಗಲಿಕ್ಕಾಗದ ಕಹಿಗುಳಿಗೆಗಳಾದವು. 'ಅಭಿಪ್ರಾಯಭೇದವನ್ನೇ ನಂಬಿಕೆ ಕಳೆದುಕೊಂಡ ಸ್ಥಿತಿ' ಎಂದು ಪರಿಗಣಿಸುವುದಕ್ಕೂ ವಿಶ್ವೇಶ್ವರಯ್ಯನವರು ಪ್ರಾರಂಭಿಸಿದರು.

ಈ ಘಟನೆಗಳೇ ಮುಂದಿನ ಹಲವಾರು ಕ್ರಿಯೆಗಳಿಗೆ ಸಾಕಷ್ಟು ಪ್ರಚೋದನೆಯಾದವು. 'ಮುಖ್ಯವಾದ ನಿರ್ಣಯಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಮಧ್ಯೆ ತಲೆಹಾಕುವವರನ್ನು' ಕುರಿತು ದೂರೊಂದನ್ನು ಮಾಡಿ ಮಹಾರಾಜರಿಗೆ ವಿಶ್ವೇಶ್ವರಯ್ಯನವರು ಒಂದು ಪತ್ರ ಬರೆದರು.[13] ಹೀಗೆ ಬರೆಯುವಾಗ ವಿಶ್ವೇಶ್ವರಯ್ಯನವರ ಮನಸ್ಸಿನಲ್ಲಿ ಇದ್ದವರು–ಬ್ರಾಹ್ಮಣೇತರ ವರ್ಗಕ್ಕೆ ಪ್ರೋತ್ಸಾಹ ಕೊಡುತ್ತಿದ್ದ ಅರಮನೆಯ ಕೆಲಸದವರೂ ಸೇರಿದಂತೆ ಉಳಿದ ರಾಜಮನೆತನದವರು. ಮಹಾರಾಜರು ವಿಶ್ವೇಶ್ವರಯ್ಯನವರ ಆಪಾದನೆಯನ್ನು ಅಲ್ಲಗಳೆದು ಒಂದು ಮಾರುತ್ತರವನ್ನು ಬರೆದರು. ಬ್ರಾಹ್ಮಣೇತರ ವರ್ಗಗಳಿಗೆ ಕೊಡುವ ಅವಕಾಶಗಳು ಆಡಳಿತದ ಕಾರ್ಯಸಮರ್ಥತೆಯನ್ನು ಕುಂಠಿಸುತ್ತವೆ ಎನ್ನುವ ವಿಶ್ವೇಶ್ವರಯ್ಯನವರ

ಅಭಿಪ್ರಾಯವನ್ನು ಮಹಾರಾಜರು ಒಪ್ಪದೆ ಈ ವರ್ಗಕ್ಕೆ ಪ್ರಾತಿನಿಧ್ಯ ಕೊಡಬೇಕೆನ್ನುವ ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು.[14]

ರಾಜ್ಯದ ಜನಸಂಖ್ಯೆಯಲ್ಲಿ 97 ಭಾಗವನ್ನು ಹೊಂದಿದ್ದ ಬ್ರಾಹ್ಮಣೇತರ ವರ್ಗಗಳು ಕೆಳದರ್ಜೆಯ ಕೆಲಸವನ್ನೂ (Inferior service) ಸೇರಿದಂತೆ ಉಳಿದ ಕೆಲಸವನ್ನು ಒಟ್ಟುಗೂಡಿಸಿ ಕೇವಲ 30 ಭಾಗ ಪ್ರಾತಿನಿಧ್ಯವನ್ನು ಮಾತ್ರ ಹೊಂದಿದ್ದವು. ಉನ್ನತ ವಿದ್ಯಾಭ್ಯಾಸದ ಅವಕಾಶಗಳು ಈ ವರ್ಗಗಳಿಗೆ ಕೇವಲ ಆಶಾಗೋಪುರಗಳಾಗಿದ್ದವು. ಇದಕ್ಕೆ ಕಾರಣ ಎಲ್ಲ ಕಾಲೇಜುಗಳು ಬೆಂಗಳೂರು ಮತ್ತು ಮೈಸೂರಿನಲ್ಲಿ ಇದ್ದುದೇ ಆಗಿತ್ತು. ಆದ್ದರಿಂದ ಅವರಿಗೆ ರಾಜ್ಯಸೇವಾ ಕೆಲಸದಲ್ಲೂ ಉತ್ತಮ ಮಟ್ಟದ ಕೆಲಸ ಸಿಗುವ ಅವಕಾಶವೇ ಕಡಿಮೆಯಾಗಿತ್ತು. ಈ ಹಿಂದುಳಿದ ವರ್ಗಗಳ ಬೆಂಬಲವನ್ನು ಗಳಿಸಲು ಮಹಾರಾಜರು 1916ರಲ್ಲಿ ಒಂದು ಲಕ್ಷ ರೂಪಾಯಿಗಳ ವಿಶೇಷ ಸಹಾಯಧನವನ್ನು ಮಂಜೂರು ಮಾಡಿದರು. ವಿಶ್ವೇಶ್ವರಯ್ಯನವರಿಗೆ ಮಹಾರಾಜರ ಈ ಕಾರ್ಯ ಉಳಿದವರ ವಿರುದ್ಧ ಮಾಡಿದ ಅನ್ಯಾಯದಂತೆ ತೋರಿತು.

ಮಹಾರಾಜರ ಇಂತಹ ಪ್ರೋತ್ಸಾಹದಿಂದ ಪ್ರಚೋದನೆಗೊಂಡ ಹಿಂದುಳಿದ ವರ್ಗದವರು 1918 ರಲ್ಲಿ ರಾಜನನ್ನು ಭೆಟ್ಟಿಮಾಡಿ 'ತಮಗಾದ ಅನ್ಯಾಯ'ವನ್ನು ಸರಿಪಡಿಸುವಂತೆ ಕೋರಿ ಮನವಿಯನ್ನು ಸಲ್ಲಿಸಿದರು. ಮಹಾರಾಜರು ಅವರಿಗೆ-ವಿದ್ಯಾಭ್ಯಾಸ ಹಾಗೂ ಸಿವಿಲ್ ಸರ್ವೀಸ್‌ಗಳಿಗೆ ಸಂಬಂಧಿಸಿದ ವಲಯದಲ್ಲಿ ವಿಶೇಷ ಸವಲತ್ತುಗಳನ್ನು ಕೊಡುವ ಭರವಸೆಕೊಟ್ಟರು.[15] ಅದಕ್ಕೆ ತಕ್ಕಂತೆ ಬ್ರಾಹ್ಮಣೇತರ ವರ್ಗಗಳಿಗೆ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಹಲವು ಸ್ಕಾಲರ್‌ಶಿಪ್ಪುಗಳನ್ನು, ಸರ್ಕಾರಿ ಸೇವೆಗೆ (State service) ಸೇರಿಕೊಳ್ಳುವ ಅರ್ಹತೆಯಲ್ಲಿ ಗಮನಾರ್ಹ ರಿಯಾಯಿತಿಗಳನ್ನು ಮಹಾರಾಜರು ತೋರಿಸಿದರು. ವಿಶ್ವೇಶ್ವರಯ್ಯನವರು ಈ ಫೀ ರಿಯಾಯಿತಿಗಾಗಲೀ, ಹೊಸ ಶಾಲೆಗಳನ್ನು ತೆಗೆಯುವ ಕಾರ್ಯಗಳಿಗಾಗಲೀ ವಿರೋಧವೇನನ್ನೂ ಮಾಡಲಿಲ್ಲ. ಸಾಮಾಜಿಕ ಮುನ್ನಡೆಗೆ ವಿದ್ಯೆ ಅಗತ್ಯವೆಂಬುದು ಇವರ ಅಭಿಪ್ರಾಯವಾಗಿತ್ತು. ಆದರೆ ಅವರ ವಿರೋಧವಿದ್ದದ್ದು ಅರ್ಹತೆಯನ್ನು ಕಡೆಗಣಿಸಿ ಕೈಗೊಂಡ ಕಾರ್ಯಗಳ ಮೇಲೆಯೇ. ರಿಯಾಯಿತಿಯ ಬಗ್ಗೆ ಬ್ರಾಹ್ಮಣೇತರ ವರ್ಗಗಳ ಬೇಡಿಕೆ ಇನ್ನೂ ಮುಂದುವರಿದಾಗ ಮಹಾರಾಜರು ಎಲ್ಲ ಜಾತಿಯವರಿಗೂ ಹೇರಳ ಪ್ರಾತಿನಿಧ್ಯವನ್ನು ಕೊಡುವ ರೀತಿಯನ್ನು ಆಲೋಚಿಸಲು ಒಂದು ಕಮಿಟಿಯನ್ನು ನೇಮಿಸಲು ಒಪ್ಪಿಕೊಂಡರು. ವಿಶ್ವೇಶ್ವರಯ್ಯನವರು ಇಂತಹ ಕಮಿಟಿಯೊಂದರ ಅಸ್ತಿತ್ವದ ಬಗ್ಗೆ ತಮ್ಮ ವಿರೋಧಿ ನಿಲುವನ್ನು ಹೊಂದಿದ್ದರು.[16] ಈ ಕಮಿಟಿಯ ನಿರ್ಣಯಗಳು ಆಡಳಿತದ ಒಟ್ಟಾರೆ ಸಾಮರ್ಥ್ಯವನ್ನು ಕುಂದಿಸುತ್ತವೆನ್ನುವುದು ಇವರ ಅಭಿಪ್ರಾಯವಾಗಿತ್ತು.[17] ಆದರೆ ಮಹಾರಾಜರು

ಕಮಿಟಿಯನ್ನು ನೇಮಿಸುವ ತಮ್ಮ ನಿಶ್ಚಯವನ್ನು ಬದಲಿಸಲಿಲ್ಲ. ಇದರಿಂದ ತಾನು ನಂಬಿದ ನೀತಿಯ ವಿರುದ್ಧ ನಡೆದ ಈ ಕಾರ್ಯಗಳಿಂದ ವಿಶ್ವೇಶ್ವರಯ್ಯನವರಿಗೆ ರಾಜೀನಾಮೆ ಕೊಡಬೇಕೆಂದು ಅನ್ನಿಸಿಬಿಟ್ಟಿದ್ದೂ ಉಂಟು[18].

ನೇಮಕಾತಿ ಮತ್ತು ಸಾಮರ್ಥ್ಯಕ್ಕೆ ಸಂಬಂಧಪಟ್ಟಂತೆ ವಿಶ್ವೇಶ್ವರಯ್ಯನವರ ವಿಚಾರಗಳು ಅವರ ಕಾಲಕ್ಕೇ ಏಕೆ ಈಗಿನ ಕಾಲದ ಬಹುಪಾಲು ಸಮುದಾಯಕ್ಕೆ ಒಪ್ಪಿಗೆಯಾಗದೆ ಹೋಗುತ್ತವೆ. ಅದೂ ಅಲ್ಲದೆ ಆಗ ರಾಜಕೀಯವಾಗಿ ಪ್ರಬಲವಾಗುತ್ತಿದ್ದ ಬ್ರಾಹ್ಮಣೇತರ ಸಮುದಾಯದ ಜೊತೆಗೆ ಹೊಂದಿಕೊಳ್ಳುವುದು ಇವರಿಗೆ ಸಾಧ್ಯವಾಗಲಿಲ್ಲ. ಈ ನೀತಿ, ನಿಯಮಗಳಿಗೆ ಸಂಬಂಧಿಸಿದಂತೆ ಮಹಾರಾಜರು ಹಾಗೂ ದಿವಾನ ವಿಶ್ವೇಶ್ವರಯ್ಯನವರಿಗೆ ಹೊಂದಾಣಿಕೆ ಸಾಧ್ಯವಾಗಲಿಲ್ಲವಾದ್ದರಿಂದ—ಇದೇ ವಿಶ್ವೇಶ್ವರಯ್ಯನವರ ರಾಜೀನಾಮೆಗೆ ಕಾರಣವಾಯಿತು. ಈ ರೀತಿಯಲ್ಲಿ ದಿವಾನರಾದ ವಿಶ್ವೇಶ್ವರಯ್ಯನವರು ಬ್ರಾಹ್ಮಣೇತರ ವರ್ಗಗಳ ರಾಜಕೀಯ ಚಟುವಟಿಕೆಗಳ ಕಾರಣದಿಂದ ತಮ್ಮ ಸ್ಥಾನವನ್ನು ತೆರವು ಮಾಡಬೇಕಾಯಿತು.

(ಅನುವಾದ : ಬಸವರಾಜ ಕಲ್ಗುಡಿ)

ಅಡಿಟಿಪ್ಪಣಿಗಳು

(1) ವೊಡೆಯರ ಕುಟುಂಬಕ್ಕೆ ಮೈಸೂರು ಸಂಸ್ಥಾನದ ಆಡಳಿತ ಹಸ್ತಾಂತರಗೊಂಡ ಕಾಲಕ್ಕೆ (1881) ಏಕಪಕ್ಷೀಯವಾದಂತಹ 'ಇನ್ಸ್‌ಟ್ರುಮೆಂಟ್ ಆಫ್ ಟ್ರಾನ್ಸ್‌ಫರ್ (Instrument of transfer) ಒಪ್ಪಂದದಂತೆ ಮೈಸೂರು ಸಂಸ್ಥಾನ ಹಾಗೂ ಬ್ರಿಟಿಷ್ ಸಾಮ್ರಾಜ್ಯದ ಸಂಬಂಧವು ಇತ್ತು. ವಿಶ್ವೇಶ್ವರಯ್ಯ ಬ್ರಿಟಿಷರೊಡನೆ ನಡೆಸಿದ ಮಾತುಕತೆಯ ಪರಿಣಾಮ-ದ್ವಿಪಕ್ಷೀಯ ಒಪ್ಪಂದಕ್ಕೆ ('Treaty of Mysore') 1913ರಲ್ಲಿ ಸಹಿ ಹಾಕಲಾಯಿತು. ಈ ಒಪ್ಪಂದದಿಂದ ಮಹಾರಾಜರಿಗೆ ಸಂಸ್ಥಾನದ ಒಳ ಆಡಳಿತದಲ್ಲಿ ಸ್ವಾಯತ್ತತೆ ಉಂಟಾಗಲು ಕಾರಣವಾಯಿತು.

(2) ಮಹಾರಾಜರಿಂದ ವಿಶ್ವೇಶ್ವರಯ್ಯನವರಿಗೆ ಹೋದ ಪತ್ರ, ದಿನಾಂಕ 22 ನವೆಂಬರ್ 1913. 'A brief life sketch' ಲೇಖನದಲ್ಲಿ ಉಧೃತ. ಲೇಖಕರು : ಎಚ್. ರಂಗಾಚಾರ್ ಮತ್ತು ಪಿ. ಕೋದಂಡರಾವ್. ಪುಸ್ತಕ : 'M. V. birth centenary commemoration volume 1960.

(3) ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ವರ್ಷಗಳಲ್ಲಿ (1912-18) ಮೊದಲ ಮಹಾಯುದ್ಧ ಬಿರುಸಾಗಿ ನಡೆಯುತ್ತಿತ್ತು (1914-18). ಬ್ರಿಟಿಷರಿಗೆ ಯುದ್ಧ ಮುಂತಾದ ಕಾರ್ಯಗಳಿಗೆ ಹಣ ಅಗತ್ಯವಾಗಿದ್ದ ಈ ಕಾಲದಲ್ಲಿ ತಮ್ಮ ಕೈಕೆಳಗಿದ್ದ ಮೈಸೂರು

ಸಂಸ್ಥಾನ ತನ್ನ ಆರ್ಥಿಕ ಯೋಜನೆಗಳಿಗೆ ಹಣ ವೆಚ್ಚಮಾಡುವುದು ಇಷ್ಟವಾಗಲಿಲ್ಲ. ಅಲ್ಲದೆ ಈ ರೀತಿಯ ಸಂಸ್ಥಾನದ ಆರ್ಥಿಕ ಬೆಳವಣಿಗೆ ಸಾಮ್ರಾಜ್ಯಶಾಹೀ ಆರ್ಥಿಕ ಹಿತಾಸಕ್ತಿಗೆ ಧಕ್ಕೆಯನ್ನುಂಟುಮಾಡುವಂತಿತ್ತು.

(4) ರೆಸಿಡೆಂಟನು ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷರ ಏಜೆಂಟನಾಗಿದ್ದು ಈ ಒಪ್ಪಂದದ ನಿಯಮಾವಳಿಗಳು ಸರಿಯಾಗಿ ಅನುಸರಿಸಲ್ಪಡುತ್ತಿವೆಯೋ ಇಲ್ಲವೇ ಎನ್ನುವುದನ್ನು ಗಮನಿಸುತ್ತಿದ್ದವನು ಮತ್ತು ರಾಜ್ಯದಲ್ಲಿ ನಡೆಯುವ ದಿನನಿತ್ಯದ ಘಟನೆಗಳ ಬಗ್ಗೆ ಕೇಂದ್ರ ಸರಕಾರಕ್ಕೆ ವರದಿ ಒಪ್ಪಿಸುತ್ತಿದ್ದವನು.

(5) Hettne Bjorn : Political economy of Indirect rule. Mysore 1881-1947. New Delhi. 1978 ; p. 79.

(6) Manor James : Political change in an Indian State, Mysore 1917-1955, New Delhi 1977. pp. 59-60.

(7) D. C. Subba-rayappa : 'He stood by merit' in the 'M. V. birth centenary volume p. 161.

(8) ಎಸ್. ಚಂದ್ರಶೇಖರ್ : 'ಮೈಸೂರು ಸಂಸ್ಥಾನದಲ್ಲಿ ಹಿಂದುಳಿದವರ ಏಳ್ಗೆ 1918-26' ಅನು : ಬಸವರಾಜ ಕಲ್ಗುಡಿ. ಸಾಧನೆ vol. 8. No. 2 ಏಪ್ರಿಲ್-ಜೂನ್. ಬೆಂಗಳೂರು ವಿಶ್ವವಿದ್ಯಾಲಯ 1979. ಪುಟ 120-121.

(9) ವಿ. ಎಲ್. ಡಿಸೋಜಾ ಮತ್ತು ಹಿರಿಯಣ್ಣಯ್ಯ-ಇವರ ಹೆಸರುಗಳನ್ನು ದಿವಾನರು ಶಿಫಾರಸು ಮಾಡಿದ್ದರು.

(10) ಮಹಾರಾಜರು ಗುಲಾಮ್ ಅಹ್ಮದ್ ಕಲಾಮಿ ಮತ್ತು ಎಂ. ಬಸವಯ್ಯ-ಇವರನ್ನು ನೇಮಿಸಿದ್ದರು. ಬಸವಯ್ಯ ಬ್ರಾಹ್ಮಣೇತರ ಚಳವಳಿಯ ಮುಖ್ಯಸ್ಥರಾಗಿದ್ದರು.

(11) S. Hiriyannaiah : 'Hard work and tenacity' in the Birth centenary Volume. p. 232.

(12) M. Venkatesha Iyengar : 'A Hard task master' *Ibid* p. 262

(13) ಮಹಾರಾಜರಿಗೆ ವಿಶ್ವೇಶ್ವರಯ್ಯನವರು ಬರೆದ ಪತ್ರದ ಶೀರ್ಷಿಕೆ : 'Difficulties of the Devan'. ತಾರೀಖು 4 ಅಕ್ಟೋಬರ್ 1918 ; 'Visvesvaraya's letters', ಕರ್ನಾಟಕ ಸ್ಟೇಟ್ ಆರ್ಕೀವ್ಸ್ ; ಬೆಂಗಳೂರು.

(14) ಮಹಾರಾಜರ ಆಪ್ತ ಕಾರ್ಯದರ್ಶಿಗಳ ಮುಖಾಂತರ ಹೋದ ಉತ್ತರ : 'Visvesvaraya's lettes', ಕರ್ನಾಟಕ ಸ್ಟೇಟ್ ಆರ್ಕೀವ್ಸ್, ಬೆಂಗಳೂರು.

(15) Speeches of His Highness Krishnaraja Wodeyar. 1902–1920 vol. I, Bangalore 1921 ; p. 222-225.

(16) Visvesvarayya M. 'Memories of my working life' Bombay 1951 ; p. 87.

(17) R. N. Aingar 'A Karmayogi' in the birth' centenary volume ; p. 154.

(18) Manor James ಮೇಲಿನದೇ p. 60.

ನಡೆದೇಗುಲ

ಬೆಂಗಳೂರು ವಿಶ್ವವಿದ್ಯಾಲಯವು ದಿವಂಗತ ರಾ. ನರಸಿಂಹಾಚಾರ್ಯರ 'ಶಾಸನ ಪದ್ಯಮಂಜರಿ'ಯನ್ನು ಪುನರ್ಮುದ್ರಣ ಮಾಡಿ ಪುಣ್ಯ ಕಟ್ಟಿಕೊಂಡಿದೆ. ಬಹು ದಿನದಿಂದ ವಿದ್ವಾಂಸರಿಗೆ ಅಲಭ್ಯವಾಗಿದ್ದ ಈ ಪುಸ್ತಕ ಈಗ ಸುಲಭವಾಗಿ ದೊರಕುತ್ತದಾದುದರಿಂದ ಅನೇಕರಿಗೆ ಇದರಿಂದ ತುಂಬ ಉಪಯೋಗವಾಗಿದೆ.

ಈ ಪುನರ್ಮುದ್ರಣವನ್ನು ಓದುತ್ತಿದ್ದಾಗ ನನಗೆ ಕಂಡು ಬಂದ ಒಂದು ಪದ್ಯದ ಅರ್ಥವನ್ನು ಸ್ಪಷ್ಟಪಡಿಸುವುದಕ್ಕಾಗಿ ಈ ಕಿರುಟಿಪ್ಪಣಿಯನ್ನು ಬರೆದಿದ್ದೇನೆ.

'ಚಟ್ಟ' ಎಂಬ, ನಾರಸಿಂಹ (I)ನ ಮಗನ ಹಿರಿಮೆಯನ್ನು ವರ್ಣಿಸುವ ಪದ್ಯವೊಂದು ಇದರಲ್ಲಿದೆ. ಚಟ್ಟನು ಒಂದು ದೇವಸ್ಥಾನವನ್ನು (ಚಟ್ಟೇಶ್ವರ ದೇವಾಲಯವನ್ನು) ಕಟ್ಟಿಸಿದ್ದನ್ನು ಆ ಪದ್ಯ ವರ್ಣಿಸುತ್ತದೆ. ಪದ್ಯ ಹೀಗಿದೆ:—

ಪಲರಂ ರಕ್ಷಿಸಿ ಮತ್ತಂ
ಪಲವಂ ನಡೆದೇಗುಲಂಗಳಂ ಮಾಡಿಸಿದಂ
ನೆಲನೆಲ್ಲಮಱಿಯೆ ಚಟ್ಟಂ
ನೆಲೆದೇಗುಲಮುಮನಿದೊಂದನೊಲ್ದೆತ್ತಿಸಿದಂ

ಶಾಸನ ಪದ್ಯಮಂಜರಿಯಲ್ಲಿ ಇದು 806ನೆಯ ಪದ್ಯ.

ಹೊಸ-ಮುದ್ರಣಕ್ಕೆ ಬರೆದಿರುವ ಪ್ರಸ್ತಾವನೆಯಲ್ಲಿ ಡಾ॥ ಎಂ. ಚಿದಾನಂದ ಮೂರ್ತಿ ಅವರು ಈ ಪದ್ಯವನ್ನು ಉದ್ಧರಿಸಿ ಅದರ ಕಾವ್ಯಮಯತೆಯನ್ನು ವಿವರಿಸಿದ್ದಾರೆ. ಆ ಸಂದರ್ಭದಲ್ಲಿ 'ನಡೆದೇಗುಲ' ಎಂಬ ಪದಕ್ಕೆ ಅವರು ಕೊಟ್ಟಿರುವ ಅರ್ಥ ಹೀಗಿದೆ. "ಅವನು ಎರಡು ಬಗೆಯ ದೇವಾಲಯಗಳನ್ನು ನಿರ್ಮಿಸಿದ–ಒಂದು ಬಗೆಯವು ನಡೆದೇವಾಲಯಗಳು–ಇನ್ನೊಂದು ಬಗೆಯದು ನೆಲೆದೇಗುಲ, ಆ ನಡೆದೇಗುಲಗಳು ಯಾವೂ ಅಲ್ಲ–ಕಷ್ಟದಲ್ಲಿ ಸಿಲುಕಿ ಸೋತು ಬಿದ್ದುಹೋದವರಿಗೆ ರಕ್ಷಣೆ ಕೊಟ್ಟು ಅವರು ಮನುಷ್ಯರಂತೆ ತಲೆ ಎತ್ತಿ ಓಡಾಡುವ ಹಾಗೆ ಮಾಡಿದನಲ್ಲಾ ಆ ಜನರೇ ನಡೆದೇಗುಲಗಳು. ಇನ್ನೊಂದು ನೆಲೆದೇಗುಲ......ಇಲ್ಲಿ ಮನುಷ್ಯರನ್ನು ನಡೆದೇಗುಲಗಳೆಂದು ವರ್ಣಿಸಿ, ಅವನು ಮಾಡಿದ ಧರ್ಮಕಾರ್ಯಗಳಲ್ಲಿ ಅವನ

ಸಾಮಾಜಿಕ ಸೇವೆಗೆ ಪ್ರಾಧಾನ್ಯ ಕೊಟ್ಟಿದ್ದರ ಔಚಿತ್ಯವನ್ನು ಗಮನಿಸಬೇಕು." ಹೀಗೆ ವಿವರಿಸಿ ಈ ಪದ್ಯವನ್ನು ಬಸವಣ್ಣನ 'ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡುವೆ ಬಡವನಯ್ಯಾ' ಎಂಬ ಪ್ರಸಿದ್ಧ ವಚನಕ್ಕೆ ಹೋಲಿಸಿದ್ದಾರೆ. (ಪ್ರಸ್ತಾವನೆ xxxiv).

ಇಲ್ಲಿನ ವಿವರಣೆ ಸಂಪೂರ್ಣವಾಗಿ ದಾರಿ ತಪ್ಪಿದೆ ಎಂದು ತಿಳಿಸುವುದಕ್ಕಾಗಿ ಈ ಟಿಪ್ಪಣಿ. ಈ ಪದ್ಯದಲ್ಲಿ ಮೂರು ವಿಷಯಗಳಿವೆ:

1. ಪಲರಂ ರಕ್ಷಿಸಿದ್ದು,
2. ಪಲವಂ ನಡೆದೇಗುಲಗಳಂ ಮಾಡಿಸಿದ್ದು
3. ಒಂದು ನೆಲೆದೇಗುಲವನ್ನು ಎತ್ತಿಸಿದ್ದು.

'ಪಲರಂ', 'ಪಲವಂ' ಎಂಬೆರಡು ಪದಗಳೂ ಯಾವ ವಿಧದಲ್ಲಿಯೂ ಒಂದೇ ಅರ್ಥವನ್ನು ಕೊಡತಕ್ಕವುಗಳಲ್ಲ. 'ಪಲರು' ವ್ಯಕ್ತಿವಾಚಕ, 'ಪಲವು' ವಸ್ತುವಾಚಕ. ಆದುದರಿಂದ ಇಲ್ಲಿನ ಅರ್ಥವೇ ಬೇರೆ. ಚಟ್ಟನು ದಾನಿಯಾಗಿದ್ದ. ಅನೇಕರಿಗೆ ದಾನ ಮಾಡಿ ರಕ್ಷಿಸಿದ. ಅದು ತಾನೇ ಮಾಡಿದ್ದು. ಎರಡನೆಯದು ಮಾಡಿಸಿದ್ದು. ಮೂರನೆಯದೂ ಮಾಡಿಸಿದ್ದೇ. ಆದುದರಿಂದ ಇಲ್ಲಿ ಎರಡು ಬಗೆಯ ದೇಗುಲಗಳಿವೆ. ಒಂದು ಚಲಿಸುವುದು ಮತ್ತೊಂದು ನಿಂತಿರುವುದು.

ಚಲಿಸುವ ದೇಗುಲ ಎಂದರೆ ತೇರು; ರಥ. ನಾವೆಲ್ಲ 'ರಥೋತ್ಸವ' ಎಂಬ ಶಬ್ದವನ್ನು ಕೇಳಿದ್ದೇವೆ. ರಥೋತ್ಸವವನ್ನು ನೋಡಿದ್ದೇವೆ. ಚಟ್ಟನು ಬೇರೆಬೇರೆ ದೇವಸ್ಥಾನಗಳಿಗೆ ಅಂಥ ಅನೇಕ ತೇರುಗಳನ್ನು ನಿರ್ಮಾಣ ಮಾಡಿಸಿದ. ಮತ್ತು ಚಟ್ಟೇಶ್ವರವೆಂಬ ಒಂದು ದೇವಸ್ಥಾನವನ್ನೂ ಕಟ್ಟಿಸಿದ. ಅಷ್ಟೇ ಅದರ ಅರ್ಥ. ಮನುಷ್ಯರನ್ನು ನಡೆದೇಗುಲವೆಂದು ಕರೆದು ಅವರು ದೇವಸ್ಥಾನಗಳಂತೆ ಅಂತರಂಗದಲ್ಲಿ ದೈವಸ್ವರೂಪವನ್ನು ಪಡೆದ ಶ್ರೇಷ್ಠವ್ಯಕ್ತಿಗಳಾಗುವಂತೆ ಮಾಡಿದ ಎಂಬ ಅರ್ಥ ದೂರಾರ್ಥವನ್ನು ಹುಡುಕಿದಂತೆ ಆಗಿ ಪದ್ಯಕ್ಕೆ ತಪ್ಪು ಅರ್ಥ ಮಾಡಿದಂತಾಗುತ್ತದೆ. ಬಸವಣ್ಣನ ವಚನದ ಹಿರಿಮೆ ಈ ಪದ್ಯದಲ್ಲಿಲ್ಲ. ಇಲ್ಲಿ ಕಾವ್ಯಮಯತೆಯೂ ಇಲ್ಲ. ಇದೊಂದು ಸಾಧಾರಣ ಹೇಳಿಕೆಯುಳ್ಳ ಹೊಗಳಿಕೆಯ ಪದ್ಯ ಅಷ್ಟೆ!

ಜಿ. ವೆಂಕಟಸುಬ್ಬಯ್ಯ

ಆದಿಚುಂಚನಗಿರಿ ಮಠದ ಮೂಲದ ಬಗ್ಗೆ ಹೆಚ್ಚಿನ ಸಮರ್ಥನೆ

"ಮಧ್ಯ ಕಾಲೀನ ಕರ್ಣಾಟಕದ ಕೆಲವು ರಹಸ್ಯ ತಾಂತ್ರಿಕ ಪಂಥಗಳು" ಎಂಬ ಲೇಖನದಲ್ಲಿ[1] ನಾಥ ಪಂಥದ ಬಗ್ಗೆ ಪ್ರಸ್ತಾಪಿಸುತ್ತ, ಒಕ್ಕಲಿಗರು ತಮ್ಮದೆಂದು ಭಾವಿಸಿರುವ ಈಗಿನ ಆದಿಚುಂಚನಗಿರಿ ಮಠವು ಮೂಲತಃ ನಾಥ ಪರಂಪರೆಯ ಮಠವಾಗಿತ್ತೆಂದು ಸ್ಥಳಪುರಾಣ, ಶಾಸನ, ಜಾನಪದ ವಾಙ್ಮಯದ ಆಧಾರಗಳಮೇಲೆ ನಾನು ಪ್ರತಿಪಾದಿಸಿದ್ದೇನೆ. ನನ್ನ ಪ್ರತಿಪಾದನೆಯನ್ನು ಪೋಷಿಸುವಂತಹ ಮೌಖಿಕ ಆಧಾರ ಈಚೆಗೆ (9.2.79) ಬೆಳಗಾಂ ಜಿಲ್ಲೆಯ ಸವದತ್ತಿ ಎಲ್ಲಮ್ಮನ ಗುಡ್ಡದಲ್ಲಿ ನನಗೆ ದೊರಕಿತು. ಅದನ್ನು ಈ ಚಿಕ್ಕ ಟಿಪ್ಪಣಿ ರೂಪದಲ್ಲಿ ಹೊರತರುತ್ತಿದ್ದೇನೆ.

ಎಲ್ಲಮ್ಮನ ಗುಡ್ಡ ಮೂಲತಃ ಯಾವ ಪಂಥದವರಿಗೆ ಸೇರಿದ್ದೋ ತಿಳಿಯದು. ಈಗಲೇನೋ ಅದು ಬಟ್ಟಾರೆ ವೀರಶೈವರ ಕೈಲಿದೆ. ಅದು ಹಿಂದೆ ಅನೇಕ ಮತ-ಪಂಥಗಳಿಗೆ ಆಶ್ರಯ ಸ್ಥಾನವಾಗಿದ್ದಿತೆಂಬುದರ ಬಗ್ಗೆ ಅನುಮಾನ ಕಾಣದು. ಕೆಲವು ತಿಂಗಳುಗಳ ಹಿಂದೆ ಎಲ್ಲವ್ವನ ಗುಡ್ಡಕ್ಕೆ ಹೋದಾಗ ಅಲ್ಲಿನ ''ಕಾಳ ಭೈರವನ ಮಠ'' ನನ್ನನ್ನು ಆಕರ್ಷಿಸಿತು. ಅಲ್ಲಿ ಬಲಗಡೆ ಕಟ್ಟೆಯ ಮೇಲೆ ಶಿವಲಿಂಗವನ್ನು ಪೂಜಿಸುತ್ತ ವೀರಶೈವರಿದ್ದಾರೆ. ಮತ್ತು ಸಮೀಪದಲ್ಲಿ ಜೈನರವೆಂದು ಹೇಳಬಹುದಾದ ಚಿಕ್ಕ ಮೂರ್ತಿಗಳಿವೆ. ಕಾಳಭೈರವನ ಮಠದಲ್ಲಿ ಯೋಗಿ ಕೈಲಾಸನಾಥ್ ಎಂಬ ಉತ್ತರ ಭಾರತದ ಒಬ್ಬ ನಾಥ ಸನ್ಯಾಸಿ ಇದ್ದಾರೆ. ಕಾಲಭೈರವನನ್ನು ಪೂಜೆ ಮಾಡಿಕೊಂಡು ಅಲ್ಲೇ ಅವರು ವಾಸಿಸುತ್ತಿದ್ದಾರೆ. ತಮ್ಮನ್ನು 'ಕಾಪಾಳಿಕ' ಎಂದು ಕರೆದುಕೊಳ್ಳುತ್ತಾರೆ. ಗೋರಖ್‌ನಾಥ್ ಸಂಪ್ರದಾಯ ಅವರದು. ಅವರ 'ಅಜ್ಜ' ಎಂದರೆ ಗುರು ದಿಲ್ಲಿಯ ಮಹಂತ ಬರ್ಖಾನಾಥ್ ಎಂಬುವರು ಹೇಳಿದ ಮಾತು ಇದು–''ಹಿಂದೆ ಆದಿಚುಂಚನಗಿರಿ ನಮಗೆ ಸೇರಿತ್ತು. ಈಗ ಗೌಡರದಾಗಿದೆ" ಎಂದು. ಮಂಗಳೂರಿನ ಕದ್ರಿ ಮಠದ ಬಗ್ಗೆಯೂ ಕೈಲಾಸನಾಥ್ ಯೋಗಿಯವರಿಗೆ ಗೊತ್ತು. ಅದು ಈಗಲೂ ನಾಥಪಂಥದವರ ಕೈಲಿದೆ. ಆದಿಚುಂಚನಗಿರಿ ಬಗ್ಗೆ ಗ್ರಂಥಸ್ಥ ದಾಖಲೆಗಳು ಮೌಖಿಕವಾಗಿ ಹರಿದುಬಂದಿರುವ ಮೇಲಿನ ಸಂಗತಿಯನ್ನು ಸಮರ್ಥಿಸುತ್ತವೆ.

ಕಾಪಾಲಿಕರಾದ ತಮ್ಮನ್ನು 'ಕಪಾಲಿ' ಎನ್ನಬಾರದು ಎಂಬುದು ಅವರ ಸೂಚನೆ. ಕಾಪಾಲಿಕರು ಕ್ಷತ್ರಿಯರು ಮತ್ತು ಅವರೇ ನಾಥ ಪಂಥದವರು. 'ಕಪಾಲಿ'ಗಳು, ಅವರ ಪ್ರಕಾರ, ಶೂದ್ರರು. ಕಪಾಲಿಗಳ ವಾಸಿ 'ಶಂಸಾ' (ಸ್ಮಶಾನ) ದಲ್ಲಿ ಮತ್ತು ಅವರು ಊರೊಳಕ್ಕೆ ಬರಬಾರದು. ಸುಡುಗಾಡಿನಲ್ಲಿ ಮಲಗುವುದು,

---

1. ಸಂಶೋಧನ ತರಂಗ, ಸಂಪುಟ II (ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 1970. ಪುಟ 254-68)

ಸುಟ್ಟ ಮನುಷ್ಯರ ಮಾಂಸ ತಿನ್ನುವುದು, ಮನುಷ್ಯರ ತಲೆ ಬುರುಡೆಯಲ್ಲಿ ಪಾನೀಯ ತೆಗೆದುಕೊಳ್ಳುವುದು ಇವು ಅವರ ಲಕ್ಷಣಗಳು. ಈ ಸಂಗತಿಗಳನ್ನು ತಿಳಿಸಿ, ಈ ಬಗೆಯ ಕಾಪಾಲಿಗಳು ಇರುವುದು ತಮಗೆ ಗೊತ್ತಿದೆ ಎಂದು ಅವರು ತಿಳಿಸಿದರು.

ಆದಿ ಚುಂಚನಗಿರಿ ಕುರಿತಂತೆ ಹೆಚ್ಚಿನ ಸಮರ್ಥನೆ ದೊರಕಿದ್ದು ಮತ್ತು ಅತ್ಯಂತ ವಿಲಕ್ಷಣ ಪಂಥವಾದ ಕಪಾಲಿಗಳನ್ನು ಕಂಡವರನ್ನು ಭೇಟಿ ಮಾಡಿದ್ದು ಇದು ನನ್ನ ಸವದತ್ತಿ ಭೇಟಿಯ ಲಾಭಗಳಲ್ಲಿ ಒಂದು.

ಡಾ॥ ಎಂ. ಚಿದಾನಂದಮೂರ್ತಿ

ತ್ರಾಸು-ತಕ್ಕಡಿ—ಒಂದು ವಿವೇಚನೆ

ತ್ರಾಸು ಎಂಬ ಪದದ ಅರ್ಥವ್ಯಾಪ್ತಿಯನ್ನು ಪ್ರೊ॥ ಡಿ. ಎಲ್. ನರಸಿಂಹಾಚಾರ್ಯರು ಒಂದು ಕಡೆ ಹೀಗೆ ವಿಚಾರ ಮಾಡುತ್ತಾರೆ: 'ತರಾಜೂ' ಎಂಬ ಪಾರಶಿ ಭಾಷೆಯ ಶಬ್ದ ಕನ್ನಡಕ್ಕೆ ತ್ರಾಸು ಆಗಿ ಹಿಂದಿನ ಕಾಲದಿಂದಲೂ ಪ್ರಯೋಗದಲ್ಲಿದೆ. ಈ ಶಬ್ದವು ಬಸವೇಶ್ವರರ ವಚನದಲ್ಲೂ, ಶಿವಮೊಗ್ಗಾ ತಾಲ್ಲೋಕಿನ 64ನೇ ಶಾಸನದಲ್ಲೂ (1112) ಬರುತ್ತದೆ. ಈ ಶಬ್ದ ಕನ್ನಡಕ್ಕೆ ಬಂದು ಸ್ವಲ್ಪ ಅರ್ಥ ವ್ಯತ್ಯಾಸವನ್ನು ಪರಿಹರಿಸ ಕಾಲಕ್ಕಾಗಲೇ ಪಡೆದಿತ್ತು. ತ್ರಾಸು ಎಂಬ ಪದಕ್ಕೆ ತಕ್ಕಡಿ ಎಂಬ ಸಾಮಾನ್ಯ ಅರ್ಥವಲ್ಲದೆ ಇಕ್ಕಡೆಯ ಒಂದೊಂದು ಪಲ್ಲೆಗೂ ತ್ರಾಸು ಎಂದು ಕರೆದಿದೆ. (ಟೀಕೆಗಳು-ಲೇಖನಗಳು ಪು. 863)

ತೂಕಕ್ಕೆ ತ್ರಾಸನ್ನೂ, ತುಂಬಿ ಅಳೆಯುವುದಕ್ಕೆ ಬಳ್ಳ ಕೊಳಗಗಳನ್ನೂ ಉಪಯೋಗಿಸುತ್ತಿದ್ದರೆಂಬುದಕ್ಕೆ ಸಾಹಿತ್ಯ ಕೃತಿಗಳಲ್ಲಿ ಆಧಾರಗಳಿವೆ. ತ್ರಾಸಿನಲ್ಲಿ ಬಟ್ಟೆಯ ದಿಂಡುಗಳನಿಟ್ಟು ತೂಗಿದ ಒಂದು ಸೊಗಸಾದ ಚಿತ್ರ ಅದೃಶ್ಯ ಕವಿ ವಿರಚಿತ ಪ್ರೌಢರಾಯನ ಕಾವ್ಯದಲ್ಲಿ ದೊರೆಯುತ್ತದೆ. ಅನೇಕ ಬಟ್ಟೆಯ ದಿಂಡುಗಳನ್ನು ಹೊತ್ತು ವಿಶೇಷ ಭಾರವನ್ನು ತಡೆಯುವ ಸಾಮರ್ಥ್ಯವುಳ್ಳ ಒಂದು ಬೃಹತ್ ತ್ರಾಸನ್ನು ತಯಾರಿಸಿದ ಚಿತ್ರವನ್ನು ಕವಿ ಕೊಡುತ್ತಾನೆ. "...ಮುಂದಿರ್ದರಡು ಶಿಲೆಯ ಕಂಬವನಡಸಿ...ಎರಡು ಕೊಪ್ಪರಿಗೆಗಳ ಕಾರ್ಬೊನ್ನ ಸರಪಳಿಗಳಿಂಬಲಿದು ಬಂಧಿಸಿ ತ್ರಾಸಿನಂದದೋಲ್ ಮೇಲೆ ಪೆರ್ಮರ್ಲೆಯನದಕಡ್ಡ ಕಟ್ಟುತಲೊಂದು ಪರದಿಯೊಳು ಕೌಪವನಿರಿಸಿ ಮತ್ತೊಂದರೊಳು ವಸ್ತ್ರಸಿಚಯವನೊಟ್ಟುತ..." ಇದು ತ್ರಾಸಿನ ಮುಖ ಚಿತ್ರವಾದರೆ ಅದರಲ್ಲಿ ತೂಗಿದ ಚಿತ್ರ ಇನ್ನೂ ಮನೋಹರವಾಗಿದೆ: "ತ್ರಾಸವ ತರಿಸಿ ಕೌಪವದರೊಳಗಿಟ್ಟು ಮತ್ತೊಂದು ಕಡೆ ವಸ್ತ್ರವ ಒಂದೆರಡು ಮೂರು ಹದಿನಾರು ಮೂವತ್ತು ನೂರೊಂದರಿಂದತ್ತತ್ತಯಿಡಲು

ತಕ್ಕಡಿ ಮುರಿಯೆ ನಿಂದಿರ್ದ ಜನ ಬೆರಗಾಗುತಿರಲು" (ಪ್ರೌಕಾ 12-33,34) (ತ್ರಾಸು ತಕ್ಕಡಿ ಎಂಬ ಎರಡೂ ಜನಸಾಮಾನ್ಯ ಪ್ರಯೋಗಗಳನ್ನು ಕವಿ ಇಲ್ಲಿ ಕೊಟ್ಟಿದ್ದಾನೆ).

ಇಲ್ಲಿ ಮುಖ್ಯವಾಗಿ ಎರಡು ವಿಷಯಗಳನ್ನು ಗಮನಿಸಬೇಕು. ತ್ರಾಸಿನ ಎರಡು ತಟ್ಟೆಗಳಲ್ಲಿ ಒಂದರಲ್ಲಿ ಸಾಮಾನ್ಯವಾಗಿ ತೂಕದ ಬಟ್ಟನ್ನೂ ಮತ್ತೊಂದರಲ್ಲಿ ತೂಕಮಾಡುವ ವಸ್ತುವನ್ನೂ ಇಡುವರು. ಇಲ್ಲಿ ಬಟ್ಟನ್ನೂ ಇಡದಿದ್ದರೂ ಬೇರೆ ಯಾವುದೋ ಪದಾರ್ಥವನ್ನು ಇಟ್ಟು ಅದರ ತೂಕಕ್ಕೆ ಸಮನಾಗಿ ತೂಗುವ ಪದಾರ್ಥವನ್ನು ಇಟ್ಟಿರುವುದಾಗಿ ಸೂಚಿಸಿದೆ. ಎರಡನೆಯದಾಗಿ ತ್ರಾಸಿನ ಧಾರಣಾ ಸಾಮರ್ಥ್ಯ. ಅದರ ಶಕ್ತಿ ಮೀರಿ ತೂಗಿದರೆ ಕಡಿದು ಹೋಗುವುದು. ಒಟ್ಟಿನಲ್ಲಿ ಕವಿ ಕೊಡುವ ಈ ಚಿತ್ರದಲ್ಲಿ ಆ ಕಾಲದಲ್ಲಿ ಬಳಕೆಯಲ್ಲಿರಬಹುದಾದ ತೂಕದ ಸಾಧನ ಒಂದರ ಚಿತ್ರವಿದೆ. ತ್ರಾಸಿನಲ್ಲಿ ದ್ರವ್ಯ ರಾಶಿಯನ್ನೂ ಚಿನ್ನವನ್ನೂ ತೂಗುತ್ತಿದ್ದ ರೆಂಬುದಕ್ಕೆ ಒಂದೆರಡು ನಿದರ್ಶನಗಳು ದೊರೆಯುತ್ತವೆ; "...ಪಾದತೀರ್ಥವ ತ್ರಾಸಿನಲ್ಲಿ ತೂಗೆ' (ಪ್ರೌಕಾ 17–21); 'ಹೊನ್ನತೂಗಿದ ತ್ರಾಸು ಕಟ್ಟಳೆ ಹೊನ್ನಿಂಗೆ ಸರಿಯಪ್ಪುದೆ?" (ಪ್ರಭುದೇವರ ವಚನ-490) ಸಿಂಗಿರಾಜಪುರಾಣದಲ್ಲಿ (12–5, 6, 8) ಚಿನ್ನವನ್ನು ಇಷ್ಟಿಷ್ಟೇ ತೂಕಕ್ಕೆಂದು ತೂಗಿ ಕತ್ತರಿಸಿಕೊಡುವ 'ಹೊಂಗಾಯಕನ' ಚಿತ್ರ ದೊರೆಯುತ್ತದೆ: "ಒಂದು ತೂಕದ ಕಡಿದಿತ್ತರವ ತಂದು ಮತ್ತೊಂದು ಜಂಗಮಕೆ ತೋರಲ್" "ಹತ್ತು ಸಾವಿರ ತೂಕ ಬಂಗಾರಮಂ"

ಕೆ. ಶ್ರೀಕಂಠಯ್ಯ

ಸರ್ವಜ್ಞನ ಕಾಲದ ಬಗೆಗೆ

ಸರ್ವಜ್ಞನ ಕಾಲವನ್ನು ಕುರಿತು ಈ ಹಿಂದೆ ಪ್ರಕಟವಾದ 'ಸರ್ವಜ್ಞನ ಜೀವನ: ದೇಶ-ಕಾಲವಿಚಾರ' ಎಂಬ ನನ್ನ ಲೇಖನದಲ್ಲಿ[1] 'ಸರ್ವಜ್ಞ ಕ್ರಿ.ಶ. 1500ರ ವೇಳೆ ಯಲ್ಲಿ ಜೀವಿಸಿದ್ದನೆಂದು ಭಾವಿಸಬಹುದು' ಎಂದಿದ್ದೆ.[2]

ಇತ್ತೀಚೆಗೆ ಮೇಲಿನ ಅಭಿಪ್ರಾಯವನ್ನು ಬೆಂಬಲಿಸುವ ಆಧಾರವೊಂದು ಉಪಲಬ್ಧವಾಗಿದ್ದು ಅದನ್ನು ಈ ಮುಂದೆ ಪ್ರಸ್ತಾಪಿಸಲಾಗಿದೆ.

---

1 ಸರ್ವಜ್ಞ—ಒಂದು ಸಮೀಕ್ಷೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1975, ಪು. 1-11.

2 ಅದೇ, ಪು. 11.

ಕ್ರಿ.ಶ. 1554 ರ ವೇಳೆಗೆ ಸಂಕಲಿತವಾಗಿದ್ದ 'ಮೋಕ್ಷದರ್ಶನ ಮಹಾಸಂಗ್ರಹ' ದಲ್ಲಿ[3] ಪ್ರಭುದೇಶಿಕ 'ಪರಮಾರ್ಥ' ಅಂಕಿತದ ಸರ್ವಜ್ಞನ ತ್ರಿಪದಿಯೊಂದನ್ನು ಉಲ್ಲೇಖಿಸಿದ್ದು ಈ ರೀತಿ ಇದೆ.[4]

ಬೆರಳ ಕೊನೆಯಾಱಱಲಿ ವಿರಳವಾಱಱಸಂಚ
ಕೊರಳನಾಳದಲಿ ಶಿ[ವ]ನಿಪ್ಪ ಯೋಗದ
ತಿರುಳು ಕಂಡಯ್ಯ ಪರಮಾರ್ಥ.

ಈ ತ್ರಿಪದಿ ಕ್ರಿ.ಶ. 1636ರಲ್ಲಿ ವೆಂಕನಿಂದ ಪ್ರತಿಯಾದ ಕೃತಿಯಲ್ಲಿ ಕ್ರಮಾಂಕ 317 ನೆಯದಾಗಿದೆ[5]. ಒಂದೆರಡು ಪಾಠ ಭೇದಗಳಿವೆ.

ಹೀಗಾಗಿ, ಸರ್ವಜ್ಞನ ತ್ರಿಪದಿಗೆ 'ಪರಮಾರ್ಥ' ಅಂಕಿತದ ಪ್ರಯೋಗ ಕ್ರಿ.ಶ. 1554ಕ್ಕಿಂತ ಮೊದಲಿನಿಂದಲೂ ರೂಢಿಯಲ್ಲಿದ್ದ ಸಂಗತಿ ಬೆಳಕಿಗೆ ಬಂದಂತಾಗಿದೆ. ಅಲ್ಲದೆ ಸರ್ವಜ್ಞನ ಕಾಲನಿರ್ಣಯದಲ್ಲಿ ಪ್ರಭುದೇಶಿಕನ ಉಲ್ಲೇಖ ಒಂದು ಗಮನಾರ್ಹ ದಾಖಲೆಯಾಗಿದೆ.

ಎಸ್. ಶಿವಣ್ಣ

ಬಳಿಗಿಯ ಶಾಸನಗಳಲ್ಲಿ ಏನಿದೆ ?

'ಸಾಧನೆ'ಯಲ್ಲಿ (8-2) ; ಡಾ. ಆರ್. ಎನ್. ಗುರವ್ ಅವರಿಂದ ಬರೆಯಲ್ಪಟ್ಟ 'ಬಳಿಗಿಯ ಶಾಸನಗಳು' ಎಂಬ ಲೇಖವಿದೆ. ಆ ಲೇಖದ ಮೊದಲಲ್ಲಿ, "ದಿವಂಗತ ಆರ್. ನರಸಿಂಹಾಚಾರ್ಯರು ತಮ್ಮ ಕರ್ಣಾಟಕ ಕವಿ ಚರಿತೆಯ ಪ್ರಥಮ ಸಂಪುಟದಲ್ಲಿ (ಪುಟ 285–86), ಅಗ್ಗಳನ ಚಂದ್ರಪ್ರಭ ಪುರಾಣದ ಸಂದರ್ಭದಲ್ಲಿ ಈ ಶಾಸನದ ಉಲ್ಲೇಖಮಾಡಿ, ಅದರಲ್ಲಿಯ ಹದಿನೆಂಟನೆಯ ಪದ್ಯವನ್ನು ಉದ್ಧರಿಸಿದ್ದಾರೆ ಮತ್ತು ಈ ಶಾಸನದ ಪಾಠವೊಂದು ಮದರಾಸ್ ಪ್ರಾಚ್ಯಕೋಶಾಲಯದಲ್ಲಿ ಇದೆ ಎಂದು ಹೇಳಿದ್ದಾರೆ. ಅದರೆ, ಈ ಪಾಠವು

---

3 ಎಸ್. ಶಿವಣ್ಣ : ಪ್ರಭುದೇಶಿಕನ ಮೋಕ್ಷದರ್ಶನ ಮಹಾ ಸಂಗ್ರಹಕೃತಿ : ಕರ್ತೃತ್ವ ಹಾಗೂ ಕಾಲ ವಿಚಾರ,' ಬಸವ ಪಥ, 1-3, 1979, ಪು. 293-94.

4 ಬಿ. 1481, ಕನ್ನಡ ಅಧ್ಯಯನ ಕೇಂದ್ರ, ಹಾಳೆ 60.

5 ಎಲ್. ಬಸವರಾಜು (ಸಂ) : ಪರಮಾರ್ಥ (ಸರ್ವಜ್ಞನ ವಚನಗಳು) ಗೀತಾ ಬುಕ್ ಹೌಸ್, ಮೈಸೂರು, 1972.

ಜನಸಾಮಾನ್ಯರಿಗೆ ಲಭ್ಯವಿಲ್ಲ, ಶಾಸನವು ಇನ್ನೂ ಅಪ್ರಕಟಿತವಿದೆಯೆಂದ ಹೇಳಲಾಗಿದೆ.

ಇಸ್ವಿ 1974ರಲ್ಲಿ ಶ್ರೀಯುತರು ಬಿಳಿಗೆ ಗ್ರಾಮಕ್ಕೆ ಹೋದಾಗ, ಸ್ವತಃ ಪ್ರತಿ ತೆಗೆದ ಈ ಶಾಸನದ ಪಡಿಯಚ್ಚುಗಳಿಂದ ಇದೀಗ 1979ರಲ್ಲಿ ಲೇಖನ ಬರೆದಿದ್ದಾರೆಂಬುದು ಸ್ವಾಗತಾರ್ಹ ! ಈ ಶಾಸನದಲ್ಲಿ ಎಷ್ಟು ಸಾಲುಗಳಿವೆಯೆಂದು ಯಥಾಪ್ರಕಾರ ನಮೂದಿಸಿದ್ದಾರೆ. ಇದರಲ್ಲಿ ಹೆಸರಿಸಿದ ಗ್ರಾಮಾಂತರಗಳು ಈಗ ಯಾವುವೆಂದೂ ಸೂಚಿಸಿದ್ದಾರೆ. ಈ ಶಾಸನದಿಂದ ತಿಳಿದ ಬಿಳಿಗಿಯ ಅರಸರ ವಂಶಾವಳಿಯಲ್ಲಿ ಎರಡನೆ ಘಂಟಣ್ಣೊಡೆಯನವರೆಗೆ ರೇಖಾಚಿತ್ರವನ್ನು ತೋರಿಸಿದ್ದಾರೆ: ಕನ್ನಡದ ವೈಯಾಕರಣಿ ಭಟ್ಟಾಕಲಂಕನ ಗುರುಪರಂಪರೆಯೂ ಇಲ್ಲಿ ನಮೂದಿಸಲಾಗಿದೆಯೆಂದೂ ಗಮನಾರ್ಹ. ಬಿಳಿಗಿ (ಶ್ವೇತಪುರ) ಅರಸರ ಮತ್ತು ಭಟ್ಟಾಕಲಂಕನ ವಂಶಾವಳಿಯ ತಿಳಿವಿಗೆ ಈ ಲೇಖ ಅತ್ಯುಪಯುಕ್ತ !

ಆದರೆ, ಈ ಶಾಸದ ಕೈಪ್ರತಿಯನ್ನು ಮದ್ರಾಸ್ ಸರ್ಕಾರದ ಪ್ರಾಚ್ಯಕೋಶಗಾರದಲ್ಲಿದ್ದಂತೆ ಕಂಡುಹಿಡಿದು, ಕೈಬರೆಹದ ಆ ಪ್ರತಿಯನ್ನೂ, ಬಿಳಿಗಿಯಲ್ಲಿ ಇತರತ್ರ ದೊರೆವ ಒಂದೆರಡು ಶಾಸನಗಳ ವಿಚಾರಗಳನ್ನೂ ಅಳವಡಿಸಿ ವಿವರಿಸಿದ ಲೇಖನವೊಂದು 1929ರಲ್ಲಿ ಶ್ರೀಪಂಜೆಮಂಗೇಶರಾಯರಿಂದ ಬರೆಯಲ್ಪಟ್ಟಿದೆ (ಮಂಗಳೂರ 'ರಾಷ್ಟ್ರಬಂಧು' ಸಾಪ್ತಾಹಿಕದ ಯುಗಾದಿ ಕಾಣಿಕೆಯಲ್ಲಿ ಮೊತ್ತಮೊದಲು ಈ ಲೇಖ ಪ್ರಕಟಿತ).

"ಶ್ರೀ ಪಂಜೆಯವರ ನೆನಪಿಗಾಗಿ" ಎಂಬ ಸ್ಮಾರಕ ಗ್ರಂಥದಲ್ಲಿ (ಶ್ರೀಗಳಾದ ಎಂ. ಗೋವಿಂದ ಪೈ, ವಿ. ಸೀತಾರಾಮಯ್ಯ, ಶಿವರಾಮಕಾರಂತರ ಸಂಪಾದಕತ್ವದಲ್ಲಿ) ಶ್ರೀ ಪಂಜೆಯವರ ಈ ಮೇಲಿನ ಲೇಖನ ಸಂಕಲಿತವಾಗಿದೆ (1952). ಇತ್ತೀಚೆಗೆ, ಶ್ರೀ ಪಂಜೆ ಮಂಗೇಶರಾಯರ ಜನ್ಮಶತಾಬ್ದಿ (1973) ಸಮಾರಂಭದ ಸಮಯದಲ್ಲಿ ಪ್ರಕಟವಾದ ಸಂಕಲನಗಳಲ್ಲಿ ಈ ಲೇಖನದ ಬಗೆಯೂ ಇದೆ.

ಶ್ರೀ ಪಂಜೆ ಮಂಗೇಶರಾಯರ ಲೇಖನದಲ್ಲಿ, ಶ್ರೀ ಗುರವ್ ಅವರು ನಮೂದಿಸಿದ ಬಿಳಿಗಿಯ ರಾಜರ ಪಟ್ಟಿಗಿಂತಲೂ ಹೆಚ್ಚಿನ ನಾಲ್ಕು ಮಂದಿಯ ಹೆಸರುಗಳಿವೆ (ತಿಮ್ಮರಸ, IIIನೆಯ ಘಂಟಣ್ಣೊಡೆಯ, ಮೌನದ ಘಂಟಣ್ಣ, ಘಂಟಮ್ಮರ ಹೆಸರುಗಳಿವೆ). ಈ ಹೆಸರುಗಳು ಬಿಳಿಗಿಯ ಇತರ ಶಾಸನಗಳ ಹಾಗೂ ಇತರ ಪುರಾವೆಗಳಿಂದ ವಿದಿತವಾಗಿದೆ : ಮುಂಬೈಗಜೆಟಿಯರ್, 'ಶಿವಾನುಭವ'ದಲ್ಲಿ ಶ್ರೀ ಬೆನಗಲ್ ರಾಮರಾಯರು ಪ್ರಕಟಿಸುತ್ತಿದ್ದ 'ಬಿಳಿಗಿ ಅರಸರ ವಂಶಾವಳಿ'ಗಳು ಉಲ್ಲಿಖಿತಗಳು. ಇತ್ತೀಚೆಗೆ ಶಿವಾಧೀನರಾದ ಆಸ್ಥಾನ ವಿದ್ವಾನ್ ಬಿ. ಶಿವಮೂರ್ತಿ

ಶಾಸ್ತ್ರಿಗಳೂ 'ಶರಣಸಾಹಿತ್ಯ'ದಲ್ಲಿ 'ಜಿಳಿಗಿಯ ಶಾಸನಗಳು' ಎಂಬೊಂದು ಲೇಖನ ಬರೆದಿದ್ದಾರೆಂದು ತಿಳಿಯುತ್ತದೆ (ಡಾ. ಸಾ. ಶಿ. ಮರುಳಯ್ಯ ವೀರಶೈವ ಅಧ್ಯಯನ ಸಂಸ್ಥೆ, ಗದಗ).

ಆವೊಂದು ಶಾಸನದ-ಗ್ರಂಥದ-ವ್ಯಕ್ತಿಯ-ಪರಿಚಯ ಲೇಖನ ಮಾಡುವಲ್ಲಿ, ಆ ಹಿಂದೆ ಯಾರೆಲ್ಲ-ಏನೆಲ್ಲ-ಬರೆದರೆಂದು ಪರಿಶೀಲಿಸುವುದು ಸೂಕ್ತವಾಗಿದೆಯಲ್ಲವೇ ?

ವಿದ್ವಾನ್ ಕೆ. ವೆಂಕಟರಾಯಾಚಾರ್ಯ

ಈ ಸಂಚಿಕೆಯ ಲೇಖಕರು

ಸುಮತೀಂದ್ರ ನಾಡಿಗ	ಕರ್ನಾಟಕ ಬುಕ್ ಹೌಸ್, ಗಾಂಧಿಬಜಾರ್, ಬೆಂಗಳೂರು–560 004
ಪ್ರಶಾಂತ್ ಮಾಡ್ತಾ	ದ ನೊಬಿಲಿ ಕಾಲೇಜ್, ಪುಣೆ–411014
ವಿ. ಚಂದ್ರಶೇಖರ ನಂಗಲಿ	ಅಧ್ಯಾಪಕರು, ಸರ್ಕಾರಿ ಕಾಲೇಜು ಮಡಿಕೇರಿ–571201
ಡಾ॥ ಎಸ್. ವಿದ್ಯಾಶಂಕರ	ಸಹ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, 'ಜ್ಞಾನಭಾರತಿ', ಬೆಂಗಳೂರು-56
ಎಂ. ಕೆ. ರೇಣುಕಪ್ಪ ಗೌಡ	ಮುಖ್ಯಸ್ಥರು, ಕನ್ನಡ ವಿಭಾಗ ಲಾಲ್ ಬಹದ್ದೂರ್ ಶಾಸ್ತ್ರಿ ಕಾಲೇಜು, ಸಾಗರ–577401
ಓ. ರಾಮಭಟ್	ಕನ್ನಡ ವಿಭಾಗ, ಎಂ. ಜಿ. ಎಂ. ಕಾಲೇಜು, ಉಡುಪಿ–576101
ಸೂ. ಸುಬ್ರಹ್ಮಣ್ಯಂ	'ವನಸುಮ', 711, 4ನೇ ಬ್ಲಾಕ್, ಜಯನಗರ, ಬೆಂಗಳೂರು–560 011
ಜಿ. ಎಸ್. ಶಿವರುದ್ರಪ್ಪ	ನಿರ್ದೇಶಕರು ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು–560 056
ಎಚ್. ಎಚ್. ಗಂಗಾಧರಾಚಾರ್	ಶಿಫ್ಟ್ ಇಂಜಿನಿಯರ್ (ಇನ್‌ಚಾರ್ಜ್) ರೀಜನಲ್ ಟ್ರಾಫಿಕ್ ಆಫೀಸ್ ವಿ.ಐ.ಎಸ್.ಎಲ್., ಭದ್ರಾವತಿ–577 301

ಪ್ರೊ. ಗರ್ಗೇಶ್ವರಿ ವೆಂಕಟಸುಬ್ಬಯ್ಯ	'ಗಣೇಶ ಧಾಮ', 20, ರಾಜಮಹಲ್ ವಿಲಾಸ್ ಬಡಾವಣೆ, 9ನೇ ಮೈನ್, 2ನೇ ಕ್ರಾಸ್, ಬೆಂಗಳೂರು–560006
ಡಾ॥ ಆರ್. ಎನ್. ಗುರವ	ನಿವೃತ್ತ ಅಸಿಸ್ಟೆಂಟ್ ಕಮಿಶನರ್ ಕೊಪ್ಪದಕೆರೆ, ಧಾರವಾಡ–580008
ಬಿ. ಎಸ್. ಸುಬ್ಬರಾವ್ ಮತ್ತು ಎಂ. ಭಕ್ತವತ್ಸಲ ರೆಡ್ಡಿ	ಮಧುರೈ ಕಾಮರಾಜು ವಿಶ್ವವಿದ್ಯಾಲಯ ಮಧುರೆ–625002
ಹ. ನಂ. ವಿಜಯಕುಮಾರ್	ಕನ್ನಡ ವಿಭಾಗ, ಕ್ರೈಸ್ಟ್ ಕಾಲೇಜು ಬೆಂಗಳೂರು–560 029
ಮ. ರಾಜೀವ	ಅಧ್ಯಾಪಕರು, ಎಂ.ಇ.ಎಸ್. ಶಿಕ್ಷಕರ ತರಬೇತಿ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು–560003
ಕೆ. ಸಿ. ಶಿವಲಿಂಗಸ್ವಾಮಿ	ಕಲ್ಲುಕೆರೆ, ತುರುವೇಕೆರೆ ತಾಲ್ಲೋಕು ತುಮಕೂರು ಜಿಲ್ಲೆ
ಎಸ್. ಚಂದ್ರಶೇಖರ	ಇತಿಹಾಸ ವಿಭಾಗ, ಜ್ಞಾನಭಾರತಿ
ಬಸವರಾಜ ಕಲ್ಗುಡಿ	'ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು-560056
ಜಿ. ವೆಂಕಟಸುಬ್ಬಯ್ಯ	ಸಂಪಾದಕ, ಕನ್ನಡ–ಕನ್ನಡ ನಿಘಂಟು ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-560018
ಡಾ।। ಎಂ. ಚಿದಾನಂದಮೂರ್ತಿ	ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು–560 056

ಡಾ॥ ಕೆ. ಶ್ರೀಕಂಠಯ್ಯ — 393, ಜಯನಗರ 1ನೇ ಬ್ಲಾಕ್
ಬೆಂಗಳೂರು – 560 011

ಎಸ್. ಶಿವಣ್ಣ — ಸಂಪಾದಕರು, ಹಸ್ತಪ್ರತಿ ವಿಭಾಗ
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ, ಬೆಂಗಳೂರು – 560056

ವಿದ್ವಾನ್ ಕೆ. ವೆಂಕಟರಾಯಾಚಾರ್ಯ — ಸುರತ್ಕಲ್ (ದ. ಕ.) 574158

ನಮ್ಮ ನಿಯತಕಾಲಿಕಗಳು

ಸೃಜನಾತ್ಮಕ ಮತ್ತು ಸಂಶೋಧನಾತ್ಮಕ ಹಾಗೂ ಜನಪ್ರಿಯ ಬರಹಗಳಿಂದ ಕೂಡಿದ ಸಾಹಿತ್ಯಕ, ಮಾನವಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಿಗೆ ಮೀಸಲಾದ

ಸಾಧನೆ
ಕನ್ನಡ ತ್ರೈಮಾಸಿಕ
ವಾರ್ಷಿಕ ಚಂದಾ 8–00 ರೂ.
(ವಿದ್ಯಾರ್ಥಿಗಳಿಗೆ) 5–00 ರೂ.
ಆಜೀವ ಚಂದಾ ಹಣ 100–00 ರೂ.
ಗಳನ್ನು ಎರಡು ಕಂತುಗಳಲ್ಲಿ ಒಂದು ವರ್ಷದ ಅವಧಿಯಲ್ಲಿ ಪಾವತಿ ಮಾಡಬಹುದು.

ವಿಜ್ಞಾನ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10–00 ರೂ.

ವಿದ್ಯಾ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10–00 ರೂ.

ಜನಪ್ರಿಯ ವಿಜ್ಞಾನ
ಕನ್ನಡದ ಏಕೈಕ ವಿಜ್ಞಾನ ಮಾಸಿಕ
ವಾರ್ಷಿಕ ಚಂದಾ 12–00 ರೂ.
(ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ 6–00 ರೂ.

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056